ಮಂಗಳೂರು
ಗುರುವಾರ, 26 ಮಾರ್ಚ್ 2026
ಸಂಪುಟ 48, ಸಂಚಿಕೆ 7, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಭಾರತದಿಂದ ಮಾತ್ರ ಉದ್ವಿಗ್ನ ಶಮನ ಸಾಧ್ಯ |೦೭ | ಪುರಿ ಜಗನ್ನಾಥನ ರತ್ನ ಭಂಡಾರ ಎಣಿಕೆ ಶುರು |೦೭ | ಹೈಸ್ಕೂಲ್‌ಗಳಿಗೆ ಶೀಘ್ರ ಇಂಟರ್ನೆಟ್ |೦೭

## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ : ಅಷ್ಟಮಿ, ನಕ್ಷತ್ರ: ಆರ್ದ್ರೆ

### ದಿನದ ಮಾತು

ಮಾನವ ದೇಹದೊಳಗಿನ ಆತ್ಮವೇ ನಾವು ಪೂಜಿಸಬೇಕಾದ ದೇವರು.

▲ಸ್ವಾಮಿ ವಿವೇಕಾನಂದ

### ಯುದ್ಧ: ಅಂದುಕೊಂಡಿದ್ದು ಬೇರೆ, ಆದದ್ದು ಬೇರೆ!

ಗುರುತರ

• ಸೋಮಶೇಖರ ಸಿ.ಜಿ.

• ಪುಟ ೬

## ಕಿರುಸುದ್ದಿ

### ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಅಬಾಧಿತ

• **ಹೊಸದಿಲ್ಲಿ:** ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ. ಗೃಹಬಳಕೆ ಎಲ್‌ಪಿಜಿ ರೀಫಿಲ್ಲಿಂಗ್ ಅವಧಿಯನ್ನು 25ರಿಂದ 35 ದಿನಗಳವರೆಗೆ ಹೆಚ್ಚಿಸಲಾಗಿ ಮತ್ತು ದೇಶದಲ್ಲಿ ಇಂಧನ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ವದಂತಿಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಸ್ಪಷ್ಟನೆ ನೀಡಿದ್ದು, ಯಾವುದೇ ಕಾರಣಕ್ಕೂ ಈ ವದಂತಿಗಳನ್ನು ನಂಬಬಾರದು ಮತ್ತು ಜನರು ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬಾರದು ಎಂದು ಮನವಿ ಮಾಡಿದೆ.

**ದೇಶದಲ್ಲಿ ಇಂಧನ ಕೊರತೆ ಇಲ್ಲ, ಎಲ್ ಪಿಜಿ ರೀಫಿಲ್ಲಿಂಗ್ ಅವಧಿ ಹೆಚ್ಚಿಸಿಲ್ಲ: ಕೇಂದ್ರ**

• ಪುಟ ೭

### ಪಾಕ್‌ನ ಯೋಜಿತ ನರಮೇಧ: ಬಾಂಗ್ಲಾ

• **ಢಾಕಾ:** ಪಾಕಿಸ್ತಾನದ 1971ರ ಆಪರೇಷನ್ ಸರ್ಚ್ ಲೈಟ್ ಒಂದು ಪೂರ್ವಯೋಜಿತ ಜನಾಂಗೀಯ ನರಮೇಧವಾಗಿದ್ದು, ಚರಿತ್ರೆಯಲ್ಲೇ ತೀರಾ ಕ್ರೂರ ಮತ್ತು ಕರಾಳ ದಿನವಾಗಿದೆ ಎಂದು ಬಾಂಗ್ಲಾ ಪ್ರಧಾನಿ ತಾರಿಖ್ ರಹಮಾನ್ ಟೀಕಿಸಿದ್ದಾರೆ. ಜನಾಂಗೀಯ ನರಮೇಧ ದಿನದ ಹಿನ್ನೆಲೆ ರಹಮಾನ್ ಈ ರೀತಿ ಹೇಳಿಕೆ ನೀಡಿದ್ದಾರೆ.

• ಪುಟ ೭

### ತಲೆಮರೆಸಿಕೊಂಡಿದ್ದ ಆಪ್ ಶಾಸಕನ ಬಂಧನ

• ಪುಟ ೭

### ರಷ್ಯಾದಿಂದ 600 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿ

• ಪುಟ ೭

### ಐಎಎಫ್ ವಾಯು ಬಾಣ ಹೆಲಿಕಾಪ್ಟರ್

• ಪುಟ ೭

### ಗ್ಯಾಸ್ ಶುಲ್ಕ ವಸೂಲಿ ಸಿಸಿಪಿಎ ಕ್ರಮದ ಎಚ್ಚರಿಕೆ

• ಪುಟ ೭

### ಆಯವ್ಯಯದಲ್ಲಿ ಮಧ್ಯಮ ವರ್ಗದವರಿಗೆ ಹಲವು ಕ್ರಮ

• ಪುಟ ೭

ಖಾಲಿ ಚೊಂಬಲ್ಲ, ತುಂಬಿದ ಕೊಡ ಎಂದ ಸಿಎಂ ಸಿದ್ದರಾಮಯ್ಯ

# ಪರಿಪೂರ್ಣ ಬಜೆಟ್

• **ವಿಧಾನಸಭೆ:** ಕಾಂಗ್ರೆಸ್ ಸರ್ಕಾರ ಕರ್ನಾಟಕಕ್ಕೆ ಖಾಲಿ ಚೊಂಬು ನೀಡದೆ ತುಂಬಿದ ಚೊಂಬನ್ನೇ ನೀಡಲಾಗಿದೆ. ನಮ್ಮ ಬಜೆಟ್ ತುಂಬಿದ ಕೊಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಬುಧವಾರ ಸದನದಲ್ಲಿ ಆಯವ್ಯಯ ಕುರಿತ ಚರ್ಚೆಗೆ ಉತ್ತರ ನೀಡಿದ ಅವರು, ಪ್ರತಿಪಕ್ಷದವರು ಆಯವ್ಯಯವನ್ನು ಎಷ್ಟೇ ಟೀಕಿಸಿದರೂ ಮಾವಿನಹಣ್ಣು ಬೇವಿನಹಣ್ಣು ಆಗಲು ಸಾಧ್ಯವಿಲ್ಲ ಎಂದು ಸಮರ್ಥಿಸಿಕೊಂಡರು.


ರಾಜ್ಯದ ಈ ವರ್ಷದ ಆಯವ್ಯಯ ಗಾತ್ರ 4,48,004 ಕೋಟಿ ರೂ.ಗಳಷ್ಟಾಗಲಿದೆ. 2025-26ರಲ್ಲಿ ಆ ಗಾತ್ರವು 4,09,549 ಕೋಟಿ ರೂ.ಗಳಷ್ಟಿತ್ತು. ಕಳೆದ ವರ್ಷದ ಆಯವ್ಯಯಕ್ಕೆ ಹೋಲಿಸಿದರೆ ಈ ವರ್ಷ 38,455 ಕೋಟಿ ರೂ.ಗಳಷ್ಟು ಹೆಚ್ಚಿನ ಗಾತ್ರದ್ದಾಗಿದೆ. ಶೇ.9.4ರಷ್ಟು ಬೆಳವಣಿಗೆಯಾಗಿದೆ. ಕೇಂದ್ರ ಸರ್ಕಾರದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.6ರಷ್ಟು ಮಾತ್ರ ಬೆಳವಣಿಗೆ ಸಾಧಿಸಿದೆ ಎಂದರು. 2025-26ರಲ್ಲಿ ದೇಶದ ಜಿಡಿಪಿ ಸ್ಥಿರ ಬೆಲೆಗಳಲ್ಲಿ ಶೇ.7.4ರಷ್ಟು ಬೆಳವಣಿಗೆ ದಾಖಲಿಸಿದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುತ್ತಿರುವುದನ್ನು ಹೇಳುತ್ತದೆ. ದೇಶದಲ್ಲಿ ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ ನಂ.2 ಸ್ಥಾನದಲ್ಲಿದೆ, ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ನಂ.2 ಇದೆ. ವಿತ್ತೀಯ ಶಿಸ್ತು ಕಾಪಾಡಿಕೊಂಡೇ ರಾಜ್ಯದ ಆರ್ಥಿಕತೆಯನ್ನು ದೇಶದಲ್ಲಿ ನಂ.1 ಮಾಡುವತ್ತ ಹೆಜ್ಜೆಯಿಟ್ಟಿದ್ದೇವೆ ಎಂದು ಹೇಳಿದರು.

**ಆರ್ಥಿಕ ಶಿಸ್ತು ಮೀರಿಲ್ಲ:** 16ನೇ ಹಣಕಾಸು ಆಯೋಗದ ಮಾರ್ಗಸೂಚಿಯ ಅನುಸಾರ ರಾಜ್ಯಗಳು ಶೇ.3ರೊಳಗೆ ಹಾಗೂ ಕೇಂದ್ರ ಸರ್ಕಾರ ಶೇ.4.2ರೊಳಗೆ ವಿತ್ತೀಯ ಕೊರತೆ ಹೊಂದಿರಬೇಕು.

➡ಪುಟ ೪

**ಸಿಎಂ ಸಿದ್ದರಾಮಯ್ಯ ಅವರು ಹೇಳಿದಂತೆ ನಾನು ಆಳವಾಗಿಯೇ ಬಜೆಟ್ ಅಧ್ಯಯನ ಮಾಡಿದ್ದು, ಎಷ್ಟೇ ಆಳವಾಗಿ ಹೋದರೂ ಬಜೆಟ್‌ಲ್ಲಿ ಸಾಲವೇ ಕಂಡುಬರುತ್ತಿದೆ. ಇದು ಕ್ರೆಡಿಟ್ ಬಜೆಟ್.**

■ **ಅಶೋಕ್, ವಿಪಕ್ಷ ನಾಯಕ**



- ಬಜೆಟ್ ಮೇಲಿನ ಚರ್ಚೆಯಲ್ಲಿ ಒಟ್ಟು 50 ಜನ ಭಾಗಿ
- ಪ್ರತಿಪಕ್ಷದವರು 21 ಸದಸ್ಯರು
- ನಡೆದಿರುವ ಚರ್ಚೆಯ ಒಟ್ಟು ಅವಧಿ 24 ತಾಸು 45 ನಿಮಿಷ

### ವಿಪಕ್ಷಗಳ ಸಭಾತ್ಯಾಗ

ಮುಖ್ಯಮಂತ್ರಿಗಳು ಬಜೆಟ್ ಕುರಿತು ಮಾತನಾಡಿದ ಭಾಷಣ ಸರಿಯಾಗಿ ಇಲ್ಲ, ನಮ್ಮ ಗೊಂದಲಗಳಿಗೆ ಸ್ಪಷ್ಟನೆ ನೀಡಿಲ್ಲ. ಇದನ್ನು ನಾವು ವಿರೋಧಿಸುತ್ತೇವೆ ಎಂದು ವಿಪಕ್ಷಗಳ ಸದಸ್ಯರು ಧಿಕ್ಕಾರ ಕೂಗಿ ಸಭಾತ್ಯಾಗ ಮಾಡಿದರು.

### ಅನುದಾನಕ್ಕಾಗಿ ಕೇಂದ್ರಕ್ಕೆ ರಾಜ್ಯದ ನಿಯೋಗ

ರಾಜ್ಯಕ್ಕೆ ಅನ್ಯಾಯವಾದಾಗ ಯಾವುದೇ ಸರ್ಕಾರವಿದ್ದರೂ, ವಿರೋಧಿಸಲೇಬೇಕು. ಕನ್ನಡಿಗರೆಲ್ಲರೂ ಒಗ್ಗಟ್ಟಾಗಿ ಈ ಅನ್ಯಾಯವನ್ನು ವಿರೋಧಿಸಬೇಕು. ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗದಲ್ಲಿ ಶೇ. 4.713ರಷ್ಟು ಪಾಲು ದೊರೆತಿತ್ತು. ಆದರೆ 15ನೇ ಹಣಕಾಸು ಆಯೋಗದಲ್ಲಿ ಅದು ಶೇ. 3.647 ರಷ್ಟಾಗಿತ್ತು. ನ್ಯಾಯಯುತವಾದ ರಾಜ್ಯದ ಪಾಲನ್ನು ನಮಗೆ ನೀಡಿಲ್ಲ. 16ನೇ ಆಯೋಗದಲ್ಲಿ ಸ್ವಲ್ಪ ಸುಧಾರಣೆಯಾಗಿ 4.131 ರಷ್ಟು ರಾಜ್ಯಕ್ಕೆ ನಿಗದಿಯಾಗಿದೆ. ಆದರೆ, ರಾಜ್ಯ ಕೋರಿದ್ದ ಶೇ. 4.7ರಷ್ಟು ಬರಲಿಲ್ಲ. ಆದ್ದರಿಂದ ಕೇಂದ್ರದ ವಿರುದ್ಧದ ಹೋರಾಟ ಮುಂದುವರೆಯಲಿದೆ. ಸದ್ಯದಲ್ಲಿಯೇ ರಾಜ್ಯದ ಅನುದಾನದ ಬೇಡಿಕೆಯನ್ನಿಟ್ಟು ಪಕ್ಷಾತೀತವಾದ ನಿಯೋಗವೊಂದು ಕೇಂದ್ರಕ್ಕೆ ಹೋಗಬೇಕು ಎಂದು ಸಿದ್ದರಾಮಯ್ಯ ಹೇಳಿದರು.

### ನಾನು ನಂ1 ಕನ್ನಡಿಗ

ಸಿಐಜಿ ವರದಿ ಪ್ರಸ್ತಾಪಿಸುವ ವೇಳೆ ವಿಪಕ್ಷ ನಾಯಕ ಅಶೋಕ್ ಅವರು, ಪುಟ ಸಂಖ್ಯೆ ಕನ್ನಡದಲ್ಲಿ ಹೇಳಿ ಎಂದಾಗ ನಾನು ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿದ್ದೆ. ಆವಾಗಲೂ ಕನ್ನಡಿಗ, ಈಗಲೂ ಕನ್ನಡಿಗ, ಮುಂದೆಯೂ ಕನ್ನಡಿಗ. ನಾನು ನಂ1 ಕನ್ನಡಿಗ ಎಂದು ಸಿದ್ದರಾಮಯ್ಯ ಹೇಳಿದರು.

### ಧನ ವಿನಿಯೋಗ ವಿಧೇಯಕ ಅಂಗೀಕಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2025-26ನೇ ಸಾಲಿನ ಹಣಕಾಸು ವರ್ಷದ ಸೇವೆಗಳಿಗಾಗಿ ರಾಜ್ಯದ ಸಮಚಿತ ನಿಧಿಯಿಂದ ಹಣದ ಸಂದಾಯ ಮತ್ತು ವಿನಿಯೋಗಕ್ಕಾಗಿ ಒಪ್ಪಿಗೆ ನೀಡುವ ಕರ್ನಾಟಕ ಧನ ವಿನಿಯೋಗ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಲಾಯಿತು.

ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರತೆ ಹೆಚ್ಚಳ

# ಟ್ರಂಪ್ ಕದನ ವಿರಾಮ ತಿರಸ್ಕರಿಸಿದ ಇರಾನ್

• **ದುಬೈ:** ಅಮೆರಿಕದ ಕದನ ವಿರಾಮ ಪ್ರಸ್ತಾವನೆಯನ್ನು ತಿರಸ್ಕರಿಸಿರುವ ಇರಾನ್, ತನ್ನದೇ ಪ್ರತಿಪ್ರಸ್ತಾವನೆಯನ್ನು ಮುಂದಿಟ್ಟಿದೆ. ಇದೇ ವೇಳೆ ಮಧ್ಯಪ್ರಾಚ್ಯದಲ್ಲಿ ದಾಳಿ-ಪ್ರತಿದಾಳಿಗಳು ಹೆಚ್ಚುತ್ತಿವೆ. ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯಿಂದ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಇಸ್ರೇಲ್ ಟೆಹ್ರಾನ್ ಮೇಲೆ ವಾಯುದಾಳಿ ನಡೆಸಿದರೆ, ಇರಾನ್ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ ಮುಂದುವರಿಸಿದೆ. ಅಮೆರಿಕದ ಅಬ್ರಹಾಂ ಲಿಂಕನ್ ನೌಕೆ ಮೇಲೆ ದಾಳಿ ನಡೆಸಿದ್ದಾಗಿ ಇರಾನ್ ಸೇನೆ ಹೇಳಿದೆ.




**ಅಮೆರಿಕ ಸೇನಾ ನಿಯೋಜನೆ ಹೆಚ್ಚಳ:** ಅಮೆರಿಕ ಸುಮಾರು 1,000 ಪ್ಯಾರಾಟ್ರೂಪರ್‌ಗಳನ್ನು ಹಾಗೂ 5,000 ಮೆರೀನ್ ಸೈನಿಕರನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸುತ್ತಿದೆ. ಈ ಪಡೆಗಳು ಯುದ್ಧಭೂಮಿಯಲ್ಲಿ ಪ್ರಮುಖ ಪ್ರದೇಶಗಳನ್ನು ಕಬಳಿಸಲು ತರಬೇತಿ ಪಡೆದಿವೆ. ಇದು ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಇನ್ನಷ್ಟು ಹೆಚ್ಚಿಸಿದೆ.

**ಸಂಧಾನ ಮಾತುಕತೆಗೆ ಸವಾಲು:** ಪಾಕಿಸ್ತಾನ ಮತ್ತು ಈಜಿಪ್ಟ್ ಮಧ್ಯಸ್ಥಿಕೆಯಲ್ಲಿ ಅಮೆರಿಕ 15 ಅಂಶಗಳ ಪ್ರಸ್ತಾವನೆ ನೀಡಿದೆ. ಇದರಲ್ಲಿ ನಿರ್ಬಂಧ ಸಡಿಲಿಕೆ, ಇರಾನ್ ಪರಮಾಣು ಕಾರ್ಯಕ್ರಮದ ಕಡಿತ, ಕ್ಷಿಪಣಿ ನಿಯಂತ್ರಣ ಮತ್ತು ಹಾರ್ಮುಜ್ ಜಲಸಂಧಿ ತೆರವು ಒಳಗೊಂಡಿದೆ. ಆದರೆ, ಇರಾನ್ ತನ್ನ ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿ ಯಾವುದೇ ರಾಜಿಗೆ ಸಿದ್ಧವಿಲ್ಲ ಎಂದು ತಿಳಿಸಿದೆ. ಇರಾನ್ ತನ್ನ ಐದು ಅಂಶಗಳ ಯೋಜನೆಯನ್ನು ಮಂಡಿಸಿದ್ದು, ಇದರಲ್ಲಿ ಯುದ್ಧ ನಿಲುಗಡೆ, ಪರಿಹಾರ ಧನ, ಮತ್ತು ಹಾರ್ಮುಜ್ ಮೇಲಿನ ತನ್ನ ನಿಯಂತ್ರಣವನ್ನು ಒಪ್ಪಿಕೊಳ್ಳುವಂತೆ ಕೇಳಿದೆ. ಈ ಅಂಶಗಳು ಅಮೆರಿಕಕ್ಕೆ ಅಸಾಧ್ಯವೆಂದು ತೋರುತ್ತಿದೆ. ಇಸ್ರೇಲ್ ಟೆಹ್ರಾನ್ ಮತ್ತು ಇಸ್ಫಹಾನ್ ಪ್ರದೇಶಗಳಲ್ಲಿ ವಾಯುದಾಳಿ ನಡೆಸಿದೆ.

➡ಪುಟ ೪



### ಪಾಕಿಸ್ತಾನ ದಲ್ಲಾಳಿ ರಾಷ್ಟ್ರ : ಜೈಶಂಕರ್

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧದ ಹಿನ್ನೆಲೆ ದೇಶೀಯ ರಾಜಕೀಯ ಕಾವೇರಿದಂತೆ, ಬುಧವಾರ ನಡೆದ ಸರ್ವಪಕ್ಷ ಸಭೆ ಭಾರೀ ವಾಗ್ವಾದಕ್ಕೆ ಸಾಕ್ಷಿಯಾಯಿತು. 'ಪಾಕಿಸ್ತಾನ ದಲ್ಲಾಳಿ ರಾಷ್ಟ್ರ, ನಾವು ಅಲ್ಲ' ಎಂದು ಕೇಂದ್ರ ಸರ್ಕಾರ ತಿರುಗೇಟು ನೀಡಿತು. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಯುದ್ಧ ತಕ್ಷಣ ಅಂತ್ಯಗೊಳ್ಳಬೇಕು ಎಂದು ತಿಳಿಸಿರುವುದಾಗಿ ಸರ್ಕಾರ ಹೇಳಿದರೂ, ಅದರ ನಿಲುವಿನ ಮೇಲೆ ವಿರೋಧ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದವು. ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಕಿಸ್ತಾನವನ್ನು ನೇರವಾಗಿ ಟಾರ್ಗೆಟ್ ಮಾಡಿ, '1981ರಿಂದಲೇ ಅಮೆರಿಕ ಪಾಕಿಸ್ತಾನವನ್ನು ಬಳಸಿಕೊಂಡಿದೆ. ನಾವು ಅಂತಹ ದಲ್ಲಾಳಿ ರಾಷ್ಟ್ರವಲ್ಲ' ಎಂದು ಸ್ಪಷ್ಟಪಡಿಸಿದರೆಂದು ಮೂಲಗಳು ತಿಳಿಸಿವೆ.

➡ಪುಟ ೪

ಏಕಾತ್ಮ ಮಾನವ ದರ್ಶನದಲ್ಲಿ ರಾಜ್ಯಪಾಲ ಗೆಹಲೋತ್

# ಭಾರತೀಯ ಸಂಸ್ಕೃತಿಯ ದರ್ಶನ

• **ಮೈಸೂರು :** ಭಾರತ ದೇಶ ತನ್ನ ಮಹಾನ್ ನಾಗರಿಕತೆ ಮತ್ತು ಸಂಸ್ಕೃತಿಯ ಕಾರಣ ಜಾಗತಿಕ ವೇದಿಕೆಯಲ್ಲಿ ಪ್ರಸಿದ್ಧಿ ಪಡೆದಿದೆ ಎಂದು ರಾಜ್ಯಪಾಲ ಥಾವರ್ ಚಾಂದ್ ಗೆಹ್ಲೋತ್ ಹೇಳಿದರು.

ಮೈಸೂರಿನ ಮುಕ್ತಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ ಭವನದಲ್ಲಿ ಪ್ರಜ್ಞಾ ಪ್ರವಾಹ ಕರ್ನಾಟಕದ ವತಿಯಿಂದ ಬುಧವಾರ ಆಯೋಜಿಸಲಾದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಷಯ ಕುರಿತಾದ ವಿಚಾರ ಸಂಕಿರಣ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಲಕಾಲಕ್ಕೆ ಅನೇಕ ಮಹಾನ್ ವಿಭೂತಿಪುರುಷರು ಭಾರತದಲ್ಲಿ ಅವತರಿಸಿ ಇಲ್ಲಿನ ಮಹಾನ್ ಪರಂಪರೆಯನ್ನು ಸಮೃದ್ಧಗೊಳಿಸಿದ್ದಾರೆ. ಈ ಮಹಾನ್ ಪುರುಷರ ಮೂಲಕ ಸ್ಥಾಪಿತಗೊಂಡ ಮಹಾನ್ ಪರಂಪರೆಯು ಸಮಾಜ ಮತ್ತು ರಾಷ್ಟ್ರಕ್ಕೆ ಕಾಲಕಾಲಕ್ಕೆ ಪಥದರ್ಶಕದಂತೆ ಕಾರ್ಯನಿರ್ವಹಿಸಿದೆ ಎಂದು ಬಣ್ಣಿಸಿದರು.

➡ಪುಟ ೪



ಈ ಮಸೂದೆ ಜಾರಿಗೊಳಿಸಿದ ಎರಡನೇ ರಾಜ್ಯವೆಂಬ ಹೆಗ್ಗಳಿಕೆ

# ಏನಾಸಂ ಅಂಗೀಕರಿಸಿದ ಗುಜರಾತ್

• **ಅಹ್ಮದಾಬಾದ್:** ವಿವಾಹ, ವಿವಾಹ ವಿಚ್ಛೇದನ, ಉತ್ತರಾಧಿಕಾರ, ಲಿವ್-ಇನ್ ಸಂಬಂಧಗಳು ಇತ್ಯಾದಿಗಳಿಗೆ ಮತ-ಧರ್ಮ ಭೇದವಿಲ್ಲದೆ ಸಮಾನ ಕಾನೂನನ್ನು ಅನ್ವಯಿಸುವ ಉದ್ದೇಶದ ಏಕರೂಪ ನಾಗರಿಕ ಸಂಹಿತೆಯನ್ನು (ಏನಾಸಂ) ಗುಜರಾತ್ ವಿಧಾನಸಭೆ ಬಹುಮತದ ಧ್ವನಿಮತದಿಂದ ಅಂಗೀಕರಿಸಿದೆ. ತನ್ಮೂಲಕ ಈ ಮಸೂದೆ ಅಂಗೀಕರಿಸಿದ ದ್ವಿತೀಯ ರಾಜ್ಯವೆಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಕಾಂಗ್ರೆಸ್ ಮತ್ತು ಆಪ್ ಪಕ್ಷಗಳು ಮಸೂದೆಗೆ ಸಹಮತ ವ್ಯಕ್ತಪಡಿಸಿಲ್ಲ. ಗುಜರಾತ್ ವಿಧಾನಸಭೆಯಲ್ಲಿ ಸತತ 7 ತಾಸುಗಳ ಸುದೀರ್ಘ ಚರ್ಚೆ ನಂತರ ಏಕರೂಪ ನಾಗರಿಕ ಸಂಹಿತೆ ಮಸೂದೆ ಅಂಗೀಕಾರವಾಗಿದೆ. ಯುಸಿಸಿ ಅನುಷ್ಠಾನ ಬಗ್ಗೆ ರಾಜ್ಯ ನಿಯೋಜಿತ ನಿಯೋಗವು ತನ್ನ ಅಂತಿಮ ವರದಿ ಸಲ್ಲಿಸಿದ ವಾರದ ನಂತರ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದರು.




➡ಪುಟ ೪



### ಯಾರಿಗೆ ಅನ್ವಯಿಸದು?

ಪರಿಶಿಷ್ಟ ಪಂಗಡಗಳು ಮತ್ತು ಸಂವಿಧಾನದಲ್ಲಿ ಸಂರಕ್ಷಿಸಲ್ಪಡುವ ಸಾಂಪ್ರದಾಯಿಕ ಹಕ್ಕುಗಳನ್ನು ಹೊಂದಿರುವ ನಿರ್ದಿಷ್ಟ ಗುಂಪುಗಳಿಗೆ ಸಮಾನ ನಾಗರಿಕ ಸಂಹಿತೆ ಅನ್ವಯಿಸುವುದಿಲ್ಲ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಸಮಾನ ಕಾನೂನು ಚೌಕಟ್ಟನ್ನು ಸೃಷ್ಟಿಸುವುದು ಯುಸಿಸಿಯ ಧ್ಯೇಯವೆಂದು ಮಸೂದೆಯ ಉದ್ದೇಶಗಳು ಮತ್ತು ಕಾರಣಗಳಲ್ಲಿ ವಿಶದಪಡಿಸಲಾಗಿದೆ.

# ಕೈ ಕಚೇರಿಗಳ ತೆರವಿಗೆ ಗಡುವು




**ಮಾ.28ರೊಳಗೆ ಖಾಲಿ ಮಾಡಿ: ಸೂಚನೆ**

• **ಹೊಸದಿಲ್ಲಿ:** ಕಾಂಗ್ರೆಸ್ 1978ರಿಂದಲೇ ಹಿಡಿತದಲ್ಲಿಟ್ಟುಕೊಂಡಿರುವ ದಿಲ್ಲಿಯ ಲುಟ್ಯೆನ್ಸ್ ವಲಯದಲ್ಲಿರುವ 24 ಅಕ್ಬರ್ ರಸ್ತೆಯಲ್ಲಿನ ಪಕ್ಷದ ಪ್ರಧಾನ ಕಚೇರಿ ಕಟ್ಟಡವನ್ನು ಮಾ.28ರೊಳಗೆ ತೆರವುಗೊಳಿಸಬೇಕಾಗಿದೆ. ಅಲ್ಲದೆ, 5 ರೈಸಿನಾ ರೋಡ್‌ನಲ್ಲಿನ ಭಾರತೀಯ ಯುವ ಕಾಂಗ್ರೆಸ್(ಐವೈಸಿ)ಕಚೇರಿಯನ್ನೂ ಸಮಾನ ಗಡುವಿನೊಳಗೆ ತೆರವುಗೊಳಿಸುವಂತೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ಕಟ್ಟಡದ ತೆರವಿಗೆ ಸೂಚಿಸಿ ಈಚೆಗೆ ನೋಟಿಸ್ ಬಂದಿದೆ. ಯಾವುದೇ ಒತ್ತಡಪೂರ್ವಕ ತೆರವು ಕಾರ್ಯಾಚರಣೆ ತಡೆಯಲು ನಾವು ನ್ಯಾಯಾಲಯಗಳ ಮೊರೆ ಹೋಗುವುದಾಗಿ ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

➡ಪುಟ ೪

# ಸಭಾಪತಿ ಪೀಠದಲ್ಲಿ ಸಾತ್ವಿಕ ವನವಾಸಿ ಶಾಂತಾರಾಮ ಸಿದ್ದಿ

▸ **ಕೋಟ ಶ್ರೀನಿವಾಸ ಪೂಜಾರಿ**
ಸಂಸದರು



ಸರಿಸುಮಾರು ಆರು ವರ್ಷಗಳ ಹಿಂದೆ ಶಾಂತಾರಾಮ ಸಿದ್ದಿ ಎಂಬ ಮುಗ್ಧಗಣ್ಣಿನ, ಗುಂಗುರು ತಲೆ ಕೂದಲಿನ ರಾಜಕೀಯ ಕ್ಷೇತ್ರಕ್ಕೆ ಮಾತ್ರವಲ್ಲ, ಸುತ್ತಲ ಪ್ರಪಂಚಕ್ಕೂ ಹೊಸಬರಾದ ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ವಾಸ ಮಾಡಿಕೊಂಡಿರುವ ತನಗಿಂತ, ತನ್ನ ಜಾತಿ ಧರ್ಮಕ್ಕಿಂತ ದೇಶ ಮೊದಲು ಎಂದು ಬದುಕಿದ ಸಂಘದ ಕಾರ್ಯಕರ್ತ ಬುಡಕಟ್ಟು ಸಿದ್ದಿ ಜನಾಂಗದ ಶಾಂತಾರಾಮರ ಮನೆಗೆ ಧಾವಿಸಿದ್ದೆ. ಉತ್ತರಕನ್ನಡ ಜಿಲ್ಲೆಯ, ಯಲ್ಲಾಪುರ ಸನಿಹದಲ್ಲಿ ಪ್ಲಾಸ್ಟಿಕ್ ಹೊದಿಸಿದ ಹಳೆಯ ಹಂಚಿನ ಮನೆ ಎದುರು ನಿಂತು ನಿಮ್ಮನ್ನು ನಮ್ಮ ಪಾರ್ಟಿ ಮೇಲ್ಮನೆಯ ನಾಮನಿರ್ದೇಶಿತ ಶಾಸಕರಾಗಿ ಘೋಷಿಸಿದೆ. ಅಭಿನಂದಿಸಲು ಬಂದೆ ಎಂದಿದ್ದೆ. ನನ್ನ ಕೈ ಹಿಡಿದು ಮನೆಯೊಳಗೆ ಕರೆದೊಯ್ದ ಶಾಂತಾರಾಮ ಸಿದ್ದಿ ಪುಟ್ಟ ಮನೆಯ ಗೋಡೆಗೆ ತಗಲಿ ಕುಳ್ಳಿರಿಸಿದ ದೇವರ ಫೋಟೋದೊಂದಿಗೆ ಭಾರತಮಾತೆ, ಡಾಕ್ಟರ್‌ಜಿ, ಗುರೂಜಿ ಭಾವಚಿತ್ರಗಳೆದುರು ಕೈಮುಗಿದು ನಿಂತು ಭಾವುಕರಾಗಿದ್ದರು. ಮರುದಿವಸ ಪ್ರಜಾವಾಣಿಯಲ್ಲಿ ಕಮಲದಲ್ಲಿ ಅರಳಿದ ಕಾಡ ಕುಸುಮ ಎಂಬ ಶಿರೋನಾಮೆಯಲ್ಲಿ ನಾನೊಂದು ಲೇಖನ ಬರೆದಿದ್ದೆ.



➡ಪುಟ ೪

# ಉಪ ಚುನಾವಣೆ ಮುಸ್ಲಿಂ ಆಕ್ರೋಶ

▸ **ಪವಮಾನ ಐರಣಿ**

• **ದಾವಣಗೆರೆ:** 500 ರೂ., ಹಾಫ್ ಬಿರಿಯಾನಿಗೆ ಮತ ಹಾಕುವವರು ಎಂಬ ಮುಖಂಡರೊಬ್ಬರ ಹೇಳಿಕೆ ಮುಸ್ಲಿಮರ ಆಕ್ರೋಶ ಈ ಬಾರಿಯ ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಸ್ಫೋಟಗೊಳ್ಳಲಿದೆಯಾ? ಇಂತಹ ಹೇಳಿಕೆಯೊಂದು ಫಲಿತಾಂಶದ ದಿಕ್ಕನ್ನೇ ಬದಲಿಸಲಿದೆಯಾ?

**20 ಮುಸ್ಲಿಂ ಅಭ್ಯರ್ಥಿಗಳಿಂದ ನಾಮಪತ್ರ**

ಇಂತಹ ಹಲವು ಪ್ರಶ್ನೆಗಳು ದಾವಣಗೆರೆ ದಕ್ಷಿಣದ ಉಪ ಚುನಾವಣೆಗೆ ಇದೇ ಮೊದಲ ಬಾರಿಗೆ ದಾಖಲೆಯ ಸಂಖ್ಯೆಯಲ್ಲಿ ಮುಸ್ಲಿಂ ಉಮೇದುವಾರರು ನಾಮಪತ್ರ ಸಲ್ಲಿಸಿದ ನಂತರ ಕೇಳಿಬರುತ್ತಿವೆ. ಅಭ್ಯರ್ಥಿ ಆಯ್ಕೆ ಸಂಬಂಧ ಜಿಲ್ಲೆಗೆ ವೀಕ್ಷಕರಾಗಿ ಆಗಮಿಸಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹಾಗೂ ಮಾಜಿ ಸಚಿವ ಎಚ್.ಎಂ. ರೇವಣ್ಣ ನೇತೃತ್ವದ ಸಭೆಯಲ್ಲಿ, ಮುಸ್ಲಿಮರು 500 ರೂಪಾಯಿ, ಹಾಫ್ ಬಿರಿಯಾನಿಗೆ ಮತ ಹಾಕುವವರು ಎಂದು ಮುಖಂಡರೊಬ್ಬರು ಅವಹೇಳನ ಮಾಡಿದ್ದಾರೆ ಎನ್ನುವ ವಿಚಾರ ಕೂಡ ಸಮುದಾಯದ ಸ್ವಾಭಿಮಾನ ಕೆರಳಿಸಿದೆ ಎನ್ನಲಾಗಿದೆ.

➡ಪುಟ ೪




ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,22,000(2,41,500) ಅಪರಂಜಿ ಚಿನ್ನ 14,550(13,840) ಆಭರಣ ಚಿನ್ನ: 13,445(12,865) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,273 (1205↑) ಎನ್‌ಎಸ್‌ಇ 23,306 (394↑) $1 = ₹93.80

## ಕಿರುಸುದ್ದಿ

### ಕೇಶವ ಬಂಗೇರಗೆ ಪಿಎಚ್‌ಡಿ



**ಬೆಳ್ತಂಗಡಿ:** ಮಂಗಳೂರು ಕುದ್ರೋಳಿ ಶ್ರೀ ನಾರಾಯಣ ಗುರು ಕಾಲೇಜಿನ ಪ್ರಾಧ್ಯಾಪಕ ಕೇಶವ ಬಂಗೇರ ಬಿ. ಗೇರುಕಟ್ಟೆ ಅವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ಲಭಿಸಿದೆ. 'ತುಳು ರಂಗಭೂಮಿ ಮತ್ತು ಸಿನೆಮಾ: ಪ್ರೇರಣೆ ಮತ್ತು ಅನನ್ಯತೆ' ಕುರಿತು ಮಹಾ ಪ್ರಬಂಧ ಮಂಡಿಸಿದ್ದರು. ಮಂಗಳೂರು ವಿಶ್ವವಿದ್ಯಾಲಯದ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ ಸಹಾಯಕ ಪ್ರಾಧ್ಯಾಪಕ ಡಾ. ಧನಂಜಯ ಕುಂಬಳೆ ಅವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧ ಅಧ್ಯಯನ ನಡೆಸಿದ್ದರು.

ಪ್ರಸ್ತುತ ಅವರು ಕುದ್ರೋಳಿ ನಾರಾಯಣ ಗುರು ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಯಾದ ಅವರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಕಲೆ , ಕ್ರೀಡಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ನಾಟಕ, ಯಕ್ಷಗಾನ ಕಲಾವಿದರಾಗಿಯೂ ಬಹು ಮುಖ ಪ್ರತಿಭಾಸಂಪನ್ನರಾಗಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ರಾಜ್ಯ ಕಾರ್ಯದರ್ಶಿಯಾಗಿದ್ದಾರೆ.

### ಬಾಕ್ಸಿಂಗ್ ಸ್ಪರ್ಧೆ: ರೋಶನ್ ಡಿಕುನ್ಹಗೆ ಬೆಳ್ಳಿಯ ಪದಕ



**ಮಂಗಳೂರು:** ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ವೈಟ್ ಕಾರ್ನರ್ ಬಾಕ್ಸಿಂಗ್ ಪ್ರಸ್ತುತ ಪಡಿಸಿದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಮಂಗಳೂರಿನ ರೋಶನ್ ಡಿಕುನ್ಹ ಅವರು ಬೆಳ್ಳಿಯ ಪದಕವನ್ನು ಪಡೆದಿದ್ದಾರೆ. ಇವರು ಗ್ರೌಂಡ್ ಬಾರ್ನ್ ಫೈಟ್ ಕ್ಲಬ್ ಆ್ಯಂಡ್ ಫಿಟ್‌ನೆಸ್ ಜಿಮ್‌ನ ಮುಖ್ಯತರಬೇತುದಾರ ಶಿಶಿರ್ ಪೂಜಾರಿ ಅವರಿಂದ ತರಬೇತಿ ಪಡೆದಿದ್ದಾರೆ.

### ಅಕ್ಷತಾ ಪೂಜಾರಿಗೆ ಪ್ರಶಸ್ತಿ ಪ್ರದಾನ



**ಮಂಗಳೂರು:** ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಪಟು ಅಕ್ಷತಾ ಪೂಜಾರಿ ಬೋಳ ಅವರಿಗೆ ಪ್ರತಿಷ್ಠಿತ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರದಾನ ಮಾಡಿದರು.

### ಆದಿವಾಸಿಗಳ ಪಾರಂಪರಿಕ ಜ್ಞಾನ ಅಧ್ಯಯನ ಪ್ರವಾಸಕ್ಕೆ ಡಾ.ಕಾವೇರಿ ಹೆಚ್.ಎಂ ಆಯ್ಕೆ



**ಮಡಿಕೇರಿ:** ಸಾಮಾಜಿಕ ಹೋರಾಟಗಾರ್ತಿ ಡಾ.ಕಾವೇರಿ ಹೆಚ್.ಎಂ ಅವರು ಜಪಾನ್ ದೇಶದಲ್ಲಿ ನಡೆಯುತ್ತಿರುವ ದಕ್ಷಿಣ ಏಷ್ಯಾ ದೇಶಗಳ ಆದಿವಾಸಿಗಳ ಪಾರಂಪರಿಕ ಜ್ಞಾನ, ಗ್ರಾಮೀಣ ನಾಯಕತ್ವ ಮತ್ತು ಗ್ರಾಮೀಣ ಅಭಿವೃದ್ಧಿ ಕುರಿತ ತರಬೇತಿ ಹಾಗೂ ಅಧ್ಯಯನ ಪ್ರವಾಸಕ್ಕೆ ಆಯ್ಕೆಯಾಗಿದ್ದಾರೆ. ಇದು 9 ತಿಂಗಳ ಕಾರ್ಯಕ್ರಮವಾಗಿದ್ದು, ಈ ತರಬೇತಿ ಮೂಲಕ ಗ್ರಾಮೀಣ ಅಭಿವೃದ್ಧಿ ಹಾಗೂ ಪಾರಂಪರಿಕ ಜ್ಞಾನ ವ್ಯವಸ್ಥೆಗಳ ಬಗ್ಗೆ ಜಾಗತಿಕ ಅನುಭವವನ್ನು ಪಡೆಯುವ ಅವಕಾಶ ದೊರೆಯಲಿದೆ. ಡಾ.ಕಾವೇರಿ ಹೆಚ್.ಎಂ ಅವರಿಗೆ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಶುಭ ಹಾರೈಸಿದ್ದಾರೆ.



ಹಿರಿಯ ಲೇಖಕಿ, ಪತ್ರಕರ್ತೆ ಕೋಡಿಬೆಟ್ಟು ರಾಜಲಕ್ಷ್ಮಿ ಬರೆದಿರುವ ಪ್ರಸಿದ್ಧ ನೃತ್ಯ ಕಲಾವಿದರ ಸಂದರ್ಶನಗಳ 'ಲಲಿತ ಮಂಟಪ' ಕೃತಿ ಬಿಡುಗಡೆ ಸಮಾರಂಭ ನಗರದ ಸಪ್ನ ಬುಕ್ ಹೌಸ್‌ನಲ್ಲಿ ಬುಧವಾರ ನಡೆಯಿತು. ವಿಶ್ರಾಂತ ಕುಲಪತಿ ಡಾ.ಕೆ. ಚಿನ್ನಪ್ಪ ಗೌಡ, ಮಾಜಿ ಶಾಸಕಿ ಶಕುಂತಳಾ ಟಿ.ಶೆಟ್ಟಿ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಕೃತಿಕರ್ತೆ ರಾಜಲಕ್ಷ್ಮಿ ಕೋಡಿಬೆಟ್ಟು, ಲೇಖಕಿ ದೇವಿಕಾ ನಾಗೇಶ್ ಉಪಸ್ಥಿತರಿದ್ದರು.

# 'ಎಂಎಂಎ-ಕೆವಿಕೆ ಅತ್ಯುತ್ತಮ ವ್ಯವಸ್ಥಾಪಕ ಪ್ರಶಸ್ತಿ-2025'ಗೆ ಡಾ.ಎಂಎನ್‌ಆರ್ ಆಯ್ಕೆ

**ಮಂಗಳೂರು:** ದ.ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರು ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ ವತಿಯಿಂದ ನೀಡಲಾಗುವ 27ನೇ 'ಎಂಎಂಎ-ಕೆವಿಕೆ ಅತ್ಯುತ್ತಮ ವ್ಯವಸ್ಥಾಪಕ ಪ್ರಶಸ್ತಿ-2025'ಗೆ ಆಯ್ಕೆಯಾಗಿದ್ದಾರೆ.



ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರು ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಂದಿರುವ ಕ್ರಾಂತಿಕಾರಿ ಬದಲಾವಣೆ ಮತ್ತು ಅವರ ದಕ್ಷ ವ್ಯವಸ್ಥಾಪನಾ ಶೈಲಿಯನ್ನು ಗುರುತಿಸಿ ಈ ಸಾಲಿನ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಪ್ರಧಾನ ಕಾರ್ಯಕ್ರಮವು ಮಾ. 28 ರಂದು ಸಂಜೆ 6 ರಿಂದ ನಗರದ ಎಸ್.ಡಿ.ಎಂ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ ಅಧ್ಯಕ್ಷ ಎಡ್ವರ್ಡ್ ಜೆ. ಕೊಯೆಲ್ಹೊ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮಂಗಳೂರು ಹಾಗೂ ಉಡುಪಿಯ ನಿರ್ವಹಣಾ ವೃತ್ತಿಪರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 1982-84ರ ಅವಧಿಯಲ್ಲಿ ಸಂಘದ ಅಧ್ಯಕ್ಷರಾಗಿದ್ದ ಕೆ.ವಿಶ್ವನಾಥ ಕಾಮತ್ ಹೆಸರಲ್ಲಿ 1997ರಲ್ಲಿ ಅತ್ಯುತ್ತಮ ವ್ಯವಸ್ಥಾಪಕ ಪ್ರಶಸ್ತಿ ಪ್ರಾರಂಭಿಸಲಾಯಿತು. ಈ ಪ್ರಶಸ್ತಿಯನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಮತ್ತು ನಿರ್ವಹಣಾ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿದ ಗಣ್ಯರಿಗೆ ನೀಡಲಾಗುತ್ತಿದೆ ಎಂದು ಹೇಳಿದರು.

ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿ ಯೇಶನ್ ಕಾರ್ಯದರ್ಶಿ ಡಾ. ರಮ್ಯಾ ಶೆಟ್ಟಿ, ಸದಸ್ಯರಾದ ಡಾ. ಅರುಣ್ ಕುಮಾರ್, ಜಯರಾಮ್ ಶೆಟ್ಟಿ ಹಾಗೂ ಪ್ರಮೀಳಾ ಶೆಟ್ಟಿ ಉಪಸ್ಥಿತರಿದ್ದರು.

ಕಾರ್ಕಳದ ನಂದಳಿಕೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮಹತ್ವದ ಹೆಜ್ಜೆ

# ಸರ್ಕಾರಿ ಶಾಲೆಯಲ್ಲೂ LKG, UKG

**ಕಾರ್ಕಳ:** ಹೆಚ್ಚುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರಭಾವದಿಂದಾಗಿ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಸರಕಾರಿ ಶಾಲೆ ಉಳಿಸುವ ನಿಟ್ಟಿನಲ್ಲಿ ಹತ್ತಾರು ಮಂದಿ ಸಮಾನಮನಸ್ಕ ಶಿಕ್ಷಣ ಪ್ರೇಮಿಗಳು ಮತ್ತು ಶಿಕ್ಷಕರು ಯೋಜನೆಯೊಂದನ್ನು ಹಮ್ಮಿಕೊಂಡಿದ್ದಾರೆ.

ಪೂರ್ವ ಪ್ರಾಥಮಿಕ ತರಗತಿಗಳನ್ನು ಹಳೆ ವಿದ್ಯಾರ್ಥಿಗಳ ಹಾಗೂ ದಾನಿಗಳ ನೆರವಿನಿಂದ ಈ ಯೋಜನೆಗೆ ಚಾಲನೆ ದೊರೆತಿದ್ದು, ಈಗಾಗಲೇ ದಾಖಲಾತಿ ಆರಂಭಗೊಂಡು ಒಂದಷ್ಟು ವಿದ್ಯಾರ್ಥಿಗಳ ದಾಖಲಾತಿಯನ್ನು ಪಡೆದುಕೊಂಡಿದ್ದಾರೆ. ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಹಾಗೂ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಗುಣಮಟ್ಟದ ಆಂಗ್ಲ ಶಿಕ್ಷಣವನ್ನು ಉಚಿತವಾಗಿ ನೀಡುವ ನಿಟ್ಟಿನಲ್ಲಿ ಕಾರ್ಕಳ ತಾಲೂಕಿನ ನಂದಳಿಕೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (ಬೋರ್ಡು ಶಾಲೆ)ಯು ಮಹತ್ವದ ಹೆಜ್ಜೆ ಇಟ್ಟಿದೆ.

**ದಾಖಲಾತಿ ಆರಂಭ...**

ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲೆಯಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳನ್ನು ಆಂಗ್ಲ ಮಾಧ್ಯಮದಲ್ಲಿ ಆರಂಭಿಸುವ ಬಗ್ಗೆ ಹೆಜ್ಜೆ ಇಟ್ಟಿದ್ದೆ.

ಖಾಸಗಿ ಕಾನ್ವೆಂಟ್‌ಗಳ, ಆಂಗ್ಲ ಮಾಧ್ಯಮ ಶಾಲೆಗಳ ಅಬ್ಬರದ ನಡುವೆ ಕನ್ನಡದ ಸರ್ಕಾರಿ ಶಾಲೆಗಳೂ ನಾವೀನ್ಯತೆಯನ್ನು ಅಳವಡಿಸಿಕೊಳ್ಳುತ್ತಿವೆ. ನಂದಳಿಕೆಯ ಈ ಶಾಲೆಯು ಶತ ವರುಷದ ಹಳೆಯ ಇತಿಹಾಸವನ್ನು ಹೊಂದಿದ್ದು, ಈಗ ಪೂರ್ವ ಪ್ರಾಥಮಿಕ ಹಂತದಲ್ಲೇ ಆಂಗ್ಲ ಶಿಕ್ಷಣವನ್ನು ಜಾರಿಗೊಳಿಸುವ ಮೂಲಕ ಪೋಷಕರ ಗಮನ ವಿಶೇಷ ಸೆಳೆಯುತ್ತಿದೆ. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಹೊಸ ಹೆಜ್ಜೆಯನ್ನು ಇಲ್ಲಿನ ಅಧ್ಯಾಪಕರ ತಂಡ ಹಾಗೂ ಶಾಲೆಯ ಹಳೆ ವಿದ್ಯಾರ್ಥಿಗಳು, ದಾನಿಗಳು ಜೊತೆಯಾಗಿ ಕನ್ನಡ ಮಾಧ್ಯಮ ಶಾಲೆ ಮುಂದಿನ ಶೈಕ್ಷಣಿಕ ವರುಷದಿಂದ ಎಲ್‌ಕೆಜಿ ಹಾಗೂ ಯುಕೆಜಿ ಆಂಗ್ಲ ಶಿಕ್ಷಣವನ್ನು ನೀಡಲು ಮುಂದಾಗಿದೆ. ಈ ನೂತನ ಯೋಜನೆಯಿಂದ ಸಾಕಷ್ಟು ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಗುಣಮಟ್ಟದ ಆಂಗ್ಲ ಶಿಕ್ಷಣ ನೀಡಲು ಸಹಕಾರಿಯಾಗಲಿದೆ.



**ಗುಣಮಟ್ಟದ ಶಿಕ್ಷಣ**

ಕೇವಲ ಇಂಗ್ಲೀಷ್ ಮಾಧ್ಯಮಕ್ಕೋಸ್ಕರ ಖಾಸಗಿ ಶಾಲೆಗಳಿಗೆ ಜೋತು ಬೀಳುತ್ತಿದ್ದ ಪೋಷಕರು, ಇಂಗ್ಲೀಷ್ ಮಾಧ್ಯಮದ ಜತೆಗೆ ಎಲ್‌ಕೆಜಿ, ಯುಕೆಜಿ ಶಿಕ್ಷಣ ಸಿಗುವ ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಹಾತೊರೆಯುವಂತಾಗಿದೆ. ಖಾಸಗಿ ಶಾಲೆಗಳಿಗೆ ಸರಕಾರಿ ಶಾಲೆಗಳು ತೀವ್ರ ಪೈಪೋಟಿ ನೀಡುವ ಕಾಲ ಸನ್ನಿಹಿತವಾಗಿದೆ. ಸರಕಾರಿ ಶಾಲೆಯಲ್ಲಿ ತರಬೇತಿ ಹೊಂದಿದ ಪ್ರತಿಭಾವಂತ ಶಿಕ್ಷಕರಿದ್ದು ಯಾವುದೇ ಖರ್ಚಿನ ಹೊರೆಯಿಲ್ಲದೇ ಗುಣಮಟ್ಟದ ಶಿಕ್ಷಣ ಪಡೆಯಬಹುದಾಗಿದೆ.

**ಉಚಿತ ಶಿಕ್ಷಣ**

ಯಾವುದೇ ಶುಲ್ಕವಿಲ್ಲದೆ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ಈ ಸಂಸ್ಥೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಆರಂಭವಾಗಲಿದೆ. ಪ್ರತೀ ವಿದ್ಯಾರ್ಥಿಗೆ ಉಚಿತ ಶಿಕ್ಷಣ ದೊರಕಲಿದೆ. ಮಕ್ಕಳ ಮನಸ್ಥಿತಿಗೆ ತಕ್ಕಂತೆ ಬೋಧಿಸುವ ವಿಶೇಷ ತರಬೇತಿ ಪಡೆದ ನುರಿತ ಶಿಕ್ಷಕರಿಂದ ಬೋಧನೆ ನಡೆಯಲಿದೆ. ಆಟದ ಮೂಲಕ ಕಲಿಕೆ ಹಾಗೂ ಸಂವಹನ ಕಲೆಗೆ ಆದ್ಯತೆ. ಸುಸಜ್ಜಿತ ತರಗತಿ ಕೊಠಡಿಗಳು ಹಾಗೂ ಶೈಕ್ಷಣಿಕ ಆಟಿಕೆಗಳ ವ್ಯವಸ್ಥೆ. ಉತ್ತಮ ಗ್ರಂಥಾಲಯ, ಸುಸಜ್ಜಿತ ಪ್ರಯೋಗಾಲಯ, ಉಚಿತ ಯೋಗ ತರಬೇತಿ, ಉಚಿತ ಯಕ್ಷಗಾನ ತರಬೇತಿ, ಕರಾಟೆ ತರಬೇತಿ, ಪಠ್ಯ ಪುಸ್ತಕ ಮತ್ತು ನೋಟ್ ಪುಸ್ತಕ ಹಾಗೂ ಲೇಖನ ಸಾಮಾಗ್ರಿ, ಶೂ, ಪ್ರತಿಭಾ ಪುರಸ್ಕಾರ, ಊಟದ ವ್ಯವಸ್ಥೆ ಎಲ್ಲವೂ ಉಚಿತವಾಗಿ ಸಿಗಲಿದೆ. ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ನಿರಂತರ ಕೆಲಸ ಈ ಸಂಸ್ಥೆಯಲ್ಲಿ ನಡೆಯಲಿದೆ.

**ಸದುಪಯೋಗ ಪಡಿಸಿಕೊಳ್ಳಿ**

ಸರಕಾರಿ ಶಾಲೆಯ ಬಲವರ್ಧನೆಗೆ ಗ್ರಾಮಸ್ಥರು ಮುಂದಾಗಿರುವುದು ಸಂತಸ ತಂದಿದೆ. ಕಳೆದ ಹಲವು ವರ್ಷಗಳಿಂದ ದಾನಿಗಳು ಶಾಲೆಗೆ ಅಗತ್ಯ ನೆರವು ನೀಡುತ್ತಿದ್ದಾರೆ. ಗ್ರಾಮೀಣ ಭಾಗದ ಮಕ್ಕಳಿಗೆ ಅಡಿಪಾಯದ ಹಂತದಲ್ಲೇ ಅವರಿಗೆ ಉತ್ತಮ ಭಾಷಾ ಜ್ಞಾನ ನೀಡುವ ಉದ್ದೇಶ ನಮ್ಮದು. ಇದರಿಂದ ಸರಕಾರಿ ಶಾಲೆಗೆ ಅನುಕೂಲವಾಗುವುದರ ಜತೆಗೆ ಮಕ್ಕಳ ದಾಖಲಾತಿ ಹೆಚ್ಚಿಸುವುದು ನಮ್ಮ ಉದ್ದೇಶವಾಗಿದೆ. ಪೋಷಕರು ಈ ಸೌಲಭ್ಯದ ಸದುಪಯೋಗಪಡಿಸಿಕೊಳ್ಳಬೇಕು. ಹಳೆ ವಿದ್ಯಾರ್ಥಿಗಳ ಹಾಗೂ ದಾನಿಗಳ ನೆರವಿನಿಂದ ಈ ಯೋಜನೆಗೆ ಚಾಲನೆ ದೊರೆತಿದ್ದು ಈಗಾಗಲೇ ದಾಖಲಾತಿ ಆರಂಭಗೊಂಡಿದೆ.

■ **ಚಂದ್ರಕಾಂತ ದೇಸ,** ಶಾಲಾ ಮುಖ್ಯ ಶಿಕ್ಷಕರು. ನಂದಳಿಕೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ (ಬೋರ್ಡು ಶಾಲೆ) ಶಾಲೆ.

**ಪ್ರವೇಶ ಪ್ರಕ್ರಿಯೆ ಆರಂಭ**

ಮುಂದಿನ ಶೈಕ್ಷಣಿಕ ವರ್ಷದ ಪ್ರವೇಶಾತಿ ಪ್ರಕ್ರಿಯೆಯು ಈಗಾಗಲೇ ಚಾಲನೆಯಲ್ಲಿದ್ದು, ಆಸಕ್ತ ಪೋಷಕರು ತಮ್ಮ ಮಕ್ಕಳ ದಾಖಲಾತಿಗಾಗಿ ಶಾಲಾ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ನಂದಳಿಕೆಯ ಸುತ್ತಮುತ್ತಲಿನ ಗ್ರಾಮಸ್ಥರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಮೂಲಕ ಶಾಲೆಯ ಏಳಿಗೆಗೆ ಕೈ ಜೋಡಿಸಬೇಕೆಂದು ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದ ಮನವಿ ಮಾಡಿದೆ.

ಕಾಪು ಶ್ರೀ ಹಳೇ ಮಾರಿಯಮ್ಮ ದೇವಸ್ಥಾನ

# ಸ್ವರ್ಣ ಸಮರ್ಪಣಾ ಮಹಾ ಅಭಿಯಾನ



**ಕಾಪು :** ಇತಿಹಾಸ ಪ್ರಸಿದ್ಧ ಕಾಪು ಶ್ರೀ ಹಳೇ ಮಾರಿಯಮ್ಮ ದೇವಸ್ಥಾನದ ಸಮಗ್ರ ಜೀರ್ಣೋದ್ಧಾರ ಮಹಾ ಸಂಕಲ್ಪದ ಅಂಗವಾಗಿ ಶ್ರೀದೇವಿಯ ನವರತ್ನ ಖಚಿತ ಸ್ವರ್ಣ ಸಿಂಹಾಸನ (ಗದ್ದಿಗೆ) ನಿರ್ಮಾಣಕ್ಕೆ ಸ್ವರ್ಣ ಸಮರ್ಪಣಾ ಮಹಾ ಅಭಿಯಾನಕ್ಕೆ ಮಂಗಳವಾರ ರಾತ್ರಿ ಚಾಲನೆಯನ್ನು ನೀಡಲಾಯಿತು. ಕಾಪು ಶ್ರೀ ವೆಂಕಟರಮಣ ಹಾಗೂ ಶ್ರೀ ಹಳೇ ಮಾರಿಯಮ್ಮ ದೇವಸ್ಥಾನದ ಪ್ರಧಾನ ಅರ್ಚಕ ವೇದಮೂರ್ತಿ ಕಮಲಾಕ್ಷ ಭಟ್ ರತ್ನಖಚಿತ ಗದ್ದುಗೆಯ ಚಿತ್ರವನ್ನು ಅನಾವರಣಗೊಳಿಸಿ, ಸ್ವರ್ಣ ಸಮರ್ಪಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿದ ಚೇಂಪಿ ಶ್ರೀ ವೆಂಕಟರಮಣ ದೇವಸ್ಥಾನದ ಪುರೋಹಿತ ಹಾಗೂ ಅರ್ಚಕ ವಿದ್ವಾನ್ ಚೇಂಪಿ ಶ್ರೀಕಾಂತ್ ಭಟ್ ಮಾತನಾಡಿ, ದೇವರಿಗೆ ಚಿನ್ನ ಸಮರ್ಪಿಸುವುದರಿಂದ ಚಿನ್ನದಂತಹ ಬದುಕು ನಮ್ಮದಾಗುತ್ತದೆ, ದೇವಳ ಜೀರ್ಣೋದ್ಧಾರದ ಮಹತ್ಕಾರ್ಯ ಜೀವನದಲ್ಲಿ ಒಮ್ಮೆ ಸಿಗುವ ಅವಕಾಶ. ಹಿರಿಯರ - ದೇವರ ಅನುಗ್ರಹದಿಂದ ಮಾತ್ರ ಸಾಧ್ಯವಾಗುತ್ತದೆ ಎಂದರು.

ಜ್ಯೋತಿಷ್ಯ ವಿದ್ವಾನ್ ಕೊರಂಗ್ರಪಾಡಿ ಕೆ.ಪಿ.ಶ್ರೀನಿವಾಸ ತಂತ್ರಿ ಮಡುಂಬು 'ನವ ವಿಧ ಬಕುತಿಗೆ ನವರತ್ನ' ಎಂಬ ವಿಷಯದಲ್ಲಿ ಧಾರ್ಮಿಕ ಉಪನ್ಯಾಸ ನೀಡಿದರು. ದೇವಸ್ಥಾನದ ಮಾಜಿ ಆಡಳಿತ ಮೊಕ್ತೇಸರ ಶ್ರೀಧರ್ ಅನಂತ್ರಾಯ ಶೆಣೈ ಸಭಾಧ್ಯಕ್ಷತೆ ವಹಿಸಿದ್ದರು, ಕಾಪು ದಂಡತೀರ್ಥ ಪ್ರತಿಷ್ಠಾನದ ಅಧ್ಯಕ್ಷ ಸೀತಾರಾಮ್ ಭಟ್, ಕಟಪಾಡಿ ಎಸ್.ವಿ.ಎಸ್ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಸಂಚಾಲಕ ಉದ್ಯಮಿ ಕೆ. ಸತ್ಯೇಂದ್ರ ಪೈ, ನಿವೃತ್ತ ಅಧ್ಯಾಪಕ ಉದ್ಯಮಿ ಯು. ಅನಂತ ಪಡಿಯಾರ್ ಕಾಪು, ಕಾಪು ಬಿಲ್ಲವ ಸಂಘದ ಗೌರವಾಧ್ಯಕ್ಷ ಪ್ರಭಾಕರ ಪೂಜಾರಿ, ಬೆಂಗಳೂರು ಕಾಶಿಮಠದ ನಾರಾಯಣ ಶೆಣೈ, ಕಾಪು ಮೊಗವೀರ ಮಹಾಸಭಾ ಅಧ್ಯಕ್ಷ ಕುಶ ಸಾಲ್ಯಾನ್, ಕಾಪು ಶ್ರೀ ಕಾಳಿಕಾಂಬ ದೇವಸ್ಥಾನದ ಆಡಳಿತ ಮೊಕ್ತೇಸರ ಗಣೇಶ್ ಆಚಾರ್ಯ, ಕಾಪು ದೊರೆಕಲುಗುತ್ತು ಬಾಲಕೃಷ್ಣ ಶೆಟ್ಟಿ, ಕೃಷ್ಣ ಎಸ್. ಶೆಟ್ಟಿ, ಅಯೋಧ್ಯಾ ಕಾಪು ಮುಖ್ಯ ಅತಿಥಿಗಳಾಗಿದ್ದರು.

ಆಡಳಿತ ಮೊಕ್ತೇಸರ ಪ್ರಸಾದ್ ಜಿ. ಶೆಣೈ ಸ್ವಾಗತಿಸಿದರು. ಮೊಕ್ತೇಸರ ರಾಮ ಶಶಿಧರ ನಾಯಕ್ ವಂದಿಸಿದರು. ಡಾ. ಸದಾನಂದ ಭಟ್ ನಿರೂಪಿಸಿದರು.

ಇಂಗ್ಲೀಷ್ ಒಲಿಂಪಿಯಾಡ್ ಪರೀಕ್ಷೆ :

### ಅಮೋಘ್ ಎ. ಪೈ ಪ್ರಥಮ



**ಕುಂದಾಪುರ :** ಅಯೋಧ್ಯ ಪಬ್ಲಿಕೇಷನ್ಸ್ ಅವರು ನಡೆಸಿದ ಇಂಗ್ಲೀಷ್ ಒಲಿಂಪಿಯಾಡ್ ಪರೀಕ್ಷೆ - 2026ರಲ್ಲಿ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಅಮೋಘ್ ಎ. ಪೈ ಪ್ರಥಮ ಬಹುಮಾನವನ್ನು ಪಡೆದಿದ್ದಾರೆ. ಇವರಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಬೋಧಕ ಮತ್ತು ಬೋಧಕೇತರರು ಅಭಿನಂದನೆ ಸಲ್ಲಿಸಿದ್ದಾರೆ.

# ಯಕ್ಷಗಾನ ಗೊಂಬೆ ಆಟದ ಕುರಿತ ಸಂಶೋಧನಾ ಅಧ್ಯಯನ ವರದಿ



**ಮೂಡುಬಿದಿರೆ:** ಭಾರತ ಸರ್ಕಾರದ ಕರಕುಶಲ ಅಭಿವೃದ್ಧಿ ಹಾಗೂ ಜವಳಿ ಸಚಿವಾಲಯದ ಮಂಗಳೂರು ಆಯುಕ್ತರ ಕಚೇರಿಯಿಂದ ರೂಪುಗೊಂಡ ಯಕ್ಷಗಾನ ಗೊಂಬೆ ಆಟದ ಕುರಿತ ಸಂಶೋಧನಾ ಅಧ್ಯಯನ ವರದಿ ಪುಸ್ತಕ ಅನಾವರಣವು ಬುಧವಾರ ಆಳ್ವಾಸ್ ಕಾಲೇಜಿನಲ್ಲಿ ನೆರವೇರಿತು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಜೀವನ್ ರಾಮ್ ಸುಳ್ಯ, ಯಕ್ಷಗಾನ ಗೊಂಬೆ ಆಟವು ಕರಾವಳಿ ಭಾಗದ ಆಕರ್ಷಕ ಕಲೆಯಾಗಿದ್ದು, ಪಪೆಟ್ (ಗೊಂಬೆ)ಗಳ ಮೂಲಕ ಯಕ್ಷಗಾನದ ಕಥಾವಸ್ತುಗಳನ್ನು ಪ್ರದರ್ಶಿಸುವ ಕಲಾರೂಪಕವಾಗಿದೆ. ಈ ಕಲೆ ಪ್ರೇಕ್ಷಕರಿಗೆ ಮನರಂಜನೆಯ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವ ಮಹತ್ವದ ಮಾಧ್ಯಮ ಎಂದರು.

ಯಕ್ಷಗಾನ ಗೊಂಬೆ ಆಟಕ್ಕೆ ಸುಮಾರು 300 ರಿಂದ 400 ವರ್ಷಗಳ ಇತಿಹಾಸವಿದೆ ಎಂದು ಹೇಳಲಾಗುತ್ತದೆ. ಪುರಾತನ ಕಾಲದಲ್ಲಿ ಜನರಿಗೆ ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ಕಥೆಗಳನ್ನು ಸುಲಭವಾಗಿ ತಲುಪಿಸಲು ಈ ಕಲೆಯನ್ನು ಬಳಸಲಾಗುತ್ತಿತ್ತು. ಈ ಗೊಂಬೆಗಳನ್ನು ಸಾಮಾನ್ಯವಾಗಿ ಮರ, ಬಟ್ಟೆ ಮತ್ತು ಚರ್ಮದಿಂದ ತಯಾರಿಸಲಾಗುತ್ತದೆ. ಕಲಾವಿದರು ಬಿದಿರಿನ ಕಡ್ಡಿಗಳ ಅಥವಾ ದಾರಗಳ ಸಹಾಯದಿಂದ ಈ ಗೊಂಬೆಗಳನ್ನು ಚಲಾಯಿಸಿ ಜೀವಂತವಾಗಿರುವಂತೆ ಪ್ರದರ್ಶಿಸುತ್ತಾರೆ.

ಆಧುನಿಕ ಯುಗದಲ್ಲಿ ಟಿವಿ, ಸಿನೆಮಾ ಮತ್ತು ಡಿಜಿಟಲ್ ಮಾಧ್ಯಮಗಳ ಪ್ರಭಾವದಿಂದ ಈ ಕಲೆ ನಿಧಾನವಾಗಿ ಕಣ್ಮರೆಯಾಗುತ್ತಿದೆ. ಆದ್ದರಿಂದ ಈ ಕಲೆ ಉಳಿಯಲು ಸರ್ಕಾರ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ವಿಶೇಷ ಪ್ರೋತ್ಸಾಹ ನೀಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಆಳ್ವಾಸ್ ಸ್ವಾಯತ್ತ ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್, ಪ್ರತಿಯೊಂದು ಕಲಾರೂಪವೂ ತನ್ನದೇ ಆದ ವೈಶಿಷ್ಟ್ಯ ಮತ್ತು ಶ್ರೇಷ್ಠತೆಯನ್ನು ಹೊಂದಿದೆ. ಕಲೆಯ ಮೇಲಿನ ವಿಶೇಷ ಆಸಕ್ತಿ, ಶ್ರದ್ಧೆ ಮತ್ತು ತಾಳ್ಮೆಯಿದ್ದಾಗ ಮಾತ್ರ ಒಬ್ಬ ಕಲಾವಿದ ತನ್ನ ಪಾತ್ರವನ್ನು ಸಮರ್ಪಕವಾಗಿ ರೂಪಿಸಬಲ್ಲ. ನಿರಂತರ ಅಭ್ಯಾಸದಿಂದ ಕಲೆ ಅರಳಿ ಬೆಳೆಯಲು ಸಾಧ್ಯ ಎಂದು ಹೇಳಿದರು. ಈ ಕಲೆಯನ್ನು ಪುನರುಜ್ಜೀವನಗೊಳಿಸಲು ಕೆಲವು ಮಹತ್ವದ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಈ ವರದಿ ಶಿಫಾರಸು ಮಾಡಿದೆ. ಈ ಶಿಫಾರಸುಗಳನ್ನು ಸರ್ಕಾರ ಪರಿಣಾಮಕಾರಿಯಾಗಿ ಜಾರಿಗೆ ತಂದರೆ, ಯಕ್ಷಗಾನ ಗೊಂಬೆ ಆಟಕ್ಕೆ ಹೊಸ ಚೈತನ್ಯ ದೊರೆಯುವ ಸಾಧ್ಯತೆ ಇದೆ ಎಂದರು.

ಭಾರತ ಸರ್ಕಾರದ ಕರಕುಶಲ ಅಭಿವೃದ್ಧಿ ಹಾಗೂ ಜವಳಿ ಸಚಿವಾಲಯದ ಮಂಗಳೂರು ವಲಯದ ಸಹಾಯಕ ನಿರ್ದೇಶಕಿ ರಾಜೇಶ್ವರಿ ಕೆ.ಎಂ, ಸಹಾಯಕ ಡಿಸೈನರ್ ಅಶ್ವಿನ್ ಕುಮಾರ್, ಆಳ್ವಾಸ್ ಸ್ವಾಯತ್ತ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಯೋಗೀಶ್ ಕೈರೋಡಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸುಪ್ರಿಯಾ ಭಾರದ್ವಾಜ್ ಕಾರ್ಯಕ್ರಮ ನಿರೂಪಿಸಿದರು.

ಇಲ್ಲಿ ಎರಡು ದಿನಕ್ಕೊಮ್ಮೆ ಒಂದು ಗಂಟೆ ಮಾತ್ರ ನೀರು ಪೂರೈಕೆ | ಬಾವಿ, ಬೋರ್‌ವೆಲ್ ನೀರಿನ ಮಟ್ಟ ಇಳಿಕೆ

# ಹಸಿರು ನಳನಳಿಸುವ ತಿರುವೈಲ್‌ನಲ್ಲೂ ನೀರಿಗೆ ಬರ

**ಹರೀಶ ಕುಲ್ಕುಂದ**

ದಿಗಂತ ವಾಟರ್ ಚೆಕ್

**ಮಂಗಳೂರು:** ಗ್ರಾಮೀಣ ಪ್ರದೇಶವಾಗಿ ಗುರುತಿಸಿಕೊಂಡು ನಗರ ಪ್ರದೇಶದಿಂದ ಹೊರ ವಲಯದಲ್ಲಿರುವ ಮಂಗಳೂರು ಮಹಾನಗರ ಪಾಲಿಕೆಯ ತಿರುವೈಲ್ ವಾರ್ಡ್‌ನಲ್ಲೂ ನೀರಿಗೆ ಬರ! ಗದ್ದೆ, ತೋಡು, ಗುಡ್ಡ ಒಳಗೊಂಡು ಹಸಿರು ನಳನಳಿಸುತ್ತಿರುವ ತಿರುವೈಲ್ ಪ್ರದೇಶದಲ್ಲಿ ಬೇಸಿಗೆ ಆರಂಭವಾಗುತ್ತಿದ್ದಂತೆ ನೀರಿನ ಒರತೆ ಕಡಿಮೆಯಾಗುತ್ತಿದೆ. ಜನವರಿ ತಿಂಗಳಿನಲ್ಲೇ ಈ ವಾರ್ಡ್‌ನ ಪ್ರದೇಶಗಳಲ್ಲಿ ನೀರಿನ ಕೊರತೆ ಕಾಣಿಸಿಕೊಳ್ಳುತ್ತದೆ. ಬೋರ್‌ವೆಲ್, ಬಾವಿಗಳಲ್ಲಿ ನೀರಿನ ಮಟ್ಟ ಕುಸಿಯುತ್ತದೆ. ಇತ್ತ ಮನಪಾ ವತಿಯಿಂದ ಪೂರೈಕೆಯಾಗುವ ನೀರಿನ ಪ್ರಮಾಣವೂ ಕಡಿಮೆ. ಇವೆಲ್ಲದರ ಒಟ್ಟು ಪರಿಣಾಮ ವಾರ್ಡ್‌ನ ಜನತೆ ನೀರಿಗೆ ಪರದಾಡುವ ಸ್ಥಿತಿ.

ಈ ವಾರ್ಡ್‌ನ ಕೆಲರಾಯಿ ಒಂದನೇ ಬ್ಲಾಕ್, ಕೆಲರಾಯಿ ಎರಡನೇ ಬ್ಲಾಕ್, ಓಂಕಾರನಗರ, ಎವರ್‌ಶೈನ್ ಗಾರ್ಡನ್, ಅಮೃತನಗರ ಎಂಡ್‌ಪಾಯಿಂಟ್, ಕಸ್ಟಮ್ಸ್ ಕಾಲನಿ, ಕೆತ್ತಿಕಲ್, ಪರಾರಿ, ತೆಕ್ಕಿಬೆಟ್ಟು, ಸಂಕೇಶಬೆಟ್ಟು ಮುಂತಾದ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ.

**ಜಲಸಿರಿ ಯೋಜನೆ ಪೂರ್ಣ: ನೀರಿನ ಸಂಪರ್ಕ ಮಾತ್ರ ಆಗಿಲ್ಲ**

ನೀರು ಪೂರೈಕೆಗಾಗಿ ರೂಪಿಸಿರುವ ಜಲಸಿರಿ ಯೋಜನೆ ಕಾಮಗಾರಿಗಳು ಈ ವಾರ್ಡ್‌ನಲ್ಲಿ ಬಹುತೇಕ ಪೂರ್ಣಗೊಂಡಿದೆ. ಅಮೃತನಗರ ಎಂಡ್ ಪಾಯಿಂಟ್‌ನಲ್ಲಿ ಜಲಸಿರಿ ಯೋಜನೆಯ ಹೊಸ ನೀರಿನ ಟ್ಯಾಂಕ್ ನಿರ್ಮಾಣಗೊಂಡಿದೆ. ಆದರೆ, ಯೋಜನೆಯಡಿ ನೀರಿನ ಸಂಪರ್ಕ ಆಗಿಲ್ಲ. ಜಲಸಿರಿ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಂಡು ನೀರಿನ ಸಂಪರ್ಕ ಒದಗಿಸಿದರೆ ಇಲ್ಲಿನ ಶೇ. 95ರಷ್ಟು ನೀರಿನ ಸಮಸ್ಯೆ ನೀಗಿಸಬಹುದು.






**ಟ್ಯಾಂಕರ್ ಮೂಲಕ ನೀರು ಒದಗಿಸಿ: ಒತ್ತಾಯ**

ನೀರಿನ ಸಮಸ್ಯೆ ಇರುವ ಪ್ರದೇಶಗಳಿಗೆ ಮನಪಾ ವತಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಸುವ ವ್ಯವಸ್ಥೆ ಇದೆ. ಆದರೆ, ತಿರುವೈಲ್ ಪ್ರದೇಶಕ್ಕೆ ಟ್ಯಾಂಕರ್ ನೀರು ಎಂಬುದು ಬಲುದೂರ. ವಾರದಲ್ಲಿ ಎರಡು ಅಥವಾ ಮೂರು ಬಾರಿ ಮಾತ್ರ ಒಂದೊಂದು ಟ್ಯಾಂಕರ್ ನೀರು ಪೂರೈಕೆಯಾಗುತ್ತಿದೆ. ಶ್ರೀಮಂತರು ಹಣ ನೀಡಿ ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಈ ವಾರ್ಡ್‌ನತ್ತ ಕರುಣೆ ತೋರಿಸಿ ಅವಶ್ಯಕತೆ ಇರುವ ಪ್ರದೇಶಗಳಿಗೆ ಟ್ಯಾಂಕರ್ ನೀರು ಒದಗಿಸಬೇಕು ಎಂಬುದು ಸ್ಥಳೀಯರ ಒತ್ತಾಯ.

**ಸಮಸ್ಯೆಗೆ ಅಧಿಕಾರಿಗಳ ಸ್ಪಂದನೆ ಇಲ್ಲ: ದೂರು**

ತಿರುವೈಲ್ ವಾರ್ಡ್‌ನಲ್ಲಿ 10ಕ್ಕೂ ಹೆಚ್ಚು ಬೋರ್‌ವೆಲ್‌ಗಳಿವೆ. ಈ ಪೈಕಿ ನಾಲ್ಕು ಕೊಳವೆಬಾವಿಗಳು ಹಾಳಾಗಿವೆ. ಈ ಬಾರಿ ಕೊಳವೆಬಾವಿಗಳಲ್ಲೂ ನೀರಿನ ಮಟ್ಟ ಇಳಿಕೆಯಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಬಾವಿಯೂ ಇಲ್ಲ. ಮನಪಾ ಪೈಪ್ ಲೈನ್‌ನಲ್ಲಿ ಎರಡು ದಿನಕ್ಕೊಮ್ಮೆ ನೀರು ಬರುತ್ತಿರುವುದರಿಂದ ಇಲ್ಲಿನ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದೇವೆ. ನೀರಿನ ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಸ್ಪಂದನೆ ಇಲ್ಲ ಎಂದು ಸ್ಥಳೀಯರು ದೂರಿದ್ದಾರೆ.

**ಎರಡು ದಿನಕ್ಕೊಮ್ಮೆ ನೀರು**

ಮನಪಾ ಬಹುತೇಕ ವಾರ್ಡ್‌ಗಳಲ್ಲಿ ಪ್ರತಿದಿನ ನೀರು ಪೂರೈಕೆಯಾದರೆ ಈ ವಾರ್ಡ್‌ನಲ್ಲಿ ಎರಡು ದಿನಕ್ಕೊಮ್ಮೆ ಮಾತ್ರ ನೀರು ಬರುತ್ತಿದೆ. ಅದೂ ಒಂದು ಗಂಟೆ ಮಾತ್ರ. 24 ವರ್ಷದ ಹಿಂದೆ ಈ ಪ್ರದೇಶ ಪಂಚಾಯತ್ ವ್ಯಾಪ್ತಿಯಲ್ಲಿತ್ತು. ಮನಪಾಗೆ ಸೇರ್ಪಡೆಗೊಂಡ ಬಳಿಕ ಇಲ್ಲಿನ ಮನೆಗಳ ಸಂಖ್ಯೆ ಮೂರು ಪಟ್ಟು ಅಧಿಕವಾಗಿದೆ. ನೀರಿನ ಸಂಪರ್ಕಗಳು ಅಷ್ಟೇ ಪ್ರಮಾಣದಲ್ಲಿ ಹೆಚ್ಚಳಗೊಂಡಿವೆ. ಆದರೆ, ಪೈಪ್‌ಲೈನ್ ಹಳೆಯದೇ ಇದೆ. ಪೂರೈಕೆಯಾಗುವ ನೀರಿನ ಪ್ರಮಾಣವೂ ಅಷ್ಟೇ ಇದೆ. ಇಲ್ಲಿನ ಶೇ.60ರಷ್ಟು ಪ್ರದೇಶ ಪಾಲಿಕೆ ಪೂರೈಸುವ ನೀರು ನೆಚ್ಚಿಕೊಂಡಿದ್ದರೆ, ಶೇ.40 ಭಾಗ ಕೊಳವೆಬಾವಿ ನೀರು ಅವಲಂಬಿತವಾಗಿದೆ.



ತಿರುವೈಲ್ ಪ್ರದೇಶ ಭಾಗಶಃ ಗ್ರಾಮಾಂತರ ಪ್ರದೇಶವಾದರೂ ಇಲ್ಲಿ ನೀರಿನ ಸಮಸ್ಯೆ ಇದೆ. ಮನೆಗಳು ಹೆಚ್ಚಾದರೂ, ನೀರಿನ ಪೂರೈಕೆ ಪ್ರಮಾಣ ಹೆಚ್ಚಾಗಿಲ್ಲ. ಗದ್ದೆ ಬದಿಯ ಬಾವಿಗಳಲ್ಲೂ ನೀರು ಬತ್ತುತ್ತಿದೆ. 'ವಾರ್ಡ್‌ನ 9 ಕಡೆ ಕೊಳವೆಬಾವಿ ನಿರ್ಮಿಸಬೇಕು' ಎಂದು ನೀರಿನ ಸಮಸ್ಯೆ ಬಗ್ಗೆ ಶಾಸಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮನಪಾ ಅಧಿಕಾರಿಗಳ ಬಳಿ ವಿನಂತಿಸಲಾಗಿದೆ. ಕೆಲರಾಯಿ ಮೊದಲ ಬ್ಲಾಕ್, ಕೆಲರಾಯಿ ಎರಡನೇ ಬ್ಲಾಕ್, ಪಿಲಿಕುಳ ಬಳಿ, ಅಮೃತನಗರ, ಕಸ್ಟಮ್ಸ್ ಕಾಲನಿ, ಪರಾರಿ, ಕೆತ್ತಿಕಲ್ ಮುಂತಾದ ಪ್ರದೇಶಗಳಲ್ಲಿ ಕೊಳವೆಬಾವಿ ಅಗತ್ಯವಿದೆ. ಅಗತ್ಯ ಇರುವ ಕಡೆಗೆ ಟ್ಯಾಂಕರ್ ನೀರು ವ್ಯವಸ್ಥೆ ಮಾಡುತ್ತಿದ್ದೇವೆ. ಮನಪಾ ಅಧಿಕಾರಿಗಳು ಜನತೆಯ ನೀರಿನ ಸಮಸ್ಯೆಗೆ ಸ್ಪಂದಿಸಬೇಕಿದೆ.

■ **ಹೇಮಲತಾ ರಘು ಸಾಲಿಯಾನ್** ತಿರುವೈಲ್ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ತಿರುವೈಲ್ ವಾರ್ಡ್‌ನ ಎಲ್ಲ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ. ಎರಡು ದಿನಕ್ಕೊಮ್ಮೆ ಒಂದು ಗಂಟೆಗಳ ಕಾಲ ಮಾತ್ರ ನೀರು ಬರುತ್ತಿರುವುದರಿಂದ ಜನತೆ ತೊಂದರೆ ಅನುಭವಿಸುತ್ತಿದ್ದಾರೆ. ಕೆಲವೆಡೆ ಮನೆಗಳ ನೀರಿನ ತೊಟ್ಟಿ ತುಂಬುತ್ತಿಲ್ಲ. ನೀರಿನ ತೊಟ್ಟಿ ಇಲ್ಲದ ಮನೆಗಳಲ್ಲಿ ನೀರು ಸಂಗ್ರಹಕ್ಕೆ ವ್ಯವಸ್ಥೆ ಇಲ್ಲದೆ ಕಷ್ಟವಾಗಿದೆ. ತಿರುವೈಲ್ ವಾರ್ಡ್‌ನಲ್ಲಿ ಬೋರ್‌ವೆಲ್ ನೀರನ್ನೇ ಆಶ್ರಯಿಸಲಾಗಿದ್ದು, ಹೆಚ್ಚುವರಿ ಬೋರ್‌ವೆಲ್ ಅಥವಾ ಬಾವಿಯ ತೋಡುವ ಮೂಲಕ ನೀರಿನ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಬಗೆಹರಿಸಬಹುದು. ಗ್ರಾಮಾಂತರ ಪ್ರದೇಶಕ್ಕೆ ಹೊಂದಿಕೊಂಡಿರುವ ಇಲ್ಲಿಗೆ ಇನ್ನೂ ಎರಡು ತಿಂಗಳ ಕಾಲ ಪಂಪ್‌ಹೌಸ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಕೆ ಮಾಡಬೇಕು.

■ **ಅಶೋಕ್‌ರಾಜ್,** ಅಂಬೇಡ್ಕರ್ ನಗರ, ತಿರುವೈಲ್ ವಾರ್ಡ್ ನಿವಾಸಿ

ನಾಳೆ ವಾರ್ಡ್ -21
ಪದವು ಪಶ್ಚಿಮ ಪರಿಸರದ ಸ್ಥಿತಿಗತಿ

## ಎ.5: ವಿಹಿಂಪ– ಬಜರಂಗ ದಳದ ಬಂಟ್ವಾಳ ಪ್ರಖಂಡದಿಂದ ಪಾದಯಾತ್ರೆ

# ಪೊಳಲಿ ಅಮ್ಮನೆಡೆಗೆ ನಮ್ಮ ನಡಿಗೆ



**ಬಂಟ್ವಾಳ:** ವಿಶ್ವಹಿಂದೂ ಪರಿಷತ್, ಬಜರಂಗದಳ ಬಂಟ್ವಾಳ ಪ್ರಖಂಡದ ವತಿಯಿಂದ ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ 'ಅಮ್ಮನೆಡೆಗೆ ನಮ್ಮ ನಡಿಗೆ' ಪಾದಯಾತ್ರೆಯನ್ನು ಎ.5 ಕ್ಕೆ ಹಮ್ಮಿಕೊಳ್ಳ ಲಾಗಿದೆ ಎಂದು ವಿ.ಹಿ.ಪ.ನ ಬಂಟ್ವಾಳ ಪ್ರಖಂಡದ ಅಧ್ಯಕ್ಷ, ನ್ಯಾಯವಾದಿ ಪ್ರಸಾದ್ ಕುಮಾರ್ ರೈ ತಿಳಿಸಿದ್ದಾರೆ.

ಬುಧವಾರ ಬಂಟ್ವಾಳ ಪ್ರೆಸ್ ಕ್ಲಬ್‌ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಪಾದಯಾತ್ರೆಯ ಅಂದು ಬೆಳಗ್ಗೆ 5.30 ಕ್ಕೆ ಬಿ.ಸಿ.ರೋಡಿನ ಕೈಕಂಬ ಪೊಳಲಿ ದ್ವಾರ, ಕಡೆಗೋಳಿ ಪೊಳಲಿ ದ್ವಾರ ಹಾಗೂ ಗುರುಪುರ ಕೈಕಂಬ ಪೊಳಲಿ ದ್ವಾರದ ಬಳಿಯಿಂದ ಏಕಕಾಲಕ್ಕೆ ಪ್ರಾರಂಭ ವಾಗಲಿದ್ದು, ಸುಮಾರು 9 ಗಂಟೆಗೆ ಪೊಳಲಿ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಸಂಪನ್ನಗೊಳ್ಳಲಿದೆ. ಸಾವಿರಾರು ಸಂಖ್ಯೆಯಲ್ಲಿ ಹಿಂದೂ ಸಮಾಜದ ಬಂಧುಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದೇವಳದ ಆಡಳಿತ ಮಂಡಳಿ, ಶಾಸಕ ರಾಜೇಶ್ ನ್ಯಾಕ್, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ ಅವರಿಗೆ ವಿವಿಧ ಬೇಡಿಕೆಗಳ ಮನವಿಯನ್ನು ಸಲ್ಲಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವಂತೆ ಒತ್ತಾಯಿಸಲಾಗುವುದು ಎಂದು ಪ್ರಸಾದ್ ಕುಮಾರ್ ವಿವರಿಸಿದರು.

ಹಿಂದೂ ಧರ್ಮದ ಮೇಲೆ ಆಗುತ್ತಿರುವ ಬೇರೆ ಬೇರೆ ರೀತಿಯ ಆಕ್ರಮಣಗಳಿಗೆ ಹಾಗೂ ಧರ್ಮಕ್ಕಾಗುತ್ತಿರುವ ತೊಂದರೆ ಯಿಂದ ರಕ್ಷಿಸುವ ಕಾರ್ಯ ಆಗಬೇಕು ಎಂಬುದು ಮೂಲ ಉದ್ದೇಶವಾಗಿದೆ.

ಅನೇಕ ಕಡೆಗಳಲ್ಲಿ ದೇವಸ್ಥಾನದ ಪಾವಿತ್ರತೆಯನ್ನು ಹಾಳುಗೆಡಹುವ ಪ್ರಯತ್ನಗಳು ನಡೆಯುತ್ತಿವೆ. ಅಲ್ಲದೆ ದೇವಸ್ಥಾನದ ಮೂಲ ನಂಬಿಕೆಗಳು, ಸಂಸ್ಕಾರಗಳು ಮುಂದಿನ ಜನಾಂಗಕ್ಕೆ ಉಳಿಯಬೇಕು ಎಂದು ತಿಳಿಸಿದರು.

> ▸ ಪಾದಯಾತ್ರೆ ಬೆಳಗ್ಗೆ 5.30 ಕ್ಕೆ ಬಿ.ಸಿ. ರೋಡಿನ ಕೈಕಂಬ ಪೊಳಲಿ ದ್ವಾರ, ಕಡೆಗೋಳಿ ಪೊಳಲಿ ದ್ವಾರ ಹಾಗೂ ಗುರುಪುರ ಕೈಕಂಬ ಪೊಳಲಿ ದ್ವಾರದ ಬಳಿಯಿಂದ ಏಕಕಾಲಕ್ಕೆ ಪ್ರಾರಂಭ.
>
> ▸ ಸಾವಿರಾರು ಸಂಖ್ಯೆಯಲ್ಲಿ ಹಿಂದೂ ಸಮಾಜದ ಬಂಧುಗಳು ಪಾಲ್ಗೊಳ್ಳಲಿದ್ದಾರೆ

**ಮನವಿಯಲ್ಲಿ ಏನೇನು ಇರಲಿದೆ..**

ದೇವಳಕ್ಕಾಗಮಿಸುವ ಭಕ್ತರಿಗೆ ಹಿಂದೂ ಸಂಸ್ಕೃತಿಗೆ ಪೂರಕವಾದ ವಸ್ತ್ರ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು, ದೇವಸ್ಥಾನದ ವಠಾರದಲ್ಲಿ ಇಲ್ಲವೇ ಯೋಗ್ಯ ಸ್ಥಳದಲ್ಲಿ ಸುಸಜ್ಜಿತವಾದ ಗೋ ಶಾಲೆಯ ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು, ಬಾಲಕ–ಬಾಲಕಿಯರಿಗೆ ಹಿಂದೂ ಸಂಪ್ರದಾಯದ ಧಾರ್ಮಿಕ ಸಂಸ್ಕಾರ ನೀಡುವ ವಿಚಾರಗಳನ್ನು ಬೋಧಿಸುವ ನಿಟ್ಟಿನಲ್ಲಿ ದೇವಸ್ಥಾನದ ವತಿಯಿಂದ ಹಿಂದೂ ಬಾಲ ಸಂಸ್ಕಾರ ಕೇಂದ್ರವನ್ನು ತೆರೆದು ಹಿಂದೂ ಧಾರ್ಮಿಕ ಶಿಕ್ಷಣವನ್ನು ನೀಡುವುದು, ದೇವಸ್ಥಾನದಲ್ಲಿ ವರ್ಷದಲ್ಲಿ ಒಂದು ಬಾರಿಯಾದರೂ ಹಿಂದೂ ಬಂಧುಗಳಿಗೆ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸುವುದು, ಜಾತ್ರಾ ಮಹೋತ್ಸವ, ಉತ್ಸವಾದಿಗಳ ಸಂದರ್ಭದಲ್ಲಿ ಹಿಂದೂ ಧಾರ್ಮಿಕ ದತ್ತಿ ಕಾಯ್ದೆಯನುಸಾರ ಹಿಂದೂಗಳಿಗೆ ಮಾತ್ರ ವ್ಯಾಪಾರ ವ್ಯವಹಾರ ಕೇಂದ್ರಗಳನ್ನು ತೆರೆಯಲು ಅವಕಾಶ ಮಾಡಿಕೊಡುವುದು ಮತ್ತು ಉತ್ಸವಾದಿಗಳ ಸಂದರ್ಭದಲ್ಲಿ ರಾತ್ರಿ ಭೋಜನದ ವ್ಯವಸ್ಥೆಯನ್ನು ಕಲ್ಪಿಸುವುದು ಹಾಗೂ ದೇವಳದ ವತಿಯಿಂದ ಸುವ್ಯವಸ್ಥಿತ ವಾದ ಭೋಜನ ಶಾಲೆ ನಿರ್ಮಿಸುವುದು, ದೇವಸ್ಥಾನದಲ್ಲಿ ಕಾಣಿಕೆ ರೂಪದಲ್ಲಿ ಹಾಗೂ ಸೇವಾ ರೂಪದಲ್ಲಿ ಸಂಗ್ರಹವಾದ ಹಣವನ್ನು ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ಧತ್ತಿ ಕಾಯ್ದೆಗನುಗುಣವಾಗಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗೆ ಅವಶ್ಯಕವಾದ ಪೂರಕ ಕ್ರಮಗಳಿಗೆ ವಿನಿಯೋಗಿಸುವಂತೆ ಒತ್ತಾಯಿಸಲಾಗುವುದು ಎಂದು ಅವರು ತಿಳಿಸಿದರು.

ಪೊಳಲಿ ಶ್ರೀರಾಜರಾಜೇಶ್ವರೀ ದೇವಾಲಯವು 'ಎ' ಮಾನ್ಯತೆ ಪಡೆದ ದೇವಸ್ಥಾನವಾಗಿದ್ದು ,ಇದರ ಮೂಲಕ ಸಾಮಾಜಿಕ, ಧಾರ್ಮಿಕ ಪರಿವರ್ತನೆಗಳ ಕಾರ್ಯ ಆಗಬೇಕಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಯ ಪ್ರಮುಖರಾದ ದೀಪಕ್ ಅಜೆಕಲ, ಲೋಹಿತ್ ಪಣೋಲಿಬೈಲ್, ಸಂತೋಷ್ ಸರಪಾಡಿ ಉಪಸ್ಥಿತರಿದ್ದರು.

## ಉಡುಪಿ: ಎರಡು ವರ್ಷದ ಮಗುವಿಗೆ ಕಾರು ಡಿಕ್ಕಿ

**ಉಡುಪಿ:** ನಗರದ 76ನೇ ಬಡಗುಬೆಟ್ಟು ಗ್ರಾಮದ ಪೊಲೀಸ್ ವಸತಿಗೃಹದ ಬಳಿ ನಡೆದುಕೊಂಡು ಹೋಗುತ್ತಿದ್ದ ಎರಡು ವರ್ಷದ ಮಗು ಆಗಸ್ಮ ಪಲ್ಲೇದ್‌ಗೆ ಕಾರು ಡಿಕ್ಕಿ ಹೊಡೆದ ಘಟನೆ ಸೋಮವಾರ ಸಂಜೆ ನಡೆದಿದೆ.

ಹರಿವಿಠಲ ಹೆಚ್.ಕೆ. ಎಂಬಾತ ಚಲಾಯಿಸುತ್ತಿದ್ದ ಕಾರು ಮಿಷನ್ ಕಂಪೌಂಡ್ ಕಡೆಯಿಂದ ಅತಿವೇಗವಾಗಿ ಬಂದು ಮೂಕಾಂಬಿಕಾ ಭಜನಾ ಮಂದಿರದ ಹತ್ತಿರ ಮಗುವಿಗೆ ಡಿಕ್ಕಿ ಹೊಡೆದಿದೆ. ನೆಲಕ್ಕೆ ಬಿದ್ದ ಮಗುವಿನ ತಲೆ ಮತ್ತು ಬೆನ್ನಿಗೆ ಒಳಜಖಂ ಆಗಿದ್ದು, ಕೂಡಲೇ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಗುವಿನ ಅಜ್ಜ ಮಹಾದೇವ ಲಿಂಗದಳ್ಳಿ ನೀಡಿದ ದೂರಿನಂತೆ ಉಡುಪಿ ಸಂಚಾರ ಠಾಣೆ ಪೊಲೀಸರು ಬಿ.ಎನ್.ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಶ್ರೀ ರಾಮ ನವಮಿ ಪ್ರಯುಕ್ತ ರಾಮಾಯಣ ಪಾರಾಯಣೋತ್ಸವ

**ಮಂಗಳೂರು:** ರಾಮಾಯಣ ಮಹಾಕಾವ್ಯದ ಬೀಜರೂಪವಾಗಿರುವ ನಾರದೋಕ್ತ ಶತಶ್ಲೋಕಿ ಸಂಕ್ಷೇಪ ರಾಮಾಯಣ ಪಾರಾಯಣ ದ್ವಿಸಪ್ತಾಹ ವರ್ಗದ ರಾಜ್ಯಮಟ್ಟದ ಸಮಾರೋಪವು ಮಾ. 27ರ ರಾಮನವಮಿಯಂದು ಸಂಜೆ 4.30ಕ್ಕೆ ಮಂಗಳೂರಿನ ಸುಬ್ರಹ್ಮಣ್ಯ ಸಭಾಸದನದಲ್ಲಿ ನಡೆಯಲಿದೆ. ಕರ್ನಾಟಕ ರಾಜ್ಯಾದ್ಯಂತ ಹದಿನೈದು ದಿನಗಳಿಂದ ನಡೆಯುತ್ತಿರುವ ಪಾರಾಯಣ ಅಭ್ಯಾಸವರ್ಗಗಳಲ್ಲಿ ನೂರಾರು ಭಕ್ತರು, ಜಿಜ್ಞಾಸುಗಳು ಭಾಗವಹಿಸುತ್ತಿದ್ದು ರಾಮಾಯಣ ವ್ಯಾಕರಣ ವಿದ್ವಾಂಸರಾದ ಕೆ.ಎಸ್. ಜಗನ್ನಾಥ ಪಂಡಿತ ಅಯ್ಯಂಗಾರರು, ಸಂಸ್ಕೃತ ಪ್ರಚಾರಕರಾದ ಡಾ. ಶಿಕಾರಿಪುರ ಕೃಷ್ಣಮೂರ್ತಿಯವರು ವಾಚನ ವ್ಯಾಖ್ಯಾನ ಸಂವಾದಗಳನ್ನು ಆನ್‌ಲೈನ್‌ನಲ್ಲಿ ನಡೆಸಿದ್ದರು. ಸಂಸ್ಕೃತ ಶ್ಲೋಕಗಳ ಅರ್ಥ–ಸ್ವಾರಸ್ಯಾನುಸಂಧಾನಗಳಿಗೆ ಆಗತ್ಯವಾದ ವ್ಯಾಕರಣಾಂಶಗಳನ್ನು ರಾಮಾಯಣದ ಈ ನೂರು ಶ್ಲೋಕಗಳ ಮೂಲಕ ಕಲಿಸಲಾಯಿತು. ಸಂಗೀತ ವಿದುಷಿ ವೀಣಾ ಶ್ರೀನಿವಾಸ್ ಗಾನಮಯ ವಾಚನವನ್ನು ಕಲಿಸಿದರು.

ರಾಮಾಯಣ ಕಥಾ ಪ್ರಸಂಗದ ಹತ್ತಾರು ಚರ್ಚಾಸ್ಪದ ವಿಷಯಗಳ ಬಗ್ಗೆ ವಾಲ್ಮೀಕಿ ಕವಿಗಳ ನಿಲುವನ್ನು ಸ್ಪಷ್ಟಪಡಿಸಲಾಯಿತು. ಸದ್ಬೋಧ ಗಾನಕಲಾ ಕೇಂದ್ರಾರಂಭ ಶ್ರೀರಾಮ ನವಮಿಯಂದು ಭಜನ ಸ್ತೋತ್ರಾಭ್ಯಾಸಕ್ಕಾಗಿ ಮಂಗಳೂರಿನ ಕೋಟೆಕಣಿಯ ಸದ್ಬೋಧ ಗುರುಕುಲದ ಗಾನಕಲಾ ಕೇಂದ್ರವನ್ನು ಉದ್ಘಾಟಿಸಲಾಗುವುದು. ಶಾಲಾ ಕಾಲೇಜುಗಳಲ್ಲಿ ಮಕ್ಕಳಿಂದ ಕನ್ನಡ–ಇಂಗ್ಲೀಷ್–ಸಂಸ್ಕೃತ ಭಾಷಣ ಗಳು, ಮಣಿಪಾಲದ ಖ್ಯಾತ ವಿಪಂಚಿ ಬಳಗದವರಿಂದ ವಳಕ್ಕುಡ್ಡ ಕೇಶವ ಭಟ್ಟ ಸಂಸ್ಮರಣೆಗಾಗಿ ನಡೆಯುವ ರಾಮ ಭಜನೆಯ ವೀಣಾವಾದನ ಕಾರ್ಯಕ್ರಮದಲ್ಲಿನ ವೈಶಿಷ್ಟ್ಯ. ಈ ಸಂದರ್ಭದಲ್ಲಿ ಸಂಕ್ಷೇಪ ರಾಮಾಯಣ ಕೈಪಿಡಿಯ ಲೋಕಾರ್ಪಣೆಯೂ ನಡೆಯುವುದೆಂದು ಸುಬ್ರಹ್ಮಣ್ಯ ಸಭಾ ಪ್ರಕಟಿಸಿದೆ.

## ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಬೈಕಂಪಾಡಿ ಆಶಯ

# ಕನ್ನಡದಲ್ಲಿ ಕಲಿತರೆ ಉದ್ಯೋಗಾವಕಾಶ ನೀಡುವ ಭರವಸೆಯಿಂದ ಭಾಷಾಭಿವೃದ್ಧಿ



**ಮಂಗಳೂರು:** ಕನ್ನಡದಲ್ಲಿ ಶಿಕ್ಷಣ ಪಡೆದರೆ ಉದ್ಯೋಗ ಸಿಗುವುದಿಲ್ಲ ಎನ್ನುವ ಸ್ಥಿತಿಯಿಂದಾಗಿ ಇಂಗ್ಲೀಷ್‌ನಲ್ಲಿ ಕಲಿಯುವ ಅನಿವಾರ್ಯತೆ ಬೆಳೆದಿದೆ. ಕನ್ನಡದ ಬಗ್ಗೆ ತಾತ್ಸಾರದ ಮನೋಭಾವನೆ ಮೂಡಿದೆ. ಕನ್ನಡದಲ್ಲಿ ಕಲಿತವರಿಗೆ ಉದ್ಯೋಗಾವಕಾಶದ ಭರವಸೆ ಮೂಡಿದರೆ ಮಾತ್ರ ಭಾಷೆಯ ಬಗ್ಗೆ ಅಭಿಮಾನ ಬೆಳೆಯಲು ಸಾಧ್ಯ ಎಂದು ಹಿರಿಯ ಪತ್ರಕರ್ತ, ಸಾಹಿತಿ ಚಿದಂಬರ ಬೈಕಂಪಾಡಿ ಹೇಳಿದರು.

ದ.ಕ.ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಯಾದ ಹಿನ್ನೆಲೆಯಲ್ಲಿ ಮಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಬುಧವಾರ ಸನ್ಮಾನ ಸ್ವೀಕರಿಸಿ ಪತ್ರಕರ್ತರ ಜತೆ ಸಂವಾದ ನಡೆಸಿದ ಅವರು, 'ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಅನಿರೀಕ್ಷಿತವಾಗಿ ಒಲಿದು ಬಂದ ಜವಾಬ್ದಾರಿ. ನನ್ನನ್ನು ಗುರುತಿಸಿದ್ದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ದೊಡ್ಡತನ' ಎಂದರು.

> ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದ ನಾನು ಬಳಿಕ ಪತ್ರಕರ್ತನಾದೆ. ಹಿಂದೆ ಸಾಹಿತಿಯಾದವರು ಪತ್ರಿಕಾರಂಗಕ್ಕೆ ಬರುತ್ತಿದ್ದರು. ಈಗ ಅಂತಹ ಬೆಳವಣಿಗೆ ಇಲ್ಲ. ಕತೆ ಬರೆದರೆ ಓದುವವರು ಕಡಿಮೆಯಾಗಿದ್ದಾರೆ. ಸುದ್ದಿ ಓದುವವರು ಕಡಿಮೆಯಾಗಿದ್ದಾರೆ. ಯುವ ಪತ್ರಕರ್ತರಲ್ಲಿ ಕೇಳುವ ವ್ಯವಧಾನ ಕಡಿಮೆಯಾಗಿದೆ. ನಾವು ಎಲ್ಲ ಕಲಿತವರು ಎಂಬ ಭ್ರಮಾಲೋಕದಿಂದ ಹೊರ ಬರಬೇಕು. ಪತ್ರಕರ್ತರು ಹೆಚ್ಚು ಅಧ್ಯಯನ ಶೀಲರಾಗಬೇಕು.
>
> ■ ಚಿದಂಬರ ಬೈಕಂಪಾಡಿ , ಹಿರಿಯ ಪತ್ರಕರ್ತ, ಸಾಹಿತಿ

ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಕೆ.ಆನಂದ ಶೆಟ್ಟಿ ಸನ್ಮಾನ ನೆರವೇರಿಸಿ ಶುಭ ಹಾರೈಸಿದರು. ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ, ಪ್ರೆಸ್ ಕ್ಲಬ್ ಕಾರ್ಯಕಾರಿ ಸಮಿತಿ ಸದಸ್ಯ ಹರೀಶ್ ಮೋಟುಕಾನ ಉಪಸ್ಥಿತರಿದ್ದರು.

ಪ್ರೆಸ್‌ಕ್ಲಬ್ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ವಂದಿಸಿದರು. ಉಪಾಧ್ಯಕ್ಷ ಮಹಮ್ಮದ್ ಆರಿಫ್ ಪಡುಬಿದ್ರಿ ನಿರೂಪಿಸಿದರು.

## ವಿದ್ವಾಂಸ ಡಾ.ಎಂ. ಪ್ರಭಾಕರ ಜೋಶಿಗೆ ಗೌರವ ಪುರಸ್ಕಾರ

# 'ಬಳ್ಕೂರು ಯಕ್ಷ ಕುಸುಮ' ಪ್ರಶಸ್ತಿ ಪ್ರದಾನ

**ಮಂಗಳೂರು:** ಕಲೆ ಇದ್ದ ಹಾಗೆ ಇದ್ದರೆ ಅದು ಭಜನೆ ಆಗುತ್ತದೆ. ಕಳೆದ ಹಲವು ವರ್ಷಗಳಿಂದ ಸಾವಿರಾರು ಕಲಾವಿದರು ಯಕ್ಷರಂಗಭೂಮಿಯಲ್ಲಿ ದುಡಿಯುತ್ತಿದ್ದಾರೆ. ಯಕ್ಷಗಾನಕ್ಕೆ ಇರುವ ಶಕ್ತಿ ಜಗತ್ತಿನ ಯಾವುದೇ ಕಲೆಯಲ್ಲಿಯೂ ಇಲ್ಲ ಎಂದು ವಿದ್ವಾಂಸ ಡಾ.ಎಂ.ಪ್ರಭಾಕರ ಜೋಶಿ ಹೇಳಿದರು.

ನಗರದ ಕೊಡಿಯಾಲ್‌ಬೈಲ್ ಕುದ್ರೋಳಿ ಶ್ರೀ ಭಗವತೀ ದೇವಸ್ಥಾನದ ಕೂಟಕ್ಕಳ ಸಭಾಂಗಣದಲ್ಲಿ ಯಕ್ಷ ಕುಸುಮ ಚಾರಿಟೇಬಲ್ ಟ್ರಸ್ಟ್, ರಂಗಸ್ಥಳ ಮಂಗಳೂರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಬಳ್ಕೂರು ಯಕ್ಷ ಕುಸುಮ' ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ನಾನು ವಿದ್ವಾಂಸನಲ್ಲ, ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಒಬ್ಬ ಕೆಲಸಗಾರ ಅಷ್ಟೇ. ಕಳೆದ 60 ವರ್ಷಗಳಿಂದ ಯಕ್ಷಗಾನ ಕಲೆಗಾಗಿ ನನ್ನ ಬದುಕನ್ನು ಸಮರ್ಪಿಸುತ್ತಿದ್ದೇನೆ. 10ನೇ ವರ್ಷದಲ್ಲಿ ನನ್ನ ಅಜ್ಜನಿಂದ ಕಲಿತ ಅರ್ಥಗಾರಿಕೆ ಬದುಕಿಗೆ ಪೂರಕವಾಗಿದೆ. ಅಮ್ಮನಿಂದ ತುಂಬ ಸಂಸ್ಕಾರವನ್ನು ಪಡೆದಿದ್ದೇನೆ. ಈ ಪ್ರಶಸ್ತಿಯ ಮೊತ್ತವನ್ನು ನನ್ನ ಮುಂದಿನ ಪುಸ್ತಕದ ಪ್ರಕಟಣೆಗಾಗಿ ಉಪಯೋಗಿಸುತ್ತೇನೆ ಎಂದು ಹೇಳಿದರು.

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಯಕ್ಷಕುಸುಮ ಚಾರಿಟೇಬಲ್ ಟ್ರಸ್ಟ್ ಕಳೆದ 4 ವರ್ಷಗಳಿಂದ ಯಕ್ಷಗಾನ ನಡೆಸುತ್ತಿರುವುದು ಹೆಮ್ಮೆಯ ವಿಷಯ ಎಂದರು.



ಈ ವೇಳೆ 'ಬಳ್ಕೂರು ಯಕ್ಷ ಕುಸುಮ' ಪುರಸ್ಕಾರವನ್ನು ಡಾ.ಎಂ.ಪ್ರಭಾಕರ ಜೋಶಿ ಅವರಿಗೆ ನೀಡಿ ಗೌರವಿಸಲಾಯಿತು. ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಎಸ್. ಪ್ರದೀಪ ಕುಮಾರ ಕಲ್ಕೂರ ಅವರು ಡಾ. ಎಂ. ಪ್ರಭಾಕರ ಜೋಶಿ ಅವರು ಯಕ್ಷಗಾನಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಿದರು.


ಮಂಗಳೂರಿನ ಹಿರಿಯ ಲೆಕ್ಕ ಪರಿಶೋಧಕ ಎಸ್. ಎಸ್. ನಾಯಕ್, ಮಂಗಳೂರು ರಂಗಸ್ಥಳ ಸಂಸ್ಥೆಯ ಎಸ್.ಎಲ್. ನಾಯಕ್ ಮತ್ತು ದಿನೇಶ್ ಪೈ ಮಂಗಳೂರು, ಪುಟ್ಟಣ್ಣ ಕುಲಾಲ್ ಪ್ರತಿಷ್ಠಾನದ ಅಧ್ಯಕ್ಷ ಡಾ.ಅಣ್ಣಯ್ಯ ಕುಲಾಲ್, ಮೆಕ್ಕೆಕಟ್ಟು ಮೇಳದ ಯಜಮಾನ ರಂಜಿತ್ ಕುಮಾರ್ ವಕ್ವಾಡಿ, ಬಳ್ಕೂರು ಯಕ್ಷ ಕುಸುಮ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕರುಣಾಕರ ಬಳ್ಕೂರು ಉಪಸ್ಥಿತರಿದ್ದರು. ಹಿರಿಯ ಸಾಹಿತಿ ಜನಾರ್ದನ ಹಂದೆ ಯಕ್ಷ ಕುಸುಮ ಕವಿತೆಯನ್ನು ವಾಚಿಸಿದರು. ಕನ್ನಡ ಉಪನ್ಯಾಸಕ ಶ್ರೀಕೃಷ್ಣ ಭಟ್ ಸುಣ್ಣಂಗುಳಿ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ಬಡಗುತಿಟ್ಟಿನ ಮೆಕ್ಕೆಕಟ್ಟು ಮೇಳದವರಿಂದ ಯಕ್ಷಗಾನ 'ದ್ರೌಪದಿ ಪ್ರತಾಪ ಮತ್ತು ವಿದ್ಯುಜ್ಜಿಹ್ವ' ಕಥಾನಕ ಪ್ರದರ್ಶನಗೊಂಡಿತು.


ಭಾರತದ ಅದ್ಭುತ ಗ್ರೂಪ್ ಪ್ರವಾಸಗಳು





ಸಸ್ಯಾಹಾರಿ ಊಟೋಪಹಾರ | ನುರಿತ ಮಾರ್ಗದರ್ಶನ | A / C ವಾಹನ | A / C ರೂಮ್ | ಟ್ರಾವೆಲ್ ಇನ್ಶೂರೆನ್ಸ್


01 ಚಾರ್ ಧಾಮ್ ಯಾತ್ರಾ — 15 ದಿನಗಳು
ಹರಿದ್ವಾರ, ಹನುಮಾನ್ ಚಟ್ಟಿ, ಯಮುನೋತ್ರಿ, ಉತ್ತರಕಾಶಿ, ಗಂಗಾನಾನಿ, ಗಂಗೋತ್ರಿ, ರುದ್ರಪ್ರಯಾಗ, ಗುಪ್ತಕಾಶಿ, ಕೇದಾರನಾಥ, ಪೀಪಲ್ ಕೋಟಿ, ಮಾನ, ಕೇಶವ ಪ್ರಯಾಗ, ಕರ್ಣ ಪ್ರಯಾಗ, ಬದರಿನಾಥ, ವಿಷ್ಣು ಪ್ರಯಾಗ, ಜೋಷಿಮಠ, ನಂದ ಪ್ರಯಾಗ, ಋಷಿಕೇಶ, ದೆಹಲಿ.
ದಿನಾಂಕ: APR 19, 22, 25, 28. MAY 4, 7, 10, 13, 19, 22, 25, 28. JUN 4, 7, 10, 13, 19, 22, 25, 28. JUL 4, 7, 10, 13. AUG 14, 28. SEP 1, 4, 7, 10, 16, 19, 22, 25, 28. OCT 4, 7, 10, 13. 19, 22.
7022259008


02 ಶಿಮ್ಲಾ – ಮನಾಲಿ - ವೈಷ್ಣೋದೇವಿ — 14 ದಿನಗಳು
ನವದೆಹಲಿ, ಕುರುಕ್ಷೇತ್ರ, ಚಂಡೀಗಡ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನಲ್, ಸೋಲಾಂಗ್ ವ್ಯಾಲಿ (opt), ಬೈಜನಾಥ್, ಕಾಂಗ್ರಾ ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಧರ್ಮಶಾಲಾ (Opt), ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ.
ದಿನಾಂಕ: APR 2, 10, 17, 24. MAY 8, 22. JUN 5, 19. JUL 10, 24. AUG 7, 21. SEP 4, 11, 25. OCT 9, 16, 23. NOV 13, 27. DEC 11.
7022259001



03 ಅಯೋಧ್ಯಾ – ಕಾಶಿ - ಗಯಾ — 6/9 ದಿನಗಳು
ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್ (ತ್ರಿವೇಣಿ ಸಂಗಮ), ಚಿತ್ರಕೂಟ, ವಾರಣಾಸಿ (ಕಾಶಿ), ಸಾರನಾಥ, ಗಯಾ, ಬೋಧಗಯಾ.
ದಿನಾಂಕ: APR 10, 24. MAY 8. JUNE 5, 19. JUL 3, 17. AUG 7, 21. SEP 4, 18, 25. OCT 2, 9, 23, 30. NOV 13, 27. DEC 4, 18.
9448083008



04 ಗೋಲ್ಡನ್ ಟ್ರಯಾಂಗಲ್ ಪ್ರವಾಸ — 6 ದಿನಗಳು
ಜೈಪುರ, ಆಗ್ರಾ, ಮಥುರಾ, ಬೃಂದಾವನ, ನವದೆಹಲಿ.
ದಿನಾಂಕ: APR 10, 24. MAY 8, 22. JUNE 5, 19. JUL 3, 17. AUG 7, 21. SEP 4, 18. OCT 2, 16. NOV 6, 20. DEC 4, 18.
7975001525



05 ಶಿಮ್ಲಾ – ಕುಲು - ಮನಾಲಿ — 9 ದಿನಗಳು
ನವದೆಹಲಿ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನಲ್, ಸೋಲಾಂಗ್ ವ್ಯಾಲಿ (opt), ಮಣಿಕರ್ಣಿಕಾ, ಚಂಡೀಗಡ
ದಿನಾಂಕ: APR 15, 29. MAY 13, 27. JUNE 10, 24. JUL 8, 22. AUG 12, 26. SEP 9, 23. OCT 7, 21. NOV 11, 25. DEC 9, 23.
9364104365



06 ಅಮೃತಸರ – ಧರ್ಮಶಾಲಾ - ವೈಷ್ಣೋದೇವಿ — 9 ದಿನಗಳು
ಕಾಂಗ್ರಾ ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಧರ್ಮಶಾಲಾ, ಡಾಲ್‌ಹೌಸಿ, ಖಜಿಯಾರ್, ಕಟ್ರಾ, ವೈಷ್ಣೋದೇವಿ
ದಿನಾಂಕ: APR 10, 18. MAY 15, 23. JUN 12, 20. JUL 17, 25. AUG 14, 22. SEP 11, 19. OCT 16, 24. NOV 6, 14. DEC 11, 19.
9364104366


07 ಕಾಶ್ಮೀರ - ವೈಷ್ಣೋದೇವಿ ಪ್ರವಾಸ — 8 ದಿನಗಳು
ಪಹಲ್ ಗಾಂವ್, ಸೋನ್ಮಾರ್ಗ್, ಶ್ರೀನಗರ, ಗುಲ್ಮಾರ್ಗ್, ಕಟ್ರಾ, ವೈಷ್ಣೋದೇವಿ
ದಿನಾಂಕ: APR 5, 12, 20, 27. MAY 10, 17, 25. JUN 1, 14,21. JUL 5, 13. AUG 9, 16. SEP 6, 13. OCT 4, 11, 19, 26. NOV 8, 15, 23, 30. DEC 13, 20.
7022259005



08 ಮಸ್ಸೋರಿ - ಕಾರ್ಬೆಟ್ - ನೈನಿತಾಲ್ — 12 ದಿನಗಳು
ಮಸ್ಸೋರಿ, ಕೆಂಪ್ಟಿ ಫಾಲ್ಸ್, ಹರಿದ್ವಾರ, ಋಷಿಕೇಶ, ಕೌಸಾನಿ, ಜಿಮ್ ಕಾರ್ಬೆಟ್ ನ್ಯಾಷನಲ್ ಪಾರ್ಕ್, ಬೈಜನಾಥ್, ಭಾಗೇಶ್ವರ್, ಜೋಗೇಶ್ವರ್, ಭೀಮ್ ತಾಲ್, ನೌಕುಚಿಯಾತಾಲ್, ಸತ್ತಾಲ್, ಕೈಂಚಿಧಾಮ್, ನೈನಿತಾಲ್, ದೆಹಲಿ.
ದಿನಾಂಕ: APR 10. MAY 8, 22. JUN 5, 19. JUL 17. AUG 7, 21. SEP 4, 18. OCT 2, 16. NOV 6, 20. DEC 4, 18.
7022259003


09 ದಕ್ಷಿಣ ಭಾರತ ಪ್ರವಾಸ — 10 ದಿನಗಳು
ಕಂಚೀಪುರಂ, ಚಿದಂಬರಂ, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ರಾಮೇಶ್ವರಂ, ಮಧುರೈ, ಕನ್ಯಾಕುಮಾರಿ, ನಾಗರಕೋಯಿಲ್, ಸುಚೀಂದ್ರ, ತಿರುವನಂತಪುರಂ, ಕಾಲಡಿ, ಗುರುವಾಯೂರು, ನಂಜನಗೂಡು.
ದಿನಾಂಕ: APR 16, 30. MAY 7, 21. JUN 4, 18. JUL 9, 23. AUG 6, 20. SEP 10, 24. OCT 8, 22. NOV 12, 19, 26. DEC 5, 12, 19.
9364088424


10 ಪೂರ್ವ ಭಾರತ ಪ್ರವಾಸ — 13 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ, ಸಿಲಿಗುರಿ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್ ಟಕ್, ನವಜಲಪೈಗುರಿ
ದಿನಾಂಕ: APR 13. MAY 11. JUN 15. AUG 17. SEP 14. OCT 12. NOV 16. DEC 14.
9364104373


11 ಪುರಿ – ಕೊನಾರ್ಕ್ - ಕಲ್ಕತ್ತಾ — 6 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ.
ದಿನಾಂಕ: APR 2, 8, 30. MAY 6. JUN 4, 10. JUL 2, 9. AUG 6, 12. SEP 3, 9. OCT 1, 7. NOV 5, 11. DEC 3, 9.
9364104373


12 ಪೂರ್ವ ಹಿಮಾಲಯ ಪ್ರವಾಸ — 10 ದಿನಗಳು
ನವಜಲಪೈಗುರಿ, ಡಾರ್ಜಿಲಿಂಗ್, ಗ್ಯಾಂಗ್ ಟಕ್, ತ್ಸಾಂಗೋ ಸರೋವರ, ನಮ್ಚಿ ಚಾರ್ ಧಾಮ್, ಪೆಲ್ಲಿಂಗ್, ಪೆಮಾಯಾಂಗ್ಟಸೆ, ಕಾಲಿಮ್ ಪಾಂಗ್
ದಿನಾಂಕ: APR 19. MAY 17. JUN 21. AUG 23. SEP 20. OCT 18. NOV 22. DEC 20.
7022259008


13 ಉಜ್ಜಯಿನಿ – ಓಂಕಾರೇಶ್ವರ – ಭೋಪಾಲ್ — 6 ದಿನಗಳು
ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಓಂಕಾರೇಶ್ವರ.
ದಿನಾಂಕ: APR 9, 14, 19. MAY 7, 12. JUN 4, 9. JUL 9, 14. AUG 6, 11, 16. SEP 10, 15, 20. OCT 8, 13, 18. NOV 5, 10, 15, 20. DEC 3, 8, 13, 18, 23.
7022259001

ಅಡಿಗಾಸ್ ಯಾತ್ರಾ
+91 94494 78944
www.adigasyatra.com
News Website : www.adigasyatranews.com
care@adigasyatra.com
Follows Us :
Facebook Instagram News Website Youtube

## ಟ್ರಂಪ್ ಕದನ ವಿರಾಮ ತಿರಸ್ಕರಿಸಿದ ಇರಾನ್

ಪುಟ ೧➡ ಇತ್ತ ಇರಾನ್ ಕ್ಷಿಪಣಿ ದಾಳಿಗಳನ್ನು ಮುಂದುವರಿಸಿದ್ದು, ಇಸ್ರೇಲ್‌ನಲ್ಲಿ ಎಚ್ಚರಿಕೆ ಸೈರನ್‌ಗಳು ಕೇಳಿಸುತ್ತಿವೆ. ಹೆಜ್ಬೊಲ್ಲಾ ಗುಂಪು ಉತ್ತರ ಇಸ್ರೇಲ್ ಮೇಲೆ ನಿರಂತರ ದಾಳಿ ಮಾಡುತ್ತಿದೆ. ಸೌದಿ ಅರೇಬಿಯಾ ಮತ್ತು ಬಹರೈನ್‌ಗಳಲ್ಲಿಯೂ ಡ್ರೋನ್ ದಾಳಿಗಳು ನಡೆದಿದೆ.

**ನೂರಾರು ಮಂದಿ ಸಾವು:** ಇರಾನ್‌ನಲ್ಲಿ 1,500ಕ್ಕೂ ಹೆಚ್ಚು ಜನರು ಮತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 20 ಮಂದಿ, ಅಮೆರಿಕ ಸೇನೆಯಲ್ಲಿ 13 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್ ಮತ್ತು ಇರಾಕ್‌ನಲ್ಲೂ ನೂರಾರು ಮಂದಿ ಬಲಿಯಾಗಿದ್ದಾರೆ. ಈ ಯುದ್ಧದ ಪರಿಣಾಮವಾಗಿ ಜಾಗತಿಕ ಆರ್ಥಿಕತೆ, ಆಹಾರ ಬೆಲೆ ಮತ್ತು ಸಾಲದ ದರಗಳ ಮೇಲೆ ಮಾರಕ ಪರಿಣಾಮ ಬೀರುವ ಸಾಧ್ಯತೆ ಇದೆ.

### ಪಾಕಿಸ್ತಾನ ದಲ್ಲಾಳಿ ರಾಷ್ಟ್ರ

ಪುಟ ೧➡ ಇದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳು ಸರ್ಕಾರದ ಮೇಲೆ ಮೌನದ ಆರೋಪ ಹೇರಿದವು. 'ಪಾಕಿಸ್ತಾನ ಮಧ್ಯಸ್ಥಿಕೆ ಮಾಡುತ್ತಿದೆ. ಆದರೆ ಭಾರತ ಇನ್ನೂ ಕೇವಲ ನೋಡುವುದರಲ್ಲಿ ತೊಡಗಿದೆ' ಎಂದು ಕಾಂಗ್ರೆಸ್ ನಾಯಕ ತಾರಿಕ್ ಅನ್ವರ್ ಆಕ್ರೋಶ ವ್ಯಕ್ತಪಡಿಸಿದರು. ಇರಾನ್ ಪರಮೋಚ್ಚ ನಾಯಕನ ನಿಧನದ ಕುರಿತು ಭಾರತ ತಡವಾಗಿ ಸಂತಾಪ ಸೂಚಿಸಿದೆ ಎಂಬ ಆರೋಪಕ್ಕೂ ಸರ್ಕಾರ ತಿರುಗೇಟು ನೀಡಿ, 'ಇರಾನ್ ರಾಯಭಾರ ಕಚೇರಿ ತೆರೆಯುತ್ತಿದ್ದಂತೆಯೇ ವಿದೇಶ ಕಾರ್ಯದರ್ಶಿ ಭೇಟಿ ನೀಡಿ ಸಂತಾಪ ಪುಸ್ತಕಕ್ಕೆ ಸಹಿ ಹಾಕಿದ್ದಾರೆ' ಎಂದು ಸಮರ್ಥಿಸಿಕೊಂಡಿತು. ಗಲ್ಫ್ ರಾಷ್ಟ್ರಗಳಲ್ಲಿ ಇರುವ ಭಾರತೀಯರ ಭದ್ರತೆ ಹಾಗೂ ದೇಶದ ಇಂಧನ ಅವಶ್ಯಕತೆ ಪೂರೈಕೆ ನಮ್ಮ ಮೊದಲ ಆದ್ಯತೆ ಎಂದು ಸರ್ಕಾರ ಸ್ಪಷ್ಟಪಡಿಸಿತು. 'ಈ ಎರಡೂ ಕ್ಷೇತ್ರಗಳಲ್ಲಿ ನಾವು ಯಶಸ್ವಿಯಾಗಿದ್ದೇವೆ' ಎಂದು ತಿಳಿಸಿತು. ಆದರೆ, ಸರ್ಕಾರದ ಉತ್ತರಗಳನ್ನು 'ತೃಪ್ತಿಕರವೇ ಅಲ್ಲ' ಎಂದು ವಿರೋಧ ಪಕ್ಷಗಳು ಖಂಡಿಸಿ, ಲೋಕಸಭೆಯಲ್ಲಿ ನಿಯಮ 193 ಮತ್ತು ರಾಜ್ಯಸಭೆಯಲ್ಲಿ ನಿಯಮ 176 ಅಡಿಯಲ್ಲಿ ತಕ್ಷಣ ಚರ್ಚೆ ನಡೆಸಬೇಕು ಎಂದು ಒತ್ತಾಯಿಸಿದವು.

## ಭಾರತೀಯ ಸಂಸ್ಕೃತಿಯ ದರ್ಶನ

ಪುಟ ೧➡ ದೀನದಯಾಳ ಉಪಾಧ್ಯಾಯರ ಏಕಾತ್ಮ ಮಾನವ ದರ್ಶನ ಕೇವಲ ದಾರ್ಶನಿಕ ಉದಾಹರಣೆ ಮಾತ್ರವಾಗಿರದೆ ಬದಲಾಗಿ ಭಾರತದ ಆತ್ಮ, ಸಂಸ್ಕೃತಿ, ಯೋಚನೆ ಮತ್ತು ಜೀವನ ಪದ್ಧತಿಯ ಮೂಲಾಧಾರವಾಗಿದೆ. ಈ ವಿಚಾರಧಾರೆಯು ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಜೀವನ ಮೌಲ್ಯಗಳಾಧಾರಿತ ಸಮಗ್ರದೃಷ್ಟಿಕೋನವನ್ನು ಪ್ರಸ್ತುತ ಪಡಿಸುವ ಏಕಾತ್ಮ ಮಾನವ ದರ್ಶನ ಭಾರತೀಯ ಸಂಸ್ಕೃತಿಯ ಜೀವನದರ್ಶನವಾಗಿದೆ ಎಂದು ತಿಳಿಸಿದರು.

ಕುಶಲ ಸಂಘಟಕ, ದಾರ್ಶನಿಕ, ಪ್ರಖರ ವಾಗ್ಮಿ, ಆರ್ಥಿಕ ತಜ್ಞ, ಕಾರ್ಯಕರ್ತ ಪಂಡಿತ ದೀನ ದಯಾಳ ಉಪಾಧ್ಯಾಯರು ತಮ್ಮ ಐತಿಹಾಸಿಕ ವ್ಯಾಖ್ಯಾನಮಾಲೆಯಲ್ಲಿ ಏಕಾತ್ಮ ಮಾನವದರ್ಶನವೆಂಬ ಸಮಗ್ರದರ್ಶನದ ದೃಷ್ಟಿಕೋನವನ್ನು 60 ವರ್ಷಗಳ ಹಿಂದೆ ನೀಡಿದ್ದರು. ಅದು ವ್ಯಕ್ತಿ, ಸಮಾಜ ಮತ್ತು ಪ್ರಕೃತಿಯ ನಡುವಿನ ಸಮನ್ವಯದ ಕುರಿತು ತಿಳಿಸುವ ಅದ್ಭುತ ದರ್ಶನವಾಗಿದೆ ಎಂದರು. ಶರೀರ, ಮನ, ಬುದ್ಧಿ ಮತ್ತು ಆತ್ಮದಿಂದ ಕೂಡಿದ, ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥದ ಸಾಧನೆಯನ್ನು ಮಾಡುವ, ಅವರ ಜತೆ ಕುಟುಂಬ, ಜಾತಿ, ರಾಷ್ಟ್ರವೆಂಬ ಮಾನವ ಸಮಾಜದ ವಿವಿಧ ಏಕಾತ್ಮ ಸಮಷ್ಟಿಯ ಪ್ರತಿನಿಧಿತ ಮಾಡುವ ಕ್ಷಮತೆಯನ್ನು ಇಟ್ಟುಕೊಂಡಿರುವ ಮಾನವ ಈ ದರ್ಶನದ ಕೇಂದ್ರ ಬಿಂದು. ಈ ದರ್ಶನದಲ್ಲಿ ವ್ಯಕ್ತಿ ಸಮಾಜ, ರಾಷ್ಟ್ರ ಮತ್ತು ವಿಶ್ವದ ವಿಕಾಸ ಮತ್ತು ವಿಶ್ವ ಕಲ್ಯಾಣದ ಭಾವವನ್ನು ಮೂಡಿಸಿದ್ದಾರೆ. ಈ ದರ್ಶನದ ಅನುಸಾರ ಸಮಾಜವು ಒಂದು ಜೀವಂತ ಘಟಕ. ಶರೀರದ ಎಲ್ಲಾ ಅಂಗಗಳು ಸೇರಿ ಹೇಗೆ ಕಾರ್ಯನಿರ್ವಹಿಸುತ್ತದೆಯೋ, ಹಾಗೆಯೇ ಸಮಾಜದ ವಿಭಿನ್ನ ವರ್ಗಗಳು ಜೊತೆಯಾಗಿ ಒಂದು ಸಮಗ್ರ ವ್ಯವಸ್ಥೆಯನ್ನು ಮಾಡುತ್ತದೆ. ಎಲ್ಲಾ ವರ್ಗಗಳ ಸಮನ್ವಯ ಮತ್ತು ಸಹಯೋಗ ಅವಶ್ಯವಾದದ್ದು ಎಂದು ಅಭಿಪ್ರಾಯಪಟ್ಟರು.

### ವರ್ಚುವಲ್‌ನಲ್ಲಿ ಉಪರಾಷ್ಟ್ರಪತಿ ಮಾತು

ವರ್ಚುವಲ್‌ನಲ್ಲಿ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ದೀನದಯಾಳ ಉಪಾಧ್ಯಾಯ ಅವರ ಏಕಾತ್ಮ ಮಾನವ ದರ್ಶನದ 60ನೇ ವರ್ಷದ ನಿಮಿತ್ತ ಆಯೋಜಿಸಿರುವ ಈ ಕಾರ್ಯಕ್ರಮ ಒತ್ತಡ ಮತ್ತು ನಂಬಿಕೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ, ಧರ್ಮದ ಮೂಲಕ ಜೀವನವನ್ನು ಸಮೃದ್ಧಗೊಳಿಸುವ ಕುರಿತು ತಿಳಿಸುತ್ತದೆ. ದೀನ ದಯಾಳರ ಚಿಂತನೆಗಳು ನಮ್ಮ ಹಕ್ಕುಗಳಲ್ಲದೆ, ನಮ್ಮ ಕರ್ತವ್ಯದ ಕುರಿತು ತಿಳಿಸುತ್ತದೆ. 2047ರ ವಿಕಸಿತ ಭಾರತ ಕಲ್ಪನೆಯು ದೀನದಯಾಳ ಉಪಾಧ್ಯಯ ಅವರ ಏಕಾತ್ಮ ಮಾನವ ದರ್ಶನದ ಆಶಯವನ್ನು ಹೊಂದಿದೆ. ಅದು ಕೇವಲ ಆರ್ಥಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಯಾಗಿರದೇ ಸರ್ವಾಂಗೀಣ ವಿಕಾಸವಾಗಿದೆ ಎಂದು ಹೇಳಿದರು.

### ದೀನ ದಯಾಳರಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿ, ದೀನ ದಯಾಳ ಉಪಾಧ್ಯಾಯರ ಚಿಂತನೆಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಅನುಷ್ಠಾನಗೊಳಿಸುವುದಕ್ಕಾಗಿ ದೇಶಾದ್ಯಂತ ಕಾರ್ಯಕ್ರಮಗಳು ನಡೆಯುತ್ತಿವೆ. ಅದರ ಭಾಗವಾಗಿ ಮೈಸೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮ ಶ್ಲಾಘನೀಯ. ಬಾಲ್ಯದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡರೂ ಜೀವನೋತ್ಸಾಹ ಕಳೆದುಕೊಳ್ಳದೆ ತಮ್ಮ ಜೀವನ ಮುನ್ನಡೆಸಿದರು. ಅವರ ಕನಸು ಮತ್ತು ನನಸಿನಲ್ಲೂ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು ಎಂದರು. ಜಗತ್ತಿನಲ್ಲಿ ಶಾಂತಿ ನೆಲೆಸಲು ಪ್ರಗತಿಯ ಜತೆ ಸಮಾನತೆ, ಸಹಕಾರ, ಪ್ರಕೃತಿಯೊಂದಿಗೆ ಸಮನ್ವಯದ ಕುರಿತು ತಿಳಿಸುವ ಭೌತಿಕ ಪ್ರಗತಿಯ ಜತೆ ಆಧ್ಯಾತ್ಮಿಕ ಮೌಲಗಳ ಮೇಳೈಸುವಿಕೆಯ ದೀನ ದಯಾಳರ ಏಕಾತ್ಮ ಮಾನವದರ್ಶನದ ಚಿಂತನೆಗಳು ಅತ್ಯಗತ್ಯ. ರಾಜಕೀಯದಲ್ಲಿ ಮೌಲ್ಯಾಧಾರಿತ ಪ್ರಜ್ಞೆಯನ್ನು ಮೂಡಿಸುವುದಕ್ಕೆ, ಗ್ರಾಮದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಮೂಡಿಸುವುದಕ್ಕೆ ದೀನದಯಾಳರ ಅಂತ್ಯೋದಯದ ಕಲ್ಪನೆ ಸಹಕಾರಿ. ಇಂದು ಇಡೀ ಜಗತ್ತು ಶಾಂತಿಯಿಂದ ಇರಬೇಕು ಎಂದು ಬಯಸುವ ಏಕೈಕ ರಾಷ್ಟ್ರ ಭಾರತ. ಅಂತಹ ಭಾರತೀಯ ಚಿಂತನೆಯ ಮೌಲ್ಯಗಳ ರೂಪ ದೀನದಯಾಳ ಉಪಾಧ್ಯಾಯರಾಗಿದ್ದರು ಎಂದು ನುಡಿದರು. ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಟೋಳಿ ಸದಸ್ಯರಾದ ರಘುನಂದನ ಮಾತನಾಡಿ, ಭಾರತ ದರ್ಶನ ಪ್ರದರ್ಶಿನಿ ಇಡೀ ದೇಶದ ಚಿತ್ರಣ ಕಟ್ಟಿಕೊಡುತ್ತದೆ. ಚಿತಿ ಹಾಗೂ ವಿರಾಟ್ ಎಂಬ ಎರಡು ಭಾಗಗಳಿದ್ದು, ಚಿತಿಯು ಆತ್ಮತತ್ವವನ್ನು, ವಿರಾಟ್ ಅದರ ಪ್ರಕಟೀಕರಣವನ್ನು ಹೇಳುತ್ತದೆ. ಭಾರತವನ್ನು ನಾವು ತಿಳಿದು, ಮುಂದಿನ ಪೀಳಿಗೆಗೆ ದಾಟಿಸುವ ಪ್ರಯತ್ನವಾಗಲಿ ಎಂದು ಹೇಳಿದರು.ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ ಹಲಸೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಜ್ಞಾಪ್ರವಾಹದ ಕರ್ನಾಟಕ ದಕ್ಷಿಣ ಸಂಯೋಜಕ ಡಾ.ಪ್ರದೀಪ ಭಾರದ್ವಾಜ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ನವೀನಕುಮಾರ ಎಸ್ ಕೆ., ನವದೆಹಲಿಯ ಡಾ.ಶ್ಯಾಮಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಡಾ.ಬಿನಯಕುಮಾರ್ ಸಿಂಗ್ ಉಪಸ್ಥಿತರಿದ್ದರು.

## ದಿನ ಭವಿಷ್ಯ

**ಮೇಷ**
ವಿಶ್ವಾಸ ವೃದ್ಧಿ. ಬಾಕಿ ಇರುವ ಕೆಲಸ ಪೂರ್ಣ. ಹಣದ ವಿಚಾರದಲ್ಲಿ ನೀಡುವ ಹಿತವಚನಕ್ಕೆ ಕಿವಿಗೊಡಿ. ಸಾಂಸಾರಿಕ ಸಾಮರಸ್ಯ ಹೆಚ್ಚಳ.

**ವೃಷಭ**
ಮಹತ್ವದ ಹೊಣೆ ನಿಮ್ಮ ಮೇಲೆ ಬೀಳಲಿದೆ. ತಪ್ಪಾಗದಂತೆ ಎಚ್ಚರ ವಹಿಸಿ. ಶಾಪಿಂಗ್‌ನಲ್ಲಿ ಹೆಚ್ಚು ಕಾಲ ಕಳೆಯದಿರಿ. ಅನವಶ್ಯ ವೆಚ್ಚ ಹೆಚ್ಚಳ.

**ಮಿಥುನ**
ದಿನದಂತ್ಯಕ್ಕೆ ಅನಿರೀಕ್ಷಿತ ಬೆಳವಣಿಗೆ ನಿರೀಕ್ಷಿಸುವಿರಿ. ಹಣದ ಬೆಂಬತ್ತಬೇಡಿ. ಮಾನಸಿಕ ಒತ್ತಡ ಕಡಿಮೆ ಮಾಡಲು ಗಮನ ಕೊಡಿ.

**ಕಟಕ**
ಹಣದ ವಿಚಾರ ಚಿಂತೆ ಕಾರಣವಾಗಲಿದೆ. ವೃತ್ತಿಯಲ್ಲಿ ಕಿರಿಕಿರಿ. ಹಿರಿಯರ ಬೇಡಿಕೆ ಅರಿತು ವ್ಯವಹರಿಸಿ. ಆರೋಗ್ಯ ಸುಸ್ಥಿರ, ಚಿಂತೆ ನಿವಾರಣೆ.

**ಸಿಂಹ**
ಬದುಕು ನೀವು ಬಯಸದ ಕಡೆ ಸಾಗುತ್ತಿದೆ. ಅದರ ಮೇಲೆ ನಿಯಂತ್ರಣ ಸಾಧಿಸಿ. ಇತರರ ಏಳಿಗೆಗೆ ಶ್ರಮಿಸುವ ಮುನ್ನ ನಿಮ್ಮ ಬೇಡಿಕೆಗೆ ಗಮನ ಕೊಡಿ.

**ಕನ್ಯಾ**
ವೃತ್ತಿ ಒತ್ತಡ ಅಧಿಕ. ಆದರೆ ಅಪರಾಹ್ನದ ವೇಳೆ ಒತ್ತಡ ನಿವಾರಣೆ. ಪ್ರೀತಿಯ ವಿಚಾರದಲ್ಲಿ ಪೂರಕ ಪರಿಸ್ಥಿತಿ. ಖರ್ಚು ನಿಯಂತ್ರಿಸಲು ಯತ್ನಿಸಿ.

**ತುಲಾ**
ನಿಮ್ಮ ಕರ್ತವ್ಯ ಪಾಲನೆಗೆ ಗಮನ ಕೊಡಿ. ಇತರ ವಿಷಯ ದೂರುತ್ತಾ ಕೂರಬೇಡಿ. ಸಮಸ್ಯೆ ತರುವ ವ್ಯಕ್ತಿಗಳನ್ನು ದೂರ ಇಡಿ. ಆರ್ಥಿಕ ಉನ್ನತಿ.

**ವೃಶ್ಚಿಕ**
ಶುಭ ಬೆಳವಣಿಗೆ. ಉದ್ಯೋಗವಕಾಶ ಹೆಚ್ಚಳ. ಸ್ವಂತ ಉದ್ದಿಮೆದಾರರಿಗೆ ಯಶಸ್ಸು. ಬಂಧು ಭೇಟಿ. ದೈಹಿಕ ಅಸೌಖ್ಯ ತುಸು ಕಾಡಬಹುದು.

**ಧನು**
ಇಂದು ಕೆಲವಾರು ಬೆಳವಣಿಗೆ ಉಂಟಾದೀತು. ಹಳೆಯ ವಿಷಯ ಕೆದಕಬೇಡಿ. ಸಮಸ್ಯೆ ಹೆಚ್ಚಬಹುದು. ಕಿರಿಕಿರಿ ವ್ಯಕ್ತಿಗಳಿಂದ ದೂರವಿರಿ.

**ಮಕರ**
ಪಾಲುದಾರರ ಜತೆ ಸಂಘರ್ಷ ಉಂಟಾದೀತು. ಅರಿತು ವ್ಯವಹರಿಸಿ. ಅನೂಹ್ಯ ಪ್ರಸಂಗ ಎದುರಿಸಬೇಕಾದೀತು. ಆರೋಗ್ಯ ಸಮಸ್ಯೆ.

**ಕುಂಭ**
ಹೊಸ ಪ್ರಯೋಗ ಮಾಡಲು ಹೋಗಬೇಡಿ. ಇರುವ ಸ್ಥಿತಿಯನ್ನೆ ಮುಂದುವರಿಸಿ. ದೇಹಾರೋಗ್ಯ ಕಾಯಲು ಆದ್ಯತೆ ಕೊಡಿ.

**ಮೀನ**
ಕಹಿಸಿಹಿ ಬೆಳವಣಿಗೆ ಎರಡೂ ಸಂಭವ. ಕಚೇರಿ ರಾಜಕೀಯ ನೆಮ್ಮದಿ ಕೆಡಿಸುವುದು. ವೆಚ್ಚ ತುಂಬಾ ಹೆಚ್ಚಲಿದೆ. ಹಳೆ ಸ್ನೇಹಿತರ ಸಂಪರ್ಕ.

**ರಾಹುಕಾಲ: 1.30-3.00**
**ಗುಳಿಕಕಾಲ: 9.00-10.30**
**ಅದೃಷ್ಟ ಸಂಖ್ಯೆ: 1,7,3,8**

## ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಮಳೆ ತಂಪು | ಗಂಟೆಗೂ ಹೆಚ್ಚು ಕಾಲ ವರುಣ

# ಕಲ್ಯಾಣದಲ್ಲಿ ಬಿರುಗಾಳಿ ಮಳೆ



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲೂಕಿನ ಚನ್ನೂರಲ್ಲಿ ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆ

◆ **ಹುಬ್ಬಳ್ಳಿ:** ಧಾರವಾಡ, ಕಲಬುರಗಿ, ಗದಗ, ವಿಜಯಪುರ, ಬೆಳಗಾವಿ, ಉತ್ತರ ಕನ್ನಡ ಸೇರಿದಂತೆ ಹಲವೆಡೆ ಬುಧವಾರ ಸಂಜೆ ಗುಡುಗು, ಮಿಂಚು ಹಾಗೂ ಬಿರುಗಾಳಿ, ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿಯಿತು. ಮಧ್ಯಾಹ್ನದವರೆಗೆ ಸುಡುತ್ತಿದ್ದ ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಈ ಮಳೆ ತಂಪು ನೀಡಿದರೂ, ಬಿರುಗಾಳಿಯ ಆರ್ಭಟ ಸಾರ್ವಜನಿಕ ಜೀವನಕ್ಕೆ ಅಲ್ಪಮಟ್ಟಿನ ಅಡ್ಡಿಪಡಿಸಿತು.

**ಸಿಡಿಲು-ಮಿಂಚಿನ ಅಬ್ಬರ:** ಮಳೆ ಆರಂಭವಾಗುವ ಮುನ್ನವೇ ಭೀಕರ ಸಿಡಿಲು ಮತ್ತು ಮಿಂಚಿನ ಅಬ್ಬರ ಕಂಡುಬಂದಿತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದಾಗಿ ರಸ್ತೆಗಳು ಜಲಾವೃತಗೊಂಡವು.

**ಬಿರುಗಾಳಿ ಹಾವಳಿ:** ಬಲವಾದ ಗಾಳಿ ಬೀಸಿದ್ದರಿಂದ ನಗರದ ಹಲವೆಡೆ ಮರಗಳು ಧರೆಗುರುಳಿವೆ. ಕೆಲವು ಕಡೆಗಳಲ್ಲಿ ವಿದ್ಯುತ್ ಕಂಬಗಳು ವಾಲಿ ಹೋಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ನಗರದ ಬಹುತೇಕ ಭಾಗಗಳಲ್ಲಿ ವಿದ್ಯುತ್ ಸ್ಥಗಿತಗೊಳಿಸಲಾಗಿತ್ತು.

**ದ್ರಾಕ್ಷಿ ಬೆಳೆಗೆ ಹಾನಿ:** ವಿಜಯಪುರ ಜಿಲ್ಲೆಯಲ್ಲಿ ಮಂಗಳವಾರ ಮಧ್ಯಾಹ್ನ ಹಾಗೂ ಬುಧವಾರ ಬೆಳಿಗ್ಗೆ ಸುರಿದ ಮಳೆಯಿಂದ ದ್ರಾಕ್ಷಿ ಬೆಳೆಗೆ ಹಾನಿ ಉಂಟಾಗಿದೆ. ಕಟಾವಿಗೆ ಬಂದಿದ್ದ ನಾಲ್ಕು ಎಕರೆ ಹಣ್ಣಾದ ದ್ರಾಕ್ಷಿ ನೆಲ ಕಚ್ಚಿದೆ. ಇನ್ನೂ ಕಟಾವು ಮಾಡಿ ಒಣ ಹಾಕಿದ್ದ ದ್ರಾಕ್ಷಿ ತೊಯ್ದು ಹೋಗಿದೆ.

**ಆಲಿಕಲ್ಲಿನಿಂದ ನಷ್ಟ:** ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಹಾಗೂ ಧಾರವಾಡ ಮತ್ತು ಹುಬ್ಬಳ್ಳಿ ಸೇರಿದಂತೆ ವಿವಿಧೆಡೆ ಆಲಿಕಲ್ಲು ಮಳೆಯಿಂದ ಬೆಳೆಗಳಿಗೆ ಹಾನಿ ಉಂಟಾಗಿದೆ. ಜೋರಾದ ಗಾಳಿಗೆ ಬೆಳೆಗಳು ನೆಲ ಕಚ್ಚಿವೆ. ಕಲಬುರಗಿಯ ಚಿಂಚೋಳಿ ತಾಲೂಕಿನ ವ್ಯಾಪ್ತಿಯಲ್ಲಿ ಮಳೆಯ ಆರ್ಭಟ ಹೆಚ್ಚಾಗಿದ್ದು, ತಾಲೂಕಿನ ಚೆನ್ನೂರು,ಗಡಿಲಿಂದಳ್ಳಿ ಹಾಗೂ ರಾಣಾಮರ ಕ್ರಾಸ್ ಸೇರಿದಂತೆ ಹಲವು ಗ್ರಾಮಗಳಲ್ಲಿ ಆಲಿಕಲ್ಲಿನ ಸಮೇತ ಬುಧವಾರ ಸಂಜೆ ಭಾರೀ ಮಳೆ ಸುರಿದಿದೆ.

### ಕಾಶ್ಮೀರವಾದ ಚಿಂಚೋಳಿಯ ಚನ್ನೂರು

◆ **ಕಲಬುರಗಿ:** ಜಿಲ್ಲೆಯ ಚಿಂಚೋಳಿ ತಾಲೂಕಿನ ಚನ್ನೂರ ಗ್ರಾಮದಲ್ಲಿ ಅಪರೂಪದ ಆಲಿಕಲ್ಲು ಮಳೆ ಸುರಿದು ಸ್ಥಳೀಯರನ್ನು ಅಚ್ಚರಿಗೊಳಿಸಿದೆ. ಇದು ಕಾಶ್ಮೀರ ಅಲ್ಲ, ಚಿಂಚೋಳಿ'' ಎಂದು ಜನರು ಹೇಳುವಂತ ಸ್ಥಿತಿ ನಿರ್ಮಾಣವಾಗಿದ್ದು, ಹಿಮದಂತೆ ಆಲಿಕಲ್ಲುಗಳು ರಸ್ತೆಮೇಲೆ ರಾಶಿಯಾಗಿ ಬಿದ್ದ ದೃಶ್ಯಗಳು ಕಂಡುಬಂದವು. ಸಾಯಂಕಾಲ ಸುಮಾರು 5.30ರಿಂದ 6 ಗಂಟೆಯವರೆಗೆ ಸುರಿದ ಈ ಆಲಿಕಲ್ಲು ಮಳೆ ಗ್ರಾಮದಲ್ಲಿ ವಿಭಿನ್ನ ವಾತಾವರಣವನ್ನು ಸೃಷ್ಟಿಸಿತು.ಆಲಿಕಲ್ಲು ಮಳೆಯ ಪರಿಣಾಮವಾಗಿ ಗ್ರಾಮದಲ್ಲಿನ ರಸ್ತೆಗಳಲ್ಲಿ ಹಿಮದಂತೆ ಬಿಳಿ ಮಂಜು ಹಾಸಿದಂತ ದೃಶ್ಯ ಕಾಣಿಸಿಕೊಂಡಿದ್ದು, ಜನರು ಕುತೂಹಲದಿಂದ ರಸ್ತೆಗಳತ್ತ ಹರಿದು ಬಂದರು. ಈ ಅಪರೂಪದ ದೃಶ್ಯವನ್ನು ಕಂಡು ಹಲವರು ಮೊಬೈಲ್‌ಗಳಲ್ಲಿ ಚಿತ್ರಿಕರಿಸಿ ಸಂಭ್ರಮಿಸಿದರು. ಕೆಲಕಾಲ ಚನ್ನೂರ ಗ್ರಾಮವು ಕಾಶ್ಮೀರದಂತೆ ಕಾಣಿಸಿಕೊಂಡಿತ್ತು ಎಂಬ ಅಭಿಪ್ರಾಯವೂ ಜನರಿಂದ ವ್ಯಕ್ತವಾಯಿತು.ಇನ್ನೊಂದೆಡೆ, ಈ ಅಕಾಲಿಕ ಆಲಿಕಲ್ಲು ಮಳೆಯಿಂದ ರೈತರಿಗೆ ಬೆಳೆ ನಷ್ಟ ಉಂಟಾದ ಮಾಹಿತಿ ಲಭ್ಯವಾಗಿದೆ. ಹವಾಮಾನದಲ್ಲಿ ಏಕಾಏಕಿ ಉಂಟಾದ ಬದಲಾವಣೆ ರೈತರಲ್ಲಿ ಆತಂಕ ಮೂಡಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹಾನಿ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.



## ವಿಶೇಷ ಪ್ರವಾಸಿ ರೈಲು

◆ **ಮಂಗಳೂರು:** ಭಾರತೀಯ ರೈಲ್ವೆ, ಸೌತ್ ಸ್ಟಾರ್ ರೈಲ್ ಇಂಡಿಯಾ ಮತ್ತು ಟೂರ್ ಟೈಮ್ಸ್ ಸಹಯೋಗದಲ್ಲಿ ಭಾರತ್ ಗೌರವ್ ರೈಲು ಯೋಜನೆಯಡಿ ಈಶಾನ್ಯ ಭಾರತಕ್ಕೆ ಬೇಸಿಗೆ ವಿಶೇಷ ಪ್ರವಾಸಿ ರೈಲನ್ನು ಘೋಷಿಸಲಾಗಿದೆ. ಈ ಪ್ರಯಾಣವು ಏಪ್ರಿಲ್ 25 ರಂದು ಪ್ರಾರಂಭವಾಗಲಿದ್ದು, ವಿಶಾಖಪಟ್ಟಣಂ ಮತ್ತು ಕೋಲ್ಕತ್ತಾ ಸೇರಿ 14 ದಿನಗಳ ಕಾಲ ಒಂದೇ ರೈಲು ಪ್ರಯಾಣದೊಳಗೆ ಮೂರು ವಿಭಿನ್ನ ಪ್ರವಾಸ ಪ್ಯಾಕೇಜ್‌ಗಳನ್ನು ನೀಡಲಿದೆ.

ವಿಶೇಷವಾಗಿ ವಿನ್ಯಾಸಗೊಳಿಸಲಾದ ಈ ಪ್ರವಾಸಿ ರೈಲು ದೇಶದ ಕೆಲವು ಅತ್ಯಂತ ಸುಂದರವಾದ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ತಾಣಗಳನ್ನು ಒಳಗೊಂಡಿದೆ. ಮೊದಲ ಪ್ಯಾಕೇಜ್‌ನಲ್ಲಿ ಗ್ಯಾಂಗ್ಟಾಕ್, ಡಾರ್ಜಿಲಿಂಗ್‌ಗೆ ಭೇಟಿ ನೀಡಬಹುದು. ಎರಡನೇ ಪ್ಯಾಕೇಜ್ ಈಶಾನ್ಯದ ಸುಂದರ ತಾಣಗಳಾದ ಗುವಾಹಟಿ, ಶಿಲ್ಲಾಂಗ್, ಚಿರಾಪುಂಜಿ, ಮಾವ್ಲಿನ್ನಾಂಗ್ ಮತ್ತು ದಾವ್ಕಿಗಳನ್ನು ಒಳಗೊಂಡಿದೆ. ಮೂರನೇ ಪ್ಯಾಕೇಜ್ ಭೂತಾನ್‌ಗೆ ಅಂತಾರಾಷ್ಟ್ರೀಯ ಪ್ರವಾಸವಾಗಿದ್ದು, ಇದು ಥಿಂಪು, ಪುನಾಖಾ, ಪಾರೋ ಮತ್ತು ಚೆಲೆ ಲಾ ಪಾಸ್ ಗಳನ್ನು ಒಳಗೊಂಡಿದೆ ಎಂದು ಭಾರತೀಯ ರೈಲ್ವೆ ಭಾರತ್ ಗೌರವ್ ರೈಲು ಸೌತ್‌ಸ್ಟಾರ್ ರೈಲು ಟೂರ್ ಟೈಮ್ ನಿರ್ದೇಶಕ ವಿಘ್ನೇಶ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಮಾನ್ಯ ರೈಲುಗಳಿಗಿಂತ ಭಿನ್ನವಾಗಿ, ಈ ವಿಶೇಷ ಪ್ರವಾಸಿ ರೈಲು ಐಆರ್‌ಸಿಟಿಸಿ ವೆಬ್‌ಸೈಟ್ ನಲ್ಲಿ ಬುಕಿಂಗ್ ಮಾಡಲು ಲಭ್ಯವಿಲ್ಲ. ಟೂರ್ ಟೈಮ್ಸ್ ಅನ್ನು ನೇರವಾಗಿ 7305858585ಕ್ಕೆ ಸಂಪರ್ಕಿಸುವ ಮೂಲಕ ಅಥವಾ https://www.tourtimes.in ಮೂಲಕ ಮಾತ್ರ ಕಾಯ್ದಿರಿಸಬಹುದಾಗಿದೆ.

ಸೌತ್ ಸ್ಟಾರ್ ರೈಲ್ ಮತ್ತು ಟೂರ್ ಟೈಮ್ಸ್ ಈಗಾಗಲೇ 53 ನಿರ್ಗಮನಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದು, 2,90,229 ರೈಲು ಕಿಲೋಮೀಟರ್ ಗಳನ್ನು ಕ್ರಮಿಸಿವೆ ಮತ್ತು 24,402 ಯಾತ್ರಿಕರು ಮತ್ತು ಪ್ರವಾಸಿಗರಿಗೆ ಪ್ರಯಾಣ ಸೌಲಭ್ಯಗಳನ್ನು ಒದಗಿಸಿವೆ. ಕೇರಳದಲ್ಲಿ ಅನುಕೂಲಕರ ಬೋರ್ಡಿಂಗ್ ಪಾಯಿಂಟ್‌ಗಳೊಂದಿಗೆ ಈ ರೈಲು ಮಧುರೈನಿಂದ ಹೊರಡಲಿದೆ. ಮಂಗಳೂರಿನಿಂದ ಪ್ರಯಾಣಿಸುವ ಪ್ರಯಾಣಿಕರಿಗೆ ಅವರ ಆದ್ಯತೆಯ ಆಧಾರದ ಮೇಲೆ ಪಾಲಕ್ಕಾಡ್, ಒತ್ತಪಾಲಂ ಅಥವಾ ತ್ರಿಶೂರ್‌ಗೆ ಪೂರಕ ವರ್ಗಾವಣೆ ನೀಡಲಾಗುವುದು ಎಂದು ವಿವರಿಸಿದರು. ಸಾರ್ವಜನಿಕ ಪ್ರಕಟಣೆ ಮನರಂಜನಾ ವ್ಯವಸ್ಥೆಗಳು, ಪ್ರವಾಸ ವ್ಯವಸ್ಥಾಪಕರು, ವಿಶೇಷ ಕೋಚ್ ಭದ್ರತೆ, ರೈಲಿನ ಒಳಗೆ ಹಾಗೂ ಹೊರಗೆ ಅನಿಯಮಿತ ದಕ್ಷಿಣ ಭಾರತೀಯ ಊಟ ಮತ್ತಿತರ ಸೌಲಭ್ಯಗಳನ್ನು ಹೊಂದಿದೆ.

## ಉಪ ಚುನಾವಣೆ ಮುಸ್ಲಿಂ ಆಕ್ರೋಶ

ಪುಟ ೧➡ ಕಾಂಗ್ರೆಸ್ ಮತಬ್ಯಾಂಕ್ ಎಂದೇ ಬಿಂಬಿತವಾಗಿರುವ ಮುಸ್ಲಿಮರ ಅಸಮಾಧಾನದಿಂದಾಗಿ ಇಡೀ ರಾಜ್ಯದ ಗಮನ ಸೆಳೆದಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ 20ಕ್ಕೂ ಅಧಿಕ ಮುಸ್ಲಿಂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಹೇಳಿ ಕೇಳಿ, ಕಾಂಗ್ರೆಸ್ ವೋಟ್ ಬ್ಯಾಂಕ್ ಎಂದೇ ಪರಿಗಣಿಸಲ್ಪಟ್ಟಿರುವ ಮುಸ್ಲಿಮರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉಮೇದುವಾರಿಕೆ ಸಲ್ಲಿಸಿರುವುದು ಕಾಂಗ್ರೆಸ್ ಪಕ್ಷಕ್ಕೆ ತಲೆನೋವಾಗಿ ಪರಿಣಮಿಸಿದೆ.

**ಮತ ವಿಭಜನೆಯ ಆತಂಕ:** ಸಾಮಾನ್ಯವಾಗಿ ಪ್ರತಿ ಚುನಾವಣೆಯಲ್ಲಿ ಪ್ರಮುಖ ಅಭ್ಯರ್ಥಿಗಳೊಂದಿಗೆ ಚೌಕಾಸಿ ಮಾತುಕತೆ ಮಾಡಿಕೊಳ್ಳಲಿಕ್ಕೋ ಅಥವಾ ತಮಗಿರುವ ಜನಬೆಂಬಲವನ್ನು ತಿಳಿಯುವ ಕುತೂಹಲದಿಂದಲೂ, ಇನ್ನೂ ಕೆಲವರು ಚುನಾವಣೆಯಲ್ಲಿ ಸ್ಪರ್ಧಿಸಿದ ದಾಖಲೆ ಮಾಡಲಿಕ್ಕೋ ನಾಮಪತ್ರ ಸಲ್ಲಿಸುವುದುಂಟು. ಹಾಗೆ ನಾಮಪತ್ರ ಸಲ್ಲಿಸಿದವರಲ್ಲಿ ಕೂಡ ಸಾಕಷ್ಟು ಜನ ಉಮೇದುವಾರಿಕೆ ಹಿಂತೆಗೆದುಕೊಳ್ಳುವುದೂ ಇದೆ. ಅದು ಸಾಧ್ಯವಾಗದ ಅಭ್ಯರ್ಥಿಗಳು ಕಣದಿಂದ ನಿವೃತ್ತಿ ಘೋಷಿಸುವ ಉದಾಹರಣೆಗಳು ಕೂಡ ಇವೆ. ಆದರೆ ಅಹಿಂದ ಕ್ಷೇತ್ರದವರೇ ನಿರ್ಣಾಯಕರಾಗಿರುವ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡ ನಾಯಕ ಸಮುದಾಯದ ಬಿಜೆಪಿ ಅಭ್ಯರ್ಥಿಯನ್ನು ಎದುರಿಸಬೇಕಿರುವ ಕಾಂಗ್ರೆಸ್ ಪಕ್ಷಕ್ಕೆ, ಸಾಕಷ್ಟು ಮುಸ್ಲಿಂ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿರುವುದು ನುಂಗಲಾರದ ತುತ್ತಾಗಿದೆ.

ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಜಿಲ್ಲೆಯ ಮಾಯಕೊಂಡ ವಿಧಾನಸಭಾ ಕ್ಷೇತ್ರವು ಅತಿ ಹೆಚ್ಚು ಉಮೇದುವಾರರೊಂದಿಗೆ ರಾಜ್ಯದ ಗಮನ ಸೆಳೆದಿತ್ತು. ಇದೀಗ ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನಾಮಪತ್ರ ಸಲ್ಲಿಸಿರುವುದು ವಿಶೇಷವಾಗಿದೆ. ನಾಮಪತ್ರ ಸಲ್ಲಿಸಿರುವ ಅರ್ಧದಷ್ಟು ಮುಸ್ಲಿಂ ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದರೂ ಸರಿಸುಮಾರು ಒಂದು ಡಜನ್ ಮುಸ್ಲಿಮ್ ಅಭ್ಯರ್ಥಿಗಳು ಕಣದಲ್ಲಿ ಉಳಿಯುವ ಸಾಧ್ಯತೆ ನಿಚ್ಚಳವಾಗಿದೆ. ಇವರೆಲ್ಲರೂ ಸರಾಸರಿ ಒಂದೊಂದು ಸಾವಿರ ಮತ ಪಡೆದರೂ, ಎಲ್ಲರಿಂದ ಸಾವಿರಾರು ಮತಗಳು ಕಾಂಗ್ರೆಸ್ಸಿಗೆ ಖೋತಾ ಆಗುವುದು ಗ್ಯಾರಂಟಿ.

ಮುಸ್ಲಿಂ ಅಭ್ಯರ್ಥಿಗಳು ಕಾಂಗ್ರೆಸ್ ಮತ ಬುಟ್ಟಿಗೇ ಕೈ ಹಾಕಲಿದ್ದಾರೆ ಎಂಬುದನ್ನು ಅರಿತಿರುವ ಪಕ್ಷದ ನಾಯಕರು, ನಾಮಪತ್ರ ಹಿಂತೆಗೆಸುವ ಕಸರತ್ತು ಶುರುವಿಟ್ಟುಕೊಂಡಿದ್ದಾರೆ. ಕಣದಲ್ಲಿ ಉಳಿಯಬಹುದಾದ ಗಟ್ಟಿ ಅಭ್ಯರ್ಥಿಗಳನ್ನು ಕರೆದು ಮಾತಾಡುವ ಬಗ್ಗೆ ಯೋಚಿಸುತ್ತಿದ್ದಾರೆ. ಈಗಾಗಲೇ ಕಾಂಗ್ರೆಸ್ಸಿನ ಮುಸ್ಲಿಂ ಮುಖಂಡ ಸಾದಿಕ್ ಪೈಲ್ವಾನ್ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅವರಿಗೂ ಸಹ ತಮ್ಮದೇ ಬೇಡಿಕೆಗಳಿದ್ದು, ಅವುಗಳಿಗೆ ಕಾಂಗ್ರೆಸ್ ವರಿಷ್ಠರು ಸ್ಪಂದಿಸಿದರೆ ಸ್ಪರ್ಧೆಯಿಂದ ಹಿಂದೆ ಸರಿಯಬಹುದು ಎನ್ನಲಾಗಿದೆ. ಆದರೆ ಸದ್ಯಕ್ಕಂತೂ ಕಾಂಗ್ರೆಸ್ ನಾಯಕರ ಸಂಪರ್ಕಕ್ಕೆ ಸಿಗದೆ ಕಣದಲ್ಲಿ ಮುಂದುವರಿಯುವುದಾಗಿ ಸಾದಿಕ್ ಪೈಲ್ವಾನ್ ಘೋಷಿಸಿದ್ದಾರೆ.

### ಪ್ರಮುಖಾಂಶ

- 2008ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 3 ಮುಸ್ಲಿಂ ಅಭ್ಯರ್ಥಿ ಕಣದಲ್ಲಿದ್ದರು
- 2013ರಲ್ಲಿ 9, 2018ರಲ್ಲಿ 7 ಹಾಗೂ 2023ರ ಚುನಾವಣೆಯಲ್ಲಿ 8 ಮುಸ್ಲಿಂ ಅಭ್ಯರ್ಥಿ ಗಳು ಚುನಾವಣಾ ಕಣದಲ್ಲಿದ್ದರು
- ಈ ಬಾರಿ ಉಪ ಚುನಾವಣೆಯಲ್ಲಿ ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿ ಉಳಿಯುವ ಸಾಧ್ಯತೆ

## ಸಭಾಪತಿ ಪೀಠದಲ್ಲಿ ಸಾತ್ವಿಕ ವನವಾಸಿ ಶಾಂತಾರಾಮ ಸಿದ್ದಿ

ಪುಟ ೧➡ ಕಮಲದಲ್ಲಿ ಅರಳಿದ ಎಂಬ ಶಬ್ದದ ಕಾರಣಕ್ಕೆ ಪರಂಪರೆಯ ಸಂಘ ವಿರೋಧಿಗಳಿಂದ ಕಟುಶಬ್ದಗಳಿಂದ ಬೈಸಿಕೊಂಡಿದ್ದೆ. ನನ್ನ ಪ್ರೀತಿಯ ಶಾಂತಾರಾಮ ಸಿದ್ದಿ ಗಟ್ಟಿ ಧ್ವನಿಯಲ್ಲಿ ಅರಣ್ಯ ವಾಸಿಗಳ ಬದುಕಿನ ಬಗ್ಗೆ, ಸ್ವಂತ ಸೂರಿಲ್ಲದ ಅಲೆಮಾರಿಗಳ ಬಗ್ಗೆ, ನಡೆಯಲು ದಾರಿ ಇಲ್ಲದ, ಕುಡಿಯುವ ನೀರಿಲ್ಲದ ಕಡು ಬಡವರ ಬಗ್ಗೆ ಮಾತನಾಡುವುದನ್ನು ಕೇಳಿ ಖುಷಿಗೊಂಡಿದ್ದೆ.

ಇಂದು ನಾನಿಲ್ಲದ ಮೇಲ್ಮನೆಯ ಸದನದಲ್ಲಿ ಶಾಂತಾರಾಮ ಸಿದ್ದಿ ಎಂಬ ವನವಾಸಿ ಪ್ರತಿನಿಧಿ ಸಭಾಪತಿ ಸ್ಥಾನದಲ್ಲಿ ಕುಳಿತಿದ್ದು ಕಂಡು ರೋಮಾಂಚನಗೊಂಡೆ. ನನ್ನ ದೃಷ್ಟಿಯಲ್ಲಿ ಭಾರತ ದೇಶದ ರಾಷ್ಟ್ರಪತಿಯಾದ ದ್ರೌಪದಿ ಮುರ್ಮುರಿಂದ ಆರಂಭವಾಗಿ ಯಲ್ಲಾಪುರದ ಕಾಡಂಚಿನ ಶಾಂತಾರಾಮ ಸಿದ್ದಿಯವರವರೆಗೆ ಅನೇಕ ಮಂದಿ ಕಮಲದಲ್ಲಿ ಅರಳಿದ ಕಾಡ ಕುಸುಮಗಳು.

ಬಾಬಾ ಸಾಹೇಬರ ಸಂವಿಧಾನದ ಮೂಲ ಆಶಯ ಸಮಾಜದ ಕಟ್ಟ ಕಡೆಯ ಮನುಷ್ಯರು ಮುಖ್ಯ ವಾಹಿನಿಗೆ ಬರಬೇಕೆಂಬುದು. ಇದರ ಸೃಷ್ಟಿಕರ್ತ ಮೋದಿ ಎಂಬ ಸಾಮಾಜಿಕ ನ್ಯಾಯದ ಹರಿಕಾರ ಎಂದರಷ್ಟೇ ಸಾಕೆ..? ಅಥವಾ ಸಂಘದ ಮೂಲ ಆಶಯವೂ ಇದೇ ಎನ್ನಬೇಕೆ..?

## ಕಾಂಗ್ರೆಸ್ ಕಚೇರಿಗಳ ತೆರವಿಗೆ ಗಡುವು



ಪುಟ ೧➡ **ರಾಜಕೀಯ ಮಹತ್ವಕ್ಕಾಗಿ ಅಕ್ಬರ್ ರೋಡ್ ಕಟ್ಟಡ ಬಿಟ್ಟಿಲ್ಲ:** ವಾಸ್ತವದಲ್ಲಿ ಕಾಂಗ್ರೆಸ್ ಈಗಾಗಲೆ ತನ್ನ ಕಾರ್ಯ ಚಟುವಟಿಕೆಗಳನ್ನು ಹೊಸ ಪ್ರಧಾನ ಕಚೇರಿ, ಐಟಿಒಗೆ ಸಮೀಪದ ಇಂದಿರಾ ಭವನಕ್ಕೆ ಸ್ಥಳಾಂತರಿಸಿದೆಯಾದರೂ, ರಾಜಕೀಯ ಮಹತ್ವದ ಹಿನ್ನೆಲೆಯಲ್ಲಿ ಅಕ್ಬರ್ ರೋಡ್ ವಿಳಾಸವನ್ನು ತನ್ನಲ್ಲೇ ಉಳಿಸಿಕೊಂಡಿದೆ. ನೋಟಿಸ್ ಜಾರಿಯನ್ನು ಟೀಕಿಸಿರುವ ಕಾಂಗ್ರೆಸ್ ಸಂಸದ ಮತ್ತು ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ , ಇದೊಂದು ಅಕ್ರಮ ಮತ್ತು ರಾಜಕೀಯಪ್ರೇರಿತ ಕ್ರಮವಾಗಿದೆ ಮತ್ತು ಇದರ ವಿರುದ್ಧ ಪಕ್ಷವು ಲಭ್ಯ ಕಾನೂನು ಅವಕಾಶಗಳೆಲ್ಲವನ್ನೂ ಬಳಸಲಿದೆ ಎಂದು ಹೇಳಿದ್ದಾರೆ.

ಅಕ್ಬರ್ ರೋಡ್ ಆಸ್ತಿಯು ಪಕ್ಷ ಸಂಘಟನೆಯ ದಂತಕಥೆಯ ಮಹತ್ವದ ಭಾಗವಾಗಿದೆ, ಕಾಂಗ್ರೆಸ್ ಈ ಬಂಗಲೆಗೆ ಮಾರುಕಟ್ಟೆ ದರದಲ್ಲಿ ಬಾಡಿಗೆ ಬೇರೆ ಪಾವತಿಸುತ್ತಿದೆ. ಕಟ್ಟಡವನ್ನು ಕಾಂಗ್ರೆಸ್‌ನ ಹಿರಿಯ ಸಂಸದರಿಗೆ ನೀಡಲು 2024ರ ಲೋಕಸಭಾ ಚುನಾವಣೆ ನಂತರದಲ್ಲಿ ಪ್ರಯತ್ನಿಸಿದ್ದೆವು. ಆದರೆ ಪ್ರಯತ್ನ ವಿಫಲವಾಯಿತು. ಕಾಂಗ್ರೆಸ್ ಯುವ ಘಟಕದ ಬಳಕೆಗಾಗಿ ರೈಸಿನಾ ರೋಡ್ ಬಂಗಲೆಯನ್ನು ಪಕ್ಷದ ಹೆಸರಿಗೆ ನೀಡಲಾಗಿತ್ತು ಎಂದು ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಂಡಿದ್ದಾರೆ.

## ಕಾಡಾನೆ ತಡೆಗೆ ಕ್ರಮ: ಖಂಡ್ರೆ



◆ **ಬೆಂಗಳೂರು:** ಭದ್ರಾ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯ ಪ್ರದೇಶವನ್ನು ನಿಗದಿ ಪಡಿಸುವ ಕುರಿತಂತೆ ಚಿಕ್ಕಮಗಳೂರು ಜಿಲ್ಲೆಯ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಲಾಗಿದ್ದು, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ವಿಕಾಸಸೌಧದಲ್ಲಿಂದು ಚಿಕ್ಕಮಗಳೂರು ಜಿಲ್ಲೆ ಖಾಂಡ್ಯ ಹೋಬಳಿಯ ಗ್ರಾಮಸ್ಥರ ನಿಯೋಗವು ಕಾಡಾನೆ ಸೆರೆ, ಕಾಡುಕೋಣ ಮತ್ತು ಕಾಡುಹಂದಿಗಳ ಉಪಟಳ ನಿಯಂತ್ರಿಸುವಂತೆ ಕೋರಿ ಸಲ್ಲಿಸಿದ ಮನವಿ ಸ್ವೀಕರಿಸಿ ಮಾತನಾಡಿದ ಅವರು, 2011ರಲ್ಲಿ ಹಳ್ಳಿಗಳನ್ನೂ ಬಫರ್ ವಲಯದಲ್ಲಿ ಸೇರಿಸಲಾಗಿದೆ. ಅದೇ ರೀತಿ ಹಿಂದಿನ ಬಿಜೆಪಿ ಸರ್ಕಾರ ಡೀಮ್ಡ್ ಅರಣ್ಯ ವಿಚಾರದಲ್ಲೂ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸದೆ, ಸಲ್ಲಿಸಿರುವ ಪ್ರಮಾಣ ಪತ್ರದಿಂದ ಗೊಂದಲವಾಗಿದ್ದು, ಈಗ ಆ ಸಮಸ್ಯೆಯನ್ನೂ ಪರಿಹರಿಸಲು ತಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು.

## ಗೋಪಾಲಕೃಷ್ಣ ನಾಯಕ ಹತ್ಯೆಗೆ ಯತ್ನ

◆ **ಅಂಕೋಲಾ:** ಕೆ.ಪಿ.ಸಿ.ಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣನಾಯಕ ಅಡ್ಲೂರು ಅವರನ್ನು ದುಷ್ಕರ್ಮಿಗಳು ಚಾಕುವಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಘಟನೆ ಬುಧವಾರ ಬೆಳಿಗ್ಗೆ 10.30 ರ ಸುಮಾರಿಗೆ ಪಟ್ಟಣದ ಕಾರವಾರ ರಸ್ತೆ ಕಣಕಣೇಶ್ವರ ದೇವಾಲಯದ ಪಕ್ಕದಲ್ಲಿ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿ ಸಕ್ರೀಯರಾಗಿರುವ ಇವರು ಗೃಹ ಸಚಿವ ಜಿ.ಪರಮೇಶ್ವರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರಾಗಿರುವ ಹಿನ್ನೆಲೆಯಲ್ಲಿ ಈ ಕೃತ್ಯ ತೀವ್ರ ಸಂಚಲನಕ್ಕೆ ಕಾರಣ ವಾಗಿದೆ. ಹೇರ್ ಕಟಿಂಗ್ ಸೆಲೂನ್ ಒಂದರಿಂದ ಗೋಪಾ ಲಕೃಷ್ಣನಾಯಕ ಹೊರಗೆ ಬರುವುದನ್ನೇ ಕಾದು ಕುಳಿತಿದ್ದ ದುಷ್ಕರ್ಮಿಗಳ ತಂಡ ಅವರನ್ನು ನೆಲಕ್ಕೆ ಬೀಳಿಸಿ ತಲೆ ಮತ್ತು ಕೈ ಭುಜಕ್ಕೆ ಹರಿತವಾದ ಚಾಕುವಿನಿಂದ ಇರಿದಿದ್ದಾರೆ. ಅನಿರೀಕ್ಷಿತವಾಗಿ ಎದುರಾದ ಕೃತ್ಯದಿಂದ ಆಘಾತಕ್ಕೆ ಒಳಗಾದ ಗೋಪಾಲಕೃಷ್ಣ ಅವರು ಎದ್ದು ಓಡಿ ಪಕ್ಕದ ಹಣಕಾಸಿನ ಸಂಸ್ಥೆಯೊಂದಕ್ಕೆ ನುಗ್ಗಿ ಬಾಗಿಲು ಹಾಕಿಕೊಂಡ ಕಾರಣ ಜೀವಾಪಾಯದಿಂದ ಬಚಾವ್ ಆಗಿದ್ದಾರೆ.

## ಏನಾಸಂ ಅಂಗೀಕರಿಸಿದ ಗುಜರಾತ್

ಪುಟ ೧➡ ಗುಜರಾತ್ ಏಕರೂಪ ನಾಗರಿಕ ಸಂಹಿತೆ 2026 ಹೆಸರಿನ ಪ್ರಸ್ತಾವಿತ ಕಾನೂನು ರಾಜ್ಯದ ಎಲ್ಲಾ ಮತಧರ್ಮಗಳ ಜನರಿಗೆ ಮತ್ತು ಗುಜರಾತ್‌ನ ಭೌಗೋಳಿಕ ಮಿತಿಯಿಂದ ಹೊರಗಿರುವ ಗುಜರಾತಿಗಳಿಗೂ ಸಮಾನವಾಗಿ ಅನ್ವಯವಾಗಲಿದೆ.

**ಏಕರೂಪ ನ್ಯಾಯದಾನದ ವೈದಿಕ ಚಿಂತನೆ:** ಸಿಎಂ ಸಾಂವಿಧಾನಿಕ ಸಿದ್ಧಾಂತಗಳಿಗೆ ಬದ್ಧವಾಗಿ ಸಂಘಟಿತ ಕಾನೂನು ಚೌಕಟ್ಟೊಂದನ್ನು ಹೊಂದುವ ನಿಟ್ಟಿನಲ್ಲಿ ಇದೊಂದು ಮಹತ್ತ್ವದ ಹೆಜ್ಜೆಯಾಗಿದೆ ಎಂದು ಸಿಎಂ ಭೂಪೇಂದ್ರ ಪಟೇಲ್ ಮಸೂದೆ ಮಂಡನೆ ಸಂದರ್ಭ ಬಣ್ಣಿಸಿದ್ದಾರೆ. ಸಂಘಟಿತ ಮತ್ತು ಅವಿಭಜಿತ ರಾಷ್ಟ್ರಕ್ಕೆ ಸಮಾನ ಕಾನೂನು ವ್ಯವಸ್ಥೆ ತೀರಾ ಅಗತ್ಯ ಮತ್ತು ಇದು ವೈದಿಕ ಚಿಂತನೆ ಕೂಡ. ವಿವಿಧ ಮಾರ್ಗಗಳ ಮುಖೇನ ವ್ಯಕ್ತಪಡಿಸಿದರೂ ಸತ್ಯವೆಂಬುದು ಒಂದೇ ಆಗಿದೆ. ಯಾವಾಗ ಸತ್ಯವೆಂಬುದು ಒಂದೇ ಆಗಿರುವುದೋ ಆಗ ಧರ್ಮಗಳು ಹಲವಾರಿದ್ದರೂ ನ್ಯಾಯದಾನ ಕೂಡ ಸಮಾನವಾಗಿರಬೇಕೆಂದು ನಮ್ಮ ಪ್ರಾಚೀನ ವಚನಗಳು ಸಾರಿವೆ.

ಸಂವಿಧಾನದ 14ನೇ ವಿಧಿಯು ಕಾನೂನಿಗೆ ದೇಶದ ಎಲ್ಲಾ ಪ್ರಜೆಗಳು ಸಮಾನರು ಎಂದು ಸಾರಿದೆ. ಸಂವಿಧಾನದ 44ನೇ ವಿಧಿ ಸಮಾನ ನಾಗರಿಕ ಸಂಹಿತೆಯನ್ನು ಹೊಂದುವಂತೆ ರಾಜ್ಯಗಳಿಗೆ ನಿರ್ದೇಶನವಿತ್ತಿದೆ. ಇದೀಗ ಅನುಷ್ಠಾನಗೊಂಡಿರುವ ಯುಸಿಸಿ ಜಾತಿ ಅಥವಾ ಮತ ಧರ್ಮಗಳ ಆಧಾರದಲ್ಲಿ ಜನರನ್ನೊಡೆವ ಅಥವಾ ತಾರಮತ್ಯಕ್ಕೆ ಎಡೆ ಮಾಡುವ ಯಾವುದೇ ನೀತಿಗಳನ್ನು ತಿರಸ್ಕರಿಸಲಿದೆ. ಪ್ರಸ್ತುತ ಮಸೂದೆ ದೇಶದ ಎಲ್ಲಾ ಜನರಿಗೆ ಸಮಾನವಾಗಿ ಅನ್ವಯವಾಗಲಿದೆ ಮತ್ತು ಸಮಾನ ನ್ಯಾಯದ ಬಗ್ಗೆ ಗುಜರಾತಿನ ಜನರು ಹೊಂದಿದ್ದ ನಿರೀಕ್ಷೆಗಳು, ಆಶೋತ್ತರಗಳು ಮತ್ತು ಆಕಾಂಕ್ಷೆಗಳು ಪ್ರತಿಫಲಿಸಿವೆ ಎಂದು ಸಿಎಂ ಪಟೇಲ್ ಹೇಳಿದರು.

### ಏನಾಸಂ ಜಾರಿಗೊಳಿಸಿದ 2ನೇ ರಾಜ್ಯ ಗುಜರಾತ್

ಪ್ರಸ್ತುತ ಮಸೂದೆ ಅಂಗೀಕರಿಸಿದ ದ್ವಿತೀಯ ರಾಜ್ಯವೆಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಈ ಮುನ್ನ ಉತ್ತರಾಖಂಡದಲ್ಲಿ ಮೊತ್ತ ಮೊದಲು ಯುಸಿಸಿ ಜಾರಿಯಾಗಿದೆ. ಉತ್ತರಾಖಂಡದಲ್ಲಿ 2024ರ ಫೆಬ್ರವರಿಯಲ್ಲಿ ಯುಸಿಸಿ ಮಸೂದೆ ಅಂಗೀಕರಿಸಲಾಗಿತ್ತು. ಸಮಾನತೆಯ ಖಾತರಿ ನಿಟ್ಟಿನಲ್ಲಿ ಇದೊಂದು ಮೈಲಿಗಲ್ಲಿನ ಮಸೂದೆಯೆಂದು ಬಿಜೆಪಿ ಪ್ರಶಂಸಿಸಿದೆ.

### ಬಹುಪತ್ನಿತ್ವಕ್ಕಿಲ್ಲ ಅವಕಾಶ

ಲಿವಿನ್ ಸಂಬಂಧಗಳ ನೋಂದಣಿಗೆ ಮಸೂದೆ ಅವಕಾಶ ನೀಡುತ್ತೆ. ಔಪಚಾರಿಕ ಘೋಷಣೆ ಮೂಲಕ ಈ ಸಂಬಂಧವನ್ನು ಮುರಿದುಕೊಳ್ಳಲು ಮಸೂದೆಯಲ್ಲಿ ಅವಕಾಶವಿದೆ. ಇದೇ ವೇಳೆ ಬಹುಪತ್ನಿತ್ವವನ್ನು ಮಸೂದೆ ನಿಷೇಧಿಸಿದೆ. ಅಂದರೆ, ಮೊದಲ ಪತ್ನಿ ಬದುಕಿರುವಾಗ ಗೃಹಸ್ಥ ದ್ವಿತೀಯ ವಿವಾಹವಾಗುವಂತಿಲ್ಲ. ಯುಸಿಸಿ ಪ್ರಕಾರ ವಿವಾಹವಾಗುವ ಯುವಕ-ಯುವತಿಯರು, ವಿವಾಹ ಸಂದರ್ಭ ಜೀವಂತ ಪತಿ ಅಥವಾ ಪತ್ನಿಯನ್ನು ಹೊಂದಿಲ್ಲದಿದ್ದರೆ ಮಾತ್ರ ವಿವಾಹ ವಿಧಿ ಸಿಂಧುವೆಂದು ಪರಿಗಣಿತವಾಗುತ್ತೆ. ಮಸೂದೆ ವಿರೋಧಿಸಿ ಕಾಂಗ್ರೆಸ್‌ನ ಹಿರಿಯ ಶಾಸಕ ಶೈಲೇಶ್ ಪರ್ಮಾರ್, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನೀವು ಈ ಮಸೂದೆಯನ್ನು ತರಾತುರಿಯಿಂದ ಜಾರಿಗೊಳಿಸಿದ್ದೀರಿ. ಮಸೂದೆಯನ್ನು ಆಯ್ಕೆ ಸಮಿತಿ ಪರಾಮರ್ಶೆಗೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಸಂವಿಧಾನ ಕೊಡ ಮಾಡಿರುವ ಮೂಲ ಹಕ್ಕುಗಳನ್ನು ಮಸೂದೆ ಉಲ್ಲಂಘಿಸುತ್ತದೆ ಎಂಬುದು ಕಾಂಗ್ರೆಸ್‌ನ ಇನ್ನೋರ್ವ ಹಿರಿಯ ಶಾಸಕ ಅಮಿತ್ ಛಾವ್ಡಾ ಆರೋಪವಾಗಿತ್ತು.

## ಪರಿಪೂರ್ಣ ಬಜೆಟ್

ಪುಟ ೧➡ ಇದನ್ನು ಕೇಂದ್ರ ಸರ್ಕಾರ ಅನುಷ್ಠಾನ ಮಾಡಿಲ್ಲ. ಮುಂದಿನ ವರ್ಷಕ್ಕೆ ನಮ್ಮ ವಿತ್ತೀಯ ಕೊರತೆಯು ಶೇ.2.95ರಷ್ಟು ಇರಲಿದೆ ಎಂಬುದು ನಮ್ಮ ಅಂದಾಜಾಗಿದೆ. ಆದರೆ, 2026-27ನೇ ಸಾಲಿಗೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟು ಇರಲಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ದಕ್ಷಿಣ ಭಾರತದ ನಮ್ಮ ಸುತ್ತಮುತ್ತಲ ಪ್ರಗತಿಶೀಲ ರಾಜ್ಯಗಳಿಗೆ ಹೋಲಿಕೆ ಮಾಡಿದರೂ ನಮ್ಮ ವಿತ್ತೀಯ ಕೊರತೆಯ ಪ್ರಮಾಣ ನಿಗದಿತ ಮಟ್ಟದ ಒಳಗೇ ಇದೆ ಎಂದು ಸಿದ್ದರಾಮಯ್ಯ ತಿಳಿಸಿದರು.

### ಆದಾಯ ಕೊರತೆಗೆ ಕೇಂದ್ರ ಕಾರಣ

ವಾಸ್ತವವಾಗಿ ಆದಾಯ ಕೊರತೆ ಇರಬಾರದು. ಆದರೆ, ಕೇಂದ್ರ ಸರ್ಕಾರ ಒಳಗೊಂಡಂತೆ ಮಹಾರಾಷ್ಟ್ರ ಹಾಗೂ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಆದಾಯ ಕೊರತೆಯಿದೆ. ಆದರಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳದ್ದೇ ಕಡಿಮೆ ಇದೆ. ಇದು ಕರ್ನಾಟಕ ರಾಜ್ಯದ್ದೊಂದೇ ಸಮಸ್ಯೆಯಲ್ಲ. ಕೇಂದ್ರ ಸರ್ಕಾರದ ಅಪಕ್ವ ಆರ್ಥಿಕ ನೀತಿಗಳಿಂದ ಉಂಟಾಗುತ್ತಿರುವ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದವರು ಕಳೆದ ವರ್ಷ ವರ್ಷದ ಮಧ್ಯ ಭಾಗದಲ್ಲಿ ಇದ್ದಕ್ಕಿದ್ದಂತೆ ಜಿಎಸ್‌ಟಿ ದರಗಳನ್ನು ತರ್ಕಬದ್ಧಗೊಳಿಸುತ್ತೇವೆಂದು ಹೇಳಿ ಪರಿಷ್ಕರಣೆ ಮಾಡಿದ್ದರಿಂದ ರಾಜ್ಯದ ಆರ್ಥಿಕತೆಯ ಮೇಲೆ ಹೊಡೆತ ಬಿತ್ತು. 2025-26ನೇ ಸಾಲಿನಲ್ಲಿ ಜಿಎಸ್‌ಟಿ ತರ್ಕಬದ್ಧಗೊಳಿಸುವಿಕೆಗೂ ಮುನ್ನ ರಾಜ್ಯದ ಸರಾಸರಿ ಮಾಸಿಕ ಜಿಎಸ್‌ಟಿ ರಾಜಸ್ವ ಸಂಗ್ರಹಣೆಯು ಶೇ.10ರಷ್ಟು ಬೆಳವಣಿಗೆ ದಾಖಲಿಸಿತ್ತು. ಆದರೆ, ದರ ತರ್ಕಬದ್ಧಗೊಳಿಸುವಿಕೆಯ ನಂತರ, ಜಿಎಸ್‌ಟಿ ಸಂಗ್ರಹಣೆಯ ಮಾಸಿಕ ಬೆಳವಣಿಗೆಯು ಶೇ.4ಕ್ಕೆ ಕಡಿಮೆಯಾಗಿದೆ.

## ಶಿಕ್ಷಕರು ಕಲಿಸಲು ಬಳಕೆ: ಸಚಿವ

**ವಿಧಾನ ಪರಿಷತ್ :** ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸದಂತೆ ಶೀಘ್ರವೇ ಸೂಕ್ತ ಕಾನೂನು ರೂಪಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ವಿಧೇಯಕ-2026 ಅನ್ನು ಕುರಿತ ಚರ್ಚೆಯಲ್ಲಿ, ಶಿಕ್ಷಕರನ್ನು ಅನ್ಯ ಕಾರ್ಯಗಳಿಗೆ ಬಳಕೆ ಮಾಡುತ್ತಿರುವುದರಿಂದ ಸರ್ಕಾರಿ ಶಾಲಾ ಶಿಕ್ಷಣ ಕುಸಿಯುತ್ತಿದೆ ಎಂದು ಸದಸ್ಯರು



ಪಕ್ಷಾತೀತವಾಗಿ ಶಿಕ್ಷಕರ ಪರ ಧ್ವನಿ ಎತ್ತಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆ ಸೇರಿ ಎಲ್ಲ ಸಮೀಕ್ಷೆಗಳಿಗೂ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಶಿಕ್ಷಣದ ಮೇಲೂ ಪರಿಣಾಮ ಬೀರುತ್ತಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಆಧರಿಸಿ, ಆದಷ್ಟು ಬೇಗ ವಿಧೇಯಕ ಮಂಡಿಸುತ್ತೇನೆ. ತಾವೆಲ್ಲರೂ ಬೆಂಬಲಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು. ಇದಕ್ಕೂ ಮುನ್ನ ಮಾತನಾಡಿದ ಭೋಜೇಗೌಡ, ಪುಟ್ಟಣ್ಣ, ಎಸ್.ವಿ.ಸಂಕನೂರ್ ಹಾಗೂ ಶಶೀಲ್ ನಮೋಶಿ ಮತ್ತಿತರರು, ಶಿಕ್ಷಕರನ್ನು ನಾನಾ ರೀತಿಯ ಸಮೀಕ್ಷೆಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಬೀದಿ ನಾಯಿಗಳನ್ನೂ ಗಣತಿ ಮಾಡಬೇಕೆಂಬ ಆದೇಶ ಬಂದಿದೆ. ದೇಶದ ಭವಿಷ್ಯರೂಪಿಸಬೇಕಾದ ಶಿಕ್ಷಕರ ಪರಿಸ್ಥಿತಿಗೆ ಎಲ್ಲಿಗೆ ಬಂದಿದೆ. ಕೇಂದ್ರ ಸರ್ಕಾರ ಜನಗಣತಿಗಾಗಿ ತರಬೇತಿ ನಡೆಯುತ್ತಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕರ್ತವ್ಯದಲ್ಲಿದ್ದೇನೆ ಎಂದರೂ ಶಿಕ್ಷಕರು, ಮುಖ್ಯಶಿಕ್ಷಕರನ್ನು ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಬಿಡುತ್ತಿಲ್ಲ. ಗಣತಿ ತರಬೇತಿಗೆ ಬಾರದವರಿಗೆ ನೋಟಿಸ್ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದಕ್ಕೆ ಧ್ವನಿಯಾದ ಸಭಾಪತಿ ಬಸವರಾಜ್ ಹೊರಟ್ಟಿ, ಶಿಕ್ಷಕರನ್ನು ಬೇರೆ ಕಾರ್ಯಗಳಿಗೆ ನಿಯೋಜನೆ ಮಾಡಬೇಡಿ. ಈ ಬಗ್ಗೆ ಕಾನೂನು ತನ್ನಿ ಎಂದು ಸೂಚಿಸಿದರು.

ಗ್ರೂಪ್ ಫೋಟೋ



16ನೇ ವಿಧಾನಸಭೆಯ ಸದಸ್ಯರ ಜತೆ ವಿಧಾನಸೌಧ ಮುಂಭಾಗದಲ್ಲಿ ಏರ್ಪಡಿಸಲಾಗಿದ್ದ ಗ್ರೂಪ್ ಫೋಟೋ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ. ಖಾದರ್, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಲಕ್ಷ್ಮಿ ಹೆಬ್ಬಾಳ್ಕರ್ ಸೇರಿದಂತೆ ಹಲವು ಸಚಿವರು, ಶಾಸಕರು ಇದ್ದರು.

## ಪಕ್ಷದ ತೀರ್ಮಾನಕ್ಕೆ ಬದ್ಧ: ಸಿಎಂ

**ವಿಧಾನಸಭೆ:** ನಮ್ಮ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುವವರೆಗೆ ನಾನೇ ಮುಖ್ಯಮಂತ್ರಿ ಆಗುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಆಯವ್ಯಯ ಅಂದಾಜುಗಳ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಅವರು ಉತ್ತರ ನೀಡುತ್ತಿದ್ದ ವೇಳೆ, ಪ್ರತಿಪಕ್ಷ ನಾಯಕ ಆರ್.ಅಶೋಕ, ಸಭಾಧ್ಯಕ್ಷರು ಶಾಸಕರ ಗ್ರೂಪ್ ಫೋಟೋ ತೆಗೆಸಿದ್ದಾರೆ. ಅವರ ಬಗ್ಗೆಯೇ ಅನುಮಾನ ಮೂಡಿದೆ. ಐದು ವರ್ಷಕ್ಕೊಮ್ಮೆ ಫೋಟೋ ತೆಗೆಸುವುದು ಸಂಪ್ರದಾಯ. ಹೊಸ ಕಿಟಕಿ, ಬಾಗಿಲುಗಳನ್ನು ಮಾಡಿಸಿದ್ದಾರೆ. ಅಧ್ಯಕ್ಷರು ಯಾವಾಗ ಹೋಗುತ್ತಾರೋ ಹೇಳಿ ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದರು.



ಆಗ ಸಿಎಂ ಮಾತನಾಡಿ, 2028ರ ಚುನಾವಣೆಯಲ್ಲೂ ಗೆಲ್ಲುತ್ತಾರೆ, ಅವರು ಸ್ಪರ್ಧಿಸುವ ಎಲ್ಲಾ ಚುನಾವಣೆಯಲ್ಲಿ ಗೆಲ್ಲುತ್ತಾರೆ. ನೀವು ಏನೇ ಕಿತಾಪತಿ ಮಾಡಿದರೂ ಜಾಕ್ ಹಾಕಿ ಎತ್ತಿದರೂ ಅವರು ಮನ್ನಣೆ ಕೊಡುವುದಿಲ್ಲ ಎಂದರು. ಆಗ ಅಶೋಕ, ಅವರ ಕನಸುಗಳು ಎಂದು ಮರು ಪ್ರಶ್ನಿಸಿದರು. ಮಾತು ಮುಂದುವರೆಸಿದ ಸಿದ್ದರಾಮಯ್ಯ, ಅವರು ಸಚಿವರಾಗುವುದಾದರೆ ಸಂತೋಷವೇ. ಕನಸು ಎಲ್ಲರಿಗೂ ಇದೆ. ಮುಖ್ಯಮಂತ್ರಿ ಆಗುವ ಕನಸು ನಿಮಗೆ ಇಲ್ಲವೇ? ಎಂದು ಮರು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಲು ಅಶೋಕ ತಡವರಿಸಿದಾಗ, ಸಿದ್ದರಾಮಯ್ಯ ಮಾತು ಮುಂದುವರಿಸಿ, ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಅಶೋಕ ಮುಖ್ಯಮಂತ್ರಿಯಾದರೆ ಖುಷಿ ಪಡುವೆ. ಆದರೆ, ವಿಜಯೇಂದ್ರ ಅವರೂ ಕಾಯುತ್ತಾ ಕುಳಿತಿದ್ದಾರೆ. ಅವರು ಯಾರಿಗೂ ಬಿಡುವುದಿಲ್ಲ ಎಂದು ಛೇಡಿಸಿದರು.

ಬಿಜೆಪಿ ಶಾಸಕ ಸುನೀಲ್ ಕುಮಾರ್ ಮಾತನಾಡಿ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆದರೂ ಸಂತೋಷ ಎಂದು ಹೇಳಲಿಲ್ಲ. ಹಾಗೆ ಹೇಳುವಂತೆ ಸವಾಲು ಹಾಕಿದರು. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು, ರಾಜ್ಯದ ಎಲ್ಲಾ 224 ಶಾಸಕರು ಮುಖ್ಯಮಂತ್ರಿಯಾಗಲು ಅರ್ಹರಿದ್ದಾರೆ ಎಂದು ಹೇಳುವ ಮೂಲಕ ಚರ್ಚೆಗೆ ತೆರೆ ಎಳೆದರು.

## ಕಿರುಸುದ್ದಿ

### ವಿಧಾನಸೌಧ ಆವರಣದಲ್ಲಿ 6 ಲಕ್ಷ ರೂ. ನಗದು ಪತ್ತೆ

**ಬೆಂಗಳೂರು:** ವಿಧಾನಸೌಧದಲ್ಲಿ ಲಕ್ಷಾಂತರ ರೂಪಾಯಿ ಹಣ ಮತ್ತು ಚಿನ್ನಾಭರಣ ಕಳ್ಳತನವಾದ ಘಟನೆ ಮಾಸುವ ಮುನ್ನವೇ, ಮತ್ತೊಂದು ದೊಡ್ಡ ಮೊತ್ತದ ನಗದು ಪತ್ತೆಯಾಗಿರುವುದು ಸಂಚಲನ ಮೂಡಿಸಿದೆ. ಬುಧವಾರ ಕೆಂಗಲ್ ಗೇಟ್ ಮೂಲಕ ವಿಧಾನಸೌಧ ಪ್ರವೇಶಿಸಲು ಯತ್ನಿಸುತ್ತಿದ್ದ ವ್ಯಕ್ತಿಯೊಬ್ಬನ ಬ್ಯಾಗ್‌ನಲ್ಲಿ ಬರೋಬ್ಬರಿ 6 ಲಕ್ಷ ರೂ. ನಗದು ಪತ್ತೆಯಾಗಿದ್ದು, ಪೊಲೀಸರು ತಕ್ಷಣ ಆತನನ್ನು ವಶಕ್ಕೆ ಪಡೆದಿದ್ದಾರೆ. ಕಾಂಗ್ರೆಸ್ ಶಾಸಕ ಯಶವಂತರಾಯಗೌಡ ಪಾಟೀಲ್ ಅವರನ್ನು ಭೇಟಿಯಾಗಲು ಬಂದಿದ್ದ ಯುವಕನ ಬ್ಯಾಗ್‌ಅನ್ನು ಭದ್ರತಾ ತಪಾಸಣೆಗೊಳಪಡಿಸಿದಾಗ ದೊಡ್ಡ ಮೊತ್ತದ ಹಣ ಬೆಳಕಿಗೆ ಬಂದಿದೆ. ನಿಯಮದ ಪ್ರಕಾರ ಇಷ್ಟು ಹಣದೊಂದಿಗೆ ಒಳಗೆ ಹೋಗುವಂತಿಲ್ಲ ಎಂದು ಪೊಲೀಸರು ಸೂಚಿಸಿದರೂ, ಶಾಸಕರನ್ನು ಭೇಟಿಯಾಗಲೇಬೇಕೆಂದು ಯುವಕ ಹಠ ಹಿಡಿದಿದ್ದ ಎನ್ನಲಾಗಿದೆ. ಪರಿಸ್ಥಿತಿಯ ಗಂಭೀರತೆ ಅರಿತ ಪೊಲೀಸರು ಆತನನ್ನು ಎಸಿಪಿ ಕೃಷ್ಣಯ್ಯ ಅವರ ಕಚೇರಿಗೆ ಕರೆದೊಯ್ದು ವಿಚಾರಣೆ ನಡೆಸಿದ್ದಾರೆ. ವಿಚಾರಣೆಯ ವೇಳೆ ಯುವಕ ತಾನು ಇಂಡಿ ಕ್ಷೇತ್ರದವನಾಗಿದ್ದು, ಶಾಸಕರಿಂದ ಲೆಟರ್ ಹೆಡ್ ಪಡೆಯಲು ಬಂದಿರುವುದಾಗಿ ತಿಳಿಸಿದ್ದಾನೆ. ಹಣದ ಬಗ್ಗೆ ಪ್ರಶ್ನಿಸಿದಾಗ, ತನ್ನ ದೊಡ್ಡಪ್ಪ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದು, ಅವರ ಚಿಕಿತ್ಸೆಗಾಗಿ ಈ ಹಣವನ್ನು ತಂದಿರುವುದಾಗಿ ಹೇಳಿಕೆ ನೀಡಿದ್ದಾನೆ.

### ಹೆಚ್ಚುವರಿ ತೆರಿಗೆ ವಿಧಿಸಿಲ್ಲ: ಸಚಿವ ರಾಮಲಿಂಗಾರೆಡ್ಡಿ

**ವಿಧಾನ ಸಭೆ:** ಜಿಬಿಎ ವ್ಯಾಪ್ತಿಯ ಆಸ್ತಿ ತೆರಿಗೆ ಪರಿಷ್ಕರಿಸಿ ವ್ಯತ್ಯಾಸದ ಮೊತ್ತಕ್ಕೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದು, ಯಾವುದೇ ಹೆಚ್ಚುವರಿ ತೆರಿಗೆ ವಿಧಿಸಿಲ್ಲ ಎಂದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಶಾಸಕ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಟ್ಟಾರೆ 1277.6 ಕೋಟಿ ರೂ. ಸುಸ್ತಿದಾರರ ಬೇ ಬಾಕಿ ಮತ್ತು ಆಸ್ತಿ ತೆರಿಗೆ ಪರಿಷ್ಕರಣೆ ಬೇ ಬಾಕಿ ಆಸ್ತಿ ತೆರಿಗೆಯನ್ನು ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದರು. ನಿಗದಿಪಡಿಸಲಾಗಿರುವ ತೆರಿಗೆ ಮೇಲೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದೇ ಇರುವ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ (ಕೆಟಿಪಿಸಿ) ಪ್ರಕರಣ 17ರ ಅಡಿಯಲ್ಲಿ ಏಕ ನಿವೇಶನಕ್ಕಾಗಿ ಅನುಮೋದನೆ ನೀಡಿ ಎ ಖಾತೆ ನೀಡಲಾಗುತ್ತಿದೆ ಎಂದು ವಿವರಿಸಿದರು.

### ಆದಾಯ ಮಿತಿ ಹೆಚ್ಚಿಸಲು ಕ್ರಮ: ಮುನಿಯಪ್ಪ

**ವಿಧಾನ ಸಭೆ:** ಆಡಳಿತ ಸುಧಾರಣೆ ಆಯೋಗವು ನೀಡಲಿರುವ ವರದಿಯನ್ನು ಪರಿಗಣಿಸಿ ಪಡಿತರ ಚೀಟಿಯ ಆದಾಯ ಮಿತಿ ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಅರ್ಧ ಗಂಟೆ ಕಾಲಾವಧಿಯ ಚರ್ಚೆಯಲ್ಲಿ ಶಾಸಕ ಅಶ್ವತ್ಥನಾರಾಯಣ ಪ್ರಶ್ನೆಗೆ ಉತ್ತರಿಸಿದ ಸಚಿವರು, 1 ಲಕ್ಷ 20 ಸಾವಿರಕ್ಕೆ ಇರುವ ಬಡತನ ರೇಖೆಯ ಆದಾಯ ಮೀತಿಯನ್ನು 3 ಲಕ್ಷಕ್ಕೆ ಏರಿಸಲು ಆಡಳಿತ ಸುಧಾರಣೆ ಆಯೋಗವು ತಿಳಿಸಿದ್ದು, ಇದನ್ನು ಪರಿಗಣಿಸಿ ಸರ್ಕಾರದ ಮುಂದೆ ತರಲಾಗುವುದು ಎಂದು ತಿಳಿಸಿದರು.

## ಭೂ-ದಾಖಲೆಗಳ ನಿರ್ವಹಣೆಗೆ ಕ್ರಮ: ಸಚಿವ ಮಧು ಬಂಗಾರಪ್ಪ
# ಭೂಮಿ ವಿಧೇಯಕ ಮಂಡನೆ

**ವಿಧಾನ ಪರಿಷತ್:** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿದ್ದ ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ಬುಧವಾರ ಮತ್ತೊಮ್ಮೆ ಮೇಲ್ಮನೆಯಲ್ಲಿ ಅಂಗೀಕರಿಸಲಾಗಿದೆ.

ಬುಧವಾರ ಮೇಲ್ಮನೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಈ ವಿಧೇಯಕವನ್ನು ಪರ್ಯಾಲೋಚಿಸಿ, ಕಂದಾಯ ಇಲಾಖೆಯ ನಂತರ ಶಿಕ್ಷಣ ಇಲಾಖೆಯಲ್ಲಿಯೇ ಅತೀ ಹೆಚ್ಚು ಜಮೀನು ಹೊಂದಿದ್ದು, ಎಲ್ಲ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ವತ್ತುಗಳ ನಿಖರ ಹಾಗು ಭೂ-ದಾಖಲೆಗಳ ನಿರ್ವಹಣೆ, ಒತ್ತುವರಿ ತೆರವು ಮೊದಲಾದ ಕಾರ್ಯನಿರ್ವಹಣೆಗೆ ನುರಿತ ಕಾನೂನಾತ್ಮಕ ತಂಡ ಸಹ ರಚನೆಗೆ ಈ ನೂತನ ತಿದ್ದುಪಡಿಯಲ್ಲಿ ಅವಕಾಶದೆ ಎಂದರು.

ಯಾವುದೇ ಖಾಸಗಿ ಜಾಗದಲ್ಲಿ ಕನಿಷ್ಠ 12 ವರ್ಷಗಳಿಂದ ಸತತವಾಗಿ ಸರ್ಕಾರಿ ಶಾಲೆ ಅಥವಾ ಕಾಲೇಜು ನಡೆಯುತ್ತಿದ್ದರೆ, ಆ ಭೂಮಿ ಇನ್ನು ಮುಂದೆ ಅಧಿಕೃತವಾಗಿ ಸರ್ಕಾರದ ಸ್ವತ್ತಾಗಲಿದೆ. ಈ ಭೂಮಿಯ ಮೇಲೆ ಈ ಹಿಂದೆ ಇದ್ದ ಸಾಲ, ಉತ್ತರಾಧಿಕಾರ ಸೇರಿದಂತೆ ವಿವಾದಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸಿ ಸರ್ಕಾರದ ಹೆಸರಿಗೆ ನೋಂದಾಯಿಸಲಾಗುತ್ತದೆ ಎಂದು ತಿಳಿಸಿದರು.

ಯಾವುದೋ ಕಾಲಘಟ್ಟದಲ್ಲಿ ವಕ್ಫ್‌ಗೂ ಸಹ ಶಾಲಾ ಜಮೀನುಗಳು ಹೋಗಿರಬಹುದು, ಈ ನಿಟ್ಟಿನಲ್ಲಿ ವಕ್ಫ್ ಮಂಡಳಿ ಹಾಗೂ ಇಲಾಖಾ ಸಚಿವರಿಗೂ ಸಹ ಈ ವಿಷಯವಾಗಿ ಚರ್ಚೆ



ನಡೆಸಲಾಗುವುದು ಎಂಬ ವಿಷಯವನ್ನು ಸಹ ಪ್ರಕಟಿಸಿದರು. ದಾನ ನೀಡಿದ ಕುಟುಂಬ ಸದಸ್ಯರನ್ನು ಆಯಾ ಶಾಲೆಯ ಎಸ್‌ಡಿಎಂಸಿ ಮಂಡಳಿಯಲ್ಲಿ ಕಡ್ಡಾಯವಾಗಿ ಸದಸ್ಯರನ್ನಾಗಿ ಮಾಡಿ ಎಂಬ ಸದಸ್ಯ ಹಣಮಂತ ನಿರಾಣಿ ಸಲಹೆ ಸೇರಿದಂತೆ ಅನೇಕ ಸಲಹೆಗಳನ್ನು ಪರಿಗಣಿಸಿ ನಿಯಮಾವಳಿ ರೂಪಿಸುವ ಸಂದರ್ಭದಲ್ಲಿ ಅಂತಿಮಗೊಳಿಸಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು. ಸುದೀರ್ಘ ಚರ್ಚೆಯ ನಂತರ ಮೇಲ್ಮನೆಯಲ್ಲಿ ಈ ವಿಧೇಯಕಕ್ಕೆ ಅಂಗೀಕಾರ ದೊರಕಿತು.

### ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಕಡಿವಾಣ

ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಶಿಕ್ಷಣ ಇಲಾಖೆ ಸಹಿಸುವುದಿಲ್ಲ, ಇನ್ನು ಮುಂದೆ ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ವಿಧೇಯಕದ ಮೇಲೆ ನಡೆದ ಚರ್ಚೆಯ ವೇಳೆ ಬಿಜೆಪಿ ಸದಸ್ಯ ಪಿ.ಎಚ್. ಪೂಜಾರ್ ಅವರು, ನಮ್ಮ ಕುಟುಂಬ ದಾನವಾಗಿ ನೀಡಿದ ಶಾಲೆಯ ಕಟ್ಟಡ ಈಗ ಶಿಥಿಲಾವಸ್ಥೆಗೆ ತಲುಪಿದ್ದು, ಅಲ್ಲಿ ಜೂಜಾಡುವುದು, ಮದ್ಯ ಸೇವಿಸುವುದು ಸೇರಿದಂತೆ ಆ ಸ್ಥಳ ಅನೈತಿಕ ಚಟುವಟಿಕೆಗಳ ತಾಣವಾಗಿದೆ ಎಂದು ದೂರಿದರು. ಇದಕ್ಕೆ ಉತ್ತರಿಸುವ ವೇಳೆ ಸಚಿವ ಮಧು ಬಂಗಾರಪ್ಪ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಲ್ಲಿ ಈ ರೀತಿಯ ಅನೈತಿಕ ಚಟುವಟಿಕೆಗಳು ನಡೆದರೆ, ಇನ್ನು ಮುಂದೆ ಶಿಕ್ಷಣ ಇಲಾಖೆ ಸಹಿಸುವ ಪ್ರಶ್ನೆಯೇ ಇಲ್ಲ. ಇಂತಹ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

## ವಸತಿ ಶಾಲಾ ಕಟ್ಟಡಗಳ ದುರಸ್ತಿಗೆ ಒತ್ತು ನೀಡಲಿ

**ವಿಧಾನಸಭೆ:** ವಸತಿ ಶಾಲೆಗಳ ಕಟ್ಟಡಗಳ ದುರಸ್ತಿ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಿ, ಇಂತಹ ಶಾಲೆಗಳ ಕಟ್ಟಡಗಳ ನಿರ್ವಹಣೆ ಮಾಡದಿದ್ದರೆ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ತೊಂದರೆಯಾಗಲಿದೆ ಎಂಬುದನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಗಮನಿಸಿದೆ.

ಬುಧವಾರ ಕಲಾಪದಲ್ಲಿ ಸಮಿತಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಇಲಾಖೆಯಡಿಯಲ್ಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಮತ್ತು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ವಕ್ಫ್ ಇಲಾಖೆಗಳು ನಡೆಸುತ್ತಿರುವ ವಸತಿ ಶಾಲಾ-ಕಾಲೇಜುಗಳು ಹಾಗೂ ವಸತಿ ನಿಲಯಗಳಿಗೆ ಸಂಬಂಧಿಸಿದ ವರದಿ ಮಂಡಿಸಲಾಯಿತು. ವಿದ್ಯಾರ್ಥಿ ವಸತಿ ಶಾಲೆ ಅಥವಾ ವಸತಿ ನಿಲಯಗಳ ದುರಸ್ತಿ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗುವ ಅನುದಾನದ ವಿವರದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಬೇಕು. ಭವಿಷ್ಯದಲ್ಲಿ ನಿರ್ಮಿಸುವ ವಸತಿ ಶಾಲೆ ಅಥವಾ ನಿಲಯಗಳ ಮೇಲ್ಛಾವಣಿ ಸೋರದಂತೆ ಹೊಸ ವಿನ್ಯಾಸ(ಮಂಗಳೂರು ಮಾದರಿ)ವನ್ನು ರಚಿಸಿ, ಈ ವಿನ್ಯಾಸದ ಪ್ರಕಾರ ವಸತಿ ಶಾಲೆ ಅಥವಾ ನಿಲಯಗಳ ಕಟ್ಟಡ ಕಾಮಗಾರಿ ನಿರ್ವಹಿಸಬೇಕು. ಅವಶ್ಯಕತೆಗನುಸಾರ ಶೌಚಾಲಯ ನಿರ್ಮಾಣ, ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದರು.

**ವಿದ್ಯಾರ್ಥಿ ವಸತಿ ನಿಲಯ, ಶಾಲಾ-ಕಾಲೇಜುಗಳ ನಿರ್ಮಾಣಕ್ಕೆ ಬೇಕಾದ ನಿವೇಶನಗಳನ್ನು ಕಾಯ್ದಿರಿಸಬೇಕು.ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಆದೇಶ ಹೊರಡಿಸಬೇಕು.**

### ಜೂ.15ರೊಳಗೆ ಪ್ರವೇಶಾತಿ ಪ್ರಕ್ರಿಯೆ ಮುಗಿಸಿ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಆಧರಿಸಿ ವಸತಿ ನಿಲಯ ಮತ್ತು ಶಾಲಾ ಕಾಲೇಜುಗಳಲ್ಲಿ ಅದರಲ್ಲೂ ಪ್ರಮುಖವಾಗಿ ಕ್ರೈಸ್ ಸಂಸ್ಥೆಯ ಶಾಲಾ ಪ್ರವೇಶಾತಿ ಪ್ರತಿಕ್ರಿಯೆಯನ್ನು ಪ್ರತಿ ವರ್ಷ ಜೂ.15ರೊಳಗೆ ಪೂರ್ಣಗೊಳಿಸಬೇಕು. ಸರ್ಕಾರಿ ಶಾಲೆಗಳ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ಈಗ ನೀಡುತ್ತಿರುವ ಶೇ.2 ಪ್ರವೇಶಾತಿಯನ್ನು ಕನಿಷ್ಠ ಶೇ.5ಕ್ಕೆ ಹೆಚ್ಚಿಸಬೇಕು. ವಿದ್ಯಾಸಿರಿ ಯೋಜನೆಯ ಮಾಸಿಕ 1500 ರೂ.ಗಳ ವಿದ್ಯಾರ್ಥಿ ವೇತನವನ್ನು ಪ್ರಸಕ್ತ ಜೀವನ ನಿರ್ವಹಣೆಗನುಸಾರ ಹೆಚ್ಚಿಸಲು ಶಿಫಾರಸ್ಸು ಮಾಡಿದೆ.

## ಪಂಚಾಯತ್ ರಾಜ್ ಬಿಲ್ ಪಾಸ್

**ವಿಧಾನ ಪರಿಷತ್ :** ವಿರೋಧ ಪಕ್ಷದ ವಿರೋಧ ಮತ್ತು ಸಭಾತ್ಯಾಗದ ನಡುವೆಯೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಅನ್ನು ವಿಧಾನಪರಿಷತ್ತಿನಲ್ಲಿ ಅಂಗೀಕಾರ ಪಡೆಯಿತು.

ವಿಧೇಯಕದ ಪರ್ಯಾಲೋಚನಾ ಪ್ರಸ್ತಾಪ ಮಂಡಿಸಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಭಾರತ ಸಂವಿಧಾನ 326ನೇ ಅನುಚ್ಛೇದದ ಅಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಲು ಮತದಾರರ ಮತಪತ್ರದ ಗೌಪ್ಯತೆ, ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸಬೇಕಿದೆ ಎಂದು ಹೇಳಿದರು.

ಬಿಜೆಪಿ ಸದಸ್ಯ ಸಿಟಿ. ರವಿ ಅವರು, ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತಂತ್ರಜ್ಞಾನ ಜತೆ ಮುನ್ನುಗುವ ಪ್ರಯತ್ನವಾಗಬೇಕು. ಕರ್ನಾಟಕ ಸರ್ಕಾರ ತೀರಾ ಹಿಂದುಳಿದಿದೆ. ನೀವು ಬ್ಯಾಲೆಟ್ ಪೇಪರ್‌ನಲ್ಲೇ ಚುನಾವಣೆ ಎದುರಿಸುವುದಾದರೆ ಬ್ಯಾಲೆಟ್‌ನಲ್ಲೇ ಚುನಾವಣೆ ನಡೆಸಿ, ಬದಲಾಗಿ ಸಾಂವಿಧಾನಿಕ ಸಂಸ್ಥೆ ಮೇಲೆ ಅಪನಂಬಿಕೆ ಸರಿಯಲ್ಲ. ಇವಿಎಂ ಮೇಲೆ ನಂಬಿಕೆ ಇಲ್ಲದಿದ್ದರೆ ರಾಜೀನಾಮೆ ಕೊಡಿ ಎಂದು ತಿಳಿಸಿದರು. ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಮಾತನಾಡಿ, ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ವೇಳೆಯಲ್ಲಿ ಇವಿಎಂ ಪ್ರಾರಂಭವಾಯಿತು. 2014ರ ಬಳಿಕ ಇವಿಎಂ ಮೇಲೆ ಆಡಳಿತ ಪಕ್ಷಕ್ಕೆ ಅಪನಂಬಿಕೆ ಶುರುವಾಗಿದೆ. ಕಾಂಗ್ರೆಸ್ ಗೆದ್ದುಕೊಂಡು ಬಂದ ವೇಳೆ ಯಾವುದೇ ಸಮಸ್ಯೆ ಆಗಿರಲಿಲ್ಲ. ಹಿಂದಿನ ದಿನಗಳ ಬ್ಯಾಲೆಟ್ ಪೇಪರ್‌ಗೆ ಮಾರುಹೋಗುವುದು ಸರಿಯೇ?, ಬ್ಯಾಲೆಟ್‌ಗೆ ಹೋದರೆ ಅದೆಷ್ಟೋ ಮರಗಳನ್ನು ತುಂಡರಿಸುವ ಪರಿಸ್ಥಿತಿ ಎದುರಾಗುತ್ತದೆ ಎಂದು ಈ ವಿಧೇಯಕವನ್ನು ವಿರೋಧಿಸಿದರು.


ಅಂತಿಮವಾಗಿ ಸ್ಪಷ್ಟನೆ ನೀಡಿದ ಪ್ರಿಯಾಂಕ್ ಖರ್ಗೆ, ಇವಿಯಂ ಕುರಿತು ವಿಶ್ವಾಸ ಕಳೆದುಕೊಂಡಿದೆ ಎಂದರೆ ಅದು ಚುನಾವಣಾ ಆಯೋಗದ ಕಾರ್ಯವೈಖರಿಯ ನಡೆಯಿಂದಾಗಿ. ಚುನಾವಣೆ ಆಯೋಗದ ಲೋಪದ ಬಗ್ಗೆ 2018 ರಿಂದ ಮೂರು ಬಾರಿ ಪತ್ರ ಬರೆದರೂ ಸ್ಪಂದಿಸಿಲ್ಲ. ದೇಶದ ಇತರೆ ರಾಜ್ಯಗಳಲ್ಲಿ ಬ್ಯಾಲೆಟ್ ಪೇಪರ್ ಬಳಕೆಯಿದೆ. ಇಷ್ಟೇ ಅಲ್ಲದೆ, ವಿದೇಶಗಳಲ್ಲಿ ಇವಿಯಂ ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ವಿಧೇಯಕ ಕುರಿತಂತೆ ಪರ-ವಿರೋಧ ಸುದೀರ್ಘ ಚರ್ಚೆ ನಡೆಸಿದರು. ವಿಧೇಯಕ ವಿರೋಧಿಸಿ ವಿಪಕ್ಷ ಸದಸ್ಯರ ಸಭಾತ್ಯಾಗ ನಡುವೆ ಅಂತಿಮವಾಗಿ ಮಸೂದೆಗೆ ಅನುಮೋದನೆ ದೊರೆಯಿತು.

### ಇವಿಎಂನಿಂದಲೇ ಗೆದ್ದಿರುವುದು ನೀವು

ವಿಧೇಯಕ ಸ್ವಾಗತಿಸಿ ಎಂದ ಕಾಂಗ್ರೆಸ್ ಸದಸ್ಯರು ಏರು ಧ್ವನಿಯಲ್ಲಿ ಕೂಗಿದಾಗ ತಿರುಗೇಟು ನೀಡಿದ ಜೆಡಿಎಸ್ ಸದಸ್ಯ ಭೋಜೇಗೌಡ, ಇವಿಎಂ ಮೇಲೆ ನಂಬಿಕೆಯಿಲ್ಲದ ಕಾಂಗ್ರೆಸ್‌ನವರು ಚುನಾವಣೆಯಲ್ಲಿ 140 ಸೀಟು ಗೆದ್ದು ಬಂದಿದ್ದು ಹೇಗೆ?, ಜನ ಏನ್ ಹೆಬ್ಬೆಟ್ಟು ಒತ್ತಿದ್ರಾ?, ಕಾಂಗ್ರೆಸ್‌ನವರು ನೀವು ಇದೇ ಇವಿಎಂನಿಂದಲೇ ಗೆದ್ದಿರುವುದು ಎಂದು ಆಡಳಿತ ಪಕ್ಷದ ವಿರುದ್ಧ ಕಿಡಿಕಾರಿದರು.

## ನನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ: ಸಿಎಂ

**ವಿಧಾನಸಭೆ:** ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡವನು. ನಾನು ಯಾವತ್ತೂ ರಾಹು ಕಾಲ, ಗುಳಿಕ ಕಾಲ ನೋಡಿಲ್ಲ, ಅದನ್ನೆಲ್ಲ ನಂಬುವುದಿಲ್ಲ. ಯುಗಾದಿ, ಶಿವರಾತ್ರಿಯಲ್ಲಿ ನಾನು ಮಾಂಸ ತಿನ್ನುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು.



ಬುಧವಾರ ಸದನದಲ್ಲಿ ಆಯವ್ಯಯ ಕುರಿತ ಚರ್ಚೆಗೆ ಅವರು ಉತ್ತರ ನೀಡುವ ವೇಳೆ, ಮಧ್ಯಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರಿಗೆ ಪ್ರತಿಕ್ರಿಯಿಸಿದರು. ಅದಕ್ಕೂ ಮೊದಲು ಅಶೋಕ ಅವರು, ಸಿದ್ದರಾಮಯ್ಯ ಅವರು ಕರ್ಮ ಸಿದ್ಧಾಂತದ ಬಗ್ಗೆ ಮಾತನಾಡುತ್ತಾರೆ. ಆದರೆ, ರಾಹುಕಾಲ ಬಿಟ್ಟು ಬಜೆಟ್ ಮಂಡನೆ ಮಾಡಿದ್ದಾರೆ. ಹೇಳುವುದು ಒಂದು ಮಾಡುವುದು ಇನ್ನೊಂದು ಎಂದು ಕಾಲೆಳೆದರು.

ಇದಕ್ಕೆ ಸ್ಪಷ್ಟನೆ ನೀಡಿದ ಸಿದ್ದರಾಮಯ್ಯ, ಹೌದು ನಿಮ್ಮಂಥವರ ಮಾತು ಕೇಳಬೇಕಲ್ಲ. ನಮ್ಮ ಮನೆಯವರು ಹಾಗೂ ಅಧಿಕಾರಿಗಳು ಈ ಬಗ್ಗೆ ಹೇಳಿದರು. ರಾಹುಕಾಲದಲ್ಲಿ ಬಜೆಟ್ ಮಂಡಿಸುವುದು ಬೇಡ ಎಂದಿದ್ದರು. ಇವತ್ತು ಕೂಡ ನಾನು ರಾಹುಕಾಲ, ಗುಳಿಕ ಕಾಲ ನಂಬುವುದಿಲ್ಲ. ಹಿಂದೆಯೂ ನಾನು ರಾಹುಕಾಲ ಗುಳಿಕಕಾಲದಲ್ಲೇ ಬಜೆಟ್ ಮಂಡಿಸಿದ್ದೇನೆ. ಬೇಕಾದರೆ ತೆಗೆದು ನೋಡಿ ಎಂದರು. ಈ ವೇಳೆ ಮತ್ತೆ ಮಧ್ಯಪ್ರವೇಶ ಮಾಡಿದ ಅಶೋಕ, ಅವತ್ತಿನ ಪರಿಸ್ಥಿತಿ ಬೇರೆ ಇತ್ತು, ಇವತ್ತಿನ ಪರಿಸ್ಥಿತಿ ಬೇರೆ ಇದೆ. ಮುಂದಿನ ಬಜೆಟ್ ನೀವೇ ಮಂಡಿಸಬೇಕಲ್ವಾ? ಅದಕ್ಕೆ ಕಾಲ ನೋಡಿ ಬಜೆಟ್ ಮಂಡನೆ ಮಾಡಲಾಗಿದೆ ಎಂದು ಕಿಚಾಯಿಸಿದರು. ನಾನು ಯಾವತ್ತೂ ರಾಹು ಕಾಲ, ಗುಳಿಕ ಕಾಲ ನೋಡಿಲ್ಲ, ಅದನ್ನೆಲ್ಲ ನಂಬುವುದಿಲ್ಲ. ಯುಗಾದಿ, ಶಿವರಾತ್ರಿಯಲ್ಲಿ ನಾನು ಮಾಂಸ ತಿನ್ನುತ್ತೇನೆ. ಇದರಲ್ಲಿ ತಪ್ಪು ಏನಿದೆ? ಎಂದು ತಿರುಗೇಟು ನೀಡಿದರು.

ನಾನು ದೇವರು ಇದ್ದಾನೆ ಎಂದು ನಂಬಿದ್ದೇನೆ. ಆದರೆ ದೇವಸ್ಥಾನದಲ್ಲಿ ಮಾತ್ರ ಅಲ್ಲ, ದೇವರು ಎಲ್ಲಾ ಕಡೆ ಇದ್ದಾನೆ. ನಾನು ಯಾವುದೇ ಮೂಢನಂಬಿಕೆಗಳನ್ನು ಬೆಂಬಲಿಸುವುದಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆ ಇರಬೇಕು. ಆದ್ದರಿಂದ ನಮ್ಮ ಸರ್ಕಾರ ಮೂಢನಂಬಿಕೆ ನಿಷೇಧ ಕಾಯ್ದೆ ಜಾರಿಗೆ ತಂದಿತು ಎಂದು ಸಿದ್ದರಾಮಯ್ಯ ಹೇಳಿದರು.

## 271 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ: ಛಲವಾದಿ

**ವಿಧಾನ ಪರಿಷತ್:** ಅಧಿವೇಶನ ಆರಂಭದ ದಿನದಿಂದ ಮಾ.24 ರವರೆಗೆ ಒಟ್ಟು 271 ಪ್ರಶ್ನೆಗಳಿಗೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಮೇಲ್ಮನೆಯಲ್ಲಿ ಈ ಕುರಿತು ಮಾತನಾಡಿದ ಅವರು, ನಗರಾಭಿವೃದ್ಧಿ ನಗರ ಯೋಜನೆ ಇಲಾಖೆಯಲ್ಲೇ 41 ಪ್ರಶ್ನೆಗಳಿಗೆ ಇಲಾಖೆ ಅಧಿಕಾರಿಗಳು ಉತ್ತರ ನೀಡಿಲ್ಲ. ಬೃಹತ್ ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ 28 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಲ್ಲಿ 30 ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಮುಖ್ಯಮಂತ್ರಿ ಅವರು ನಿಭಾಯಿಸುತ್ತಿರುವ ಇಲಾಖೆಗಳಿಂದ ಒಟ್ಟು 11 ಪ್ರಶ್ನೆಗಳಿಗೆ ಉತ್ತರ ನೀಡಿಲ್ಲ ಎಂದು ಕಿಡಿಕಾರಿದರು.

## ಹಸ್ತಪ್ರತಿ ಅಧ್ಯಯನಕ್ಕೆ ಪ್ರಾಧಿಕಾರ ರಚನೆ ಉದ್ದೇಶ ಸರಿ: ಸಿ.ಟಿ. ರವಿ
# ಡಿಜಿಟಲೀಕರಣ ವಿಧೇಯಕ ಅಂಗೀಕಾರ

**ವಿಧಾನ ಪರಿಷತ್:** ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು



ಡಿಜಿಟಲೀಕರಣ ವಿಧೇಯಕವು ಸದಸ್ಯರುಗಳ ವಿಸ್ತೃತ ಚರ್ಚೆಯ ನಂತರ ಸರ್ವಾನುಮತದಿಂದ ಅಂಗೀಕಾರವಾಯಿತು.

ಈ ವಿಧೇಯಕ ಕುರಿತು ಮಾತನಾಡಿದ ಕಾನೂನು, ನ್ಯಾಯ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅವರು, ನಮ್ಮ ರಾಜ್ಯದಲ್ಲಿರುವ ಹಸ್ತಪ್ರತಿಗಳನ್ನು ಸಮೀಕ್ಷೆ ಮಾಡುವುದು. ದಾಖಲೆಗಳನ್ನು ಸಂರಕ್ಷಣೆ ಮಾಡುವುದು, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವ ಉದ್ದೇಶದಿಂದ ಹಸ್ತಪ್ರತಿ ಪ್ರಾಧಿಕಾರ ಸ್ಥಾಪಿಸಲು ಈ ವಿಧೇಯಕದ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಹಸ್ತಪ್ರತಿಗಳ ದಾಖಲೆಗಳ ಮಾಲೀಕತ್ವವನ್ನು ಬದಲಾಯಿಸಲಾಗುವುದಿಲ್ಲ. ಡಿಜಿಟೀಕರಣ ಮಾಡಿ ವಾಪಸ್ಸು ಮಾಲೀಕರಿಗೆ ನೀಡಲಾಗುವುದು. ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟೀಕರಣವನ್ನು ಸರಿಯಾಗಿ ಮಾಡಿದಾಗ ಜ್ಞಾನಭಂಡಾರವನ್ನು ಸರಕ್ಷಣೆ ಮಾಡಿದಂತಾಗುತ್ತದೆ. ಮುಂದಿನ ಪೀಳಿಗೆಗೂ ನೀಡಿದಂತಾಗುತ್ತದೆ. ಜಗತ್ತಿನಲ್ಲಿ ಕನ್ನಡ ಜ್ಞಾನಸಂಪನ್ನವಾಗುತ್ತದೆ ಎಂದು ಸಚಿವರು ವಿವರಿಸಿದರು.

ಈ ವೇಳೆ ಬಿಜೆಪಿ ಸದಸ್ಯ ಸಿ.ಟಿ. ರವಿ, ಪುರಾತತ್ವ ಇಲಾಖೆಯೇ ಸಿಬ್ಬಂದಿ ಕೊರತೆ, ಅನುದಾನ ಕೊರತೆಯಿಂದ ನರಳುತ್ತಿದೆ. ಒಂದರ್ಥದಲ್ಲಿ ಐಸಿಯುನಲ್ಲಿದೆ. ಇದನ್ನು ಬಲಪಡಿಸುವುದನ್ನು ಬಿಟ್ಟು ಹಸ್ತಪ್ರತಿ ಸಂಗ್ರಹಣೆಗಾಗಿ ಪ್ರತ್ಯೇಕ ಪ್ರಾಧಿಕಾರದ ಔಚಿತ್ಯದೆಯೇ, ಹಸ್ತಪ್ರತಿ ಅಧ್ಯಯನಕ್ಕೆ ಪ್ರಾಧಿಕಾರ ರಚನೆ ಉದ್ದೇಶ ಸರಿ ಇದೆ. ಆದರೆ ಈಗಾಗಲೇ ಪುರಾತತ್ವ ಇಲಾಖೆ ಅನುದಾನ ಕೊರತೆಯಿಂದ ಬಳಲುತ್ತಿದೆ. ಸಿಬ್ಬಂದಿ ಕೊರತೆಯೂ ಅಧಿಕವಾಗಿದೆ. ಮತ್ತೊಂದೆಡೆ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಳ ನೀಡದೇ ಮುಚ್ಚುವಂತಹ ಪರಿಸ್ಥಿತಿ ಎದುರಾಗಿದೆ. ಹೀಗಿರುವಾಗ ಇನ್ನೊಂದು ಪ್ರಾಧಿಕಾರ ಅಗತ್ಯದೆಯೇ? ಎಂದು ಪ್ರಶ್ನಿಸಿದರು.

### ದಾನಿಗಳ ನೆರವು

ಇದಕ್ಕೆ ಉತ್ತರಿಸಿದ ಸಚಿವರು, ಪುರಾತತ್ವ ಸ್ಥಳಗಳ ಅಭಿವೃದ್ಧಿಗೆ ದೇಶದಲ್ಲಿ ನೆಲೆಸಿರುವ ಅನೇಕ ದಾನಿಗಳು ಕೋಟಿ ರೂ.ವರೆಗೆ ಹಣವನ್ನು ದಾನದ ರೂಪದಲ್ಲಿ ನೀಡಿದ್ದಾರೆ. ಇದೇ ರೀತಿ ಪ್ರಾಧಿಕಾರಕ್ಕೂ ಸಹ ಬೇರೆ-ಬೇರೆ ಸಂಪನ್ಮೂಲ, ದಾನಿಗಳ ನೆರವು ಪಡೆದು ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಈ ಸುದೀರ್ಘ ಚರ್ಚೆಯ ನಂತರ ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕಕ್ಕೆ ಅಂಗೀಕಾರ ದೊರಯಿತು.

## ಸಭಾಪತಿ ಪೀಠದಿಂದ ಅಧಿಕಾರಿಗಳಿಗೆ ಬಸವರಾಜ ಹೊರಟ್ಟಿ ಸೂಚನೆ
# ಬೀದರ್ ಡಿಸಿ ನನ್ನ ಕಚೇರಿಗೆ ಹಾಜರಾಗಲಿ

**ವಿಧಾನ ಪರಿಷತ್:** ಮೇಲ್ಮನೆ ಸದಸ್ಯರಾಗಿ ನಾಲ್ಕೂವರೆ ವರ್ಷ ಕಳೆದರೂ ಕಾಂಗ್ರೆಸ್ ಸದಸ್ಯ ಭೀಮರಾವ್ ಪಾಟೀಲ್ ಅವರಿಗೆ ಈವರೆಗೂ ಕಚೇರಿ



ನೀಡಲು ಬೇಜವಾಬ್ದಾರಿ ಅನುಸರಿಸುತ್ತಿರುವ ಬೀದರ್ ಜಿಲ್ಲಾಧಿಕಾರಿ, ಕಡ್ಡಾಯವಾಗಿ ನನ್ನ ಕಚೇರಿ ಯಲ್ಲಿ ಹಾಜರಿರಬೇಕು. ಇಲ್ಲವಾದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಪೀಠದಿಂದ ರೂಲಿಂಗ್ ನೀಡಿದರು.

ಬುಧವಾರ ಕಲಾಪ ಆರಂಭವಾಗುತ್ತಿದ್ದಂತೆ ಈ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯ ಪುಟ್ಟಣ್ಣ, ಇತ್ತೀಚಿಗೆ ದಿನಗಳಲ್ಲಿ ಪರಿಷತ್ ಸದಸ್ಯರಿಗೆ ಅವಮಾನ ಆಗುತ್ತಿದೆ. ಭೀಮರಾವ್ ಅವರು ಶಾಸಕರಾಗಿ ನಾಲ್ಕೂವರೆ ವರ್ಷವಾದರೂ ಬೀದರ್ ಜಿಲ್ಲಾಧಿಕಾರಿ ಅವರಿಗೆ ಇನ್ನೂ ಕಚೇರಿ ಒದಗಿಸಿಕೊಟ್ಟಿಲ್ಲ. ಈ ಬಗ್ಗೆ ಎಷ್ಟೇ ದೂರು ನೀಡಿದರೂ, ಹಕ್ಕು ಬಾಧ್ಯತಾ ಸಮಿತಿಯಿಂದ ಶಿಫಾರಸ್ಸು ಮಾಡಿದರೂ, ಈ ಬಗ್ಗೆ ಜಿಲ್ಲಾಧಿಕಾರಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ಅಸಮಧಾನ ಹೊರಹಾಕಿದರು. ಆಗ ಮೇಲ್ಮನೆಯ ಎಲ್ಲ ಪಕ್ಷಗಳ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿ, ಬೀದರ್ ಜಿಲ್ಲಾಧಿಕಾರಿಯ ಮೇಲೆ ಸೂಕ್ತ ಕ್ರಮಕ್ಕೆ ಒಕ್ಕೊರಲಿನಿಂದ ಒತ್ತಾಯಿಸಿದರು.

ಸದಸ್ಯ ಪುಟ್ಟಣ್ಣ ಅವರು, ಸಭಾಪತಿ ಕಚೇರಿಯಿಂದ 2023ರ ಸೆ.14 ರಂದು ಪತ್ರ ಬರೆದು ಭೀಮರಾವ್ ಪಾಟೀಲ್ ಅವರಿಗೆ ಕಚೇರಿ ನೀಡುವಂತೆ ತಿಳಿಸಲಾಗಿದೆ. ಅಲ್ಲದೇ ಬೀದರ್‌ನಲ್ಲಿಯೇ ನಡೆದ ಹಕ್ಕು ಬಾಧ್ಯತಾ ಸಮಿತಿ ಸಭೆ ಸೇರಿ ಪಾಟೀಲ್ ಅವರಿಗೆ ಕಚೇರಿ ನೀಡುವಂತೆ ಸೂಚನೆ ನೀಡಿತ್ತು. ಆದರೆ, ಭೀಮರಾವ್ ಪಾಟೀಲ್ ಅವರಿಗೆ ಈವರೆಗೆ ಕಚೇರಿ ಒದಗಿಸಿಲ್ಲ. ಕೂಡಲೇ ಜಿಲ್ಲಾಧಿಕಾರಿಗೆ ಸಮನ್ಸ್ ನೀಡಿ ವಿಚಾರಿಸಬೇಕು. ಇಲ್ಲವಾದಲ್ಲಿ, ಸದನಕ್ಕೆ ಕರೆಸಿ ಛೀಮಾರಿ ಹಾಕಿ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

### ಮೂರು ಬಾರಿ ಪತ್ರ

ನಾಲ್ಕೂವರೆ ವರ್ಷದಿಂದ ಜನರ ಕೆಲಸ ಮಾಡಲು ಅನುಕೂಲವಾಗುವಂತೆ ಔರಾದ್ ತಾಲೂಕಿನಲ್ಲಿ ಕಚೇರಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮೂರು ಬಾರಿ ಪತ್ರ ಬರೆದರೂ ಪ್ರಯೋಜನವಾಗಿಲ್ಲ ಎಂದು ಭೀಮರಾವ್ ಪಾಟೀಲ್ ಎಂದರು.

### ಸರ್ಕಾರ ಗಂಭೀರ ಚರ್ಚೆ

ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಮುಖ್ಯ ಕಾರ್ಯದರ್ಶಿಗಳ ಮುಖಾಂತರ ಇದರ ಸಂಬಂಧ ವಿವರಣೆ ಕೇಳಿ, ಜಿಲ್ಲಾಧಿಕಾರಿಯನ್ನು ಗುರುವಾರ ನಿಮ್ಮ ಕಚೇರಿಗೆ ಹಾಜರಾಗುವಂತೆ ನಿರ್ದೇಶನ ನೀಡಲಾಗುವುದು ಎಂದು ಸಭಾನಾಯಕ ಭೋಸರಾಜ್ ಭರವಸೆ ನೀಡಿದರು.

# ಸಂಪಾದಕೀಯ

## ದೂರಗಾಮಿ ಪರಿಣಾಮದ ತೀರ್ಪು

ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯು ಭಾರತೀಯೇತರ ಮತಗಳಿಗೆ ಮತಾಂತರಗೊಂಡರೆ ಆತನ ಎಸ್‌ಸಿ ಸ್ಥಾನಮಾನ ನಷ್ಟವಾಗಲಿದೆ ಎಂಬುದಾಗಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅತ್ಯಂತ ಮಹತ್ವದ್ದೂ ಹಾಗೂ ದೂರಗಾಮಿ ಪರಿಣಾಮ ಬೀರುವಂತಹುದೂ ಆಗಿದೆ. ಹಿಂದೂ, ಬೌದ್ಧ ಅಥವಾ ಸಿಖ್ ಧರ್ಮಕ್ಕೆ ಸೇರಿದವರಿಗೆ ಮಾತ್ರ ಪರಿಶಿಷ್ಟ ಜಾತಿಯ ಸ್ಥಾನಮಾನ ಸಿಗುತ್ತದೆ ಎಂಬುದಾಗಿ ನ್ಯಾಯಾಲಯವು ಸ್ಪಷ್ಟಪಡಿಸಿದೆ. ಆಂಧ್ರಪ್ರದೇಶದಲ್ಲಿ ಕ್ರೈಸ್ತ ಮತಕ್ಕೆ ಮತಾಂತರಗೊಂಡ



ವ್ಯಕ್ತಿಯೊಬ್ಬರು ತನಗೆ ಅಕ್ಕಲ ರಾಮಿ ರೆಡ್ಡಿ ಎಂಬ ವ್ಯಕ್ತಿ ಜಾತಿನಿಂದನೆ ಮಾಡಿ ಹಲ್ಲೆ ನಡೆಸಿರುವುದಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಅವರು ಈ ದೂರು ದಾಖಲಿಸಿದ್ದರು. ಆದರೆ ಆಂಧ್ರ ಹೈಕೋರ್ಟ್ ಅವರ ದೂರನ್ನು ಪುರಸ್ಕರಿಸಲು ನಿರಾಕರಿಸಿತ್ತು. ಅದರ ವಿರುದ್ಧ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಇದೀಗ ಸುಪ್ರೀಂ ಕೋರ್ಟ್ ಕೂಡಾ ಆಂಧ್ರ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿದು, ಒಬ್ಬ ವ್ಯಕ್ತಿಯು 1950ರ ಸಾಂವಿಧಾನಿಕ ಆದೇಶದ ನಿಬಂಧನೆಯಡಿ ಉಲ್ಲೇಖಿಸಲಾದ ಧರ್ಮದ ಬದಲಾಗಿ ಬೇರೊಂದು ಶ್ರದ್ಧೆ ಹೊಂದಿದ್ದಲ್ಲಿ ಆ ಧರ್ಮದ ಜತೆಗೇ, ತಾನು ಎಸ್‌ಸಿ ಸಮುದಾಯಕ್ಕೂ ಸೇರಿದವನೆಂದು ಹೇಳಿಕೊಳ್ಳಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಆಮಿಷಕ್ಕೊಡ್ಡಿ ಕ್ರೈಸ್ತ ಅಥವಾ ಇಸ್ಲಾಮ್ ಮತಕ್ಕೆ ಮತಾಂತರಗೊಳಿಸುವ ಪ್ರಯತ್ನಗಳು ಎಗ್ಗಿಲ್ಲದೆ ನಡೆಯುತ್ತಿರುವುದರ ಮಧ್ಯೆ ನ್ಯಾಯಾಲಯವು ನೀಡಿರುವ ತೀರ್ಪು ಮಹತ್ವದ ಸಂದೇಶ ರವಾನಿಸಿದೆ. ಮತಾಂತರಗೊಂಡ ನಂತರವೂ ಪರಿಶಿಷ್ಟರಿಗೆ ಸಂವಿಧಾನರೀತ್ಯಾ ದೊರಕುವಂತಹ ಮೀಸಲಾತಿ ಮುಂತಾದ ಸೌಲಭ್ಯಗಳನ್ನು ಪಡೆಯುವುದಕ್ಕೆ ಕೆಲವರು ಯತ್ನಿಸುತ್ತಿದ್ದು, ನ್ಯಾಯಾಲಯದ ತೀರ್ಪು ಅದಕ್ಕೆ ತಡೆಯೊಡ್ಡಿದೆ. ಎಸ್‌ಸಿ ಸ್ಥಾನಮಾನದಲ್ಲಿ ದೊರಕುವ ಸೌಲಭ್ಯಗಳು ಮತಾಂತರವಾದ ಮೇಲೂ ಮುಂದುವರಿಯುವುದೆಂದು ಮತಾಂತರ ಮಾಡುವವರು ತಪ್ಪು ಮಾಹಿತಿ ನೀಡುವುದಿದೆ. ಕೆಲವು ರಾಜಕೀಯ ಪಕ್ಷಗಳೂ ಈ ರೀತಿ ಮತಾಂತರವಾದವರಿಗೆ ಮೀಸಲಾತಿಯಂತಹ ಸೌಲಭ್ಯ ವಿಸ್ತರಿಸಲು ಅವಕಾಶ ಕಲ್ಪಿಸುವುದಿದೆ. ಇದರಿಂದಾಗಿ ಹಿಂದೂ ಧರ್ಮದಿಂದ ಮತಾಂತರವಾಗಲು ಹೆಚ್ಚು ಕುಮ್ಮಕ್ಕು ಕೊಟ್ಟಂತಾಗುತ್ತಿದೆ. ಇದರಿಂದ ಮತಾಂತರ ಪಿಡುಗಿಗೆ ಉತ್ತೇಜನ ನೀಡಿದಂತಾಗಿದೆ.

ಇನ್ನೀಗ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನ ನಂತರವಾದರೂ ಮತಾಂತರ ಪಿಡುಗಿಗೆ ಕಡಿವಾಣ ಬಿದ್ದೀತೆಂದು ಆಶಿಸಬೇಕಾಗಿದೆ.

# ಯುದ್ಧ: ಅಂದುಕೊಂಡಿದ್ದು ಬೇರೆ, ಆದದ್ದು ಬೇರೆ!

ಅಮೆರಿಕ ಜಾಗತಿಕ ರಾಜಕಾರಣದಲ್ಲಿ 'ಸರ್ವಶಕ್ತ' ಎಂಬ ಭ್ರಮೆ ಈ ಯುದ್ಧದಲ್ಲಿ ಖಂಡಿತ ಮುರಿದಿದೆ. ಮಿಲಿಟರಿ ಶ್ರೇಷ್ಠತೆ ಮತ್ತು ರಾಜಕೀಯ ಬುದ್ಧಿವಂತಿಕೆ ಒಂದೇ ಅಲ್ಲ ಎಂಬ ಪಾಠ ಅಮೆರಿಕ ಇನ್ನೊಮ್ಮೆ ಕಲಿಯಬೇಕಾಗಿ ಬಂದಿದೆ.

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಈ ಯುದ್ಧ ಆರಂಭಿಸಿದ್ದು ಯಾರು? ಈಗ ನಿಲ್ಲಿಸುವವರು ಯಾರು?

ಯುದ್ಧದ ಆರಂಭ ದಿನಗಳಿಗೆ ಬರೋಣ. 2026ರ ಫೆಬ್ರವರಿ 28ರ ಮುಂಜಾನೆ ಮಧ್ಯಪ್ರಾಚ್ಯದ ಆಕಾಶ ಕಂಪಾಯಿತು. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಅನಿರೀಕ್ಷಿತ ವಾಯು ದಾಳಿ ನಡೆಸಿ, ಸುಪ್ರೀಂ ಲೀಡರ್ ಅಲಿ ಖಮೇನಿ ಸೇರಿದಂತೆ ಹಲವು ಹಿರಿಯ ಮಿಲಿಟರಿ ಅಧಿಕಾರಿಗಳನ್ನು ಹತ್ಯೆ ಮಾಡಿತು. ಒಂದು ತಿಂಗಳಿಗೂ ಹೆಚ್ಚು ಕಾಲ ಕಳೆದ ನಂತರವೂ ಈ ಯುದ್ಧ ನಿಂತಿಲ್ಲ, ನಿಲ್ಲುವ ಲಕ್ಷಣಗಳೂ ಕಾಣಿಸುತ್ತಿಲ್ಲ. ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರ ಅಮೆರಿಕ ಈ ಯುದ್ಧದಲ್ಲಿ ಯಾಕೆ ಸಿಲುಕಿತು? ಯಾರ ನಿಯಂತ್ರಣಕ್ಕೂ ನಿಲುಕದ ರೀತಿಯಲ್ಲಿ ಇದು ಮುಂದಕ್ಕೆ ಹೋಗಿರುವುದೇಕೆ? ಕೊನೆಗೆ ಗೆಲ್ಲುವವರು ಯಾರು? ಸೋಲುವವರು ಯಾರು? ಈ ಪ್ರಶ್ನೆಗಳು ಇಂದು ಇಡೀ ಜಗತ್ತನ್ನು ಕಾಡುತ್ತಿವೆ.

ಈ ಯುದ್ಧದ ತಕ್ಷಣದ ಕಾರಣ ಇರಾನಿನ ಪರಮಾಣು ಕಾರ್ಯಕ್ರಮ ಎಂದು ಹೇಳಲಾಗುತ್ತಿದೆ. 2015ರ ಜೆಸಿಪಿಒಎ ಒಪ್ಪಂದದಿಂದ 2018ರಲ್ಲಿ ಟ್ರಂಪ್ ಹೊರಬಿದ್ದ ನಂತರ, ಅಮೆರಿಕ–ಇರಾನ್ ಸಂಬಂಧ ತೀವ್ರ ಹದಗೆಟ್ಟಿತ್ತು. 2024ರಲ್ಲಿ ಇಸ್ರೇಲ್ ಮತ್ತು ಇರಾನ್ ನೇರ ದಾಳಿ–ಪ್ರತಿದಾಳಿಯಲ್ಲಿ ತೊಡಗಿದ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. 2025ರ ಜೂನ್ ತಿಂಗಳಲ್ಲಿ ಇಸ್ರೇಲ್–ಅಮೆರಿಕ 'ಹನ್ನೆರಡು ದಿನದ ಯುದ್ಧ' ಮಾಡಿ ಇರಾನಿನ ಪರಮಾಣು ಸ್ಥಾಪನೆಗಳ ಮೇಲೆ ದಾಳಿ ನಡೆಸಿದ್ದವು. ಅದಾದ ನಂತರ ತಾತ್ಕಾಲಿಕ ಕದನ ವಿರಾಮ ಉಂಟಾಗಿ ಮತ್ತೆ ಮಾತುಕತೆ ಆರಂಭವಾಗಿತ್ತು. ಆದರೆ ಮಾತುಕತೆ ವಿಫಲಗೊಂಡಿತು.

2026ರ ಜನವರಿಯಲ್ಲಿ ಇರಾನಿನಲ್ಲಿ ಬೃಹತ್ ಪ್ರತಿಭಟನೆಗಳು ಭುಗಿಲೆದ್ದವು. ಐದು ಕೋಟಿ ಮಂದಿ ಬೀದಿಗಿಳಿದ ಆ ಅಭೂತಪೂರ್ವ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಸರ್ಕಾರದ ದಮನ ನೀತಿಗೆ ಬಲಿಯಾದರು. ಇದನ್ನು ನೋಡಿ ಟ್ರಂಪ್ ಅವರಿಗೆ ಒಂದು ಲೆಕ್ಕಾಚಾರ ಹುಟ್ಟಿತು ಇರಾನ್ ಒಳಗಿನಿಂದ ದುರ್ಬಲಗೊಂಡಿದೆ, ಇದೇ ಸಕಾಲ. ಖಮೇನಿ ಮೃತರಾದರೆ ಇರಾನ್ ಆಡಳಿತ ಕುಸಿಯುತ್ತದೆ, ವೆನೆಜುವೆಲಾ ರೀತಿ 'ರೆಜಿಮ್ ಚೇಂಜ್' ಆಗುತ್ತದೆ ಎಂದು ತಿಳಿದರು. ಅದೇ ಊಹೆಯ ಮೇಲೆ ಫೆಬ್ರವರಿ 28ರಂದು ಅಮೆರಿಕ–ಇಸ್ರೇಲ್ ದಾಳಿ ನಡೆಯಿತು. ಇದೇ ಅಮೆರಿಕದ ಮೊದಲ ತಪ್ಪು ಲೆಕ್ಕಾಚಾರ.

ಖಮೇನಿ ಹತ್ಯೆಯಾಗುತ್ತಿದ್ದಂತೆ ಇರಾನ್ ಕುಸಿಯುತ್ತದೆ ಎಂದು ಅಮೆರಿಕ ನಂಬಿತ್ತು. ಆದರೆ ಆದದ್ದು ತದ್ವಿರುದ್ಧ. ಯಾವ ದೇಶದಲ್ಲಾದರೂ ವಿದೇಶಿ ದಾಳಿ ನಡೆದಾಗ ಜನ ಒಗ್ಗೂಡುತ್ತಾರೆ ಈ ಮೂಲ ಮನೋವಿಜ್ಞಾನ ತತ್ತ್ವವನ್ನೇ ಅಮೆರಿಕ ಮರೆತಿತ್ತು. ಇರಾನ್ ನಾಯಕತ್ವ ಶೂನ್ಯದಲ್ಲಿ ಮಣ್ಣು ಮುಕ್ಕುವ ಬದಲು, ದೇಶಪ್ರೇಮದ ಮೂಲಕ ಒಗ್ಗಟ್ಟು ತೋರಿತು. ಅಮೆರಿಕ–ಇಸ್ರೇಲ್ ಜಂಟಿ ಕಾರ್ಯಾಚರಣೆ ಇರಾನಿನ 31 ಪ್ರಾಂತ್ಯಗಳ ಪೈಕಿ 26ರಲ್ಲಿ ನೂರಾರು ಕಡೆ ದಾಳಿ ನಡೆಸಿದ ಮೇಲೂ ಇರಾನ್, ಇಸ್ರೇಲ್ ಮತ್ತು ಅಮೆರಿಕ ನೆಲೆಗಳ ಮೇಲೆ ಪ್ರತ್ಯಾಘಾತ ಮಾಡುತ್ತಲೇ ಉಳಿಯಿತು. ಇಸ್ರೇಲ್ ದೇಶವು, ಇರಾನಿನ ಬಹುತೇಕ ಬ್ಯಾಲಿಸ್ಟಿಕ್ ಕ್ಷಿಪಣಿ ನೆಲೆಗಳನ್ನು ನಾಶಮಾಡಿದ ನಂತರವೂ, ಇರಾನ್ ದೇಶವು ಇಸ್ರೇಲ್ ಮೇಲೆ ದಾಳಿ ನಿಲ್ಲಿಸಿಲ್ಲ. ಜತೆಗೆ, ಅಮೆರಿಕ ಮಿತ್ರ ದೇಶಗಳ ವಿರುದ್ಧದ ತನ್ನ ದಾಳಿಯ ಪ್ರಮಾಣವನ್ನೂ ಕಡಿಮೆ ಮಾಡಿಲ್ಲ.

ಖುದ್ದು ಟ್ರಂಪ್ ಅವರೇ ಇರಾನ್ ಇಷ್ಟೊಂದು ಪ್ರತಿರೋಧ ತೋರಿಸುತ್ತದೆ ಎಂದು ನಿರೀಕ್ಷಿಸಿರಲಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, ಈ ಯುದ್ಧಕ್ಕೆ ಅಮೆರಿಕದ ರಕ್ಷಣಾ ಕಾರ್ಯದರ್ಶಿಯೇ ಕಾರಣ ಎಂದು ಬೇರೆಯವರ ಮೇಲೆ ಜವಾಬ್ದಾರಿ ಹೊರಿಸಲು ಯತ್ನಿಸಿದ್ದಾರೆ. ಇದು ಅಮೆರಿಕ ಯುದ್ಧಕ್ಕೆ ಕೈ ಹಾಕಿ ಎಡವಿದೆ ಎಂಬ ಅನಿವಾರ್ಯ ಸತ್ಯದ ಸ್ಪಷ್ಟ ಸಾಕ್ಷ್ಯ. ಅಮೆರಿಕದ ಇರಾನ್ ಕಡೆ ಇನ್ನೊಬ್ಬ ಸಲಹೆಗಾರ ವಿಟ್ಕಾಫ್ ಮತ್ತು ಕುಶ್ನರ್ ಕೂಡ ಒಂದು ಒಪ್ಪಂದ ತಲುಪುವುದು 'ತೀರಾ ಕಷ್ಟ, ಬಹುತೇಕ ಅಸಾಧ್ಯ' ಎಂದು ಟ್ರಂಪ್‌ಗೆ ಮೊದಲೇ ಎಚ್ಚರಿಸಿದ್ದರು. ಆಹ್ವಾದರೂ ಯುದ್ಧಕ್ಕೆ ಧುಮುಕಲಾಯಿತು.

ಈ ಯುದ್ಧ ಈಗ ಒಂದೆರಡು ದೇಶಗಳ ನಡುವಿನ ಸಮರ ಉಳಿದಿಲ್ಲ. ಹನ್ನೆರಡಕ್ಕೂ ಹೆಚ್ಚು ದೇಶಗಳಿಗೆ ವ್ಯಾಪಿಸಿ, ಜಗತ್ತಿನ ಪ್ರಮುಖ ತೈಲ ಜಲಮಾರ್ಗ ಹಾರ್ಮೂಜ್ ಜಲಸಂಧಿ ಬಂದ್ ಆಗಿದೆ. 2,300ಕ್ಕೂ ಹೆಚ್ಚು ಮಂದಿ ಈಗಾಗಲೇ ಬಲಿಯಾಗಿದ್ದಾರೆ. ಇರಾನ್ ಅಮೆರಿಕದ ಮೇಲೆ ನೇರ ದಾಳಿ ಮಾಡಲಾಗದ ಕಾರಣ ಅಮೆರಿಕ ಸ್ನೇಹಿ ರಾಷ್ಟ್ರಗಳನ್ನೇ ಗುರಿಯಾಗಿಸಿದೆ. ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಜೋರ್ಡಾನ್ ಈ ತೈಲ ಸಿರಿವಂತ ದೇಶಗಳು ಯಾವ ತಪ್ಪೂ ಮಾಡದೆ ಯುದ್ಧದ ಕೆಂಡಕ್ಕೆ ಸಿಕ್ಕಿ ಬೆಂದಿವೆ.

ಹಿಂದೆ ಅಮೆರಿಕ ಯುದ್ಧ ಆರಂಭಿಸಿ 'ಜೊತೆಗೆ ಬನ್ನಿ' ಎನ್ನುತ್ತಿತ್ತು, ಎಲ್ಲ ದೇಶಗಳು ಅದಕ್ಕೆ ತಲೆ ಬಾಗುತ್ತಿದ್ದವು. ಆದರೆ ಈ ಯುದ್ಧದಲ್ಲಿ ಅಮೆರಿಕದ ಧೋರಣೆ ಉಲ್ಟಾ ಆಗಿದೆ. ಅರಬ್ ರಾಷ್ಟ್ರಗಳ ಬೆಂಬಲ ಸಿಗಲಿಲ್ಲ. ಯೂರೋಪ್ ಬಹಿರಂಗವಾಗಿ ತನ್ನ ಅಸಮ್ಮತಿ ವ್ಯಕ್ತಪಡಿಸಿತು. ವಿಶ್ವಸಂಸ್ಥೆ ಮತ್ತು ಹೆಚ್ಚಿನ ದೇಶಗಳು ಈ ದಾಳಿಯನ್ನು ಖಂಡಿಸಿದವು. ಅಮೆರಿಕ ಪರ ಬಹಿರಂಗವಾಗಿ ನಿಂತದ್ದು ಅರ್ಜೆಂಟೀನಾ, ಜರ್ಮನಿ, ಉಕ್ರೇನ್ ಅಂಥ ಬೆರಳೆಣಿಕೆಯ ದೇಶಗಳು ಮಾತ್ರ. ಇದು ಜಾಗತಿಕ ರಾಜಕಾರಣದಲ್ಲಿ ಅಮೆರಿಕದ ಪ್ರಭಾವ ಎಷ್ಟರ ಮಟ್ಟಿಗೆ ಕ್ಷೀಣಿಸಿದೆ ಎಂಬುದನ್ನು ತೋರಿಸುತ್ತದೆ. ಸ್ಪೇನ್ ಅಂತೂ ನೇರವಾಗಿಯೇ ಅಮೆರಿಕದ ವಿರುದ್ಧ ನಿಂತಿತು. ಆಗ ಟ್ರಂಪ್ ಅವರೇ ಸ್ಪೇನ್ ವಿರುದ್ಧ ಟ್ಯಾರಿಫ್ ಗುಮ್ಮವನ್ನೂ ಹೊರಿಸಿದ್ದರು. ಫ್ರಾನ್ಸ್ ವಿರುದ್ಧವೂ ಟ್ರಂಪ್ ಕಿಡಿಕಾರಿದ್ದರು.

ಮಧ್ಯಪ್ರಾಚ್ಯದ 'ಪೊಲೀಸ್' ಆಗಿ ದಶಕಗಳ ಕಾಲ ವರ್ತಿಸಿದ ಅಮೆರಿಕಕ್ಕೆ ಇಂದು ಮಧ್ಯಸ್ಥಿಕೆಗಾಗಿ ಪಾಕಿಸ್ತಾನ, ಈಜಿಪ್ಟ್, ಒಮಾನ್ ಮತ್ತು ಟರ್ಕಿಗಳ ಮೊರೆ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ಈ ದೇಶಗಳು ಪರದೆಯ ಹಿಂದೆ ಅಮೆರಿಕ–ಇರಾನ್ ಸಂಧಾನಕ್ಕೆ ಮಧ್ಯಸ್ಥಿಕೆ ವಹಿಸುತ್ತಿವೆ. ಇರಾನ್ ಜತೆ ನೇರ ಮಾತುಕತೆ ನಡೆಸಲಾಗದ, ಸ್ವತಃ ತಾನು ಆರಂಭಿಸಿದ ಯುದ್ಧ ನಿಲ್ಲಿಸಲು ಮತ್ತೊಬ್ಬರ ನೆರವು ಬೇಡಬೇಕಾದ ಈ ಸ್ಥಿತಿ ಅಮೆರಿಕದ ರಾಜತಾಂತ್ರಿಕ ದಿವಾಳಿತನದ ನಿದರ್ಶನ. ಒಂದು ಅರ್ಥದಲ್ಲಿ, ಪ್ರಪಂಚದ ಏಕೈಕ ಮಹಾಶಕ್ತಿ ಎಂದೇ ಹೆಸರಾಗಿದ್ದ ರಾಷ್ಟ್ರ ಇಂದು ತಾನು ಹುಟ್ಟಿಸಿದ ಬೆಂಕಿ ನಂದಿಸಲು ಮತ್ತೊಬ್ಬರ ನೀರಿಗಾಗಿ ಕಾಯುತ್ತಿದೆ.

ಅಮೆರಿಕದ ಇತಿಹಾಸದಲ್ಲಿ ಈ ಯುದ್ಧಕ್ಕೆ ಅತ್ಯಂತ ಹತ್ತಿರದ ಹೋಲಿಕೆ ವಿಯೆಟ್ನಾಂ ಯುದ್ಧ. ಅಲ್ಲಿಯೂ ಅಮೆರಿಕ ತ್ವರಿತ ವಿಜಯ ನಿರೀಕ್ಷಿಸಿ ಯುದ್ಧಕ್ಕೆ ಧುಮುಕಿ, ದಶಕಗಳ ಕಾಲ ಕಾಡಿನಲ್ಲಿ ಬೆಂಡಾಗಿ, ಕೊನೆಗೆ ಮೂಟೆ ಕಟ್ಟಿಕೊಂಡು ಹಿಂದಿರುಗಬೇಕಾಯಿತು. ಇರಾನ್ ಕಡೆಯ ಮೂಲಗಳ ಪ್ರಕಾರ, ಯುದ್ಧ ಆರಂಭದ 15 ದಿನದ ನಂತರವೇ ಅಮೆರಿಕಕ್ಕೆ ಈ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಅರ್ಥವಾಗಿದೆ. ಆದರೆ ಹೊರಬರುವ ದಾರಿ ಇಲ್ಲದೆ ಸಿಲುಕಿಕೊಂಡಿದೆ. ಟ್ರಂಪ್ ಅವರ ಮೊಗದಲ್ಲಿ ಸಂಧಾನದ ಅಪೇಕ್ಷೆ ಕಂಡಿದ್ದೂ ಇದೇ ಕಾರಣಕ್ಕೆ.

ಆರ್ಥಿಕ ಒತ್ತಡವೂ ಅಮೆರಿಕಕ್ಕೆ ತಟ್ಟಿದೆ. ಹಾರ್ಮೂಜ್ ಜಲಸಂಧಿ ಬಂದ್ ಆಗಿರುವ ಕಾರಣ ಜಾಗತಿಕ ತೈಲ ಮಾರುಕಟ್ಟೆ ಹೊಯ್ದಾಡುತ್ತಿದೆ. ಏಷ್ಯಾ ದೇಶಗಳು ಮಧ್ಯಪ್ರಾಚ್ಯ ತೈಲದ ಮೇಲೆ ಭಾರಿ ಅವಲಂಬಿತವಾಗಿರುವ ಕಾರಣ ಹಲವು ರಾಷ್ಟ್ರಗಳ ಆರ್ಥಿಕತೆ ಸಂಕಷ್ಟಕ್ಕೆ ಸಿಲುಕಿದೆ. ಅಮೆರಿಕದ ಒಳಗೂ ಯುದ್ಧ ವಿರೋಧಿ ದನಿಗಳು ಮೊಳಗುತ್ತಿವೆ. ಟ್ರಂಪ್ ಯುದ್ಧ ನಿಲ್ಲಿಸಲು ಮುಂದಾಗಿದ್ದಾರೆ. ಆದರೆ ಇರಾನ್ ಸಿದ್ಧವಿಲ್ಲ. ಇಸ್ರೇಲ್ ಮಿಲಿಟರಿ ಇನ್ನೂ ಹಲವು ವಾರ ಹೋರಾಡಬೇಕು ಎನ್ನುತ್ತಿದೆ.

ಈ ಯುದ್ಧದಲ್ಲಿ ಸೋಲಿನ ವ್ಯಾಖ್ಯಾನ ಸಂಕೀರ್ಣ. ಮಿಲಿಟರಿ ದೃಷ್ಟಿಯಿಂದ ಅಮೆರಿಕ–ಇಸ್ರೇಲ್ ಇರಾನಿನ ಪರಮಾಣು ಸ್ಥಾಪನೆಗಳು ಮತ್ತು ಮಿಲಿಟರಿ ಸಾಮರ್ಥ್ಯಕ್ಕೆ ಗಣನೀಯ ಹಾನಿ ಮಾಡಿವೆ. ಆದರೆ ರಾಜಕೀಯ ದೃಷ್ಟಿಯಿಂದ ಇರಾನ್ ಒಳಗೆ 'ರೆಜಿಮ್ ಚೇಂಜ್' ಮಾಡಬೇಕೆಂಬ ಅಮೆರಿಕದ ಮೂಲ ಗುರಿ ಈಡೇರಿಲ್ಲ. ಅರಬ್ ಜಗತ್ತಿನ ಬೆಂಬಲ ಸಿಗಲಿಲ್ಲ. ಮಧ್ಯಪ್ರಾಚ್ಯದಲ್ಲಿ ಅಮೆರಿಕದ ವರ್ಚಸ್ಸು ಮತ್ತಷ್ಟು ಕ್ಷೀಣಿಸಿದೆ.

ಇರಾನ್ ಮಿಲಿಟರಿ ಹಿನ್ನಡೆ ಅನುಭವಿಸಿರಬಹುದು. ಆದರೆ ಅದು 'ಸೋತಿಲ್ಲ'. ನಾಶವಾಗಿಲ್ಲ. ರಕ್ಷಣಾ ಇಲಾಖೆ ಅಂದಾಜಿನ ಪ್ರಕಾರ ಇರಾನ್ ತನ್ನ ಮಿಸೈಲ್ ಸಾಮರ್ಥ್ಯ ಮರಳಿ ಕಟ್ಟಿಕೊಳ್ಳಲು ದಶಕ ಬೇಕಾಗಬಹುದು. ಆದರೆ ತನ್ನ ಸೈದ್ಧಾಂತಿಕ ನೆಲೆ ಮಾತ್ರ ಗಟ್ಟಿಯಾಗಿ ಉಳಿದಿದೆ. ಮಧ್ಯಪ್ರಾಚ್ಯದಲ್ಲಿ ಮಾತ್ರ ಅಲ್ಲ, ಜಾಗತಿಕ ಮಟ್ಟದಲ್ಲಿ 'ಅಮೆರಿಕ ವಿರೋಧಿ' ಅಲೆ ಮತ್ತಷ್ಟು ಬಲಗೊಂಡಿದೆ.

ಆದ್ದರಿಂದ ಈ ಯುದ್ಧ ಯಾರಿಗೂ ಪೂರ್ತಿ ಗೆಲುವು ತರದ, ಯಾರಿಗೂ ಪೂರ್ತಿ ಸೋಲು ತರದ ಶೂನ್ಯ ಸಮರವಾಗಿ ಇತಿಹಾಸದ ಪುಟ ಸೇರುವ ಸಾಧ್ಯತೆಯೇ ಹೆಚ್ಚಾಗಿ ಕಾಣಿಸುತ್ತಿದೆ. ಹಾಗಾದರೆ ಈ ಯುದ್ಧ ನಿಲ್ಲುವುದು ಯಾವಾಗ? ಉತ್ತರ ಸದ್ಯಕ್ಕೆ ಯಾರ ಬಳಿಯೂ ಇಲ್ಲ. ಒಂದಂತೂ ಸ್ಪಷ್ಟ ಅಮೆರಿಕ ಜಾಗತಿಕ ರಾಜಕಾರಣದಲ್ಲಿ 'ಸರ್ವಶಕ್ತ' ಎಂಬ ಭ್ರಮೆ ಈ ಯುದ್ಧದಲ್ಲಿ ಖಂಡಿತ ಮುರಿದಿದೆ. ಮಿಲಿಟರಿ ಶ್ರೇಷ್ಠತೆ ಮತ್ತು ರಾಜಕೀಯ ಬುದ್ಧಿವಂತಿಕೆ ಒಂದೇ ಅಲ್ಲ ಎಂಬ ಪಾಠ ಅಮೆರಿಕ ಇನ್ನೊಮ್ಮೆ ಕಲಿಯಬೇಕಾಗಿ ಬಂದಿದೆ.

# ಪುರಾಣಗಳ ಕುರಿತು ಕಿಂಚಿತ್

ಮ-ದ್ವಯಂ ಭ-ದ್ವಯಂ ಚೈವ ಬ್ರ-ತ್ರಯಂ ವ-ಚತುಷ್ಟಯಮ್।
ಅ-ನಾ-ಪ-ಲಿಂ-ಗ-ಕೂ-ಸ್ಕಾನಿ ಪುರಾಣಾನಿ ಪ್ರಚಕ್ಷತೇ ॥

ಮ–ದಿಂದ ಆರಂಭವಾಗುವುದು ಎರಡು, ಭ–ದಿಂದ ಆರಂಭವಾಗುವುದು ಎರಡು, ಬ್ರ–ದಿಂದ ಆರಂಭವಾಗುವುದು ಮೂರು, ವ–ದಿಂದ ಆರಂಭವಾಗುವುದು ನಾಲ್ಕು, ಅಕಾರ, ನಕಾರ, ಪಕಾರ, ಲಿಂಕಾರ, ಗಕಾರ, ಕೂಕಾರ, ಸ್ಕಕಾರದಿಂದ ಆರಂಭವಾಗುವುದು ಒಂದೊಂದು. ಹೀಗೆ ಹದಿನೆಂಟು ಪುರಾಣಗಳು –ಎಂಬುದು ಸೂತ್ರರೂಪೀ ಈ ಶ್ಲೋಕದ ಅರ್ಥ. ವಿಷಯವನ್ನು ನೆನಪಿಟ್ಟುಕೊಳ್ಳಲು ಸಂಸ್ಕೃತದಲ್ಲಿ ಸೂತ್ರ ರಚನೆಯನ್ನು ಕಾಣಬಹುದು. ಈ ಶ್ಲೋಕವೂ ಪುರಾಣಗಳ ಹೆಸರನ್ನು ಸುಲಭದಲ್ಲಿ ನೆನಪಿಟ್ಟುಕೊಳ್ಳಲು ರಚಿಸಿದ ಸೂತ್ರರೂಪದ ಶ್ಲೋಕ. ಹದಿನೆಂಟು ಪುರಾಣಗಳ ಮೊದಲ ಅಕ್ಷರವನ್ನು ಜೋಡಿಸಿ ಈ ಸೂತ್ರ ರೂಪದ ಶ್ಲೋಕವನ್ನು ರಚಿಸಲಾಗಿದೆ. ಇವುಗಳ ಹೆಸರು ಹೀಗಿವೆ.



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಮತ್ಸ್ಯ ಪುರಾಣ (14,000), ಮಾರ್ಕಂಡೇಯ ಪುರಾಣ (9000), ಭವಿಷ್ಯತ್ ಪುರಾಣ (24,500), ಭಾಗವತ ಪುರಾಣ (18,000), ಬ್ರಹ್ಮ ಪುರಾಣ (13,000), ಬ್ರಹ್ಮಾಂಡ ಪುರಾಣ (12,200), ಬ್ರಹ್ಮ ವೈವರ್ತ ಪುರಾಣ (18,000), ವರಾಹ ಪುರಾಣ (24,000), ವಾಯುಪುರಾಣ (24,000), ವಾಮನ ಪುರಾಣ (10,000), ವಿಷ್ಣು ಪುರಾಣ (23,000), ಅಗ್ನಿ ಪುರಾಣ (16,000), ನಾರದ ಪುರಾಣ (25,000), ಪದ್ಮಪುರಾಣ (55,000), ಲಿಂಗ ಪುರಾಣ (11,000), ಗರುಡ ಪುರಾಣ (18,000), ಕೂರ್ಮ ಪುರಾಣ (18,000), ಸ್ಕಂಧ ಪುರಾಣ (81,000). ಇಲ್ಲಿ ಸೂತ್ರ ಶ್ಲೋಕ ಹೇಳಿದ ಪ್ರಕಾರ ಪುರಾಣವನ್ನು ಉಲ್ಲೇಖಿಸಿ ಆಯಾ ಪುರಾಣಗಳಲ್ಲಿರುವ ಶ್ಲೋಕ ಸಂಖ್ಯೆಯನ್ನೂ ನೀಡಲಾಗಿದೆ.

ಭಗವಾನ್ ವೇದವ್ಯಾಸರು ರಚಿಸಿದ ಮಹಾಭಾರತದ ಒಂದು ಲಕ್ಷ ಶ್ಲೋಕಗಳು ಹಾಗೂ ಹದಿನೆಂಟು ಪುರಾಣಗಳಲ್ಲಿರುವ ಒಟ್ಟೂ 4,13,700 ಶ್ಲೋಕಗಳನ್ನು ಸೇರಿಸಿದರೆ ಐದು ಲಕ್ಷಕ್ಕೂ ಹೆಚ್ಚು ಶ್ಲೋಕಗಳಾಗುತ್ತವೆ. ಇವೆಲ್ಲವೂ ವ್ಯಾಸರ ರಚನೆಯೆಂದೇ ಪ್ರಸಿದ್ಧ. ಇಷ್ಟೇ ಪ್ರಮಾಣದ ಉಪಪುರಾಣಗಳಿವೆ. ಇವುಗಳ ರಚನೆಯಲ್ಲೂ ವ್ಯಾಸರ ಯೋಗದಾನವಿದೆ.

ಪ್ರಳಯ ಕಾಲದಲ್ಲಿ ಶತಕೋಟಿ ಗ್ರಂಥ ಪರಿಮಿತವಾದ ಪುರಾಣ ರಾಶಿಯು ಸುಟ್ಟು ಹೋಗಲು ಮಹಾವಿಷ್ಣುವಿನಿಂದ ಇವು ಚತುರ್ಮುಖನಿಗೆ ಉಪದೇಶಿಸಲ್ಪಟ್ಟವಂತೆ. ಕಾಲಕ್ರಮದಲ್ಲಿ ಇವು ಶಿಥಿಲವಾಗಲು, ಮಹಾವಿಷ್ಣುವು ವ್ಯಾಸರೂಪದಿಂದ ಅವತರಿಸಿ, ಇವುಗಳನ್ನು ನಾಲ್ಕು ಲಕ್ಷ ಶ್ಲೋಕಗಳುಳ್ಳ ಹದಿನೆಂಟು ಪುರಾಣಗಳಿಗಿಳಿಸಿ ಪ್ರಚಾರ ಪಡಿಸಿದನು ಎಂಬ ಮಾತಿದೆ. ಪುರಾಣಗಳು ಕಥೆಯ ಹಂದರ. ಶಾಶ್ವತ ತತ್ವವನ್ನು, ಜೀವನ ಮೌಲ್ಯವನ್ನೂ, ವ್ಯಾವಹಾರಿಕ ಸಭ್ಯತೆಯನ್ನು ಇವು ಬೋಧಿಸುತ್ತದೆ. ಕ್ಲಿಷ್ಟಕರವಾದ ವೇದಾರ್ಥಗಳನ್ನು ಜನಮಾನಸಕ್ಕೆ ತಲುಪಿಸಲು ಪುರಾಣಗಳ ರಚನೆಯಾಯ್ತು ಎಂಬುದು ವಿಮರ್ಶಕರ ಅಭಿಪ್ರಾಯ. ಈ ಹದಿನೆಂಟು ಪುರಾಣಗಳು ಯಾರ ಕುರಿತು ಹೇಳುತ್ತವೆ ಎಂಬುದಕ್ಕೆ ಈ ಮುಂದಿನ ಶ್ಲೋಕದಲ್ಲಿ ವಿವರಣೆಯಿದೆ.

ಅಷ್ಟಾದಶ ಪುರಾಣೇಷು ದಶಭಿಃ ಗೀಯತೇ ಶಿವಃ।
ಚತುರ್ಭಿಃ ಭಗವಾನ್ ಬ್ರಹ್ಮಾ ದ್ವಾಭ್ಯಾಂ ದೇವೀ ತಥಾ ಹರಿಃ॥

ಹದಿನೆಂಟು ಪುರಾಣಗಳಲ್ಲಿ ಹತ್ತು ಪುರಾಣಗಳು ಶಿವನ ಕುರಿತಾಗಿವೆ.ನಾಲ್ಕು ಪುರಾಣಗಳು ಬ್ರಹ್ಮನ ಕುರಿತಾಗಿವೆ. ಎರಡು ದೇವಿಯ ಪರವಾಗಿ, ಮತ್ತೆರಡು ವಿಷ್ಣುವಿನ ಪರವಾಗಿ ಇವೆ.

ಸಾತ್ತ್ವಿಕ, ರಾಜಸ, ತಾಮಸ ಪುರಾಣಗಳಾಗಿಯೂ ವಿಂಗಡಿಸುತ್ತಾರೆ.

ಹರಿಮಹಾತ್ಮ್ಯೆಯನ್ನು ವರ್ಣಿಸುವ ಪುರಾಣಗಳು ಸಾತ್ತ್ವಿಕ, ಬ್ರಹ್ಮ ಮಹಾತ್ಮ್ಯೆಯನ್ನು ವರ್ಣಿಸುವ ಪುರಾಣಗಳು ರಾಜಸ, ತಾಮಸಾಂಶಗಳನ್ನು ವಿವರಿಸುವ ಪುರಾಣಗಳನ್ನು ತಾಮಸ ಪುರಾಣಗಳು ಎಂದು ಗುರುತಿಸಿದ್ದಾರೆ.

# ಶಕ್ತಿ ಎಂಬ ದೌರ್ಬಲ್ಯ

ದುರ್ಬಲನ ಮೇಲೆ ಪ್ರಚಂಡ ಶಕ್ತಿಯುಳ್ಳ ಒಬ್ಬ ಆಕ್ರಮಣ ಮಾಡಿದರೆ ಅದರ ಪರಿಣಾಮವು ಎಲ್ಲರಿಗೂ ಗೊತ್ತಿರುತ್ತದೆ. ಆ ಯುದ್ಧವನ್ನು ಗೆದ್ದರೂ ಶಕ್ತಿವಂತನ ಗೌರವ ಹೆಚ್ಚುವುದಿಲ್ಲ. ಸೋತರಂತೂ ಹೇಗೂ ಗೌರವವಿಲ್ಲ.

ಆ–ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಕೆಲವು ಮನುಷ್ಯರಲ್ಲಿ ಭ್ರಮೆಗಳಿರುತ್ತವೆ. ಶಕ್ತಿಯಿದ್ದರೆ ತಾನು ಪರಿಪೂರ್ಣ ಎಂಬುದೂ ಅವುಗಳಲ್ಲಿ ಒಂದು.

ಶಕ್ತಿ ಎಲ್ಲವನ್ನೂ ಸಾಧಿಸಲಾರದು. ವಿಚಿತ್ರ ಅಂದರೆ ಯಾವುದು ಶಕ್ತಿ ಎಂದು ನಾವು ತಿಳಿಯುತ್ತೇವೋ ಅದು ನಮ್ಮ ದೌರ್ಬಲ್ಯವೂ ಆಗಿಬಿಡುವುದು. ಶಕ್ತಿ ಅಂದರೆ ಸಾಮಾನ್ಯ ಗ್ರಹಿಕೆ ಏನು? ದೇಹದಲ್ಲಿ ತುಂಬಿಕೊಂಡ ಬಲ. ಇನ್ನೊಬ್ಬರನ್ನು ಸುಲಭವಾಗಿ ಘಾಸಿಗೊಳಿಸಬಹುದಾದ ಆಯುಧಗಳ ಬಲ. ಹಣ, ಅಧಿಕಾರದ ಬಲ, ಬುದ್ಧಿಯ ಬಲ. ಈಗಲೀಗ ಅತ್ಯಾಧುನಿಕ ತಂತ್ರಜ್ಞಾನದ ಬಲವೂ ಈ ಪಟ್ಟಿಗೆ ಸೇರಿಕೊಂಡಿದೆ. ಮನುಷ್ಯನಿಗೆ ಅಥವಾ ಯಾವುದೇ ಜೀವಿಗೆ ಅನ್ನಿ, ಶಕ್ತಿ ಯಾಕೆ ಬೇಕು? ಒಂದು, ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ. ಇನ್ನೊಂದು, ಅನ್ಯರನ್ನು ಅಂಜಿಸುವುದಕ್ಕೆ. ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಶಕ್ತಿ ಸಂಗ್ರಹ ಬೇಕು ಎನ್ನುವುದಕ್ಕೆ ಸಮರ್ಥನೆಯುಂಟು. ಆದರೆ ಇನ್ನೊಬ್ಬರನ್ನು ಹೆದರಿಸುವುದಕ್ಕೆ ನಮಗೆ ಶಕ್ತಿ ಬೇಕು ಎಂಬುದು ಸಮರ್ಥನೀಯವಲ್ಲ. ಇನ್ನೊಬ್ಬನ್ನನ್ನು ಹೆದರಿಸುವುದು ಅನ್ನುವುದು ಅಷ್ಟಕ್ಕೆ ನಿಲ್ಲುವುದಿಲ್ಲ. ಹೆದರಿಸಿ, ಅವನಲ್ಲಿದ್ದ ಏನನ್ನೋ ತನ್ನ ಸ್ವಾಧೀನಕ್ಕೆ ಪಡೆಯುವಲ್ಲಿಗೆ ಮುಟ್ಟುತ್ತದೆ. ಆಗ ದುರ್ಬಲರಿಗೆ ಪ್ರಪಂಚದಲ್ಲಿ ಬದುಕುವ ಅವಕಾಶವನ್ನು ನಿರಾಕರಿಸಿದ ಹಾಗಾಗುತ್ತದೆ.

ಹೀಗೆ ಅನ್ಯರನ್ನು ಪೀಡಿಸಿ, ಹೆದರಿಸಿ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದಾಗಲಿ, ಅವರ ಸಂಪತ್ತನ್ನು (ಹೊನ್ನು, ಮಣ್ಣು, ಹೆಣ್ಣು) ಬಲಾತ್ಕಾರದಿಂದ ಸೆಳೆದಿಟ್ಟುಕೊಳ್ಳುವುದಾಗಲಿ, ಶಕ್ತಿಯಿಂದ ಸಾಧ್ಯವಾದೀತು. ಉಳಿದವರ ಬಾಯಿ ಮುಚ್ಚಿಸುವುದೂ ಸಾಧ್ಯವಾದೀತು. ಆದರೆ ಅವರ ಮನಸ್ಸನ್ನು ಮುಚ್ಚಿಸಬಹುದೆ? ನೊಂದವರ ಮೌನವನ್ನು, ಅಸಹಾಯಕರ ತಿರಸ್ಕಾರವನ್ನು ಮುಚ್ಚಬಹುದೆ? ಯಾವ ಶಕ್ತಿಯು ಭೌತಿಕ ಸಂಪತ್ತನ್ನು ಸೆಳೆಯುವುದಕ್ಕೆ ಅನುಕೂಲವಾಯಿತೋ ಅದೇ ಶಕ್ತಿ ಉಳಿದವರಿಂದ ತಿರಸ್ಕರಿಸಲ್ಪಟ್ಟಾಗ ಅದು ಶಕ್ತಿಯಾಗಿ ಉಳಿಯುವುದಿಲ್ಲ. ಅದು ದೌರ್ಬಲ್ಯವಾಗುತ್ತದೆ. ಶಕ್ತನ ಅಹಂಕಾರ ಕರಗುತ್ತದೆ. ಶಕ್ತಿಯು ಹೊರಲಾರದ ಒಜ್ಜೆಯಾಗುತ್ತದೆ.

ಇದಕ್ಕೆ ಉದಾಹರಣೆ ಮಹಾಭಾರತದಲ್ಲಿ ಬರುವ ಒಂದು ಪ್ರಕರಣ. ಪಾಂಡವ ಮತ್ತು ಕೌರವ ಸೇನೆಗಳೆರಡೂ ಯುದ್ಧ ಸನ್ನದ್ಧವಾಗಿ ನಿಂತ ಹೊತ್ತು, ಅವರಿಗೆ ನೆರವನ್ನು ನೀಡುವುದಕ್ಕಾಗಿ ಬಂದವನು ರುಕ್ಮಿ. ರುಕ್ಮಿ ಅಂದರೆ ಕೃಷ್ಣನ ಮಡದಿ ರುಕ್ಮಿಣಿಯ ಅಣ್ಣ. ರುಕ್ಮಿಣಿ ಕೃಷ್ಣನನ್ನು ಮದುವೆಯಾಗುವುದನ್ನು ವಿರೋಧಿಸಿದವನು. ಅವನಿಗೆ ಸ್ನೇಹಿತರಾಗಿದ್ದವರು ದುಷ್ಟರಾದ ಜರಾಸಂಧ, ಶಿಶುಪಾಲ ಮೊದಲಾದವರು. ಹಾಗಾಗಿ ಅವನ ಸ್ವಭಾವವೂ ದುಷ್ಟವೇ. ಅವನಿಗೆ ಈ ಯುದ್ಧದ ವರ್ತಮಾನ ತಿಳಿಯಿತು. ತನ್ನ ಒಂದು ಅಕ್ಷೋಹಿಣೆ ಬಲದೊಂದಿಗೆ ಬಂದ. ಮೊದಲು ಪಾಂಡವರಿಗೆ ಸಹಾಯ ಮಾಡುತ್ತೇನೆ ಅಂದ. ತನ್ನ ಬಲವೇ ಬಲ. ಅದಿಲ್ಲದೆ ನೀವು ಗೆಲ್ಲಲಾರಿರಿ ಎನ್ನುವಂತಿದ್ದ ಅವನ ಅಹಂಕಾರವನ್ನು ಕಂಡು ಪಾಂಡವರು ಅವನ ಸಹಾಯವನ್ನು ನಿರಾಕರಿಸಿದರು.

ರುಕ್ಮಿ ಅಲ್ಲಿಂದ ದುರ್ಯೋಧನನಲ್ಲಿಗೆ ಹೋಗಿ, "ನಿನ್ನ ವಿರೋಧಿಗಳಾದ ಪಾಂಡವರನ್ನು ಗೆದ್ದುಕೊಡುತ್ತೇನೆ" ಅಂದ. ದುರ್ಯೋಧನ ಮತ್ತು ರುಕ್ಮಿ ಇಬ್ಬರ ಸ್ವಭಾವವೂ ಒಂದೇ ರೀತಿ.

ಆದರೂ (ಅಥವಾ ಹಾಗಾಗಿಯೇ) ದುರ್ಯೋಧನನೂ ರುಕ್ಮಿಯ ಸಹಾಯವನ್ನು ತಿರಸ್ಕರಿಸಿದ. ತಾನೊಬ್ಬನೇ ಶಕ್ತ. ತನ್ನ ಸಹಾಯವೇ ಈ ಯುದ್ಧಕ್ಕೆ ಬಹಳ ಮುಖ್ಯ ಎಂಬಂತಿದ್ದ ರುಕ್ಮಿಗೆ ಇದರಿಂದ ನಿರಾಶೆಯಾಗಿರಬಹುದು. ಅವನು ಬಾಯಿ ಮುಚ್ಚಿಕೊಂಡು ಹೊರಟು ಹೋದ. ಮುಂದೊಂದು ಸಂದರ್ಭದಲ್ಲಿ ಅವನ ಸೊಕ್ಕನ್ನು ಕಂಡು ಬಲರಾಮ ಅವನನ್ನು ಹೊಡೆದು ಕೊಂದ.



ರುಕ್ಮಿ ಶಕ್ತನಿದ್ದ, ನಿಜ. ಅವನಿಗೆ ಕೃಷ್ಣನೊಂದಿಗೆ ಇದ್ದ ಪೂರ್ವವಿರೋಧವೂ ಕ್ರಮೇಣ ಶಮನವಾಗಿರಬಹುದು. ಅಂತಹವನ ಸಹಾಯವನ್ನು ಪಡೆದುಕೊಂಡಿದ್ದರೆ ಪಾಂಡವರಿಗೆ ಅನುಕೂಲವೇ ಆಗುತ್ತಿತ್ತು. ದುರ್ಯೋಧನನಿಗಾದರೂ ಅಷ್ಟೇ. ಒಬ್ಬ ಪ್ರಬಲನ ಸಹಾಯ ಪಾಂಡವರನ್ನು ಸೋಲಿಸುವುದಕ್ಕೆ ಪ್ರಯೋಜನಕರವಾಗುತ್ತಿತ್ತು. ಆದರೂ ರುಕ್ಮಿಯಂತಹ ಅಹಂಕಾರಿಯ ಶಕ್ತಿಯನ್ನು ಎರಡೂ ಪಕ್ಷದವರು ತಿರಸ್ಕರಿಸಿದರು. ಅವನ ಸಹಾಯ ಪಡೆದು ಯುದ್ಧವನ್ನು ಗೆದ್ದಿದ್ದರೂ ನೆಮ್ಮದಿ ಇರುತ್ತಿರಲಿಲ್ಲ. "ನನ್ನ ಸಹಾಯವಿಲ್ಲದಿದ್ದರೆ ಅವರು ಗೆಲ್ಲುತ್ತಿರಲಿಲ್ಲ" ಎಂದು ಎಲ್ಲ ಕಡೆ ಪ್ರಚಾರ ಮಾಡಿಕೊಂಡು ಬರುವಂತಹ ವ್ಯಕ್ತಿ ಈ ರುಕ್ಮಿ. ಹೋಗಿ ಹೋಗಿ ಅವನಂತಹವನ ಸಹಾಯವು ಬೇಕೆ? ಒಂದು ವೇಳೆ ಸೋತರಂತೂ ಕೇಳುವುದೇ ಬೇಡ. 'ನೊಣ ತಿಂದು ಜಾತಿ ಕೆಡುವುದು' ಅನ್ನುವ ಮಾತು ಉಂಟಷ್ಟೆ? ಅತ್ತ ಹೊಟ್ಟೆಯೂ ತುಂಬಲಿಲ್ಲ. ಇತ್ತ ಜಾತಿಯೂ ಉಳಿಯಲಿಲ್ಲ. ರುಕ್ಮಿಯ ನೆರವೂ ಅದೇ ರೀತಿಯದು. ಹೀಗೆ ಶಕ್ತಿ ಇದ್ದರೂ ಅದರಿಂದ ರುಕ್ಮಿಗೆ ಗೌರವ ಬರಲಿಲ್ಲ. ಮೇಲಾಗಿ ಅವಮಾನವೇ ಆಯಿತು.

ಸದ್ಯ ಜಾಗತಿಕ ಮಟ್ಟದ ಬೆಳವಣಿಗೆಗಳನ್ನು ಗಮನಿಸಿದರೆ ಈ ಉದಾಹರಣೆ ಎಷ್ಟು ಸಂಗತ ಎನ್ನುವುದು ಸ್ಫುಟವಾಗುತ್ತದೆ. ಒಂದು ಪ್ರಬಲ ರಾಷ್ಟ್ರವಾಗಿ ಅಮೆರಿಕಾದ ಶಕ್ತಿ ಜಗತ್ತನ್ನು ನಡುಗಿಸುವಷ್ಟು ಉಂಟು. ಇಲ್ಲಿಯವರೆಗೂ ಅನೇಕ ಯುದ್ಧಗಳನ್ನು ಮಾಡಿ ಗೆದ್ದ ಅನುಭವವೂ ಅದಕ್ಕಿದೆ. ತಾನು ಗೆಲ್ಲುತ್ತ ಬಂದ ಕಾರಣ ತನಗೆ ಸೋಲೇ ಇಲ್ಲ ಎನ್ನುವ ಭ್ರಮೆಗೆ ಅದು ಈಡಾಗಿದ್ದರೆ ಆಶ್ಚರ್ಯವಲ್ಲ. ಆದರೆ ಅಷ್ಟು ಶಕ್ತಿ ಇದ್ದಾಗ ಸಹಜವಾಗಿ ಬರುವ ಅಹಂಕಾರ ಎಷ್ಟು ಅಪಾಯಕಾರಿ ಎಂಬ ಅರಿವೂ ಇರಬೇಕಿತ್ತು. ದುರ್ದೈವವಶಾತ್ ಅಂತಹ ಅರಿವು ಅದಕ್ಕಿಲ್ಲ. ಎಷ್ಟು ಭಯಂಕರವಾದ ಅಣ್ವಸ್ತ್ರಗಳು, ಪ್ರಪಂಚದ ಯಾವ ಮೂಲೆಯನ್ನಾದರೂ ತಲುಪಿ, ಲಕ್ಷ್ಯವನ್ನು ವಿಧ್ವಂಸ ಮಾಡಬಲ್ಲ ಕ್ಷಿಪಣಿಗಳು, ಅತ್ಯಾಧುನಿಕ ಸಮರ ವಿಮಾನಗಳು, ಬಲಾಢ್ಯ ಸೇನೆ– ಇಷ್ಟೆಲ್ಲ ಇದ್ದಾಗಲೂ ಅದನ್ನು ತಮ್ಮ ಆಪ್ತ ಸ್ನೇಹಿತ ಎಂದು ಯಾವ ರಾಷ್ಟ್ರವೂ ಪರಿಗಣಿಸುವ ಸ್ಥಿತಿ ಇಲ್ಲ. ಯಾರು ಹಾಗೆ ಭಾವಿಸುತ್ತಾರೋ ಅಲ್ಪ ಸಮಯದಲ್ಲೇ ಅವರ ವಿಶ್ವಾಸಕ್ಕೆ ಧಕ್ಕೆ ಬರುವಂತೆ ಆ ದೇಶದ ನಾಯಕತ್ವ ನಡೆದುಕೊಳ್ಳುತ್ತದೆ. ಗೆಳೆಯರ ಬೆನ್ನಿಗೆ ಚೂರಿ ಹಾಕಿದವನನ್ನು ಯಾರು ತಾನೇ ನಂಬುತ್ತಾರೆ?

ಅದು ಹೋಗಲಿ, ಇರಾನಿನಂತಹ ಪುಟ್ಟ ದೇಶವೂ ಅದಕ್ಕೆ ಎದುರು ನಿಂತು ದಿಟ್ಟವಾಗಿ ಹೋರಾಡುತ್ತದೆ. ಅಂತಿಮವಾಗಿ ಯಾವುದು ಗೆಲ್ಲುತ್ತದೆ ಎಂಬುದು ಮುಖ್ಯವಲ್ಲ. ದುರ್ಬಲನ ಮೇಲೆ ಪ್ರಚಂಡ ಶಕ್ತಿಯುಳ್ಳ ಒಬ್ಬ ಆಕ್ರಮಣ ಮಾಡಿದರೆ ಅದರ ಪರಿಣಾಮವು ಎಲ್ಲರಿಗೂ ಗೊತ್ತಿರುತ್ತದೆ. ಆ ಯುದ್ಧವನ್ನು ಗೆದ್ದರೂ ಶಕ್ತಿವಂತನ ಗೌರವ ಹೆಚ್ಚುವುದಿಲ್ಲ. ಸೋತರಂತೂ ಹೇಗೂ ಗೌರವವಿಲ್ಲ. ಅದಕ್ಕಿಂತ ಹೆಚ್ಚಾಗಿ ಒಂದು ಯುದ್ಧವು ಅನಿವಾರ್ಯವಾಗಿತ್ತೇ ಎಂದು ಆತ್ಮ ನಿರೀಕ್ಷಣೆ ಮಾಡಿಕೊಂಡಾಗ (ಅಂತಹ ಸಾಧ್ಯತೆಯೇ ಬಲ ಪ್ರಮತ್ತರಲ್ಲಿ ಇರಲಾರದು. ಆದರೂ) ನಾಚಿಕೊಳ್ಳುವ ಹಾಗಾದರೆ ಶಕ್ತನಿಗೆ ಏನು ಬೆಲೆ?

ತನ್ನಲ್ಲಿ ಅಧಿಕ ಶಕ್ತಿಯಿದೆ ಎಂದು ಯಾವ ದೇಶದ ಮೇಲಾದರೂ ಆಕ್ರಮಣ ಮಾಡುವುದು, ಅಲ್ಲಿನ ನಾಯಕನನ್ನೇ ಅಪಹರಿಸಿ ತಂದು ಸೆರೆ ಮನೆಯಲ್ಲಿ ಇಡುವುದು, ಇನ್ನೊಂದು ದೇಶದ ಸಂಪತ್ತಿನ ಮೇಲೆ ಕಣ್ಣಿಟ್ಟು, ಅದನ್ನು ಪಡೆಯುವುದಕ್ಕಾಗಿ ಸೇನೆ ನುಗ್ಗಿಸುವುದು ಇದೆಲ್ಲ ಯಾರಿಗೆ ಮೆಚ್ಚುಗೆಯಾದೀತು? ಅದನ್ನು ಮಾಡಿದ ಶಕ್ತಿವಂತನನ್ನು ಯಾರಾದರೂ ನಂಬುತ್ತಾರೆಯೆ?

ತೀರ ಹಿಂದಿನ ಕಾಲದಲ್ಲಿ ನಾಗರಿಕತೆ ಬೆಳೆಯದೇ ಇದ್ದಾಗ, ಬಲಿಷ್ಠರು ತಮಗೆ ಬೇಕಾದ ಆಹಾರಕ್ಕಾಗಿಯೋ, ಸಂಪತ್ತಿಗಾಗಿಯೋ, ಹೆಣ್ಣಿಗಾಗಿಯೋ ದುರ್ಬಲರ ಮೇಲೆ ದಾಳಿ ಮಾಡಿ ಬೇಕಾದುದನ್ನು ಕಿತ್ತುಕೊಳ್ಳುತ್ತಿದ್ದರು. ಈಗಲೂ ಅದೇ ಧೋರಣೆಯನ್ನು ಹೊಂದಿದ ಶಕ್ತಿವಂತನಿಗೆ ದುರ್ಬಲ ಎನಿಸಿದವನೂ ಪ್ರತಿಭಟನೆ ತೋರಿಸುತ್ತಾನೆ. ಅಂತಹವನ ಗೆಳೆತನವನ್ನು ಯಾರೂ ಬಯಸುವುದಿಲ್ಲ. ಕ್ರಮೇಣ ಆ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಏಕಾಂಗಿಯಾಗುವ ಸನ್ನಿವೇಶ ಉಂಟಾಗುತ್ತದೆ. ಮುಂದೆ ಎಂದೋ ಒಂದು ದಿನ ಪ್ರಬಲನೊಬ್ಬ ಅಥವಾ ಹಲವು ಮಂದಿ ದುರ್ಬಲರು ಒಟ್ಟಾಗಿ ಏಕಾಂಗಿಯಾದವನನ್ನು ಬಡಿದು ಹಾಕಿದರೆ ಅದರಲ್ಲಿ ಅಚ್ಚರಿಯಿಲ್ಲ. ಶಕ್ತಿಯೇ ದೌರ್ಬಲ್ಯವಾಗುವುದು ಅಂದರೆ ಹಾಗೆ.

# ವಾಸನಾಭಂಜಕ ಕೋಸಲಾಧೀಶ ಶ್ರೀರಾಮ

▸ ಕುಮಾರೇಶ್ವರ ಭಟ್ ಮುಂಡಾಜೆ

**ರಾಮನಾಮ ಭಜಿಸಿದವಗೆ ಉಂಟೆ ಭವದ ಬಂಧನ**
**ಕಾಮಹರನ ಸತಿಯು ಸದಾ ನೇಮದಿಂದ ನೆನೆವನ**



ಈ ಪ್ರಸಿದ್ಧ ದಾಸರ ಗೀತೆಯು ಶ್ರೀರಾಮನ ಆರಾಧನೆಯ ಮಹತ್ವವನ್ನು ತುಂಬಾ ಸರಳವಾದ ಭಾಷೆಯಲ್ಲಿ ಛಂದೋಬದ್ಧವಾಗಿಯೂ ಆಕರ್ಷಣೀಯವಾಗಿಯೂ ಸಾರಿದೆ. ಸಾಕ್ಷಾತ್ ಪರಶಿವನ ಪತ್ನಿಯಾದ ಪಾರ್ವತಿಯೇ ಶ್ರೀರಾಮ ನಾಮವನ್ನು ಅತೀವ ಭಕ್ತಿ ಶ್ರದ್ಧೆಯಿಂದ ನೆನೆಯುತ್ತಾಳೆಂದ ಮೇಲೆ ಆ ನಾಮದ ಮಹಿಮೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳಲೇಬೇಕು.

ಚೈತ್ರ ಶುದ್ಧ ನವಮಿ ಮತ್ತೆ ಬಂದಿದೆ. ಶ್ರೀರಾಮನು ಭೂಮಿಯಲ್ಲಿ ಅವತರಿಸಿದ ದಿನ. ತೇನ ತ್ಯಕ್ತೇನ ಭುಂಜೀಥಾ– ಯಾರು ತ್ಯಾಗಿಗಳೋ ಅವರೇ ಭೋಗಿಗಳು–ಎಂಬರ್ಥದ ಈ ಉಪನಿಷತ್ ಹೇಳಿಕೆ ಏಕಾಏಕಿ ಪರಸ್ಪರ ವಿರೋಧಾಭಾಸದಂತೆಯೂ ತೋರುತ್ತದೆ. ತೇನ ತ್ಯಕ್ತೇನ ಭುಂಜೀಥಾ ಎಂದರೆ ಸಾಮಾನ್ಯವಾಗಿ "ತ್ಯಾಗಭಾವದಿಂದ ಅನುಭವಿಸು" ಅಥವಾ "ನಿನಗೆ ದೊರೆತದ್ದನ್ನು ಆಸಕ್ತಿ–ಆಸೆಯ ಬಂಧನವಿಲ್ಲದೆ ಉಪಯೋಗಿಸು" ಎಂಬುದು ಅರ್ಥ. ಈಶಾವಾಸ್ಯೋಪನಿಷತ್ತಿನ ಮಂತ್ರದ ಭಾಗವಾಗಿರುವ ಈ ಶ್ಲೋಕದ ಜೊತೆಗೆ ಬರುವ 'ಮಾ ಗೃಧಃ ಕಸ್ಯಸ್ವಿದ್ಧನಮ್' (ಯಾರ ಧನವನ್ನೂ ಲೋಭಿಸಬೇಡ) ಎನ್ನುವುದು ಕೂಡ ಅಷ್ಟೇ ಮಹತ್ತ್ವಪೂರ್ಣವಾಗಿದೆ. ಈ ವಾಕ್ಯದ ಸಾರವೆಂದರೆ, ಜಗತ್ತಿನ ಎಲ್ಲವನ್ನೂ ಸ್ವಂತದಂತೆ ಕಬಳಿಸುವ ಮನೋಭಾವವಿಲ್ಲದೆ, ಕರ್ತವ್ಯಬುದ್ಧಿಯಿಂದ ಮತ್ತು ತ್ಯಾಗದ ಮನಸ್ಸಿನಿಂದ ಬದುಕಬೇಕು. 'ಭುಂಜೀಥಾ' ಅಂದರೆ ಕೇವಲ 'ತಿನ್ನು' ಎಂದಲ್ಲ; 'ಅನುಭವಿಸು, ಉಪಯೋಗಿಸು, ಜೀವನವನ್ನು ನಡೆಸು' ಎಂಬ ಅರ್ಥವೂ ಇದೆ. ಇದರ ತಾತ್ತ್ವಿಕ ಅರ್ಥದಲ್ಲಿ, ನಿನಗೆ ಬಂದ ಸಂಪತ್ತು, ಅವಕಾಶ, ಶಕ್ತಿ, ಸಮಯ ಎಲ್ಲವೂ ಸಂಪೂರ್ಣವಾಗಿ 'ನನ್ನದೇ' ಎಂದುಕೊಳ್ಳದೆ, ಅದರ ಮೇಲೆ ಆಸಕ್ತಿ ಕಡಿಮೆ ಮಾಡಿ ಬದುಕುವುದು ಮುಖ್ಯ ಎನ್ನುವುದು.

'ಆತ್ಮಾನಾಂ ಮಾನುಷಂ ಮನ್ಯೇ...' ಎಂದು ಘೋಷಿಸುತ್ತಾ ದೈವತ್ವವನ್ನೇ ತ್ಯಾಗ ಮಾಡಿ ಮಾನವತ್ವವನ್ನು ರೂಢಿಸಿಕೊಂಡವ ಶ್ರೀರಾಮ. ಶ್ರೀರಾಮನ ದಿವ್ಯತ್ವ ಮತ್ತು ಮಾನವೀಯತೆ ಎರಡೂ ಒಂದೇ ವೇಳೆ ಕಾಣಿಸುತ್ತವೆ. ಅವನು ಜನರಿಗೆ ಸುಲಭವಾಗಿ ಅರ್ಥವಾಗುವ, ಅವರ ನಡುವೆಯೇ ಬದುಕುವ, ಧರ್ಮವನ್ನು ಆಚರಿಸುವ ಆದರ್ಶ ವ್ಯಕ್ತಿಯಾಗಿದ್ದ. ದೇವರು ಭೂಮಿಗೆ ಬಂದಾಗಲೂ ಅಹಂಕಾರದಿಂದ ದೂರವಾಗಿ, ಮಾನವನಂತೆ ಸರಳವಾಗಿ, ಶಿಷ್ಟವಾಗಿ, ಧರ್ಮಪರವಾಗಿ ನಡೆಯಬಹುದು ಎಂಬ ಸಂದೇಶವೂ ಇದೆ. ಈ ಮಾತು ಮನುಷ್ಯನಿಗೆ ಒಂದು ಬೋಧನೆಯೂ ಹೌದು. ಹೊರಗಿನ ರೂಪಕ್ಕಿಂತ ಒಳಗಿನ ಸ್ವಭಾವ ಮುಖ್ಯ. ರಾಮನ ಬದುಕು 'ಮನುಷ್ಯನಂತೆ' ಬದುಕುವುದು, ಧರ್ಮ, ಕರುಣೆ, ಶಿಸ್ತು, ಮತ್ತು ಕರ್ತವ್ಯಗಳಿಂದ ಉನ್ನತವಾಗುತ್ತದೆ ಎಂಬುದನ್ನು ತೋರಿಸುತ್ತದೆ. ದೇವತ್ವವನ್ನು ಪ್ರದರ್ಶಿಸುವುದಕ್ಕಿಂತ, ಮಾನವೀಯತೆಯನ್ನು ಜೀವಿಸುವುದೇ ಹೆಚ್ಚಿನ ಮಹತ್ವದ ಸಂಗತಿ ಎನ್ನುವ ಅರ್ಥವೂ ಇದರಲ್ಲಿ ಇದೆ. ಇನ್ನು ಪಿತೃವಾಕ್ಯ ಪರಿಪಾಲನೆಗಾಗಿ ಸಾಕೇತದ ಸಾಮ್ರಾಜ್ಯವನ್ನೇ ತ್ಯಾಗ ಮಾಡಿ ವನವಾಸಕ್ಕೆ ಹೊರಟ ವಿಚಾರವಂತೂ ಜನಜನಿತ.



ಮತ್ತೆ ನಾಮದ ಗರಿಮೆಯನ್ನು ನವಮಿಯ ಜನುಮದಿನದ ಈ ಶುಭ ಸಂದರ್ಭ ಅವಲೋಕಿಸಿದಾಗ ಮೂಡಿಬರುವುದೇ ದಿವ್ಯಾನಂದ. ಸಮಯದ ಕ್ಷಣ ಕ್ಷಣ, ಶರೀರದ ಕಣ ಕಣ ನಾಮ ಸಂಕೀರ್ತನೆಯಲ್ಲಿ ತೊಡಗಿದಾಗ ಅದು ಅಂತಿಮ ಸುಖಕ್ಕೆ ಕಾರಣವಾಗಿ ಆತ್ಮ ಸಾಕ್ಷಾತ್ಕಾರಕ್ಕೆ ಹೇತುವಾಗುತ್ತದೆ. ಶ್ರೀ ರಾಮ ನಾಮ ಸಂಕೀರ್ತನೆ ಅಂತರ್ಯದಲ್ಲಿ ಸಾಗುತ್ತಿದ್ದರೆ, ಅಂತಃಚಕ್ಷುಗಳು ರಾಘವನ ರೂಪವನ್ನು ಸದಾ ದರ್ಶಿಸುತ್ತಾ ನಾಮ ಸ್ಮರಣೆಗೆ ಸಾತ್ ನೀಡಬೇಕು. ಇನ್ನು ಒಳಮನಸ್ಸು ದಾಶರಥಿಯ ಲೀಲೆಗಳನ್ನು ಸದಾ ಮೆಲುಕು ಹಾಕುತ್ತಿರಬೇಕು. ಜೊತೆಗೆ ಗುಣದ ನೆನಪೂ ಯಾವತ್ತೂ ಇದ್ದರೆ ಗುಣಾವಗುಣ ಅತೀತನಾದ ಶ್ರೀರಾಮನು ಒಲಿಯದಿರುವನೇ? ಕಾಲಾಕಾಲದ ಪರಿವೆಯಿಲ್ಲದೆ ಕಾಲಾತೀತನಾದ ಕಾಕುಸ್ಥನನ್ನು ಭಜಿಸಿದರೆ ಅದೇ ಸಾಕು. ಕ್ಷೇತ್ರಾಕ್ಷೇತ್ರಗಳ ಭೇದವಿಲ್ಲದೆ ಕ್ಷೇತ್ರಜ್ಞನಾದ ಸರ್ವಜ್ಞ ಶ್ರೀರಾಮನ ಲೀಲೆಯನ್ನು ಗಮನಿಸಿದಾಗ ಬೇರೇನು ಬೇಕು? ಶ್ರೀರಾಮನ ದಿವ್ಯ ರೂಪವನ್ನು ನಮ್ಮ ಇತಿಮಿತಿಗಳ ನಡುವೆಯೂ ಕಾಣಲು ಮನಮಾಡಿದಾಗ ಸ್ವ ಸ್ವರೂಪ ದರ್ಶನವಾಗದೆ ಇದ್ದೀತೇ?

ಇದನ್ನೇ ರಾಮ ಮಂತ್ರವ ಜಪಿಸೋ ಹೇ ಮನುಜಾ... ಎಂದು ಇನ್ನೊಂದು ಜನಪ್ರಿಯ ಗೀತೆಯಲ್ಲಿ ದಾಸರು ಹಾಡಿದ್ದು! ನವಮಾಸಗಳು ಹೊಲಸಿನಲ್ಲಿ ಬೆಳೆದು ತದನಂತರ ಅಮ್ಮನಿಗೂ ನೋವನ್ನೀಯುತ್ತಾ, ತಾನೂ ನೋವನ್ನನುಭವಿಸುತ್ತಾ ಹೊರಬರುವ ಪಿಂಡಾಂಡ ನಂತರದಲ್ಲಿ ಪ್ರಾಪಂಚಿಕ ವಾಸನೆಗಳ ಪ್ರಭಾವದಲ್ಲಿ ಮುಳುಗಿ ಹೋಗುತ್ತದೆ. ಮಾತ್ರವಲ್ಲ, ನವದ್ವಾರಗಳಿಂದ ಅಕ್ಷರಶಃ ವಾಸನೆ ಹೊರಬರುತ್ತಿರುತ್ತದೆ. ಇನ್ನೂ ಯತಾರ್ಥ ನುಡಿಯುವುದಾದರೆ ಪ್ರತೀ ರೋಮಕೂಪದಿಂದಲೂ ನಾತ! ಎಷ್ಟೇ ಅತ್ಯಾಧುನಿಕ ದುಬಾರಿ ಸುಗಂಧ ದ್ರವ್ಯಗಳನ್ನು ಬಳಸಿದರೂ, ಬ್ಯೂಟಿ ಪಾರ್ಲರ್‌ಗಳಿಗೆ ಎಡತಾಕಿದರೂ ಅದರ ಅವಧಿ ಮುಗಿಯುವಷ್ಟರಲ್ಲಿ ಮತ್ತೆ ದುಪ್ಪಟ್ಟು ದುರ್ನಾತ ಬೀರುವುದು ಗಮನಿಸಬೇಕಾದ ಸಂಗತಿ. ಅದರೊಂದಿಗೆ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೋನಸ್ ಆಗಿ ಬರುತ್ತವೆ. ಮಾನವನ ಕರ್ಮಾನುಸಾರ, ನಿಯತಿಯ ನಿಯಮದಂತೆ ನಿರಂತರ ನಾಮ ಸ್ಮರಣೆಯಿಂದ ಪ್ರಾಪಂಚಿಕ ಹಾಗೂ ದೈಹಿಕ ವಾಸನೆಯಿಂದ ಮುಕ್ತರಾಗಿ ದಿವ್ಯಾನುಭೂತಿಯನ್ನು ಅನುಭವಿಸಬಹುದು ಎಂಬುದು ಯೋಗಿಗಳ ಅನುಭವಜನ್ಯ ನುಡಿ. ಸತತ ಸಾಧನೆಯಿಂದ ಇದು ಅಸಾಧ್ಯವೇನಲ್ಲ. ಆದ್ದರಿಂದ ಆಧುನಿಕ ಬದುಕಿನ ಜಂಜಾಟದಿಂದ ಹೊರಬರಲು 'ಜಾಂಬವದೇವ'ನನ್ನು, ಅಸಹನೆ ನಿವಾರಣೆಗಾಗಿ ಅಹಲ್ಯೋದ್ಧಾರಕನನ್ನು, ಖಿನ್ನತೆಯಿಂದ ಮುಕ್ತಿ ಹೊಂದಲು ಖರ ದೂಷಣ ಮರ್ದನನನ್ನು, ದುಃಖದಿಂದ ಬಿಡುಗಡೆ ಹೊಂದಲು ದುರ್ವಾಸ ಸೇವಿತನನ್ನು, ಕ್ಲೇಶ ಹರಣಕ್ಕಾಗಿ ಕುಶ ಪಿತನನ್ನು, ಒಟ್ಟಾರೆಯಾಗಿ ಭವ ಬಂಧನದಿಂದ ಹೊರಬರಲು ಭವರೋಗ ಭಂಜಕನಾದ ಮಾರುತಿಯೊಡೆಯ ಆ ಶ್ರೀರಾಮ ಚಂದ್ರನ ಇಂಬು ಸಿಗಲೆಂದು ದೃಢವಾಗಿ ನಂಬೋಣ. ಸಮಸ್ತ ಚರಾಚರಿಗೆ ಶ್ರೀರಾಮ ನವಮಿ ಶುಭ ತರಲಿ.

## ದೇಶದಲ್ಲಿ ಇಂಧನ ಕೊರತೆ ಇಲ್ಲ, ಎಲ್ ಪಿಜಿ ರೀಫಿಲ್ಲಿಂಗ್ ಅವಧಿ ಹೆಚ್ಚಿಸಿಲ್ಲ

## ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬೇಡಿ: ವದಂತಿಗಳ ಹಿನ್ನೆಲೆ ಕೇಂದ್ರ ಸ್ಪಷ್ಟನೆ

# ಪೆಟ್ರೋಲ್, ಡೀಸೆಲ್ ಎಲ್‌ಪಿಜಿ ಅಬಾಧಿತ

**ಹೊಸದಿಲ್ಲಿ:** ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ.

ಗೃಹಬಳಕೆ ಎಲ್‌ಪಿಜಿ ರೀಫಿಲ್ಲಿಂಗ್ ಅವಧಿಯನ್ನು 25ರಿಂದ 35 ದಿನಗಳವರಗೆ ಹೆಚ್ಚಿಸಲಾಗಿ ಮತ್ತು ದೇಶದಲ್ಲಿ ಇಂಧನ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ವದಂತಿಗಳ ಹಿನ್ನೆಲೆ ಕೇಂದ್ರ ಸರ್ಕಾರ ಈ ಸ್ಪಷ್ಟನೆ ನೀಡಿದ್ದು, ಯಾವುದೇ ಕಾರಣಕ್ಕೂ ಈ ವದಂತಿಗಳನ್ನು ನಂಬಬಾರದು ಮತ್ತು ಜನರು ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬಾರದು ಎಂದು ಮನವಿ ಮಾಡಿದೆ.

ದೇಶದ ಎಲ್ಲಾ ರಿಫೈನರಿಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಾಕಷ್ಟು ಕಚ್ಚಾ ತೈಲ ಸಂಗ್ರಹವಿದೆ ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ದೇಶಾದ್ಯಂತ ಸಮರ್ಪಕವಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೆಲವು ಪ್ರದೇಶಗಳಲ್ಲಿ ವದಂತಿಗಳ ಪರಿಣಾಮವಾಗಿ ಜನರು ಆತಂಕದಿಂದ ಹೆಚ್ಚುವರಿಯಾಗಿ ತೈಲ ಖರೀದಿ ಮಾಡಿರುವುದು ಕಂಡುಬಂದಿದೆ. ಇದರಿಂದ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಜನಸಂದಣಿ ಹೆಚ್ಚಾಗಿದೆ. ಆದರೆ ಪ್ರತಿ ಪೆಟ್ರೋಲ್ ಬಂಕ್‌ನಲ್ಲೂ ಸಾಕಷ್ಟು ಇಂಧನ ಲಭ್ಯವಿದೆ ಎಂದು ಅವರು ಭರವಸೆ ನೀಡಿದ್ದಾರೆ.



ನಮ್ಮಲ್ಲಿ ಕಚ್ಚಾತೈಲ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದೆ. ನಮ್ಮ ತೈಲ ಸಂಸ್ಕರಣಾಗಾರಗಳು ಗರಿಷ್ಠ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ವಾರ್ಷಿಕ 26ಕೋಟಿ ಟನ್‌ಗಳಷ್ಟು ಕಚ್ಚಾತೈಲ ಸಂಸ್ಕರಿಸುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ ಎಂದು ಹೇಳಿದರು.

**ಎಲ್‌ಪಿಜಿ ಸರಬರಾಜು ಮೇಲೆ ಭಾಗಶಃ ಪರಿಣಾಮ:** ಹಾರ್ಮುಜ್ ಜಲಸಂಧಿಯಲ್ಲಿ ಉಂಟಾದ ಅಂತಾರಾಷ್ಟ್ರೀಯ ಸಮಸ್ಯೆಗಳ ಪರಿಣಾಮವಾಗಿ ಎಲ್‌ಪಿಜಿ ಸರಬರಾಜಿನಲ್ಲಿ ಕೆಲವು ವ್ಯತ್ಯಯ ಉಂಟಾಗಿದೆ. ಆದಾಗ್ಯೂ, ಮನೆಗಳಿಗೆ ಸಿಲಿಂಡರ್ ಸರಬರಾಜು ಎಂದಿನಂತೆ ನಡೆಯುತ್ತಿದೆ ಮತ್ತು ಯಾವುದೇ ಪ್ರದೇಶದಲ್ಲಿ ಸಂಪೂರ್ಣ ಕೊರತೆ ಉಂಟಾಗಿಲ್ಲ ಎಂದು ಸರ್ಕಾರ ತಿಳಿಸಿದೆ. ರಾಜ್ಯಗಳಿಗೆ ಹೆಚ್ಚುವರಿ ಹಂಚಿಕೆ ಮಾಡಲಾಗಿದೆ. ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಸಮುದಾಯ ಅಡುಗೆ ಕೇಂದ್ರಗಳಿಗೆ ವಾಣಿಜ್ಯ ಎಲ್‌ಪಿಜಿ ಸರಬರಾಜನ್ನು ಹಂತ ಹಂತವಾಗಿ ಶೇ.50ರವರೆಗೆ ಹೆಚ್ಚಿಸಲಾಗಿದೆ.

**26 ಕೋಟಿ ಟನ್ ಕಚ್ಚಾತೈಲ**




### ತೈಲ ಕಂಪನಿಗಳ ಭರವಸೆ

ದೇಶದ ಪ್ರಮುಖ ತೈಲ ಕಂಪನಿಗಳು ಸಹ ಯಾವುದೇ ಇಂಧನ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿವೆ. ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸರಾಗವಾಗಿ ನಡೆಯುತ್ತಿದ್ದು, ಎಲ್ಲಾ ಔಟ್‌ಲೆಟ್‌ಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿವೆ. ವದಂತಿಗಳು ಅನಗತ್ಯ ಆತಂಕವನ್ನು ಉಂಟುಮಾಡುತ್ತವೆ ಎಂದು ಇದೇ ವೇಳೆ ಎಚ್ಚರಿಕೆ ನೀಡಿವೆ.

**ಭಾರತದಿಂದ ಸಕಲ ಸಿದ್ಧತೆ:** ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮವಾಗಿ ಕಚ್ಚಾ ತೈಲ, ಎಲ್‌ಎನ್‌ಜಿ ಮತ್ತು ಎಲ್‌ಪಿಜಿ ಸರಬರಾಜು ಮೇಲೆ ಪರಿಣಾಮ ಬಿದ್ದಿದೆ. ಆದರೆ, ಭಾರತವು ಪಶ್ಚಿಮ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಅಮೆರಿಕದಿಂದ ಪರ್ಯಾಯ ಮೂಲಗಳಿಂದ ತೈಲವನ್ನು ಪಡೆಯುತ್ತಿದೆ.

ಎಲ್‌ಪಿಜಿ ಸರಬರಾಜು ಹೆಚ್ಚು ಪರಿಣಾಮಕ್ಕೊಳಗಾಗಿದ್ದು, ದೇಶದ ಅವಶ್ಯಕತೆಯ ಶೇ.60ರಷ್ಟು ಆಮದುಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಗೃಹ ಬಳಕೆಗೆ ಆದ್ಯತೆ ನೀಡಲಾಗಿದ್ದು, ವಾಣಿಜ್ಯ ಬಳಕೆಯನ್ನು ಕಡಿಮೆ ಮಾಡಲಾಗಿದೆ.

### ಪಿಎನ್‌ಜಿ, ಪರ್ಯಾಯ ಇಂಧನಗಳಿಗೆ ಒತ್ತು

ಎಲ್‌ಪಿಜಿ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಬಳಕೆಯನ್ನು ಸರ್ಕಾರ ವೇಗಗೊಳಿಸಿದೆ. ಗೃಹ ಬಳಕೆ ಮತ್ತು ಸಿಎನ್‌ಜಿ ಸಾರಿಗೆಗೆ ಶೇ.100ರಷ್ಟು ಪೂರೈಕೆ ಮಾಡಲಾಗುತ್ತಿದೆ. ಕೈಗಾರಿಕಾ ಬಳಕೆದಾರರಿಗೆ ಸುಮಾರು ಶೇ.80ರಷ್ಟು ಪೂರೈಕೆ ಮಾಡಲಾಗುತ್ತಿದೆ. ಕಳೆದ 25 ದಿನಗಳಲ್ಲಿ ಸುಮಾರು 2.5 ಲಕ್ಷ ಹೊಸ ಪಿಎನ್‌ಜಿ ಸಂಪರ್ಕಗಳನ್ನು ನೀಡಲಾಗಿದೆ. ಜತೆಗೆ 2.20 ಲಕ್ಷ ಎಲ್‌ಪಿಜಿ ಬಳಕೆದಾರರು ಪಿಎನ್‌ಜಿ ಕಡೆಗೆ ಬದಲಾವಣೆ ಮಾಡಿಕೊಂಡಿದ್ದಾರೆ.

**ಅಕ್ರಮ ಸಂಗ್ರಹ, ಕಾಳಸಂತೆ ವಿರುದ್ಧ ಕ್ರಮ:** ರಾಜ್ಯ ಸರ್ಕಾರಗಳಿಗೆ ಅಕ್ರಮ ಸಂಗ್ರಹ ಮತ್ತು ಕಪ್ಪು ಮಾರುಕಟ್ಟೆಯನ್ನು ತಡೆಯಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇದುವರೆಗೆ 2,700ಕ್ಕೂ ಹೆಚ್ಚು ದಾಳಿ ನಡೆಸಿ, 2,000 ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. 650ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, 155 ಜನರನ್ನು ಬಂಧಿಸಲಾಗಿದೆ.

### ಜನತೆಗೆ ಸರ್ಕಾರದ ಮನವಿ

ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಸಾಕಷ್ಟು ಲಭ್ಯವಿದೆ. ದಯವಿಟ್ಟು ವದಂತಿಗಳನ್ನು ನಂಬಬೇಡಿ, ಆತಂಕದಿಂದ ಖರೀದಿ ಮಾಡಬೇಡಿ ಮತ್ತು ಇಂಧನವನ್ನು ಮಿತವಾಗಿ ಬಳಸಿ ಎಂದು ಜನತೆಗೆ ಕೇಂದ್ರ ಸರ್ಕಾರ ಮನವಿ ಮಾಡಿದೆ



### ಪಿಎನ್‌ಜಿ ಇರುವೆಡೆ ಎಲ್‌ಪಿಜಿ ಇಲ್ಲ

ಪೈಪ್ಡ್ ನ್ಯಾಚುರಲ್ ಗ್ಯಾಸ್(ಪಿಎನ್‌ಜಿ) ಸೌಲಭ್ಯ ಲಭ್ಯವಿರುವ ಪ್ರದೇಶಗಳಲ್ಲಿ ಗೃಹಬಳಕೆ ಎಲ್‌ಪಿಜಿ ಸರಬರಾಜು ನಿಲ್ಲಿಸಲಾಗುವುದು ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಯುದ್ಧದಿಂದ ಎಲ್‌ಪಿಜಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ, ಸರ್ಕಾರ ಈ ಕ್ರಮ ಕೈಗೊಂಡಿದೆ. ಅನಿಲ ನಿರಂತರವಾಗಿ ಪೈಪ್ ಮೂಲಕ ಅಡುಗೆಮನೆಗೆ ತಲುಪುವುದರಿಂದ ಸಿಲಿಂಡರ್ ಬುಕ್ಕಿಂಗ್ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದೆ.

## ಭಾರತದಿಂದ ಮಾತ್ರ ಮಧ್ಯಪ್ರಾಚ್ಯ ಉದ್ವಿಗ್ನತೆ ಶಮನ ಸಾಧ್ಯ: ಇರಾನ್

**ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷ–ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಭಾರತ ವಿಶ್ವಾಸಾರ್ಹ ಪಾತ್ರ ವಹಿಸಬಹುದು ಎಂದು ಇರಾನ್ ಪುನರುಚ್ಚರಿಸಿದೆ.

ಪ್ರಸ್ತುತ ಅಮೆರಿಕ –ಇಸ್ರೇಲ್ ಮತ್ತು ಇರಾನ್ ಜತೆಗೆ ಐತಿಹಾಸಿಕ ಮತ್ತು ಕಾರ್ಯತಂತ್ರದ ಸಂಬಂಧಗಳನ್ನು ನಿರ್ವಹಿಸಲು ಮತ್ತು ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಭಾರತವು ಖಂಡಿತವಾಗಿಯೂ ಪರಿಣಾಮಕಾರಿ ಮತ್ತು ಸಕಾರಾತ್ಮಕ ಪಾತ್ರವನ್ನು ವಹಿಸಬಹುದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ(ಗ್ಲೋಬಲ್ ಸೌತ್) ತನ್ನ ಬಲವಾದ ಸ್ಥಾನ ಮತ್ತು ಸಮತೋಲಿತ, ತಟಸ್ಥ ವಿದೇಶಾಂಗ ನೀತಿಯಿಂದಾಗಿ, ಭಾರತವು ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು. ಇದು ಉದ್ವಿಗ್ನತೆಯನ್ನು ಕಡಿಮೆ ಮಾಡಲು, ಶಾಂತಿಯುತ ಚರ್ಚೆಗಳನ್ನು ಪ್ರೋತ್ಸಾಹಿಸಲು ಮತ್ತು ಎದುರಾಳಿ ದೇಶಗಳ ನಡುವೆ ಸಂವಾದವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಎಂದು ಭಾರತಕ್ಕೆ ಇರಾನ್ ರಾಯಭಾರಿಯಾಗಿರುವ ಮೊಹಮ್ಮದ್ ಫತಾಲಿ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಜತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸಿದ ಮಾತುಕತೆ ಮತ್ತು ಟ್ರಂಪ್ ಅವರು ಇರಾನ್ ಮೇಲಿನ ದಾಳಿಗೆ ತಾತ್ಕಾಲಿಕ ವಿರಾಮ ಘೋಷಿಸಿ, ಮಾತುಕತೆಗೆ ಇರಾನ್‌ಗೆ ಕರೆ ನೀಡಿದ ನಂತರ ಇರಾನ್ ರಾಯಭಾರಿ ಈ ಹೇಳಿಕೆ ನೀಡಿದ್ದಾರೆ.

## ಭಾರತದ ಪಾತ್ರ ಬಗ್ಗೆ ಹಲವು ದೇಶಗಳ ನಾಯಕರ ವಿಶ್ವಾಸ

ಒಂದು ಪ್ರಭಾವಶಾಲಿ ದೇಶವಾಗಿ ಭಾರತವು ನಿಶ್ಚಿತವಾಗಿಯೂ ಇಸ್ರೇಲ್ –ಇರಾನ್ ಉದ್ವಿಗ್ನತೆಯನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಬಹುದು ಎಂಬುದಾಗಿ ರಷ್ಯಾದ ವಿದೇಶಾಂಗ ಸಚಿವೆ ಸ್ವಾಕ್ಸ್ ಜಖಾರೊವಾ ಈಗಾಗಲೇ ಹೇಳಿದ್ದರೆ, ಅಮೆರಿಕದ ನಿವೃತ್ತ ಸೇನಾಧಿಕಾರಿ ಡೌಗ್ಲಾಸ್ ಮ್ಯಾಕ್ ಗ್ರೆಗರ್, ಟ್ರಂಪ್ ಅವರು ಪ್ರಧಾನಿ ಮೋದಿ ಅವರಿಗೆ ಕರೆ ಮಾಡಬೇಕು. ಅವರು ಇಸ್ರೇಲ್ ಮತ್ತು ಇರಾನ್‌ಗಳೆರಡರ ಜತೆಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ ಎಂದು ಹೇಳಿದ್ದರು.

ಹಾಗೆಯೇ ಫಿನ್ಲ್ಯಾಂಡಿನ ಅಧ್ಯಕ್ಷ ಅಲೆಗ್ಸಾಂಡರ್ ಸ್ಟಬ್ಬ್ ಅವರು ಕೂಡ ಭಾರತವು ಇರಾನ್ ಮತ್ತು ಅಮೆರಿಕ ನಡುವೆ ಕದನ ವಿರಾಮವೊಂದಕ್ಕೆ ಸಂಧಾನಕಾರನ ಪಾತ್ರ ನಿರ್ವಹಿಸಲು ಸಾಧ್ಯವಿದೆ ಎಂದಿದ್ದರು. ಯುಎಇ ರಾಯಭಾರಿ ಹುಸ್ಸೈನ್ ಹಸ್ಸನ್ ಮಿರ್ಜಾ ಅವರು, ಪ್ರಧಾನಿ ಮೋದಿಯವರ ಒಂದು ಫೋನ್ ಕರೆ ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧವನ್ನು ಅಂತ್ಯಗೊಳಿಸಬಹುದು ಎಂದಿರುವುದು ಜಾಗತಿಕ ರಂಗದಲ್ಲಿ ಪ್ರಸ್ತುತ ಬಿಕ್ಕಟ್ಟನ್ನು ಶಮನಗೊಳಿಸುವಲ್ಲಿ ಭಾರತದ ಪಾತ್ರ ಕುರಿತಂತೆ ಇರುವ ವಿಶ್ವಾಸಾರ್ಹತೆಯನ್ನು ವ್ಯಕ್ತಗೊಳಿಸಿದೆ.

## ರಷ್ಯಾದಿಂದ ಭಾರತ 600 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಖರೀದಿ

**ಹೊಸದಿಲ್ಲಿ:** ಭಾರತವು ಮುಂದಿನ ತಿಂಗಳಿನ ವಿತರಣೆಗಾಗಿ ರಷ್ಯಾದಿಂದ ಸುಮಾರು 60 ದಶಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ. ಈ ಖರೀದಿಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆ ಹರಿವು ನಿರ್ಬಂಧಿತವಾಗಿರುವುದರಿಂದ ಕಚ್ಚಾ ತೈಲದ ಲಭ್ಯತೆಯ ಬಗೆಗಿನ ಕಳವಳಗಳನ್ನು ಸರಾಗಗೊಳಿಸುವ ಗುರಿ ಹೊಂದಿವೆ.

ವರದಿಯ ಪ್ರಕಾರ, ಸರಕುಗಳನ್ನು ಬ್ರೆಂಟ್‌ಗಿಂತ ಪ್ರತಿ ಬ್ಯಾರೆಲ್‌ಗೆ 5 ಮತ್ತು 15ರ ನಡುವಿನ ಪ್ರೀಮಿಯಂಗಳಲ್ಲಿ ಕಾಯ್ದಿರಿಸಲಾಗಿತ್ತು. ಪೂರೈಕೆ ಪರಿಸ್ಥಿತಿಗಳು ಮತ್ತು ಲಭ್ಯವಿರುವ ಬ್ಯಾರೆಲ್‌ಗಳಿಗೆ ಹೆಚ್ಚಿನ ಬೇಡಿಕೆಯಿಂದ ಈ ಕ್ರಮಕೈಗೊಳ್ಳಲಾಗಿದೆ.

ಈ ಪ್ರಮಾಣವು ಪ್ರಸ್ತುತ ತಿಂಗಳ ಭಾರತದ ಖರೀದಿಗಳಿಗೆ ಸರಿಸುಮಾರು ಅನುಗುಣವಾಗಿದ. ಫೆಬ್ರವರಿಯಲ್ಲಿ ಖರೀದಿಸಿದ ಪ್ರಮಾಣಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ ಎಂದು ಡೇಟಾ ಇಂಟೆಲಿಜೆನ್ಸ್ ಸಂಸ್ಥೆ ಕೆಪ್ಲರ್ ವರದಿಯಲ್ಲಿ ಉಲ್ಲೇಖಿಸಿದೆ.

### ಪಾಕ್ ಕಂಟೈನರ್‌ಗೆ ಇರಾನ್ ತಡೆ

**ಟೆಹ್ರಾನ್:** ಮಧ್ಯಪ್ರಾಚ್ಯ ಯುದ್ಧದ ಮಧ್ಯೆ, ಹಾರ್ಮುಜ್ ಜಲಸಂಧಿಯಿಂದ ಬರುತ್ತಿದ್ದ ಪಾಕಿಸ್ತಾನದ ಕಂಟೈನರ್ ಅನ್ನು ಇರಾನ್ ಸೇನೆ ತಡೆಹಿಡಿದಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪ್ರಕಾರ, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾದಿಂದ ಕರಾಚಿ ಕಡೆಗೆ ಲಂಗರು ಹಾಕುವ ಸೀಲೆನ್ ಹಡಗು ಜಲಮಾರ್ಗಗಳ ಪ್ರವೇಶದ್ವಾರದ ಮಾರ್ಗದಿಂದಲೇ ಹಿಂತಿರುಗಿದೆ. ಕಾನೂನು ಶಿಷ್ಟಾಚಾರಗಳನ್ನು ಅನುಸರಿಸಲು ವಿಫಲವಾದ ಕಾರಣ ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಅನುಮತಿಯಿಲ್ಲದ ಕಾರಣ ಐಆರ್‌ಜಿಸಿ ನೌಕಾಪಡೆಯು ಸೀಲೆನ್ ಎಂಬ ಕಂಟೈನರ್ ಹಡಗು ಹಿಂತಿರುಗಿಸಿತು ಎಂದು ಐಆರ್‌ಜಿಸಿ ನೌಕಾಪಡೆಯ ಕಮಾಂಡರ್ ಅಲಿರೇಜಾ ಟ್ಯಾಂಗ್ಸಿರಿ ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

## ಕಿರುಸುದ್ದಿ

### ಗ್ಯಾಸ್ ಶುಲ್ಕ ವಸೂಲಿ ಮಾಡಿದರೆ ಕ್ರಮ

**ಹೊಸದಿಲ್ಲಿ:** ಹೋಟೆಲ್‌ಗಳು ಹಾಗೂ ಉಪಹಾರ ಗೃಹಗಳು ಎಲ್‌ಪಿಜಿ ಅಥವಾ ಗ್ಯಾಸ್ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ ಹಣ ವಸೂಲಿಸುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ(ಸಿಸಿಪಿಎ) ಎಚ್ಚರಿಸಿದೆ. ಈ ರೀತಿಯ ಶುಲ್ಕ ವಸೂಲಿ ಗ್ರಾಹಕ ಸಂರಕ್ಷಣಾ ಕಾಯ್ದೆ, 2019ರ ಉಲ್ಲಂಘನೆಯಾಗಿದ್ದು, ಇದು ಅನ್ಯಾಯದ ವ್ಯಾಪಾರ ಕ್ರಮ ಎಂದು ಪ್ರಾಧಿಕಾರ ಸ್ಪಷ್ಟಪಡಿಸಿದೆ. ಮೆನುವಿನಲ್ಲಿ ತೋರಿಸಿರುವ ಬೆಲೆಗಿಂತ ಹೆಚ್ಚುವರಿ ಶುಲ್ಕಗಳನ್ನು ಸ್ವಯಂಚಾಲಿತವಾಗಿ ಸೇರಿಸುವಂತಿಲ್ಲ. ಅನ್ವಯಿಸುವ ತೆರಿಗೆಗಳನ್ನು ಮಾತ್ರ ಸೇರಿಸಬಹುದು ಎಂದು ಸೂಚಿಸಲಾಗಿದೆ. ಇಂಧನ, ವಿದ್ಯುತ್ ಸೇರಿದಂತೆ ವ್ಯವಹಾರ ನಡೆಸುವ ವೆಚ್ಚಗಳನ್ನು ಪ್ರತ್ಯೇಕವಾಗಿ ಗ್ರಾಹಕರಿಂದ ವಸೂಲಿಸುವುದು ಸರಿಯಲ್ಲ. ಇಂತಹ ಕ್ರಮ ಕೈಗೊಂಡರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಿಸಿಪಿಎ ತಿಳಿಸಿದೆ.

### ತಲೆಮರೆಸಿಕೊಂಡಿದ್ದ ಆಪ್ ಶಾಸಕ ಬಂಧನ

**ಪಟಿಯಾಲ:** ಅತ್ಯಾಚಾರ ಪ್ರಕರಣದಲ್ಲಿ ಆರು ತಿಂಗಳಿನಿಂದ ತಲೆಮರೆಸಿಕೊಂಡಿದ್ದ ಆಮ್ ಆದ್ಮಿ ಪಕ್ಷದ ಶಾಸಕ ಹರ್ಮೀತ್ ಸಿಂಗ್ ಪಠಾಣ್‌ಮಜ್ರಾನನ್ನು ಪಂಜಾಬ್ ಪೊಲೀಸರು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಮಂಗಳವಾರ ರಾತ್ರಿ ಬಂಧಿಸಿದ್ದಾರೆ. ತಾಂತ್ರಿಕ ಮಾಹಿತಿ ಮತ್ತು ಮಾನವ ಬುದ್ಧಿಮತ್ತೆಯ ಆಧಾರದ ಮೇಲೆ ಸನೌರ್ ಕ್ಷೇತ್ರದ ಶಾಸಕರನ್ನು ಗ್ವಾಲಿಯರ್‌ನ ಹೊರವಲಯದಲ್ಲಿ ಸೆರೆಹಿಡಿಯಲಾಗಿದೆ. ಪಠಾಣ್‌ಮಜ್ರಾ ಅವರನ್ನು ಪಟಿಯಾಲಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಬಿಗಿ ಭದ್ರತೆಯ ನಡುವೆ ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವರುಣ್ ಶರ್ಮಾ ಖಚಿತಪಡಿಸಿದ್ದಾರೆ.

### ಮಾವೋವಾದಿ ಕೊನೆಯ ಕಮಾಂಡರ್ ಶರಣು

**ರಾಯ್ಪುರ:** ಛತ್ತೀಸ್‌ಗಢದ ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಪ್ರಮುಖ ಬೆಳವಣಿಗೆಯಲ್ಲಿ, ಕೊನೆಯ ಮಾವೋವಾದಿ ಕಮಾಂಡರ್ ಪಾಪಾ ರಾವ್ 17 ಕಾರ್ಯಕರ್ತರೊಂದಿಗೆ ಶರಣಾದರು. ಶರಣಾದ ನಕ್ಸಲರು ಜಗದಲ್ಪುರದ ಜಿಲ್ಲಾ ಕೇಂದ್ರಗಳಲ್ಲಿ ಪುನರ್‌ವಸತಿ ಪಡೆದರು. ಶರಣಾದ ನಕ್ಸಲರು ಎಕೆ–47 ಬಂದೂಕುಗಳು ಮತ್ತು ಇತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಅದೇರೀತಿ ಭದ್ರತಾ ಪಡೆಗಳು ಸುಮಾರು 10 ಲಕ್ಷ ನಗದನ್ನು ವಶಪಡಿಸಿಕೊಂಡವು. ಈ ವೇಳೆ, ಅಧಿಕಾರಿಗಳು ಅವರಿಗೆ ಸಂವಿಧಾನದ ಪ್ರತಿಯನ್ನು ನೀಡಿದ್ದಾರೆ. ಇದು ಅವರು ಪ್ರಜಾಪ್ರಭುತ್ವದ ಚೌಕಟ್ಟಿಗೆ ಮರಳುವ ಸಂಕೇತವಾಗಿದೆ.

## ಪುರಿ ಜಗನ್ನಾಥನ ರತ್ನ ಭಂಡಾರ ಎಣಿಕೆ ಶುರು

**ಪುರಿ:** 48 ವರ್ಷಗಳ ನಂತರ ಪುರಿ ಶ್ರೀ ಜಗನ್ನಾಥ ದೇವಾಲಯದಲ್ಲಿ ಬಹುನಿರೀಕ್ಷಿತ ರತ್ನ ಭಂಡಾರದ ಎಣಿಕೆ ಬುಧವಾರ ಪ್ರಾರಂಭವಾಗಿದೆ. ರತ್ನ ಭಂಡಾರವನ್ನು ಪ್ರವೇಶಿಸುವ ಶುಭ ಸಮಯ ಮಧ್ಯಾಹ್ನ 12.09 ಗಂಟೆಯಿಂದ ಮಧ್ಯಾಹ್ನ 1.45 ಗಂಟೆಯವರೆಗೆ ಇತ್ತು. ಕಟ್ಟುನಿಟ್ಟಾಗಿ ನಿಯಮ ಪಾಲಿಸುವ ಮೂಲಕ ಅಧಿಕೃತ ಸಿಬ್ಬಂದಿ ಮತ್ತು ಸೇವಕರು ದೇವಾಲಯ ಪ್ರವೇಶಿಸುವುದರೊಂದಿಗೆ ಈ ಪ್ರಕ್ರಿಯೆ ಪ್ರಾರಂಭವಾಯಿತು. ಸೇವಕರು ಸಾಂಪ್ರದಾಯಿಕ ಉಡುಪಿನಲ್ಲಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ರತ್ನ ಭಂಡಾರದ ಆಭರಣಗಳನ್ನು ಎಣಿಕೆ ಮತ್ತು ತೂಕ ಮಾಡಲಾಗುತ್ತಿದ್ದು, 1978ರ ದಾಖಲೆಗಳೊಂದಿಗೆ ಈ ಎಣಿಕೆ ಹೊಂದಾಣಿಕೆ ಮಾಡಲಾಗುತ್ತಿದೆ. ಪಾರದರ್ಶಕತೆ ಖಚಿತಪಡಿಸಿಕೊಳ್ಳಲು, ವಿಡಿಯೋಗ್ರಫಿ, ಡಿಜಿಟಲ್ ಛಾಯಾಗ್ರಹಣ ಮತ್ತು 3ಡಿ ಮ್ಯಾಪಿಂಗ್ ಅನ್ನು ಕೈಗೊಳ್ಳಲಾಗಿದ್ದು, ರತ್ನಶಾಸ್ತ್ರಜ್ಞರು ಅಮೂಲ್ಯ ಕಲ್ಲುಗಳನ್ನು ಗುರುತಿಸುವಲ್ಲಿ ಸಹಾಯ ಮಾಡಿದ್ದಾರೆ. ಆಭರಣಗಳನ್ನು ಬಣ್ಣ-ಬಣ್ಣದ ಬಟ್ಟೆಗಳಲ್ಲಿ ಸುತ್ತಲಾಗುತ್ತದೆ. ವಿಶೇಷವಾಗಿ ಸಿದ್ಧಪಡಿಸಿದ ವಸ್ತುವಿನಲ್ಲಿ ಭದ್ರಪಡಿಸಲಾಗುತ್ತದೆ. ಇದಕ್ಕೂ ಮೊದಲು, ರತ್ನ ಭಂಡಾರ ದಾಸ್ತಾನು ತಂಡದ ಸದಸ್ಯರು ಲಯನ್ ಗೇಟ್‌ನ ಮುಂದೆ ಭಗವಂತನಿಗೆ ತಲೆಬಾಗಿದ ನಂತರ ಶ್ರೀಮಂದಿರವನ್ನು ಪ್ರವೇಶಿಸಿದರು. .



## ಐವಿಎಫ್‌ಆರ್‌ಟಿ ಯೋಜನೆ ವಿಸ್ತರಣೆಗೆ ಕೇಂದ್ರ ನಿರ್ಧಾರ

**ಹೊಸದಿಲ್ಲಿ:** ವಲಸೆ ಮತ್ತು ವೀಸಾ ವ್ಯವಸ್ಥೆಗಳನ್ನು ಆಧುನೀಕರಿಸಲು ಐವಿಎಫ್‌ಆರ್‌ಟಿ ಯೋಜನೆಯನ್ನು ಐದು ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಈ ಯೋಜನೆ, ಏ.1, 2026ರಿಂದ ಮಾ.31, 2031ರವರೆಗೆ ಮುಂದುವರಿಯಲಿದ್ದು, ಇದಕ್ಕೆ 1,800 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ವಲಸೆ, ವೀಸಾ ವಿತರಣೆ ಮತ್ತು ವಿದೇಶಿಯರ ನೋಂದಣಿ ಪ್ರಕ್ರಿಯೆಗಳನ್ನು ಏಕೀಕೃತ ವ್ಯವಸ್ಥೆಯಲ್ಲಿ ತರುವುದು ಇದರ ಉದ್ದೇಶವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ವೇದಿಕೆ, ವಲಸೆ ತಪಾಸಣಾ ಕೇಂದ್ರಗಳು, ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗಳು(ಎಫ್‌ಆರ್‌ಆರ್‌ಒ) ಮತ್ತು ದತ್ತಾಂಶ ಕೇಂದ್ರಗಳ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲಿದೆ. ಪ್ರಯಾಣಿಕರ ಸಂಚಾರವನ್ನು ಸುಗಮಗೊಳಿಸಲು ಮೊಬೈಲ್ ಆಧಾರಿತ ಸೇವೆಗಳು ಮತ್ತು ಸ್ವಯಂ-ಸೇವಾ ಕಿಯೋಸ್ಕ್ ಗಳನ್ನು ಪರಿಚಯಿಸಲಾಗುವುದು. ಅಕ್ರಮ ವಲಸೆ ನಿರ್ವಹಣೆ ಸೇರಿದಂತೆ ವಲಸೆ ಮತ್ತು ವಿದೇಶಿಯರ ಕಾಯ್ದೆ 2025ರ ಅಗತ್ಯತೆಗಳನ್ನು ಈ ವ್ಯವಸ್ಥೆ ಪೂರೈಸಲಿದೆ.

**ಉಡಾನ್‌ಗೆ 28,840 ಕೋಟಿ ರೂ.:** ಪ್ರಾದೇಶಿಕ ವಾಯು ಸಂಪರ್ಕ ಯೋಜನೆ(ಉಡಾನ್) ನವೀಕರಣಕ್ಕೆ ಒಪ್ಪಿಗೆ ನೀಡಿರುವ ಕೇಂದ್ರ ಸಚಿವ ಸಂಪುಟವು, ಈ ಯೋಜನೆಗಾಗಿ ಮುಂದಿನ ವರ್ಷಗಳಿಗೆ 28,840 ಕೋಟಿ ರೂ. ಮೀಸಲಿಡಲು ನಿರ್ಧರಿಸಿದೆ.

ವಿಮಾನ ನಿಲ್ದಾಣಗಳ ಅಭಿವೃದ್ಧಿ, ಸಂಬಂಧಿತ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ಚಟುವಟಿಕೆಗಳು, ಹೆಲಿಪ್ಯಾಡ್‌ಗಳು ಮತ್ತು ಭಾರತ ನಿರ್ಮಿತ ವಿಮಾನಗಳ ಖರೀದಿಗೆ ಬೆಂಬಲ ನೀಡುವುದು ಇದರ ಉದ್ದೇಶ.

## ಆಯವ್ಯಯದಲ್ಲಿ ಮಧ್ಯಮ ವರ್ಗದವರಿಗೆ ಹಲವು ಕ್ರಮ

**ಹೊಸದಿಲ್ಲಿ:** ಕೇಂದ್ರ ಬಜೆಟ್‌ನಲ್ಲಿ ಮಧ್ಯಮ ವರ್ಗದವರು ಮತ್ತು ಸಣ್ಣ ಕೈಗಾರಿಕೆಗಳನ್ನು ಬೆಂಬಲಿಸಲು ಹಲವಾರು ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ತಿಳಿಸಿದ್ದಾರೆ. 32 ತಿದ್ದುಪಡಿಗಳೊಂದಿಗೆ ಹಣಕಾಸು ಮಸೂದೆ 2026 ಅನ್ನು ಲೋಕಸಭೆ ಬುಧವಾರ ಧ್ವನಿ ಮತದ ಮೂಲಕ ಅಂಗೀಕರಿಸಿದೆ. ವಿತ್ತೀಯ ಕೊರತೆ 2020–21ರಲ್ಲಿ ಶೇ.9.3ರಷ್ಟಿತ್ತು, ಇದು 2026–27ರ ಆರ್ಥಿಕ ವರ್ಷದಲ್ಲಿ ಜಿಡಿಪಿಯ ಶೇ.4.3ಕ್ಕೆ ಇಳಿಕೆಯಾಗುವ ನಿರೀಕ್ಷೆಯಿದೆ. ರಾಷ್ಟ್ರೀಯ ಸಾಲ ಮತ್ತು ಜಿಡಿಪಿ ಅನುಪಾತ ಇಳಿಕೆಯ ಹಾದಿಯಲ್ಲಿದೆ ಎಂದು ತಿಳಿಸಲಾಗಿದೆ.

**ನಾಗರಿಕರಿಗೆ ವಿನಾಯಿತಿಗಳು:** ವಿದೇಶಿ ಪ್ರವಾಸದ ಪ್ಯಾಕೇಜ್‌ಗಳ ಮೇಲಿನ ಮೂಲದಲ್ಲೇ ತೆರಿಗೆ ಸಂಗ್ರಹ(ಟಿಸಿಎಸ್) ದರವನ್ನು ಶೇ.20ರಿಂದ ಶೇ.2ಕ್ಕೆ ಇಳಿಸಲಾಗಿದೆ. 17 ಪ್ರಮುಖ ಔಷಧಿಗಳಿಗೆ ಕಸ್ಟಮ್ಸ್ ಸುಂಕದ ವಿನಾಯಿತಿ ನೀಡಲಾಗಿದೆ ಮತ್ತು ವಿಮಾನ ನಿಲ್ದಾಣದ ಲಗೇಜ್‌ಗಳ ಮೇಲಿನ ಸುಂಕಗಳನ್ನು ತರ್ಕಬದ್ಧಗೊಳಿಸಲಾಗಿದೆ. ಮರುಮೌಲ್ಯಮಾಪನ ಪ್ರಕ್ರಿಯೆಗಳ ಸಮಯದಲ್ಲಿಯೂ ಪರಿಷ್ಕೃತ ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸಲು ಈಗ ಅವಕಾಶ ನೀಡಲಾಗಿದೆ. ಸಣ್ಣ ಕೈಗಾರಿಕೆಗಳಿಗೆ(ಎಂಎಸ್‌ಎಂಇ) ಸಂಬಂಧಿಸಿದಂತೆ, ದಂಡ ವಿಧಿಸುವುದಕ್ಕಿಂತ ಹೆಚ್ಚಾಗಿ ಸೌಲಭ್ಯಗಳನ್ನು ಒದಗಿಸುವತ್ತ ನೀತಿಗಳನ್ನು ಬದಲಾಯಿಸಲಾಗಿದೆ. 2025–26ರಲ್ಲಿ ರಾಷ್ಟ್ರೀಯ ಜಿಎಸ್‌ಟಿ ಸಂಗ್ರಹ ಶೇ.8.3ರಷ್ಟು ಬೆಳವಣಿಗೆ ಕಂಡಿದೆ. ತೆರಿಗೆ ಕಡಿತದ ನಂತರ ಈ ಫೆಬ್ರವರಿಯಲ್ಲಿ ಚಿಲ್ಲರೆ ಪ್ರಯಾಣಿಕ ವಾಹನಗಳ ಮಾರಾಟ ಶೇ.26.1ರಷ್ಟು ಏರಿಕೆಯಾಗಿದೆ.

## ಎಲ್ಲ ಹೈಸ್ಕೂಲ್‌ಗಳಿಗೆ ಶೀಘ್ರ ಇಂಟರ್ನೆಟ್

**ಹೊಸದಿಲ್ಲಿ:** ದೇಶದ ಎಲ್ಲಾ ಹೈಸ್ಕೂಲ್‌ಗಳಿಗೆ ಮುಂದಿನ 2–3 ವರ್ಷಗಳಲ್ಲಿ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸಂಪರ್ಕ ಒದಗಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ತಿಳಿಸಿದ್ದಾರೆ. ರಾಜ್ಯಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಮಾಹಿತಿ ನೀಡಿದ ಅವರು, ಈಗಾಗಲೇ ದೇಶದ ಸುಮಾರು ಶೇ.60 ಹೈಸ್ಕೂಲ್‌ಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲಾಗಿದೆ ಎಂದು ಹೇಳಿದರು. ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ(ಎಐ)ಯನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒತ್ತು ನೀಡುತ್ತಿವೆ. ಶಿಕ್ಷಕರಿಗೆ ಎಐ ಜ್ಞಾನ ನೀಡಲು ತರಬೇತಿ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಚಿವರು ವಿವರಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) 2020 ಪ್ರಕಾರ, ಎಐ ಸೇರಿದಂತೆ ಸಮಕಾಲೀನ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. 3ನೇ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ಎಐ ಮೂಲಭೂತ ಜ್ಞಾನ ನೀಡುವ ಯೋಜನೆಯಿದೆ ಎಂದು ಹೇಳಿದರು. ಕಂಪ್ಯೂಟರ್ ಸೈನ್ಸ್ ಹಾಗೂ ಇನ್ಫರ್ಮ್ಯಾಟಿಕ್ಸ್ ಪಠ್ಯಪುಸ್ತಕಗಳಲ್ಲಿ ಈಗಾಗಲೇ ಎಐ, ಇಂಟರ್‌ನೆಟ್ ಆಫ್ ಥಿಂಗ್ಸ್ ಸೇರಿದಂತೆ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲಾಗಿದೆ.

### 80 ಕಿಮೀ ದೂರದ ಗುರಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯ

## ಐಎಎಫ್ ವಾಯು ಬಾಣ ಹೆಲಿಕಾಪ್ಟರ್

**ಹೊಸದಿಲ್ಲಿ:** ಭಾರತೀಯ ವಾಯುಪಡೆಯು(ಐಎಎಫ್) 'ವಾಯು ಬಾಣ' ಎಂಬ ಹೆಲಿಕಾಪ್ಟರ್‌ನಿಂದ ಹಾರಿಸಬಹುದಾದ ಟಾರ್ಗೆಟಿಂಗ್ ಡ್ರೋನ್‌ಗಾಗಿ ವಿನ್ಯಾಸ ಮತ್ತು ಅಭಿವೃದ್ಧಿಗೆ ವಿನಂತಿಪತ್ರ (ಆರ್‌ಎಫ್‌ಪಿ) ಹೊರಡಿಸಿದೆ. ಇದು ಸ್ಥಳೀಯವಾಗಿ ವಾಯು ದಾಳಿ ಸಾಮರ್ಥ್ಯವನ್ನು ವೃದ್ಧಿಸಲು ಮಹತ್ವದ ಹೆಜ್ಜೆಯಾಗಿದೆ.

ಆರ್‌ಎಫ್‌ಪಿ ಪ್ರಕಾರ, ಒಟ್ಟು 10 ಡ್ರೋನ್ ಘಟಕಗಳು ಅಗತ್ಯವಿದ್ದು, ಜತೆಗೆ ಎರಡು ವಾಯು ನಿಯಂತ್ರಣ ಕೇಂದ್ರಗಳು, ಎರಡು ಭೂ ನಿಯಂತ್ರಣ ಕೇಂದ್ರಗಳು ಹಾಗೂ ಸಂಬಂಧಿತ ಪೇಲೋಡ್‌ಗಳು ಮತ್ತು ಸ್ಪೇರ್‌ಗಳು ಅಗತ್ಯವಿವೆ.

ವಾಯು ಬಾಣವನ್ನು ಗಾಳಿಯಿಂದ ಉಡಾವಣೆ ಮಾಡಬಹುದಾದ ಲೋಯಿಟರಿಂಗ್ ಮ್ಯೂನಿಷನ್ ಮತ್ತು ಕಣ್ಗಾವಲು ವೇದಿಕೆಯಾಗಿ ವಿನ್ಯಾಸಗೊಳಿಸಲಾಗಿದೆ. ಈ ಘಟಕಗಳನ್ನು ಹೆಲಿಕಾಪ್ಟರ್‌ನಿಂದ ಕೆಳಕ್ಕೆ ಹಾಕಿದಾಗ, ಅವು ಸ್ವತಂತ್ರವಾಗಿ ರೆಕ್ಕೆಗಳನ್ನು ತೆರೆದುಕೊಂಡು ನಿಯಂತ್ರಿತ ಹಾರಾಟ ನಡೆಸುತ್ತವೆ. ಈ ವ್ಯವಸ್ಥೆ 15 ನಿಮಿಷಗಳಲ್ಲಿ 80 ಕಿಮೀ ಅಥವಾ 30 ನಿಮಿಷಗಳಲ್ಲಿ 50 ಕಿಮೀ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಜಾಗತಿಕ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ ಲಭ್ಯವಿಲ್ಲದ ಪರಿಸರದಲ್ಲೂ ಕೃತಕ ಬುದ್ಧಿಮತ್ತೆಯ ಮೂಲಕ ಗುರಿ ಗುರುತಿಸುವಿಕೆ ಮತ್ತು ಸಂಚರಣೆ ನಡೆಸುವ ವೈಶಿಷ್ಟ್ಯಗಳನ್ನು ಇದು ಹೊಂದಿದ್ದು, 150 ಅಡಿಗಳಿಂದ 8,000 ಅಡಿ ಎತ್ತರದವರೆಗೆ ಕಾರ್ಯಾಚರಣೆ ನಡೆಸಬಲ್ಲದು.



**ಪೇಲೋಡ್ ಮತ್ತು ನಿಯಂತ್ರಣ ವ್ಯವಸ್ಥೆ:** ಈ ಖರೀದಿ, ಎರಡು ವಾಯುಗಾಮಿ ಮತ್ತು ಎರಡು ಭೂ-ನಿಯಂತ್ರಣ ಕೇಂದ್ರಗಳನ್ನು ಒಳಗೊಂಡಿದೆ. ಈ ಡ್ರೋನ್‌ಗಳು 500 ರಿಂದ 1,000 ಗ್ರಾಂ ತೂಕದ ಬದಲಾಯಿಸಬಹುದಾದ ಪೇಲೋಡ್‌ಗಳನ್ನು ಹೊರಬಲ್ಲವು. ಇವುಗಳಲ್ಲಿ ಎಲೆಕ್ಟ್ರೋ-ಆಪ್ಟಿಕಲ್ ಸೆನ್ಸರ್‌ಗಳು ಮತ್ತು ಸ್ಟ್ರೈಕ್ ವಾರ್ ಹೆಡ್‌ಗಳು ಸೇರಿವೆ. ಅಲ್ಲದೆ, 57 ಎಂಎಂ ಮತ್ತು 80 ಎಂಎಂ ರಾಕೆಟ್‌ಗಳೊಂದಿಗೆ ಸಂಯೋಜಿಸಲು ಅಗತ್ಯವಾದ ಸೌಲಭ್ಯಗಳನ್ನು ಇದು ಹೊಂದಿರುತ್ತವೆ.

**ಯೋಜನೆಯ ಕಾಲಮಿತಿ:** ಹೆಲಿಕಾಪ್ಟರ್‌ಗಳ ಆಕ್ರಮಣಕಾರಿ ಸಾಮರ್ಥ್ಯವನ್ನು ಹೆಚ್ಚಿಸಲು ಗಾಂಧಿನಗರದ ಪ್ರಾದೇಶಿಕ ಏರೋಸ್ಪೇಸ್ ಇನ್ನೋವೇಶನ್ ವಿಭಾಗ ಈ ಪ್ರಸ್ತಾವನೆ ಹೊರಡಿಸಿದೆ. ಒಪ್ಪಂದಕ್ಕೆ ಸಹಿ ಹಾಕಿದ 12 ತಿಂಗಳೊಳಗೆ ಈ ಘಟಕಗಳ ಸಂಪೂರ್ಣ ವಿತರಣೆ ಮತ್ತು ಸ್ಥಾಪನೆಯನ್ನು ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ.


### 1971ರ ಮಾ.25 ಕ್ರೂರ ಕರಾಳ ದಿನ: ಬಾಂಗ್ಲಾ ಪ್ರಧಾನಿ

## ಪಾಕಿಸ್ತಾನ ಯೋಜಿತ ನರಮೇಧ

**ಢಾಕಾ:** ಪಾಕಿಸ್ತಾನದ 1971ರ ಆಪರೇಷನ್ ಸರ್ಚ್‌ಲೈಟ್ ಒಂದು ಪೂರ್ವಯೋಜಿತ ಜನಾಂಗೀಯ ನರಮೇಧವಾಗಿದ್ದು, ಚರಿತ್ರೆಯಲ್ಲೇ ತೀರಾ ಕ್ರೂರ ಮತ್ತು ಕರಾಳ ದಿನವಾಗಿದೆ ಎಂದು ಬಾಂಗ್ಲಾ ಪ್ರಧಾನಿ ತಾರಿಖ್ ರಹಮಾನ್ ಟೀಕಿಸಿದ್ದಾರೆ. ಜನಾಂಗೀಯ ನರಮೇಧ ದಿನದ ಹಿನ್ನೆಲೆ ರಹಮಾನ್ ಈ ರೀತಿ ಹೇಳಿಕೆ ನೀಡಿದ್ದಾರೆ.

ಆಪರೇಷನ್ ಸರ್ಚ್‌ಲೈಟ್ ಹೆಸರಲ್ಲಿ 1971ರಲ್ಲಿ ಪಾಕ್‌ನ ಆಕ್ರಮಣಕಾರಿ ಶಕ್ತಿಗಳು ಮತ್ತವರ ಬೆಂಬಲಿಗರು 30 ಲಕ್ಷ ಬಂಗಾಳಿಗಳನ್ನು ನಿರ್ದಯಿಗಳಂತೆ ಹತ್ಯೆಗೈದಿದ್ದರು ಮತ್ತು 2 ರಿಂದ 4 ಲಕ್ಷ ಮೀರಿ ಬಂಗಾಳಿ ಮಹಿಳೆಯರು, ಹುಡುಗಿಯರ ಮೇಲೆ ಬರ್ಬರ ಅತ್ಯಾಚಾರವೆಸಗಿದ್ದರು. ಈ ಪೈಕಿ ಲಕ್ಷಾಂತರ ಹೆಣ್ಮಕ್ಕಳನ್ನು ತಥಾಕಥಿತ ರೇಪ್ ಕ್ಯಾಂಪ್‌ಗಳಲ್ಲಿ ನಿರ್ಬಂಧಿಸಿಟ್ಟು ನಂತರವೂ ಅವರಿಗೆ ನಿರಂತರ ಲೈಂಗಿಕ ಕಿರುಕುಳ ನೀಡಿದ್ದರು. ಈ ಅಮಾನುಷ ಜನಾಂಗೀಯ ನರಮೇಧ ತಾಂಡವಿಸಿದ ಮಾ.25ನ್ನು ಬಾಂಗ್ಲಾ ಇಂದಿಗೂ ಜನಾಂಗೀಯ ನರಮೇಧ ದಿನವಾಗಿ ಸಂಸ್ಮರಿಸುತ್ತಿದೆ.

ಸ್ವಾತಂತ್ರ್ಯಪ್ರೇಮಿ ಬಾಂಗ್ಲಾದೇಶದ ಇತಿಹಾಸದಲ್ಲೇ 1971ರ ಮಾ.25 ತೀರಾ ಕರಾಳ ಮತ್ತು ಕ್ರೂರ ದಿನವಾಗಿದೆ. ಅಂದು ರಾತ್ರಿ ಪಾಕ್‌ನ ಆಕ್ರಮಣಕಾರಿ ಶಕ್ತಿಗಳು ಆಪರೇಷನ್ ಸರ್ಚ್‌ಲೈಟ್ ಹೆಸರಲ್ಲಿ ಬಾಂಗ್ಲಾದ ನಿಶಸ್ತ್ರ ಜನರ ವಿರುದ್ಧ ಚರಿತ್ರೆಯಲ್ಲೇ ಕಂಡರಿಯದ ಅತ್ಯಂತ ಹೀನಾಯ ನರಮೇಧ ತಾಂಡವಿಸಿದ್ದರು ಎಂದು ರಹಮಾನ್ ಹೇಳಿಕೆಯಲ್ಲಿ ನೋವು ವ್ಯಕ್ತಪಡಿಸಿದ್ದಾರೆ.



ಬಾಂಗ್ಲಾ ವಿಮೋಚನಾ ಹೋರಾಟದ ಮೌಲ್ಯ ಹಾಗೂ ಮಹತ್ತ್ವವನ್ನು ಪ್ರಸಕ್ತ ಮತ್ತು ಭಾವೀ ಪೀಳಿಗೆಗಳಿಗೆ ತಲುಪಿಸಲು, ಅವರಲ್ಲಿ ಈ ಬಗ್ಗೆ ಅರಿವು ಮೂಡಿಸುವುದಕ್ಕಾಗಿ, ಮಾ.25ರ ಜನಾಂಗೀಯ ನರಮೇಧದ ಬಗ್ಗೆ ಅರಿತುಕೊಳ್ಳುವುದು ಅತ್ಯವಶ್ಯ. ಬಾಂಗ್ಲಾ ವಿಮೋಚನೆಗೆ ಹೋರಾಡಿ ಹುತಾತ್ಮರಾದವರ ತ್ಯಾಗ ಬಲಿದಾನಗಳ ಗೌರವಿಸುವುದಕ್ಕಾಗಿ ನಾವೆಲ್ಲರೂ ವಿಮೋಚನಾ ಹೋರಾಟದ ಮೂಲ ಸ್ಫೂರ್ತಿಯಾಗಿರುವ ಸಮಾನತೆ, ಮಾನವ ಪ್ರತಿಷ್ಠೆ, ಸಾಮಾಜಿಕ ನ್ಯಾಯದ ಆಧಾರದಲ್ಲಿ ದೇಶ–ಸಮಾಜವನ್ನು ಕಟ್ಟೋಣ. ನ್ಯಾಯೋಚಿತವಾದ, ಅಭಿವೃದ್ಧ, ಸಂಪನ್ನ ,ಸ್ವಾವಲಂಬಿ ಮತ್ತು ಪ್ರಜಾತಾಂತ್ರಿಕ ಬಾಂಗ್ಲಾದೇಶವನ್ನು ಕಟ್ಟಲು ನಾವೆಲ್ಲ ಒಟ್ಟಾಗಿ ದುಡಿಯೋಣ ಎಂದು ಪ್ರಧಾನಿ ರಹಮಾನ್ ಹೇಳಿಕೆಯಲ್ಲಿ ಕರೆ ನೀಡಿದ್ದಾರೆ.

**IN THE COURT OF PRL. SENIOR CIVIL JUDGE AND ACJM, PUTTUR, D.K.**
RA No. 19/2025

Between:-
**Rukmayya** ...*Appellant*
-VS-
**Sheenappa Gowda and others** ...*Respondents*

To,
R1(c) **Prameela,** W/o. Ganesh D/o Late Sheenappa Gowda aged about 36 years, R/at Kolya House, Koila village, Kadaba Taluk, K.C. Farm post, D.K. District.
R1(d) **Pavithra,** W/o Sathish D/o. Late Sheenappa Gowda aged about 34 years, R/at Pulitthadi house, Ichlampady village and post, Kadaba taluk D.K. District.

Whereas the Appellant/Petitioners has filed an application in the above suit against you, in RA No.19/2025 in this court. This is to give you notice that, you are to appear before this court at **11 A.M on the 30th day of April, 2026** either by person or by a pleader to show cause against the application, failing which, the said application will be heard and determined ex-parte.

Given under my hand and seal of the court, this 23rd day of March 2026

BY ORDER
Sd/- **SHERISTEDAR**
Prl. Senior Civil Judge and ACJM, Puttur, D.K. Dist.
Sd/- **K. Nagesh Sharma,** B.A., LL.B
Advocate for Petitioner, Puttur, D.K.

**IN THE COURT OF PRINCIPAL CIVIL JUDGE AND JMFC BANTWAL**
P&S.C NO. 38/2025
(IN THE MATTER OF THE ESTATE OF **SMT. POOVAKKU YANE PUSHPA**)

Between:
**Sumathi and another** ...*Petitioners*
AND
Nil ...*Respondent*

**WHOM SO IT MAY CONCERN NOTICE**

Take notice that the Petitioners herein have filed an application before this court for the Succession Certificate for withdrawal of PF amount and other death benefits of the above named deceased Late. Smt. Poovakku yane Pushpa, Daughter of Late Mr. Dodda Kutti and Late Jaku, the resident of D.NO 5-218 Kadumata Colony, Kolnadu Village, Bantwal, D.K.

The above petition has been stands posted on 09-04-2026 for hearing at 11.00 a.m. before this court, person desiring to oppose the same may appear on the said date and time, falling which the matter will be heard and decided ex-parte.

Given under my hand and seal of the court this 25th day of 2026
(BY ORDER OF THE COURT)
Sd/- **Chief Administrative Officer**
Principal Civil Court, Bantwal D.K.
Sd/- (Vimalesh Kumar K.S.)
Advocate for Petitioner

**ಸಾರ್ವಜನಿಕರ ಅವಗಾಹನೆಗೆ**

ನನ್ನ ಕಕ್ಷಿದಾರರಾದ ಮಂಗಳೂರು ತಾಲೂಕು, ಕೋಟೆಕಾರು ಪೋಸ್ಟ್ ಮತ್ತು ಗ್ರಾಮ, ಡೋರ್ ನಂ. 3-72(2ಎ1), ಕನೀರುತೋಟ, ನಾರಾಯಣ ಗುರು ದೇವಸ್ಥಾನ ಹತ್ತಿರ, ಕೊಲ್ಯ ಇಲ್ಲಿನ ನಿವಾಸಿಯಾದ ಎಸ್. ಟಿ. ಸುಂದರ್ ಎಂಬವರ ಮಗ **ಕಿರಣ್ ಕುಮಾರ್ ಎಸ್.** ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮಂಗಳೂರು ತಾಲೂಕು (ಈಗ ಉಳ್ಳಾಲ ತಾಲೂಕು) ಕೋಟೆಕಾರು ಗ್ರಾಮದ, ಸರ್ವೆ ನಂ. 89/3ಬಿ5 (ಆರ್.ಟಿ.ಸಿ. ಪ್ರಕಾರ 89/27) ರಲ್ಲಿ ಒಟ್ಟು 0.09 ಸೆಂಟ್ಸ್ ಸರ್ವೆ ನಂ. 145/6 (ಆರ್.ಟಿ.ಸಿ. ಪ್ರಕಾರ 145/11) ರಲ್ಲಿ ಒಟ್ಟು 0.36 ಸೆಂಟ್ಸ್ ಮತ್ತು ಸರ್ವೆ ನಂ. 89/3ಸಿ (ಆರ್.ಟಿ.ಸಿ. ಪ್ರಕಾರ 89/18) ರಲ್ಲಿ ಒಟ್ಟು 0.01 ಸೆಂಟ್ಸ್ ಸ್ಥಳವನ್ನು ಖರೀದಿ ಮಾಡಲು ನಿರ್ಧರಿಸಿರುತ್ತಾರೆ. ಸದ್ರಿ ಮೇಲ್ಕಾಣಿಸಿದ ಆಸ್ತಿಗಳಿಗೆ ಸಂಬಂಧಪಟ್ಟ ತಾರೀಕು 11-4-1957 ರಂದು ನೋಂದಾಯಿಸಲ್ಪಟ್ಟ ಮೂಲ ಕ್ರಯ ಪತ್ರ ದಾಖಲೆ ನಂ. 763/1957-58, ಸಂಚಿಕೆ 883, ಪುಟ ಸಂಖ್ಯೆ 140-142, ಪುಸ್ತಕ -1 ಜೋಂಟ್ ಸಬ್ ರಿಜಿಸ್ಟರ್ ಸೌತ್ ಕೆನರಾ ಮೂಲ ಕ್ರಯ ಪತ್ರ ಕಳೆದು ಹೋಗಿರುತ್ತದೆ. ಸದ್ರಿ ದಾಖಲೆ ಸಾರ್ವಜನಿಕರಿಗೆ ಸಿಕ್ಕದ್ದಲ್ಲಿ ಈ ಪ್ರಕಟನೆಯ ಏಳು ದಿವಸದೊಳಗೆ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ನೀಡಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ಮೇಲ್ಕಾಣಿಸಿದ ಆಸ್ತಿಗಳಿಗೆ ಇತರ ಯಾವುದೇ ವಾರೀಸುದಾರರಿಗೆ, ವ್ಯಕ್ತಿ-ಯಾ ವ್ಯಕ್ತಿಗಳಿಗೆ ಸಾರ್ವಜನಿಕ ಬ್ಯಾಂಕ್, ಕೋ-ಆಪರೇಟಿವ್ ಸೊಸೈಟಿ, ಸೌಹಾರ್ದ ಸಹಕಾರ ಸಂಘ ಅಥವಾ ಯಾವುದೇ ಹಣಕಾಸು ಸಂಸ್ಥೆಗಳಿಗೆ ಹಕ್ಕು ಬಾಧ್ಯತೆ ಇದ್ದಲ್ಲಿ ಈ ಪ್ರಕಟನೆಯ ಏಳು ದಿವಸದೊಳಗೆ ದಾಖಲೆ ಸಹಿತವಾಗಿ ತಮ್ಮ ಹಕ್ಕನ್ನು ಸಾಬೀತು ಪಡಿಸತಕ್ಕದ್ದು, ಏಳು ದಿವಸದೊಳಗೆ ಯಾವುದೇ ದೂರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಮೇಲ್ಕಾಣಿಸಿದ ಆಸ್ತಿಗಳನ್ನು ಅವರ ಹೆಸರಿಗೆ ಕ್ರಯ ಪತ್ರ ನೊಂದಾವಣೆ ಮಾಡಲು ಬದ್ಧರಾಗಿರುತ್ತಾರೆ ಎಂಬುದಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುತ್ತಿದ್ದೇನೆ.

**ಸಹಿ/- ಆನಂದ ಜಿ.ಪಿ.,** ವಕೀಲರು ಮತ್ತು ನೋಟರಿ (ಭಾರತ ಸರಕಾರ) ತೊಕ್ಕೊಟ್ಟು, ಉಳ್ಳಾಲ ಅಂಚೆ ಮತ್ತು ಗ್ರಾಮ, ಮಂಗಳೂರು-575 020

## ಮಂಗಳೂರು ಮಹಾನಗರಪಾಲಿಕೆ

**DMA/2025-26/WORK INDENT NO. 55503, 55566, 55632, 55492, 55637**
ದಿನಾಂಕ: 23-03-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**E-PROCUREMENT OF KARNATAKA**

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2025-26/WORK INDENT NO. 55503, 55566, 55632, 55492, 55637** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 5 ಕಾಮಗಾರಿಗಳ **ಒಟ್ಟು ಮೊತ್ತ ರೂಪಾಯಿ 48.12 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 01-04-2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

**ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು**

DIPR/DK/KSMCA/1810/25-26 dt: 25.03.2026

ಕರ್ನಾಟಕ ಸರಕಾರ

## ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ: ಲೋ.ಇ:ಮಂ.ವಿ:ಟಿ.ಎನ್.ಡಿ:(64ಇ):2025-26:ಜೆಇ-1 ದಿನಾಂಕ: 25.03.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

**ಲೆಕ್ಕಶೀರ್ಷಿಕೆ: 8443 ವಿಪತ್ತು ಉಪಶಮನ ನಿಧಿ ಇಂಡೆಂಟ್ ನಂ: 33890, ಮತ್ತು ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (CMIDP)** ಇಂಡೆಂಟ್ ನಂ: 34244, 34264 ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 09.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.300.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.500.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

DIPR/DK/KSMCA/1815/25-26 dt.25.03.2026 **ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್**

## ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560 001. ದೂರವಾಣಿ: 080-22133370

ಸಂಖ್ಯೆ: 67/2025-26 ದಿನಾಂಕ: 24.03.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೊಡ್ಡಬಳ್ಳಾಪುರ, ಹೊಸಕೋಟೆ, ಆನೇಕಲ್ ಮತ್ತು ನಂ.2 ಉತ್ತರ ಉಪವಿಭಾಗಕ್ಕೆ** ಸಂಬಂಧಿಸಿದಂತೆ **04 ಸಂಖ್ಯೆಯ (ರೂ. 3.17 ರಿಂದ 60.00 ಲಕ್ಷಗಳ)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ **ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

ಕ್ರ.ಸಂ.: **01 & 02 ಕ್ಕೆ**

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 02.04.2026 ಸಂಜೆ 4.00 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 04.04.2026 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕ್ರ.ಸಂ.: **03 & 04 ಕ್ಕೆ**

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 08.04.2026 ಸಂಜೆ 4.00 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 09.04.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

**ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.**

**ಸಹಿ/- ಕಾರ್ಯಪಾಲಕ ಅಭಿಯಂತರರು.**

ವಾಸಾಸಂಇ/ಉನಿ-ಸಿ.ಪಿ/6438/ಕೆಎಸ್‌ಎಂಸಿಎ/2025-26

## ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

**ತಿರುವನಂತಪುರಂ:** ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-45) ಡ್ರಾ ಮಾರ್ಚ್ 25ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

**1st Prize Rs.1,00,00,000/- [1 Crore]**
**DB 597725 (THRISSUR)**

**Consolation Prize Rs.5,000/-**
DA 597725 DC 597725 DD 597725 DE 597725
DF 597725 DG 597725 DH 597725 DJ 597725
DK 597725 DL 597725 DM 597725

**2nd Prize Rs.30,00,000/- [30 Lakhs]**
**DG 120820 (MOOVATTUPUZHA)**

**3rd Prize Rs.5,00,000/- [5 Lakhs]**
**DF 709385 (KARUNAGAPALLY)**

FOR THE TICKETS ENDING WITH THE FOLLOWING NUMBERS

**4th Prize Rs.5,000/-**
0056 0450 1634 2641 3009 3413 3439 3834 4302 4402 5182 5682 6509 7113 7462 7913 8167 8686 9099

**5th Prize Rs.2,000/-**
0077 0284 0407 5690 6119 7779

**6th Prize Rs.1,000/-**
0658 0689 0761 0852 1415 1463 1658 3174 3262 3419 3542 3997 4150 4291 4505 5549 5962 6297 6476 6655 8427 8894 9541 9675 9855

**7th Prize Rs.500/-**
0035 0245 0439 0781 0854 0944 1112 1228 1340 1571 1654 1857 2049 2186 2524 2529 2567 2631 2729 2798 2842 2895 2955 3118 3295 3322 3383 3523 3567 3700 3749 3864 4070 4275 4425 4463 4487 4562 4593 4608 4615 4760 5340 5351 5389 5407 5469 6325 6498 6669 6708 6718 6978 6986 7209 7395 7511 7531 7609 7637 7877 7926 8508 8703 8706 8733 8883 8941 9209 9302 9305 9459 9558 9603 9650 9920

**8th Prize Rs.200/-**
0075 0100 0329 0543 0730 0768 0769 0774 0820 0864 0898 1131 1215 1240 1542 1577 2077 2635 2668 2687 2732 2829 2904 2951 2985 3031 3048 3078 3121 3210 3231 3261 3315 3468 3730 3789 3856 3961 4036 4055 4162 4228 4243 4385 4394 4442 4624 4785 4872 4929 5104 5206 5279 5297 5473 5595 5643 5865 6145 6244 6384 6386 6537 6592 6835 6838 6856 6861 6927 6949 7000 7195 7232 7291 7525 7529 7554 7562 7810 8029 8096 8102 8118 8291 8304 8329 8452 8913 9142 9189 9329 9428 9520 9768 9771 9795

**9th Prize Rs.100/-**
0019 0153 0268 0269 0404 0479 0489 0496 0504 0534 0638 0701 0756 0805 0827 0849 0851 0860 0909 1012 1046 1057 1061 1092 1117 1173 1217 1223 1232 1342 1350 1436 1438 1493 1527 1534 1588 1617 1864 1987 2109 2126 2132 2256 2377 2407 2604 2737 2763 3034 3040 3085 3097 3131 3144 3157 3158 3230 3243 3283 3309 3460 3604 3678 3701 3723 3768 3794 3828 3943 3987 4009 4068 4080 4167 4192 4375 4405 4429 4589 4612 4719 4740 4817 5036 5063 5170 5244 5675 5687 5792 5871 5876 5886 5890 5895 6122 6770 6791 7045 7062 7102 7175 7205 7240 7439 7611 7728 7787 7788 7829 8089 8239 8314 8350 8450 8503 8515 8662 8669 8754 8778 8794 8802 8822 8979 8989 9010 9183 9217 9392 9393 9474 9500 9505 9540 9588 9707

## ನಗರಸಭಾ ಕಾರ್ಯಾಲಯ, ಪುತ್ತೂರು, ದ.ಕ

ಕಿಲ್ಲೆ ಮೈದಾನ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ-574201
ವೆಬ್‌ಸೈಟ್: www.putturcity.mrc.gov.in ಇಮೇಲ್: co.puttur.cmc@gmail.com

ಪು.ನ.ಸ/ವಿ.ನಿ/07/ತಾಂ.ವಿ.ಪಿ.ಆರ್/628/2025-26 ದಿನಾಂಕ: 25/03/2026

**ಅಲ್ಪಾವಧಿ-ಟೆಂಡರ್ ಪ್ರಕಟಣೆ**

**(ಕರ್ನಾಟಕ ಸರಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)**

**ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಕಾಮಗಾರಿಗೆ ಬಗ್ಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ kppp.karnataka.gov.in ನಿಯಮಗಳನ್ವಯ ಒಟ್ಟು:4 ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ (kppp.karnataka.gov.in) ಮುಖಾಂತರ ವೀಕ್ಷಿಸಬಹುದಾಗಿದೆ. ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/04/2026 ಅಪರಾಹ್ನ: 5.00 ಗಂಟೆಯವರೆಗೆ (1) ಟೆಂಡರ್ ತಾಂತ್ರಿಕ ಬಿಡ್ (ಕ್ರಮ ಸಂಖ್ಯೆ03) ತೆರೆಯುವ ದಿನಾಂಕ: 04/04/2026 ರ ಅಪರಾಹ್ನ: 5.00 ಗಂಟೆಯವರೆಗೆ (2) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 06/04/2026 ರ ಅಪರಾಹ್ನ: 5.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ನಗರಸಭಾ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಅಥವಾ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆದುಕೊಳ್ಳುವುದು. ಯಾವುದೇ ತಿದ್ದುಪಡಿ ಮತ್ತು ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು**

**ಸಹಿ/-, ಆಡಳಿತಾಧಿಕಾರಿಗಳು, ನಗರಸಭೆ ಪುತ್ತೂರು**
**ಸಹಿ/-, ಪೌರಾಯುಕ್ತರು, ನಗರಸಭೆ ಪುತ್ತೂರು**

DIPR/DK/KSMCA/1817/25-26 dt. 25.03.2026

ಕರ್ನಾಟಕ ಸರ್ಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿ,

ಲೋಕೋಪಯೋಗಿ ಕಟ್ಟಡ ಸಂಕೀರ್ಣ, ನೆಹರೂ ಮೈದಾನ ರಸ್ತೆ, ದಕ್ಷಿಣ ಕನ್ನಡ, ಮಂಗಳೂರು - 575001. ದೂ: 0824-2423672

ಸಂ.: ಎಸ್‌ಯುಪಿ/65/ಕಾಲ್-2/2025-26 ದಿನಾಂಕ: 25-03-2026

**ಅಲ್ಪಾವಧಿ ಮರು-ಟೆಂಡರ್ ಪ್ರಕಟಣೆ**

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ದಕ್ಷಿಣ ಕನ್ನಡ ಜಿಲ್ಲೆಯ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ 1 ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಮಟ್ಟದ ಆಸ್ಪತ್ರೆ ಮತ್ತು ಎಲ್ಲಾ ತಾಲೂಕು ಆಸ್ಪತ್ರೆಗಳಿಗೆ ಎಬಿ-ಎಆರ್‌ಕೆ ಕಾರ್ಯ ನಿರ್ವಾಹಕರುಗಳ ಸೇವೆಯನ್ನು ಒದಗಿಸಲು ಅರ್ಹ ಹೊರಗುತ್ತಿಗೆ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಅಲ್ಪಾವಧಿ ಮರು-ಟೆಂಡರ್ ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳ ಬಗ್ಗೆ, ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ ಸಂಖ್ಯೆ: ಎಸ್‌ಯುಪಿ/65/ಕಾಲ್-2/2025-26 ದಿನಾಂಕ: 25-03-2026 (2 ) ಆಕ್ಷೇಪಣೆಗಳಿಗೆ ಅಂತಿಮ ದಿನಾಂಕ: 30-03-2026 ಅಪರಾಹ್ನ 3.00 ಗಂಟೆವರೆಗೆ (3) ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01-04-2026 ಅಪರಾಹ್ನ 3.00 ಗಂಟೆವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02-04-2026 ಅಪರಾಹ್ನ 3.30 ಗಂಟೆ (5) ಟೆಂಡರ್ ಮೊತ್ತ: ರೂ. 27 ಲಕ್ಷ (6) ಇ-ಟೆಂಡರಿನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: 54,000/-

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ದ.ಕ ಮಂಗಳೂರು.

DIPR/DK/KSMCA/1819/25-26 dt.25.03.2026

## ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ,ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ. ದೂರವಾಣಿ ಸಂಖ್ಯೆ: 08234-200058
ಫ್ಯಾಕ್ಸ್ ಸಂಖ್ಯೆ: 08234-286019
ಇ-ಮೇಲ್: eeno7nag@gmail.com

**ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2025-26 ದಿನಾಂಕ:23.03.2026 (ಇ-ಪ್ರ್ಯೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ದ್ವಿ ಲಕೋಟೆ ಪದ್ಧತಿಯಲ್ಲಿ) - (ಕೆರೆ ಅಭಿವೃದ್ಧಿ ಕಾಮಗಾರಿಗಾಗಿ)**

ಕೆರೆ ಅಭಿವೃದ್ಧಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿಯಾಗಿರುವ 3 ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. 01 ಕಾಮಗಾರಿಯ ಟೆಂಡರ್‌ನ್ನು ಹಾಗೂ ಇ.ಎಂ.ಡಿ ಠೇವಣಿಯನ್ನು ಆನ್‌ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸುವ ದಿನಾಂಕ: 24.03.2026 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.04.2026 ರ ಸಂಜೆ 16.00 ಘಂಟೆಯವರೆಗೆ, ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.04.2026 ರ ಬೆಳಿಗ್ಗೆ, 11.00 ಘಂಟೆಗಳು ನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.04.2026 ರ ಬೆಳಿಗ್ಗೆ 12.00 ಘಂಟೆಗೆ. ಟೆಂಡರ್ ಆಹ್ವಾನಿಸಿರುವ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.82.04 ಲಕ್ಷಗಳು ಹಾಗೂ ಕಾಮಗಾರಿಯ ಇ.ಎಂ.ಡಿ ಮೊತ್ತ ರೂ. 1,64,100.00 ಗಳಾಗಿದ್ದು, ಸದರಿ ಕಾಮಗಾರಿಯ ವಿವರ, ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ಫಾರಂ ಬೆಲೆ ಹಾಗೂ ಕಾಲಮಿತಿ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

**ಸಹಿ/-ಕಾರ್ಯಪಾಲಕ ಇಂಜಿನಿಯರ್, ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ**

ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/915/2025-26

## ಕರ್ಣಾಟಕ ಬ್ಯಾಂಕ್ ಲಿ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ಣಾಟಕ ಬ್ಯಾಂಕ್ ಬಿಲ್ಡಿಂಗ್, ಕೊಡಿಯಾಲ್‌ಬೈಲ್, ಮಂಗಳೂರು-575003.

ದೂರವಾಣಿ : 0824-2422811(Gen)/2427811 (CM)
ಇ-ಮೇಲ್ : mlr.arm@ktkbank.com
Website : https://www.karnatakabank.bank.in
CIN : L85110KA1924PLC001128

**ಸ್ವಾಧೀನತೆಯ ನೋಟೀಸು** (ಸ್ಥಿರಾಸ್ತಿಗೆ ಸಂಬಂಧಿಸಿದಂತೇ)

**ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002 ರ ಪರಿಚ್ಛೇದ 13 (12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ದಿನಾಂಕ **31.12.2025** ರಂದು **ತಗಾದೆ ನೋಟೀಸನ್ನು ಸಾಲಗಾರರು / ಅಡಮಾನದಾರರು / ಜಾಮೀನುದಾರರು: 1) ಶ್ರೀಮತಿ ಲಕ್ಷ್ಮೀ ರಾಣ್ಯ,** ಶ್ರೀ ಶೀನ ರಾಣ್ಯ ರವರ ಪತ್ನಿ, **2) ಶ್ರೀಮತಿ ಪ್ರತಿಮಾ,** ಶ್ರೀ ಪ್ರಶಾಂತ್ ಎಸ್. ರಾಣ್ಯ ರವರ ಪತ್ನಿ, **3) ಶ್ರೀ ಪ್ರಶಾಂತ್ ಶ್ರೀನಿವಾಸ ರಾಣ್ಯ,** ಶ್ರೀ ಶ್ರೀನಿವಾಸ ರಾಣ್ಯರವರ ಮಗ, ನಂ. 1-3 ಇವರುಗಳ ವಿಳಾಸ: "ಜಲ್ಲಿಗುಡ್ಡೆ ಮನೆ", ಮೆನ್ನಬೆಟ್ಟು ಗ್ರಾಮ, ಕಿನ್ನಿಗೋಳಿ ಅಂಚೆ, ದ.ಕ.ಜಿಲ್ಲೆ, ಮಂಗಳೂರು - 574 150 ಇವರಿಗೆ ಸದ್ರಿ ಸಾಲದ ಬಾಕಿ ಬಾಬ್ತು **ಪಿಎಸ್‌ಟಿಎಲ್ ಖಾತೆ ಸಂಖ್ಯೆ 6307001800002201** ರಲ್ಲಿ **ರೂ. 18,06,740.75 (ರೂಪಾಯಿ ಹದಿನೆಂಟು ಲಕ್ಷದ ಆರು ಸಾವಿರದ ಏಳ್ನೂರ ನಲ್ವತ್ತು ಮತ್ತು ಪೈಸೆ ಎಪ್ಪತ್ತೈದು ಮಾತ್ರ)** ಮತ್ತು ದಿನಾಂಕ **21.12.2025** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳನ್ನು ಈ ನೋಟೀಸು ಪಡೆದ ದಿನಾಂಕದಿಂದ **60 ದಿನಗಳೊಳಗೆ** ಪಾವತಿಸುವಂತೇ ಸೂಚಿಸಲಾಗಿರುತ್ತದೆ.

ಸಾಲಗಾರರು / ಅಡಮಾನದಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 24.03.2026 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ** ಎಂದು ಸಾಲಗಾರರಿಗೆ / ಅಡಮಾನದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರು / ಅಡಮಾನದಾರರು ಮತ್ತು ಸಾರ್ವಜನಿಕರು ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ **ಕರ್ಣಾಟಕ ಬ್ಯಾಂಕ್ ಲಿ., ಮುಲ್ಕಿ ಶಾಖೆಗೆ ಪಿಎಸ್‌ಟಿಎಲ್ ಖಾತೆ ಸಂಖ್ಯೆ 6307001800002201** ರಲ್ಲಿ ಸಲ್ಲತಕ್ಕ ಒಟ್ಟು ಮೊತ್ತ ರೂ. **18,53,851.75 (ರೂಪಾಯಿ ಹದಿನೆಂಟು ಲಕ್ಷದ ಐವತ್ಮೂರು ಸಾವಿರದ ಎಂಟ್ನೂರ ಐವತ್ತೊಂದು ಮತ್ತು ಪೈಸೆ ಎಪ್ಪತ್ತೈದು ಮಾತ್ರ)** ಮತ್ತು ದಿನಾಂಕ **21.03.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳ ಪಾವತಿಗೆ ಬಾಧ್ಯಸ್ಥರಾಗಿರುತ್ತಾರೆ.

(ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8) ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರ & ಅಡಮಾನದಾರರ ಗಮನವನ್ನು ಸೆಳೆಯಲಾಗಿದೆ).

**ಸ್ಥಿರಾಸ್ತಿಯ ವಿವರಗಳು**

**ಶ್ರೀಮತಿ ಲಕ್ಷ್ಮೀ ರಾಣ್ಯ** ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಕೃಷಿಯೇತರ ಭೂಮಿಯ **ಸರ್ವೆ ನಂಬ್ರ 160-1** (ಆರ್‌ಟಿಸಿಯ ಪ್ರಕಾರ 160-1ಎ), ಆಸ್ತಿ ಐಡಿ ನಂಬ್ರ **15110030350 0401659,** ಆಸ್ತಿ ಅಸ್ಸೆಸ್‌ಮೆಂಟ್ ನಂಬ್ರ **10-84-3** (ಪಂಚಾಯತ್ ದಾಖಲೆಯ ಪ್ರಕಾರ), ವಿಸ್ತೀರ್ಣ **5 ಸೆಂಟ್ಸ್,** ಅದರೊಂದಿಗೆ ಅಲ್ಲಿರುವ ಮನೆಯು **ಡೋರ್ ನಂಬ್ರ 10-84-3 "ಶ್ರೀ ದುರ್ಗಾ"** ಹೊಂದಿದ್ದು, ಈ ಸ್ಥಿರಾಸ್ತಿಯು ಮೆನ್ನಬೆಟ್ಟು ಗ್ರಾಮ ಪಂಚಾಯತ್, ಜಲ್ಲಿಗುಡ್ಡೆ, ಮೆನ್ನಬೆಟ್ಟು ಗ್ರಾಮ, ಮೂರು ಕಾವೇರಿ, ಕಿನ್ನಿಗೋಳಿ, ಮಂಗಳೂರು ತಾಲೂಕು, ದ.ಕ.ಜಿಲ್ಲೆಯಲ್ಲಿದೆ. **ಗಡಿರೇಖೆಗಳು: ದಾಖಲೆ ಪ್ರಕಾರ/ವಾಸ್ತವ: ಪೂರ್ವ:** ಅದೇ ಸಬ್‌ಡಿವಿಜನಿನ ಉಳಿದ ಭಾಗ / ಮನೆ; **ಪಶ್ಚಿಮ:** ಅದೇ ಸಬ್‌ಡಿವಿಜನಿನ ಉಳಿದ ಭಾಗ / ಮನೆ; **ಉತ್ತರ:** ಅದೇ ಸಬ್‌ಡಿವಿಜನಿನ ಉಳಿದ ಭಾಗ / ಖಾಲಿ ಭೂಮಿ; **ದಕ್ಷಿಣ:** ರಸ್ತೆ / ರಸ್ತೆ.

ದಿನಾಂಕ : 24.03.2026
ಸ್ಥಳ : ಮೆನ್ನಬೆಟ್ಟು ಗ್ರಾಮ, ಕಿನ್ನಿಗೋಳಿ.
ಸಹಿ/-, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ ಕರ್ಣಾಟಕ ಬ್ಯಾಂಕ್ ಲಿ.,

## ಪುತ್ತೂರು ಮಾರುಕಟ್ಟೆ ಧಾರಣೆ

25-03-2026
ಅಡಿಕೆ ಧಾರಣೆ ಕೆ.ಜಿ.ಗೆ

| | |
|---|---|
| ಹೊಸ ಅಡಿಕೆ | 260 - 460 |
| ಚೋಲ್ ಅಡಿಕೆ | 505 - 530 |
| ಡಬಲ್ ಚೋಲ್ | 505 - 530 |
| ಹೊಸ ಪಠೋರ | 340 - 390 |
| ಹಳೆ ಪಠೋರ | 375 - 405 |
| ಹೊಸ ಉಳ್ಳಿ | 115 - 285 |
| ಹಳೆ ಉಳ್ಳಿ | 105 - 285 |
| ಹೊಸ ಕೋಕಾ | 315 - 335 |
| ಹಳೆ ಕೋಕಾ | 315 - 335 |
| ಹೊಸ ಕರಿಗೋಟು | 230 - 260 |
| ಹಳೆ ಕರಿಗೋಟು | 230 - 260 |
| ಹಸಿ ಕೊಕ್ಕೋ | 70 - 100 |
| ಒಣ ಕೊಕ್ಕೋ | 270 - 300 |

**ಕಾಳುಮೆಣಸು ಧಾರಣೆ**

| | |
|---|---|
| ಕಾಳುಮೆಣಸು | 465 - 665 |

**ರಬ್ಬರ್ ಧಾರಣೆ : ಗ್ರೇಡ್**

| | |
|---|---|
| ಆರ್‌ಎಸ್‌ಎಸ್ 1 | 212.50 |
| ಆರ್‌ಎಸ್‌ಎಸ್ 2 | 197.00 |
| ಸ್ಕ್ರಾಪ್ 1 | 130.00 |
| ಸ್ಕ್ರಾಪ್ 2 | 127.00 |

ಕರ್ನಾಟಕ ಸರಕಾರ

## ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

1ನೇ ಮಹಡಿ, ಬಂಟ್ವಾಳ ಪುರಸಭೆ, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ
e-mail: bantwal.buda@yahoo.in Phone: 08255 231130

ಕ್ರಮಾಂಕ: ನ.ಯೋ.ಪ್ರಾ.ಬಂ/ವಾ.ಸಾ.ಇ./ 572/2025-26 ದಿನಾಂಕ: 25-03-2026

**ಪ್ರಕಟಣೆ**

ವಿಷಯ : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ ಬಂಟ್ವಾಳ ಮಹಾಯೋಜನೆಗೆ ಒಳಪಟ್ಟ ಗ್ರಾಮದ ಸ.ನಂ.ಗಳ ಜಾಗವನ್ನು ವಸತಿ ಉಪಯೋಗ ವಲಯದ ಮಹಾಯೋಜನೆಯಲ್ಲಿ ಕಾಯ್ದಿರಿಸಲಾದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಮಾಡಲು ಸಂಬಂಧಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಜಮೀನಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿ ಸ್ಥಳೀಯರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಸಂಬಂಧಿಸಿರುವ ಅವಶ್ಯಕ ಮೂಲಭೂತ ಸೌಕರ್ಯವನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಈ ಕೆಳಕಂಡ ಜಮೀನಿನ ಭೂ ಉಪಯೋಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕ ಆಕ್ಷೇಪಣೆ ಸಲಹೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಪುರಸಭಾ ವಾಣಿಜ್ಯ ಸಂಕೀರ್ಣ ಕಟ್ಟಡ, ಬಿ.ಸಿ.ರೋಡ್ ಇವರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ಗ್ರಾಮ | ಸರ್ವೆ ನಂ. | ವಿಸ್ತೀರ್ಣ ಎಕ್ರೆ | ಮಹಾಯೋಜನೆಯ ಪ್ರಕಾರ ಭೂ ಉಪಯೋಗ | ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ |
|---|---|---|---|---|---|---|
| 1. | ಶ್ರೀ ಕೆ. ಲೋಕೇಶ ಮತ್ತು ಶ್ರೀ ಸುಕೇಶ್ ಚೌಟ | ಬಿ. ಮೂಡ | 121/9 | 0.71 ಎಕ್ರೆ | ವಸತಿ | ವಾಣಿಜ್ಯ |

ಸಹಿ/- **ಸದಸ್ಯ ಕಾರ್ಯದರ್ಶಿ**
ನಗರ ಯೋಜನಾ ಪ್ರಾಧಿಕಾರ, ಬಂಟ್ವಾಳ

## ಉಡುಪಿ ನಗರಸಭೆ

ಕವಿ ಮುದ್ದಣ್ಣ ಮಾರ್ಗ, ಉಡುಪಿ - 578 101
ದೂರವಾಣಿ ಸಂಖ್ಯೆ : 0820-2520306, Email : ka.udupi.cmc@gmail.com

ಸಂಖ್ಯೆ: ಉನಸ.ಸಿ2:ಮಾರುಕಟ್ಟೆ:ಏಲಂ.ಸಿ.ಆರ್.01/2025-26 ದಿನಾಂಕ 25.03.2026

**ಮರು ಹರಾಜು ಪ್ರಕಟಣೆ**

ಉಡುಪಿ ನಗರಸಭಾ ಅಧೀನದ ಈ ಕೆಳಗಿನ ಅಂಗಡಿ ಕೋಣೆ/ಮಾರುಕಟ್ಟೆಗಳನ್ನು ದಿನಾಂಕ 01.04.2026ರಿಂದ 31.03.2027ರ ವರೆಗೆ ಉಪಯೋಗಿಸುವ ಹಕ್ಕನ್ನು ದಿನಾಂಕ 09.04.2026ರಂದು ಪೌರಾಯುಕ್ತರು ಯಾ ಅವರಿಂದ ಅಧಿಕಾರ ಹೊಂದಿದವರು ಪೂರ್ವಾಹ್ನ ಗಂಟೆ 11-00 ಕ್ಕೆ ಸಲಯಾಲ ನಗರಸಭಾ ಸತ್ಯಮೂರ್ತಿ ಸಭಾಭವನದಲ್ಲಿ ಹರಾಜು ಮೂಲಕ ವಿಲೇ ಮಾಡಲಿರುವರು. ಏಲಂನಲ್ಲಿ ಭಾಗವಹಿಸುವವರು ನಿಗಧಿತ ಎಲಂ ಠೇವಣಿಯನ್ನು ದಿನಾಂಕ 06.04.2026 ರಂದು ಅಪರಾಹ್ನ 4-00 ಗಂಟೆಯವರೆಗೆ ಡಿ.ಡಿ. ಮೂಲಕ ನಗರಸಭೆಯಲ್ಲಿ ಪಾವತಿಸಿ ಏಲಂನಲ್ಲಿ ಭಾಗವಹಿಸ ಬಹುದು. ಏಲಂ ಷರತ್ತುಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಕೇಳಿ ಪಡೆದುಕೊಳ್ಳಬಹುದು. ಏಲಂನಲ್ಲಿ ಗರಿಷ್ಟ ಮೊತ್ತ ಸೂಚಿಸಿದ ಬಿಡ್ಡುದಾರರಿಗೆ ಮಾರುಕಟ್ಟೆಯನ್ನು ವಹಿಸಿ ಕೊಡಲಾಗುವುದು.

| ಸಂ. | ಏಲಂ ಬಾಬುಗಳ ವಿವರ | ಸರಕಾರಿ ಬಿಡ್ಡು ಮೊತ್ತ | ಏಲಂ ಠೇವಣೆ |
|---|---|---|---|
| 1 | ಕುಂಜಿಬೆಟ್ಟು ಮೀನು ಮಾರುಕಟ್ಟೆ ಸುಂಕ ವಸೂಲಿ | 14,400/- | 14,400/- |
| 2 | ಕುಂಜಿಬೆಟ್ಟು ಕೋಳಿ ಮಾರುಕಟ್ಟೆ ಸುಂಕ ವಸೂಲಿ | 83,100/- | 83,100/- |
| 3 | ಅಂಬಾಗಿಲು ಮೀನು ಮಾರುಕಟ್ಟೆ ಸುಂಕ ವಸೂಲಿ | 15,100/- | 15,100/- |
| 4 | ಉಡುಪಿ ಸಿಟಿ ಬಸ್ ನಿಲ್ದಾಣ, ಸರ್ವಿಸ್ ಬಸ್ ನಿಲ್ದಾಣ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಸುಂಕ ವಸೂಲಾತಿ | 7,32,500/- | 7,32,500/- |
| 6 | ಉಡುಪಿ ಹೈಟೆಕ್ ಮೀನು ಮಾರುಕಟ್ಟೆ ಸುಂಕ ವಸೂಲಾತಿ | 3,00,000/- | 3,00,000/- |
| 17 | ಆದಿಉಡುಪಿ ಮೀನು ಮಾರುಕಟ್ಟೆ ಸುಂಕ ವಸೂಲಿ | 23,500/- | 23,500/- |
| 19 | ನೆಲ್ಲಿಕಟ್ಟೆ ಶ್ರೀ ಬಬ್ಬುಸ್ವಾಮಿ ದೈವಸ್ಥಾನದ ಬಳಿ ಇರುವ ಜಾಗದ ಸುಂಕ ವಸೂಲಾತಿ (ಹಳೆ ಜಟಕಾ ಸ್ಟಾಂಡ್) | 2,96,400/- | 2,96,400/- |
| 20 | ಹಳೆ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಸುಂಕ ವಸೂಲಾತಿ (ಎ ಡಿ ಬಿ ಕಟ್ಟಡ ) | 2,64,600/- | 2,64,600/- |
| 21 | ಸರ್ವಿಸ್ ಬಸ್ ಸ್ಟಾಂಡ್ ಹೂವಿನ ಮಾರುಕಟ್ಟೆ ಎದುರು ಸುಂಕ ವಸೂಲಾತಿ | 1,01,494/- | 1,01,494/- |

ಸಹಿ /- ಆಡಳಿತಾಧಿಕಾರಿಗಳು, ಉಡುಪಿ ನಗರಸಭೆ
ಸಹಿ /-ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

## ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ವನ್ಯಜೀವಿ ಉಪ ವಿಭಾಗ, ಕುಂಬಾರವಾಡಾ-581187

email: acfanshiwl@gmail.com

ಕ್ರ.ಸಂ: ಸ.ಅ.ಸಂ/ಕುಂಬಾರವಾಡಾ/ಎ.ಪಿ.ಸಿ & ಪಿ.ಸಿ.ಪಿ/939/2025-26 ದಿನಾಂಕ: 18/03/2026

**ಇ-ಟೆಂಡರ್ ಮರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)**

**2026-27ನೇ ಸಾಲಿನಲ್ಲಿ ಕೆನರಾ ವೃತ್ತ ವ್ಯಾಪ್ತಿಯಲ್ಲಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ಅಗತ್ಯವಿರುವ ಕಂಪ್ಯೂಟರ್ ಆಪರೇಟರ್, ಲಿಪಿಕ ಸಹಾಯಕರು, ವಾಹನ ಚಾಲಕರು, ಕಾವಲುಗಾರರು (ಡಿ ಗ್ರೂಪ್) ಹಾಗೂ ವಲಯ ವ್ಯಾಪ್ತಿ ಕಳ್ಳಬೇಟೆ ಶಿಬಿರಗಳಿಗೆ ಹಾಗೂ ಅರಣ್ಯ ರಕ್ಷಣಾ ಶಿಬಿರಗಳಿಗೆ ಕೆಲಸ ನಿರ್ವಹಿಸಲು ಕಾವಲುಗಾರರ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು 2026-27 ನೇ ಸಾಲಿಗೆ ಮೇಲ್ಕಂಡಂತೆ ಹೊರಗುತ್ತಿಗೆ ಸೇವೆಯನ್ನು ನಿರ್ವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವೀ ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಎಕ ಬಿಡ್ ಆಗಿರುವುದರಿಂದ ಸದರಿ ಕಾಮಗಾರಿಗಳಿಗೆ ಮರು ಟೆಂಡರ್ ಅನ್ನು ದಿನಾಂಕ: 18-03-2026 ಕರೆಯಲಾಗಿತ್ತು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18-04-2026 ರಂದು ಬೆಳಿಗ್ಗೆ 11.00 ಗಂಟೆ ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https://kppp.karnataka,gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಪೂರೈಸಬೇಕಾದ ಹೊರಸಂಪನ್ಮೂಲ ಸೇವೆಗಳ ವಿವರಗಳನ್ನು ಕೆಳಕಂಡಂತಿರುತ್ತದೆ.**

**ಅನುಸೂಚಿ: ವಿವರಗಳು: 1) ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ದೈನಂದಿನ ಅರಣ್ಯ ಹಾಗೂ ವನ್ಯಪ್ರಾಣಿ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ಅವಶ್ಯಕತೆ ಇರುವ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಮಾಡುವುದು. (1) ಕುಶಲ (Skilled) ಕೆಲಸಗಾರರು- 160 ಸಂಖ್ಯೆ (2) ಅರೆಕುಶಲ (Un Skilled) ಕೆಲಸಗಾರರು- 120 ಸಂಖ್ಯೆ, ಪರಿಮಾಣ ಸಂಖ್ಯೆ: 280 ಸಂಖ್ಯೆ, ಟೆಂಡರ್ ಮೊತ್ತ: 854785.92, ಇ.ಎಂ.ಡಿ: 1282180.00**

**(1) ಟೆಂಡರ ಪ್ರಶ್ನೆಗಳು / ಸ್ಪಷ್ಟೀಕರಣ ಕೊನೆಯ ದಿನಾಂಕ: 18-04-2026 ಸಾಯಂಕಾಲ 04.00 ಗಂಟೆ (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19-04-2026 ಬೆಳಿಗ್ಗೆ 11.00 ಗಂಟೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 20-04-2026 ಬೆಳಿಗ್ಗೆ 11.30 ಗಂಟೆಗೆ (4) ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 21-04-2026 ಬೆಳಿಗ್ಗೆ 11.30 ಗಂಟೆಗೆ.**

**ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.**

**ಸಹಿ/-, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗ ಕುಂಬಾರವಾಡಾ**

DIPR/KWR/KSMCA/1248/25-26 dt.25.03.26

## ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ-06

ನಂ:ದಾಹನಪ್ರಾ:ತಾಶಾ:ಎಇಇ:ಕಸಾಸಂಪೋ:ಟೆಂಪ್ರ:12:2025-26/3845 ದಿನಾಂಕ:25-03-2026.

**ಟೆಂಡರ್ ಪ್ರಕಟಣೆ-2ನೇ ಕರೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್)**

ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ/ವಿದ್ಯುತ್ ಪರಿವೀಕ್ಷಕರಿಂದ ನೋಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಇಂಡೆಂಟ್ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಗಳಲ್ಲಿ | ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ | ಗುತ್ತಿಗೆ ದಾರರ ದರ್ಜೆ | ಟೆಂಡರ್ ಶ್ರೇಣಿ | ಪೂರ್ಣ ಗೊಳಿಸಲು ನಿಗಧಿ ಪಡಿಸಿದ ಕಾಲಾವಧಿ (ಮಳೆಗಾಲ ಸೇರಿ) |
|---|---|---|---|---|---|---|---|---|
| 1 | DHUDA/2025-26/RD/WORK_INDENT61/CALL-2 | ಮಹಾಯೋಜನೆಯುಲ್ಲಿರುವ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಪಾಮೇನಹಳ್ಳಿ ಗ್ರಾಮದಿಂದ ತೋಳಹುಣಸೆ ಎಸ್ ಹೆಚ್-76 ರವರೆಗೆ ರಸ್ತೆ ನಿರ್ಮಾಣ. | 100.00 | 82,89,303.00 | 1,65,786/- | 3ನೇ ದರ್ಜೆ ಮೇಲ್ಪಟ್ಟು (ಸಿವಿಲ್) | ಕೆಡಬ್ಲ್ಯೂ-3 | 5 ತಿಂಗಳು |
| 2 | DHUDA/2025-26/EL/WORK_INDENT62/CALL-2 | ದಾವಣಗೆರೆ ನಗರದ ಕಾಸಲ್‌ಶೆಟ್ಟಿ ಪಾರ್ಕ್‌ನ ಒಳಗಡೆ ವಾಟರ್ ಟ್ಯಾಂಕ್ ಒಳಗಡೆ ಅಲಂಕಾರಿಕ ವಿದ್ಯುತ್ ಕಂಬಗಳನ್ನು ಅಳವಡಿಸಿ ಎಲ್.ಇ.ಡಿ. ಬೀದಿ ದೀಪ ಅಳವಡಿಸಿ ಬೆಳಕಿನ ವ್ಯವಸ್ಥೆ ಕಲ್ಪಿಸುವುದು. | 60.00 | 49,99,617.93 | 1,00,000/- | 1ನೇ ದರ್ಜೆ ಮೇಲ್ಪಟ್ಟು (ವಿದ್ಯುತ್) | ಕೆಡಬ್ಲ್ಯೂ-3 | 4 ತಿಂಗಳು |
| 3 | DHUDA/2025-26/OW/WORK_INDENT63/CALL-2 | ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಶ್ರೀ ಜೆ.ಹೆಚ್.ಪಟೇಲ್ ಬಡಾವಣೆ ಯುಲ್ಲಿರುವ ಉದ್ಯಾನವನಗಳಲ್ಲಿ ಆರ್‌ಸಿಸಿ ಬೆಂಚ್‌ಗಳನ್ನು ಅಳವಡಿಸುವುದು. | 48.00 | 40,06,324.00 | 80,200/- | 3ನೇ ದರ್ಜೆ ಮೇಲ್ಪಟ್ಟು (ಸಿವಿಲ್) | ಕೆಡಬ್ಲ್ಯೂ-2 | 3 ತಿಂಗಳು |

Last date & time for tender queries /clarifications 01-04-2026 upto 17.00 hours
Last date and time for receipt of tender 10-04-2026 upto 17.00 hours
Date & time for opening of (Technical bids) 13-04-2026 at 11.00 hours
Note: The rates quoted, whether specified or not, in the tender as per sanctioned estimate are inclusive of all lead and lifts and all other incidental charges to complete the work successfully.

1) ಯಾವ ಕಾರಣವನ್ನು ಸಹ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 2) ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು. 3) ಗುತ್ತಿಗೆದಾರರು ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳ ಗುಣಮಟ್ಟದ ಪರೀಕ್ಷಾ ವರದಿಯನ್ನು ಪ್ರಾಧಿಕಾರವು ನೇಮಿಸುವ ಮೂರನೇ ವ್ಯಕ್ತಿ ತಪಾಸಣಾ ತಂಡದವರಿಂದ ಅನುಮೋದಿಸಿಕೊಂಡು ನಂತರ ಕಾಮಗಾರಿಗೆ ಉಪಯೋಗಿಸಲು ಬದ್ಧರಾಗಿರತಕ್ಕದ್ದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ವಾಸಾಇ/ಡಿವಿಜಿ/847/ಕೆಎಸ್‌ಎಂಸಿಎ/2025-26 ಸಹಿ/- ಆಯುಕ್ತರು, ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

## ‘ಬ್ಯಾರಿ ಜನಪದ ಮತ್ತು ವಚನ ಸಾಹಿತ್ಯ’ ಪ್ರಚಾರೋಪನ್ಯಾಸ ಕಾರ್ಯಕ್ರಮ

# ಸಂಶೋಧನೆಗಳು ಏಕಮುಖವಾಗದಿರಲಿ

**ಕೊಣಾಜೆ:** ಭಾಷೆ, ಸಂಸ್ಕೃತಿ, ಜನಾಂಗದ ಕುರಿತಂತೆ ನಡೆಸಲಾಗುವ ಸಂಶೋಧನೆಗಳು ನಿರಂತರವಾಗಿರಬೇಕು. ವಿಷಯಕ್ಕೆ ಸಂಬಂಧಿಸಿ ನಡೆಸಲಾಗುವ ಸಂಶೋಧನೆಗಳು ಯಾವ ಕಾರಣಕ್ಕೂ ಏಕಮುಖವಾಗಬಾರದು. ಸಂಶೋಧಕರು ಹೇಳಿದ್ದನ್ನೆಲ್ಲಾ ಒಪ್ಪಬೇಕಿಲ್ಲ. ಅದರ ಬಗ್ಗೆ ಪ್ರಶ್ನೆ, ಉಪಪ್ರಶ್ನೆಗಳನ್ನು ಎತ್ತಬೇಕು. ಆವಾಗ ಅವುಗಳ ಬಗೆಗಿನ ಜ್ಞಾನ ವಿಸ್ತಾರಗೊಳ್ಳಲಿದೆ ಎಂದು ಮಂಗಳೂರು ವಿವಿಯ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ.ಧನಂಜಯ ಕುಂಬ್ಳೆ ಅಭಿಪ್ರಾಯಪಟ್ಟರು.

ಮಂಗಳೂರು ವಿವಿಯ ಬ್ಯಾರಿ ಅಧ್ಯಯನ ಪೀಠ ಇದರ ವತಿಯಿಂದ ಕೊಣಾಜೆ ನಡುಪದವಿನ ಪಿಎ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಕಾಲೇಜಿನ ಪೇಸ್ ನಾಲೇಜ್ ಸಿಟಿಯ ಮಲ್ಟಿಪರ್ಪಸ್ ಹಾಲ್‌ನಲ್ಲಿ ಮಂಗಳವಾರ ನಡೆದ 'ಬ್ಯಾರಿ ಜನಪದ ಮತ್ತು ವಚನ ಸಾಹಿತ್ಯ'ಪ್ರಚಾರೋಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಬ್ಯಾರಮತ್ತು ಬಹಾರಿಯಿಂದ 'ಬ್ಯಾರಿ' ಎಂಬ ಪದ ಉತ್ಪತ್ತಿಯಾಯಿತೋ ಎಂಬುದರ ಬಗ್ಗೆ ಇನ್ನೂ ಜಿಜ್ಞಾಸೆಯಿದೆ. ಈ ನಿಟ್ಟಿನಲ್ಲಿ ಅಧ್ಯಯನ ನಡೆಸಲು ಯುವ ಸಮೂಹ ಮುಂದೆ ಬರಬೇಕು. ಬ್ಯಾರಿಯಲ್ಲಿ ಲಿಖಿತಕ್ಕಿಂತ ಜನಪದ ಸಾಹಿತ್ಯ ಹೆಚ್ಚಿವೆ. ಆಧುನಿಕ ತಂತ್ರಜ್ಞಾನ ಬಳಸಿ ಅವುಗಳ ದಾಖಲೀಕರಣ ಮಾಡುವ ಅಗತ್ಯವಿದೆ ಎಂದ ಡಾ. ಧನಂಜಯ ಕುಂಬ್ಳೆ ಪ್ರಾದೇಶಿಕ ಭಾಷೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದ್ದರೂ ಕೂಡ ಆದಿನ್ನೂ ಮುಖ್ಯವಾಹಿನಿಗೆ ಸರಿಸಮಾನವಾಗಿ ಬೆಳೆದು ಬಂದಿಲ್ಲ. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುವ ಪ್ರಯತ್ನಗಳು ವಿಶ್ವಾಸ ಮೂಡಿಸುವಂತಿದೆ ಎಂದರು.

> **ಪ್ರಾದೇಶಿಕ ಭಾಷೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದ್ದರೂ ಕೂಡ ಅದಿನ್ನೂ ಮುಖ್ಯವಾಹಿನಿಗೆ ಸರಿಸಮಾನವಾಗಿ ಬೆಳೆದು ಬಂದಿಲ್ಲ. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುವ ಪ್ರಯತ್ನಗಳು ವಿಶ್ವಾಸ ಮೂಡಿಸುವಂತಿದೆ.**
> ■ ಡಾ.ಧನಂಜಯ ಕುಂಬ್ಳೆ

ಯೆನೆಪೋಯ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್, ಸೈನ್ಸ್, ಕಾಮರ್ಸ್ ಆ್ಯಂಡ್ ಮ್ಯಾನೇಜ್ಮೆಂಟ್‌ನ ಸಹಾಯಕ ಪ್ರಾಧ್ಯಾಪಕ ನಿಯಾರ್ಝ್ ಪಿ ಬ್ಯಾರಿ ಜನಪದ ಮತ್ತು ವಚನ ಸಾಹಿತ್ಯ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಪಿಎ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಸರ್ಫ್ರಾಝ್ ಜೆ. ಹಾಸಿಮ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಪೇಸ್ ನಾಲೇಜ್ ಸಿಟಿ ಇದರ ಎಜಿಎಂ (ಕ್ಯಾಂಪಸ್) ಶರಫುದ್ದೀನ್ ಪಿ.ಕೆ., ಪೇಸ್ ಕ್ಯಾಂಪಸ್‌ನ ಸ್ಟೂಡೆಂಟ್ ಡೀನ್ ಡಾ. ಸಯ್ಯಿದ್ ಅಮೀನ್ ಅಹ್ಮದ್ ಮತ್ತು ಪಿಎ ಕಾಲೇಜಿನ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರೊ. ಡಾ. ಅಬ್ದುಲ್ ಶರೀಫ್ ಭಾಗವಹಿಸಿದ್ದರು.

ವೇದಿಕೆಯಲ್ಲಿ ಬ್ಯಾರಿ ಅಧ್ಯಯನ ಪೀಠದ ಸದಸ್ಯರಾದ ಖಾಲಿದ್ ತಣ್ಣೀರುಬಾವಿ, ಹಂಝ ಮಲಾರ್, ಮೊಯಿದಿನ್ ಬಾದ್‌ಷಾ ಸಂಬಾರತೋಟ, ಅಖಿಲ ಭಾರತ ಬ್ಯಾರಿ ಪರಿಷತ್‌ನ ಮಹಿಳಾ ಘಟಕದ ಅಧ್ಯಕ್ಷೆ ಶಮೀಮಾ ಕುತ್ತಾರ್ ಉಪಸ್ಥಿತರಿದ್ದರು.

ಬ್ಯಾರಿ ಅಧ್ಯಯನ ಪೀಠದ ಸಂಯೋಜಕ ಡಾ. ಅಬೂಬಕರ್ ಸಿದ್ದೀಕ್ ಸ್ವಾಗತಿಸಿದರು. ಪೀಠದ ಸದಸ್ಯ ಡಾ.ಇಸ್ಮಾಯೀಲ್ ಎನ್. ವಂದಿಸಿದರು. ಕನ್ನಡ ಉಪನ್ಯಾಸಕಿ ಸಾರಾ ಮಸ್ಕರುನ್ನಿಸ ಕಾರ್ಯಕ್ರಮ ನಿರೂಪಿಸಿದರು.

## ಯುವತಿ ನಾಪತ್ತೆ



**ಬಂಟ್ವಾಳ:** ಕೆಲಸಕ್ಕೆಂದು ಮನೆಯಿಂದ ಹೋದ ಯುವತಿಯೊಬ್ಬಳು ಕಾಣೆಯಾದ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅರಳ ಗ್ರಾಮದ ಮುಲಾರಪಟ್ನ ನಿವಾಸಿ ಫಾತಿಮತ್ ಇಫ್ರಾ (18) ಕಾಣೆಯಾದ ಯುವತಿ. ಮಾ.24ರಂದು ಕಾಣೆಯಾಗಿದ್ದಾಳೆ ಎಂದು ಆಕೆಯ ತಾಯಿ ದೂರು ನೀಡಿದ್ದಾಳೆ.


**BEFORE THE KARNATAKA APPELLATE TRIBUNAL AT BENGALURU**
CH No. II Revision Petition No. 39/2025 (Rev)
Between
**Smt. Sundari,** Aged 73 years, Daughter of late Shivappa Poojary, Residing at Thota House, Padnoor Village, Puttur Taluk, Dakshin Kannada District-574 220 and another
*...Petitioners*
And
**The Deputy Commissioner** DC Compound, Mangaluru Dakshina Kannada District-575 001 and 6 others
*...Respondents*
**NOTICE:-**
To,
Respondent No.7
Sri. Nitin Kumar, Aged 30 years, Son of late Devappa Shettigara No.4 to 7 are residing at Aruvara House, Padnoor Village and Post-574 220, Puttur Taluk, D. K. District
Whereas the Petitioners has instituted the Revision Petition Under Section 56 of the Karnataka Land Revenue Act, 1964 against you challenging the Order dated 26-11-2024 passed by the Deputy Commissioner, Dakshina Kannada District in No. CDS RAP:126/2023, you are hereby summoned to appear in this Tribunal in person or by a Pleader duly instructed, on the **02nd day of June 2026 at 11.00 AM** to answer the claim, failing which the Revision will be disposed of ex-parte.
Given under my hand and the seal of the Tribunal this the 18th day of March 2026.
**Sd/-Shirastedar**
Karnataka Appellate Tribunal
Bengaluru
Advocate for the Petitioners:-
**Sri. N. Jagadish Baliga**



**IN THE COURT OF THE DISTRICT JUDGE OF KASARAGOD**
O.P.No. 24/2026 (G&W)
In the matter of minor
**1. Sanvi Dinesh Bangera,** aged 12 years (D.O.B-01.06.2013) Daughter of late Dinesh S Bangera and Sujatha D Bangera
Sujatha D Bangera, aged 45 years, Wife of Late Dinesh S Bangera, Residing at Sudina House, Bollar, Bekur P.O. Kubanoor Village, Manjeshwar Taluk and Kasaragod District-671322
*...Petitioner*
AND
**Kaushik Dinesh Bangera,** aged 18 years, Son of Late Dinesh S Bangera, Residing at Sudina House, Bollar, Bekur P.O, Kubanoor Village, Manjeshwar Taluk and Kasaragod District-671322
*...Respondent*
To,
**WHOMSOEVER IT MAY CONCERN,**
Take notice that the above O.P filed by the Petitioner to permit the petitioner appoint the petitioner Sujatha D Bangera as guardian of Minor Sanvi Dinesh Bangera and to grant permission to sell the property of Minor mentioned below stands posted to **04-04-2026 at 11 A.M.** in the above court. If any person have got interest or objection may appear before the court at **11 A.M.** on the said date failing wherein the matter will be heard and decided on merits.
Given under my hand and the seal of this court on this 4th day of April 2026
**A-schedule property:**
Properties situated in Kaliyoor village, Manjeshwar taluk, Kasaragod District, within the S.R.O.Manjeshwar and within jurisdiction of this court:

| Sl. No. | R.S. No. | Extent A.C | Extent H.A. Sq.Mis | Kissam |
|---|---|---|---|---|
| 1. | 88/pt | 0.51 | 0.20.64 | Dry |

As per patta 88/4pt
Boundaries:- East: SSD, PWD Road, South: R.S.NO.89 Land of Abdul Latheef, West:SSD Land of Vasu S Bangera, North:land reserved for road
/By order of court/
***Sd/- Sachin Shenoy K***
*Advocate for Petitioner*
Kasaragod 06.02.2026


## ಕಿರುಸುದ್ದಿ

### ಸಂಸದ ಯದುವೀರ್ ಜನ್ಮದಿನ : ಬಿಜೆಪಿಯಿಂದ ವಿಶೇಷ ಪೂಜೆ

**ಮಡಿಕೇರಿ:** ಕೊಡಗು ಮೈಸೂರು ಸಂಸದ ಯದುವೀರ್ ಒಡೆಯರ್ ಅವರ ಜನ್ಮದಿನದ ಪ್ರಯುಕ್ತ ಕೊಡಗು ಜಿಲ್ಲಾ ಬಿಜೆಪಿ ಪಕ್ಷದ ವತಿಯಿಂದ ಮಂಗಳವಾರ ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡ ಎಂ.ಪಿ.ಸುನಿಲ್ ಸುಬ್ರಮಣಿ ಅವರ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಂಸದರ ಭವಿಷ್ಯ ಉಜ್ವಲವಾಗಲೆಂದು ಹಾರೈಸಲಾಯಿತು. ಈ ಸಂದರ್ಭ ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ, ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಬಿಜೆಪಿ ಜಿಲ್ಲಾ ವಕ್ತಾರ ಬಿ.ಕೆ.ಅರುಣ್ ಕುಮಾರ್, ಉಪಾಧ್ಯಕ್ಷ ಬಿ.ಕೆ. ಜಗದೀಶ್, ಪ್ರಮುಖರಾದ ಪಿ.ಎಂ.ರವಿ, ಬೊಳ್ಳಜಿರ ಬಿ ಅಯ್ಯಪ್ಪ ಮತ್ತಿತರರು ಹಾಜರಿದ್ದರು. ಮಂಗಳವಾರ ರಾತ್ರಿ ನಗರದ ಬಾಲಭವನದ ಮಕ್ಕಳಿಗೆ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.



### ಭೋಜನ ಕೂಟದಲ್ಲಿ ರಕ್ತಪಾತ; ಮಹಿಳೆ ಮೇಲೆ ಕಬ್ಬಿಣದ ರಾಡ್‌ನಿಂದ ಭೀಕರ ಹಲ್ಲೆ

**ಉಡುಪಿ:** ಬೆಳಪು ಗ್ರಾಮದ ವಿನಯನಗರದಲ್ಲಿ ನಡೆದ ಸಂಬಂಧಿಕರ ಭೋಜನ ಕೂಟವೊಂದು ಜಗಳದಲ್ಲಿ ಅಂತ್ಯಗೊಂಡಿದ್ದು, ಮಹಿಳೆಯೊಬ್ಬರ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿದ ಘಟನೆ ನಡೆದಿದೆ. ಬೆಳ್ತಂಗಡಿಯ ಆಯಿಷಾ (34) ಅವರು ಪತಿ ರಮೀಜ್ ಅವರೊಂದಿಗೆ ತಾಹೀರಾ ಎಂಬವರ ಮನೆಗೆ ಬಂದಿದ್ದಾಗ, ಮಕ್ಕಳಾಟದ ವಿಚಾರದಲ್ಲಿ ಜಮೀಲಾ ಎಂಬವರ ಕುಟುಂಬದೊಂದಿಗೆ ಕ್ಷುಲ್ಲಕ ಜಗಳ ಆರಂಭವಾಗಿತ್ತು. ರಾತ್ರಿ ಆಯಿಷಾ ಪಾತ್ರೆ ತೊಳೆಯುತ್ತಿದ್ದಾಗ ಜಮೀಲಾ ಅವರ ಪುತ್ರರಾದ ಫೈಜಲ್ ಮತ್ತು ರಶೀದ್ ಎಂಬವರು ಏಕಾಏಕಿ ರಮೀಜ್ ಮೇಲೆ ಹಲ್ಲೆಗೆ ಮುಂದಾದರು. ಪತಿಯನ್ನು ರಕ್ಷಿಸಲು ಹೋದ ಆಯಿಷಾ ಅವರನ್ನು ಆರೋಪಿಗಳು ಕಬ್ಬಿಣದ ರಾಡ್ ಹಾಗೂ ಮೆಶ್‌ನಿಂದ ತಲೆ ಮತ್ತು ಕಾಲಿಗೆ ಬಲವಾಗಿ ಹೊಡೆದು ಗಂಭೀರ ಗಾಯಗೊಳಿಸಿದ್ದಾರೆ. ಈ ವೇಳೆ 'ಹೊಡೆಯಿರಿ, ಬಡಿಯಿರಿ' ಎಂದು ಆರೋಪಿಗಳ ಪೋಷಕರು ಪ್ರಚೋದನೆ ನೀಡುತ್ತಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ಹಲ್ಲೆಯ ಸಂದರ್ಭದಲ್ಲಿ ಆಯಿಷಾ ಅವರ ಚಿನ್ನದ ಬ್ರೇಸ್‌ಲೆಟ್ ಕೂಡ ಕಾಣೆಯಾಗಿದ್ದು, ಶಿರ್ವ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಇಂದು ಯಕ್ಷಗಾನ

**ಶ್ರೀ ಕಟೀಲು ಯಕ್ಷಗಾನ ಮೇಳ**

1. ಶೋಭಿತ್ ಶೆಟ್ಟಿ, ಬೊಳ್ಳುಳ್ಳಿಮಾರುಗುತ್ತು, ಸೋಮನಾಥ ಧಾಮ, ಪೆರ್ಮುದೆ, ಬಜಪೆ.
2. ಪೃಥ್ವಿರಾಜ್ ಭಟ್, 'ಜನನಿ', ಬಡಗುಕೆರೆ, ಶಂಕರಪುರ, ಇನ್ನಂಜೆ, ಉಡುಪಿ (ತಾ).
3. ಮರಕಡ ಯುವಕ ಮಂಡಲ (ರಿ.) ಮರಕಡ, ವಯಾ ಕಾವೂರು.
4. ಕಟೀಲು ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಅರಳ, ಶ್ರೀ ಗರುಡ ಮಹಾಕಾಳಿ ದೇವಸ್ಥಾನ ವಠಾರದಲ್ಲಿ, ಬಂಟ್ವಾಳ (ತಾ).
5. ರಂಗನಾಥ ರಾವ್ ಮತ್ತು ಫೇಮಿಲಿ, 'ಶ್ರೀ ದೇವಿ ನಿಲಯ', ಕೈಡೇಲ್ ಹೌಸ್, ಬಜಾಲ್, ಜಲ್ಲಿಗುಡ್ಡೆ ವಯಾ ಪಡೀಲು, ಮಂಗಳೂರು.
6. ಸತ್ಯಪ್ರಿಯ ಕಲ್ಲೂರಾಯ, ತಮ್ಲಾಜೆ ಹೌಸ್, ಶಿಬಾಜೆ ವಯಾ ಅರಸಿನ ಮಕ್ಕಿ, ಬೆಳ್ತಂಗಡಿ.
7. ಸರ್ವಾಣಿ ಆರ್. ಶೆಟ್ಟಿ, ಹೊಸಲಕ್ಕೆ ಮನೆ, ಮೂಡುಶೆಡ್ಡೆ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

**ಶ್ರೀ ಧರ್ಮಸ್ಥಳ ಮೇಳ**
ಬೆಳ್ವಿಯಲ್ಲಿ
ಶ್ರೀ ಚಂದ್ರ ಆಚಾರ್ಯ, ಶ್ರೀ ಶಂಕರನಾರಾಯಣ ದೇವಸ್ಥಾನದ ಹತ್ತಿರ

**ಶ್ರೀ ಸಾಲಿಗ್ರಾಮ ಮೇಳ**
ಬಳ್ಕೂರು ಬಯಲಾಟ
**ಸ್ವಪ್ನ ಮಂಟಪ**

**ಶ್ರೀ ಪೆರ್ಡೂರು ಮೇಳ**
ಉಪ್ಪಿನಕುದ್ರುವಿನಲ್ಲಿ
**ದಕ್ಷಯಜ್ಞ, ಸುದರ್ಶನ ವಿಜಯ, ಚಂದ್ರಾವಳಿ ವಿಲಾಸ**

**ಶ್ರೀ ಹನುಮಗಿರಿ ಮೇಳ**
ಪುತ್ತಿಗೆ, ಮೂಡುಬಿದಿರೆ

**ಶ್ರೀ ಪಾವಂಜೆ ಮೇಳ**
ಬರೆಕಟ್ಟು ಚರ್ಚ್ ರಸ್ತೆ, ಕುಂದಾಪುರ
**ಶ್ರೀ ದೇವಿ ಮಹಾತ್ಮೆ**

## ಕಾಳುಮೆಣಸು ಅಪಹರಿಸಿ ಕೇರಳದಲ್ಲಿ ಮಾರಾಟ

# ಸ್ವತ್ತು-ವಾಹನ ಸಹಿತ ಮೂವರು ಅಂದರ್

**ಮಡಿಕೇರಿ:** ಬೆಳೆಗಾರರೊಬ್ಬರು ದಾಸ್ತಾನು ಇರಿಸಿದ್ದ ಕರಿಮೆಣಸು ಕಳವು ಮಾಡಿ ಕೇರಳದಲ್ಲಿ ಮಾರಾಟ ಮಾಡಲು ಯತ್ನಿಸಿದ್ದ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ವೀರಾಜಪೇಟೆ ಗ್ರಾಮಾಂತರ ಪೊಲೀಸರು ಯಶಸ್ವಿ ಯಾಗಿದ್ದಾರೆ.

ಶಫೀಕ್ ಕೆ.ಬಿ. ಅಲಿಯಾಸ್ ಏಪು (28), ದರ್ಶನ್ ನಾಯಕ್ (25), ಮೊಹಮ್ಮದ್ ಶಾಕಿರ್ (31) ಕಾಳುಮೆಣಸು ಮತ್ತು ಬೈಕ್ ಕಳವು ಮಾಡಿ ಪೊಲೀಸರ ಆತಿಥಿಗಳಾದವರಾಗಿದ್ದಾರೆ.

ವೀರಾಜಪೇಟೆ ತಾಲೂಕಿನ ಅಮ್ಮತ್ತಿ ಕಣ್ಣಂಗಾಲ ಗ್ರಾಮದ ನಿವಾಸಿ ಲೆಹರ್ ಗಣಪತಿ ಎಂಬವರು ಕಾಫಿ ಕಣದಲ್ಲಿ ಸುಮಾರು 300 ಕೆ.ಜಿ. ಕಾಳು ಮೆಣಸು ದಾಸ್ತಾನು ಇರಿಸಿದ್ದರೆನ್ನಲಾಗಿದೆ. ಆದರೆ ಮಾ.9ರಂದು ಕಣದಲ್ಲಿದ್ದ ಕರಿಮೆಣಸು ಚೀಲಗಳು ಕಣ್ಮರೆಯಾಗಿದ್ದವು.

ಈ ಕುರಿತು ದೊರೆತ ದೂರಿನ ಅನ್ವಯ ಪ್ರಕರಣ ದಾಖಲಿಸಿ ತನಿಖೆ ಕೈಗೆತ್ತಿಕೊಂಡ ವೀರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು, ಆರೋಪಿಗಳ ಚಹರೆ ಪಟ್ಟಿ ಮತ್ತು ಇತರ ಚಲನವಲನಗಳ ಮೇಲೆ ನಿಗಾವಹಿಸಿ ಹುಣಸೂರು ತಾಲೂಕಿನ ಪಂಚವಳ್ಳಿಯಲ್ಲಿ ಕಾರೊಂದರಲ್ಲಿ ಕುಳಿತಿದ್ದ ಮೂವರನ್ನು ವಶಕ್ಕೆ ಪಡೆದು ತನಿಖೆಗೆ ಒಳಪಡಿಸಿದ್ದಾರೆ.



ಈ ಸಂದರ್ಭ, ಕಳವು ಮಾಡಿದ್ದ ಕರಿಮೆಣಸನ್ನು ಸ್ಥಳೀಯವಾಗಿ ಮಾರಾಟ ಮಾಡಲು ಹೋದರೆ ಕಳ್ಳ ಮಾಲು ಎಂದು ಗುರುತು ಮಾಡಬಹುದೆಂದು ಅಂದಾಜಿಸಿ, ಅದನ್ನು ಕೇರಳ ರಾಜ್ಯದಲ್ಲಿ ಮಾರಾಟ ಮಾಡಿದ್ದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ.

ಕಾರ್ಯಾಚರಣೆ ನಡೆಸಿದ ಪೊಲೀಸರು, ಸುಮಾರು 1.47ಲಕ್ಷ ರೂ. ಮೌಲ್ಯದ 215 ಕೆ.ಜಿ ಕರಿಮೆಣಸು, ಕೃತ್ಯಕ್ಕೆ ಬಳಸಿದ್ದ ಆಲ್ಟೋ ಕಾರು, ಹೋಂಡಾ ಯುನಿಕಾರ್ನ್ ಬೈಕ್‌ನ್ನು ವಶಕ್ಕೆ ಪಡೆದಿದ್ದಾರೆ.

ಆರೋಪಿಗಳನ್ನು ಹೆಚ್ಚಿನ ತನಿಖೆಗೆ ಒಳಪಡಿಸಿದಾಗ, ಆರೋಪಿಗಳ ವಿರುದ್ಧ ಹುಣಸೂರು ನಗರ ಠಾಣೆಯಲ್ಲಿ ಬೈಕ್ ಕಳ್ಳತನ ಪ್ರಕರಣ, ಸುಂಟಿಕೊಪ್ಪ ಠಾಣೆಯಲ್ಲಿ 75 ಕೆ.ಜಿ ಕಾಳು ಮೆಣಸು ಕಳ್ಳತನ, ಸ್ವಿಫ್ಟ್ ಡಿಸೈರ್ ಕಾರು ಕಳ್ಳತನ ಪ್ರಕರಣ ದಾಖಲಾಗಿರುವುದು ಬೆಳಕಿಗೆ ಬಂದಿದ್ದು, ಈ ಸೊತ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ವೀರಾಜಪೇಟೆ ಉಪ ವಿಭಾಗ ಡಿವೈಎಸ್ಪಿ ಮಹೇಶ್ ಕುಮಾರ್ ಮತ್ತು ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಪಿ. ಮಾರ್ಗದರ್ಶನದಲ್ಲಿ ವೀರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ನಿಷೇಧಿತ ಚುನಾವಣಾ ಪ್ರಚಾರ ಬ್ಯಾನರ್ ವಶಪಡಿಸಿಕೊಂಡು ದಂಡ ಹೇರಿಕೆ

**ಕಾಸರಗೋಡು:** ವಿಧಾನಸಭಾ ಚುನಾವಣೆಯ ಭಾಗವಾಗಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ನಿಷೇಧಿತ ಚುನಾವಣಾ ಪ್ರಚಾರ ಸಾಮಗ್ರಿಗಳನ್ನು ಮುದ್ರಿಸಿ ವಿತರಿಸಲಾಗುತ್ತಿರುವುದನ್ನು ಪತ್ತೆಹಚ್ಚಲು ಸ್ಥಳೀಯಾಡಳಿತ ಇಲಾಖೆಯ ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಸ್ಕ್ವಾಡ್ (ಜಾರಿ ದಳ) ನಡೆಸಿದ ತಪಾಸಣೆಯಲ್ಲಿ 30,000 ರೂ.ಗಳ ದಂಡ ವಿಧಿಸಲಾಗಿದೆ.

ಕಾಞಂಗಾಡು ದುರ್ಗಾ ರಸ್ತೆಯಲ್ಲಿ ಪರವಾನಗಿ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯಿಂದ ವಿವಿಧ ರಾಜಕೀಯ ಪಕ್ಷಗಳಿಗೆ ನಿಷೇಧಿತ ಉತ್ಪನ್ನಗಳಿಂದ ತಯಾರಿಸಿದ ಬ್ಯಾನರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು 10,000 ರೂ.ಗಳ ದಂಡ ವಿಧಿಸಿ ವೈಜ್ಞಾನಿಕ ಸಂಸ್ಕರಣೆಗಾಗಿ ಸಂಬಂಧಪಟ್ಟವರಿಗೆ ಹಸ್ತಾಂತರಿಸಲಾಗಿದೆ.

ಕಾಞಂಗಾಡು ಮತ್ತು ಚೆರುವತ್ತೂರಿನಲ್ಲಿ ಕಾನೂನುಬದ್ಧವಾಗಿ ಅಗತ್ಯವಿರುವ ಪಿವಿಸಿ ಉಚಿತ ಮರುಬಳಕೆ ಮಾಡಬಹುದಾದ ಲೋಗೋ, ಕ್ಯೂಆರ್ ಕೋಡ್, ಮುದ್ರಣ ಸಂಸ್ಥೆಯ ಹೆಸರು ಮತ್ತು ಫೋನ್ ಸಂಖ್ಯೆಯನ್ನು ಮುದ್ರಿಸದ ನಾಲ್ಕು ಮುದ್ರಣ ಸಂಸ್ಥೆ ಮಾಲಕರಿಗೂ ದಂಡ ವಿಧಿಸಿ ಆದೇಶಿಸಲಾಗಿದೆ.

ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ಸಲುವಾಗಿ ಮುದ್ರಣಕ್ಕೆ ಅನುಮತಿಸಲಾದ ಪಾಲಿ ಎಥಿಲೀನ್ ಮತ್ತು ಶೇಕಡಾ 100ರಷ್ಟು ಹತ್ತಿ ಬಟ್ಟೆಗಳ ಮೇಲೆ ಮಾತ್ರ ಮುದ್ರಿಸಲು ಅಂಗಡಿ ಮಾಲಕರಿಗೆ ನಿರ್ದಿಷ್ಟವಾಗಿ ಸೂಚಿಸಲಾಯಿತು. ಚುನಾವಣೆಯ ಸಮಯದಲ್ಲಿ ಹಸಿರು ಮಾನದಂಡಗಳ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ವಿಶೇಷ ತಂಡಗಳು ವಿಧಾನಸಭಾ ಕ್ಷೇತ್ರದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿವೆ.

ಇತರ ರಾಜ್ಯಗಳಿಂದ ಬರುವ ನಿಷೇಧಿತ ಪ್ರಚಾರ ಸಾಮಗ್ರಿಗಳನ್ನು ಪರಿಶೀಲಿಸಲು ಸಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜಿಲ್ಲಾ ಜಾರಿ ದಳದ ಅಧಿಕಾರಿ ಕೆ.ವಿ.ಮುಹಮ್ಮದ್ ಮದನಿ, ತಂಡದ ಸದಸ್ಯ ಜೋಸ್ ವಿ.ಎಂ., ಆರೋಗ್ಯ ನಿರೀಕ್ಷಕರಾದ ಮನೋಹರನ್ ಕೆ., ಅಖಿಲ್ ಸಿ.ಎ. ಮತ್ತು ಅಭಿಜಿತ್ ತಪಾಸಣೆಯಲ್ಲಿ ಪಾಲ್ಗೊಂಡಿದ್ದರು.

## ಮೂತ್ರವಿಸರ್ಜನೆ ಪ್ರಶ್ನಿಸಿದಾತನಿಗೆ ಬಿತ್ತು ಪೆಟ್ಟು

**ಉಡುಪಿ:** ಭಜನಾ ಮಂದಿರದ ಎದುರು ಮೂತ್ರ ವಿಸರ್ಜನೆ ಮಾಡಿದ್ದನ್ನು ಪ್ರಶ್ನಿಸಿದ ಮಹೇಶ್ ಸುವರ್ಣ ಎಂಬವರ ಮೇಲೆ ಇಬ್ಬರು ಹಲ್ಲೆ ನಡೆಸಿ ಕಾಲು ಮುರಿದಿರುವ ಘಟನೆ ಕೊಡವೂರು ಗ್ರಾಮದ ಮಲ್ಪೆ ಸೀವಾಕ್ ಬಳಿ ನಡೆದಿದೆ. ಮಾರ್ಚ್ 24ರಂದು ವಿಠೋಬ ಭಜನಾ ಮಂದಿರದ ಎದುರು ಸುಧಾಕರ ಮೆಟ್ಟಾ ಎಂಬಾತ ಮೂತ್ರ ವಿಸರ್ಜನೆ ಮಾಡುತ್ತಿದ್ದನ್ನು ಮಹೇಶ್ ಪ್ರಶ್ನಿಸಿದ್ದರು. ಇದರಿಂದ ಕೋಪಗೊಂಡ ಸುಧಾಕರ ಮತ್ತು ರಾವುರಿ ಚಿನ್ನಸ್ವಾಮುಲು ಅವಾಚ್ಯವಾಗಿ ಬೈದು ಹಲ್ಲೆ ನಡೆಸಿದ್ದಾರೆ. ನಂತರ 3.10ಕ್ಕೆ ಮಹೇಶ್ ಮನೆಗೆ ಹೋಗುತ್ತಿದ್ದಾಗ ಅವರನ್ನು ತಡೆದು, ಹಲ್ಲೆಗೈದಿದ್ದಾರೆ. ಜಗದೀಶ್ ಶಂಕರ ಕುಂದರ್ ನೀಡಿದ ದೂರಿನಂತೆ ಮಲ್ಪೆ ಪೊಲೀಸರು ಬಿ.ಎನ್.ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಮಾ.27: ದೈಪಲ ಶ್ರೀರಾಮ ಭಜನಾ ಮಂದಿರದಲ್ಲಿ ಶ್ರೀರಾಮ ತಾರಕ ಯಾಗ

**ಬಂಟ್ವಾಳ:** ಶ್ರೀರಾಮ ನವಮಿಯ ಪ್ರಯುಕ್ತ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಶ್ರೀರಾಮ ತಾರಕ ಯಾಗ ಮಾರ್ಚ್ 27ರಂದು ಬಿ.ಸಿ.ರೋಡಿನ ಕಾಮಾಜೆ ದೈಪಲದ ಶಿವಾಜಿನಗರದಲ್ಲಿರುವ ಶ್ರೀರಾಮಾಂಜನೇಯ ವ್ಯಾಯಾಮ ಶಾಲೆ, ಶ್ರೀರಾಮ ಭಜನಾ ಮಂದಿರ ಟ್ರಸ್ಟ್ ವತಿಯಿಂದ ನಡೆಯಲಿದೆ ಎಂದು ಮಂದಿರ ಅಧ್ಯಕ್ಷ ಕೇಶವ ದೈಪಲ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಮಂದಿರದ ವತಿಯಿಂದ 15ನೇ ವರ್ಷದ ಕಾರ್ಯಕ್ರಮದ ನಿಮಿತ್ತವಾಗಿ ಈ ಬಾರಿ ಯಾಗ ಕೈಗೊಳ್ಳಲಾಗಿದ್ದು, ಈಗಾಗಲೇ ಸುತ್ತಮುತ್ತಲಿನ ಮನೆ,ಮನೆಗಳನ್ನು ಸಂಪರ್ಕಿಸಿ ಈ ಕುರಿತು ಮಾಹಿತಿ ನೀಡಲಾಗಿದೆ.

ಸ್ಥಳೀಯ 10ಕ್ಕೂ ಅಧಿಕ ಸಂಘ, ಸಂಸ್ಥೆಗಳು ಸ್ವಯಂ ಸ್ಫೂರ್ತಿಯಿಂದ ಶ್ರಮದಾನದಲ್ಲಿ ತೊಡಗಿಸಿಕೊಂಡು ಕಾರ್ಯಕ್ರಮದ ಯಶಸ್ಸಿಗೆ ದುಡಿಯುತ್ತಿದ್ದಾರೆ.ಅಂದು ಬೆಳಗ್ಗೆ 8ರಿಂದ ದೇವತಾ ಪ್ರಾರ್ಥನೆ, ಆದ್ಯ ಗಣಯಾಗ, 9ರಿಂದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, 10ರಿಂದ ವೇದಮೂರ್ತಿ ಶ್ರೀ ರಾಜಗೋಪಾಲಾಚಾರ್ಯರ ನೇತ್ರತ್ವದಲ್ಲಿ ಒಂದು ಲಕ್ಷ ಶ್ರೀರಾಮ ತಾರಕ ಜಪ ಪ್ರಾರಂಭವಾಗಲಿದ್ದು, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಬಳಿಕ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿದೆ.ಸಂಜೆ 18 ದಿನಗಳ ನಗರ ಭಜನೆಯ ಮಂಗಲೋತ್ಸವ, ರಾತ್ರಿ ದೇವರ ಮಹಾಪೂಜೆ ನಡೆಯಲಿದೆ ಎಂದರು.

ಬಳಿಕ ಮಂದಿರದ ಗೌರವಾಧ್ಯಕ್ಷರಾದ ಎ.ನೇಮಿರಾಜ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು,ಆರ್ ಎಸ್ ಎಸ್ ಪ್ರಮುಖರಾದ ಡಾ। ಪ್ರಭಾಕರ್ ಭಟ್, ಸಂಸದ ಬ್ರಿಜೇಶ್ ಚೌಟ,ಶಾಸಕ ರಾಜೇಶ್ ನಾಯ್ಕ್, ಸಹಿತ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ. ತದನಂತರ ಬಾಲಗೋಕುಲ ಮಕ್ಕಳಿಂದ ಕುಣಿತ ಭಜನೆ, ವಿವಿಧ ವಿನೋದಾವಳಿಗಳು ಹಾಗೂ ಭಕ್ತಿಪ್ರಧಾನ ಪೌರಾಣಿಕ ನಾಟಕ ನಡೆಯಲಿದೆ ಎಂದು ಅವರು ತಿಳಿಸಿದರು. ಮನೆ, ಮನೆ ಸಂಪರ್ಕದ ಮೂಲಕ ಸ್ಥಳೀಯರನ್ನು ಮಂದಿರಕ್ಕೆ ಬರುವಂತೆ ಪ್ರೇರೆಪಿಸಲಾಗಿದೆ.

ಮುಂದಿನ ದಿನಗಳಲ್ಲಿ ಮಂದಿರದ ಜೀರ್ಣೋದ್ಧಾರ ಕಾರ್ಯದ ಜೊತೆಗೆ ಸೀತಾಮಾತ ಕಲ್ಯಾಣ ಮಂಟಪದ ನಿರ್ಮಾಣದ ಯೋಜನೆ ಹಾಕಿಕೊಳ್ಳಲಾಗಿದೆ ಈನಿಟ್ಟಿನಲ್ಲಿ ಇರಿಸಲಾದ ಪ್ರಶ್ನಾಚಿಂತನೆಯಲ್ಲಿ ಕಂಡುಬಂದಂತೆ ಶ್ರೀರಾಮ ತಾರಕ ಯಾಗ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷರಾದ ಚಂದಪ್ಪ ರಾಜೀವಪಲ್ಕೆ, ಪ್ರಮುಖರಾದ ನಾರಾಯಣ ಮಾಸ್ಟರ್ ರಾಜೀವಪಲ್ಕೆ, ಅಶೋಕ್ ಕಾಮಾಜೆ, ಮಹಿಳಾ ಸಮಿತಿ ಅಧ್ಯಕ್ಷೆ ವಾಣಿ ಕೇಶವ ಸಹಿತ ಪ್ರಮುಖರು ಉಪಸ್ಥಿತರಿದ್ದರು.


ಕರ್ನಾಟಕ ಸರಕಾರ
**ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ**
**ಲೋ.ಇ.ಉಡುಪಿ ವಿಭಾಗ- ಉಡುಪಿ 576101**
ದೂರವಾಣಿ – ಫ್ಯಾಕ್ಸ್ : (0820) 2531802
ನಂ.ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ:56:2025-26 ಎಇ-2 ದಿನಾಂಕ:24.03.2026
**ಅಲ್ಪಾವಧಿ ಟೆಂಡರ್ ಪ್ರಕಟಣೆ**
2025–26ನೇ ಸಾಲಿನ ರೂ. 8.12 ಲಕ್ಷದಿಂದ 16.38 ಲಕ್ಷದವರೆಗಿನ ಮೊತ್ತದ ರಾಜ್ಯಹೆದ್ದಾರಿ ರಸ್ತೆ ನಿರ್ವಹಣೆ ಯೋಜನೆಯಡಿಯ ಒಟ್ಟು 3 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್' ""kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ""kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:10.04.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.
ಸಹಿ /- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ.



**PUBLIC NOTICE**
The General Public are hereby informed that my client, Mr. HABEEB SUFIKHAN, aged about 37 years, S/o. S. Abdul Rahim, No.1-444, Soofikhan House, Poojary Compound, K.C. Nagara, Talapady, Ullal Taluk-575023, intends to purchase the Schedule Shop from Mr. K. DEVI PRASAD SHETTY, S/o Late Shanker Shetty, residing at No. 602, Kamalalaya Darshan, No. 6, L.T. Nagar, near Rosary Church, Goregaon (West), Mumbai and Mr. K. SHOBITH HEGDE, S/o K. Ganesh Hegde, Flat No. 601/602, Raheja Grand, 6th Floor, CHS Ltd., Bandra (West), Mumbai-400050. The above owners have represented that they have lost the original Sale Deed dated 07-06-2000, bearing Document No. 740/2000-01, Book I, Volume No. 2341, Pages 297 to 312, registered before the Sub-Registrar of Mangalore City.
Any person/s, bank/s, financial institution/s, or any other authority having any right, title, interest, claim, or objection in respect of the Schedule Shop are hereby called upon to lodge their claims in writing, along with supporting documents, with the undersigned within 10 (ten) days from the date of publication of this notice. Failing which, it shall be presumed that no such claims exist, and my client shall proceed with the purchase of the Schedule Shop without any reference to such claims, if any, and the same shall be deemed to have been waived.
**SCHEDULE SHOP**
Shop Premises with D. No.13-13-1513/22 on the Ground Floor of the Ganesh Mahal Complex having a Super Plinth area of 449.60 Sq. Ft. together with attached 0.5% interest in the common area and facilities and similar share in the non-agricultural immovable property held on warg right situated in Casba Bazaar Village of Mangalore Taluk, within the 13th Market ward of Mangalore City Corporation and within the Sub-registration district of Dakshina Kannada and bearing:

| R. S. NO. | T. S. NO. | KISSAM A. C. | EXTENT | PORTION |
|---|---|---|---|---|
| 393 | 66 | Converted | 0-13.40 | South Eastern |

With all mamool easement right of way and water etc.
BOUNDARIES- North: Passage, East: K. S. R. Road, South: Remaining portion of T. S. No.66, West: Remaining portion of T. S. No.66
**Sd/- Laxman Kundar,** Advocate,
MB Law Chamber, Presidium Commercial Complex,
Attavara Road, Mangalore-575001. Cell:9343568454
Mangalore
23-03-2026



ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ
**ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ವಿಜಯಪುರ**
ಸಂ: ಜಿವಶಿಇ/ವೆ/ಟೆಂಡರ್/01/2025–26 ದಿನಾಂಕ:24.03.2026
**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**
ಟೆಂಡರ್ ಸಂಖ್ಯೆ: DPI/2025-26/SE0436 ರಲ್ಲಿ ಜಿ.ವ.ಶಿ.ಇಲಾಖೆ ವಿಜಯಪುರ ಇಲ್ಲಿ 2026–27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಒಂದು ಬಾಡಿಗೆ ವಾಹನವೊಂದನ್ನು ಪಡೆಯುವ ಸಂಬಂಧ ಅರ್ಹ ವಾಹನ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಆಹ್ವಾನಿಸಲಾಗಿದೆ. https://eproc.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಕೋರಲಾಗಿದೆ. ಕೊನೆಯ ದಿನಾಂಕ:**01.04.2026** ರ ಸಂಜೆ 5.00 ಘಂಟೆ.
ಸಹಿ/–
ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು,
ವಿಜಯಪುರ
ವಾಸಾಸಂಇ/ವಿಜಯಪುರ/842/ಕೆಎಸ್ಎಂಸಿಎ/2025–26



ಕರ್ನಾಟಕ ಸರಕಾರ
**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ,**
**ಲೋಕೋಪಯೋಗಿ ಇಲಾಖೆ, ಉಪವಿಭಾಗ, ಬಂಟ್ವಾಳ**
ಸಂಖ್ಯೆ: ಸ.ಕಾ.ಇಂ./ಲೋ.ಇ./ಉ.ವಿ.ಬಂ/3054 ಕಾಮಗಾರಿ/ಟೆಂ.ಪ್ರ/2025–26/ಎಇ/1484 ದಿನಾಂಕ: 23.03.2026
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಬಂಟ್ವಾಳ ಲೋಕೋಪಯೋಗಿ ಇಲಾಖೆ ಉಪವಿಭಾಗಕ್ಕೆ ಸಂಬಂಧಿಸಿದಂತೆ, ಲೆಕ್ಕಶೀರ್ಷಿಕೆ: 3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆಯಡಿ ನಿರ್ವಹಿಸಬೇಕಾಗಿರುವ 2 ಕಾಮಗಾರಿಗಳಿಗೆ ಟೆಂಡರ್‌ನ್ನು ಕರ್ನಾಟಕ ಸರಕಾರದ ರಾಜ್ಯಪಾಲರ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಬಂಟ್ವಾಳ ಇವರು ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಟೆಂಡರ್ ನಿಯಮಾವಳಿಯ ಕ್ಲಾಜ್ 3 ರಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಹಾಗೂ ಟೆಂಡರ್ ಫಾರಂ ಪಡೆಯುವ ಕೊನೆಯ ದಿನಾಂಕ: 27.03.2026 ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 30.03.2026ರ ಸಂಜೆ 4.00ರ ವರೆಗೆ ಎಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/– ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಬಂಟ್ವಾಳ
DIPR/DK/KSMCA/1809/25-26 dt:24.03.2026



**ಮಂಗಳೂರು ಮಹಾನಗರಪಾಲಿಕೆ**
DMA/2025-26/WORK INDENT NO.53493/Call-2 ದಿನಾಂಕ: 24-03-2026
**ಟೆಂಡರ್ ಪ್ರಕಟಣೆ E-PROCUREMENT OF KARNATAKA**
ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ. ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು **ಸಾಮಾನ್ಯ ನಿಧಿಯಲ್ಲಿ** ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 10–04–2026.** ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **kppp.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

| ಕ್ರ. ಸಂ. | ಕೆಲಸದ ಹೆಸರು | ಅಂದಾಜು ಪಟ್ಟಿ ಮೊತ್ತ ರೂಪಾಯಿ |
|---|---|---|
| 1 | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಪಂಪ್‌ವೆಲ್ ವೃತ್ತದಿಂದ ಪಡೀಲ್ ವೃತ್ತದವರೆಗೆ ನೂತನವಾಗಿ ನಿರ್ಮಿಸಿರುವ ರಸ್ತೆಯ ವಿಭಾಜಕಕ್ಕೆ ವಿದ್ಯುತ್ ಕಂಬ/ಕೇಬಲ್ ಅಳವಡಿಸುವ ಕಾಮಗಾರಿ. **(Indent No. 53493/Call-2)** | **60,00,000.00** |

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/1813/25-26 dt: 25.03.2026





## ಕಿರು ಸುದ್ದಿ

### ಕಟೀಲು ಕಾಲೇಜಿನಲ್ಲಿ ಸಂಸ್ಕೃತ ರಾಷ್ಟ್ರೀಯ ವಿಚಾರ ಸಂಕಿರಣ

**ಕಟೀಲು:** ಶ್ರೀ ದುರ್ಗಾ ಸಂಸ್ಕೃತ ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನ ಕೇಂದ್ರ, ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಳ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ಸಂಸ್ಕೃತ ಶೋಧ ಸಂಸ್ಥಾನ, ಶಿರಸಿ ಹಾಗೂ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಮಂಗಳೂರು ಇವರ ಸಹಯೋಗದೊಂದಿಗೆ ಕಟೀಲಿನಲ್ಲಿ ಮಾ. 28 ಹಾಗೂ 29ರಂದು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ. ಸಂಸ್ಕೃತ ಸಾಹಿತ್ಯದಲ್ಲಿ ನೀತಿ ಸಾಹಿತ್ಯ ಮತ್ತು ಅದರ ಆಧುನಿಕ ಪ್ರಸ್ತುತತೆಯ ಕುರಿತು ನಡೆಯಲಿರುವ ಈ ವಿಚಾರ ಸಂಕಿರಣವನ್ನು ಪೊಳಲಿಯ ರಾಮಕೃಷ್ಣತಪೋವನ ವಿವೇಕ ಚೈತನ್ಯಾನಂದಜೀ ಉದ್ಘಾಟಿಸಲಿದ್ದಾರೆ. ದಿಕ್ಸೂಚಿ ಭಾಷಣವನ್ನು ವಿದ್ವಾಂಸರೂ, ಮುಂಬೈ ಐಟಿಐ ಹಿರಿಯ ಪ್ರಾಧ್ಯಾಪಕ ಪ್ರೊ.ಕೆ. ರಾಮಸುಬ್ರಹ್ಮಣ್ಯಮ್ ನೀಡಲಿದ್ದಾರೆ. ಡಾ. ಕೆ. ಸುರೇಶ್‌ರಾವ್ ಮುಂಬೈ, ಬೆಂಗಳೂರಿನ ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶ ಎಂ. ದೇವರಾಜ ಭಟ್, ಮಂಗಳೂರು ವಿವಿಯ ನಿವೃತ್ತ ಪ್ರಾಧ್ಯಾಪಕಡಾ. ಜಿ.ವಿ.ಜೋಶಿ, ಶಿವಮೊಗ್ಗದ ಪ್ರೊ. ಬಿ.ಎಂ. ಕುಮಾರಸ್ವಾಮಿ, ಚೆನ್ನೈನ ಪ್ರೊ. ಪಂಕಜಾ, ಕಟೀಲು ಕಾಲೇಜಿನ ಪ್ರಾಕ್ತನ ಪ್ರಾಂಶುಪಾಲ ಡಾ. ಜಿ.ಎನ್. ಭಟ್, ಸಂಸ್ಕೃತ ಪರಿಷತ್‌ನಡಾ. ವೆಂಕಟೇಶ್‌ಗಿರಿ ಮೊದಲಾದ ವಿದ್ವಾಂಸರು ಭಾಗವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ. ವಿಜಯ ವಿ. ಹಾಗೂ ವಿಚಾರ ಸಂಕಿರಣದ ಸಂಯೋಜಕರಾದ ಡಾ.ಎಂ. ಪದ್ಮನಾಭ ಮರಾಠೆ ತಿಳಿಸಿದ್ದಾರೆ.

### ತಲೆಮರೆಸಿದ್ದ ಆರೋಪಿಯ ದಸ್ತಗಿರಿ ಮಾಡಿದ ಪೊಲೀಸರು

**ಉಳ್ಳಾಲ:** ಮನೆಗೆ ನುಗ್ಗಿ ವ್ಯಕ್ತಿಯೋರ್ವನಿಗೆ ಹಲ್ಲೆ ನಡೆಸಿ ಆತನ ಮೊಬೈಲ್ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿಯನ್ನು ಉಳ್ಳಾಲ ಪೊಲೀಸರು ದಸ್ತಗಿರಿ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಉಳ್ಳಾಲ ಖಿಲ್ರಿಯಾ ನಗರ ನಿವಾಸಿ ನಿಫಾನ್ ಅಹ್ಮದ್ ಪಾಷ (33) ಬಂಧಿತ ಆರೋಪಿಯಾಗಿದ್ದಾನೆ. ನಿಫಾನ್ ಫೆಬ್ರವರಿ 5 ರಂದು ಮಧ್ಯರಾತ್ರಿ ತನ್ನ ಸಹವರ್ತಿಗಳಾದ ನಿಝುಪತ್ ಅಲಿ ಮತ್ತು ಆಮೀರ್ ಸುಹೈಲ್ ಜೊತೆ ಸೇರಿ ಕೋಟೆಪುರದ ಮಹಮ್ಮದ್ ತಸ್ಲೀರ್ ಎಂಬವರ ಮನೆಗೆ ನುಗ್ಗಿದ್ದಲ್ಲದೆ, ಹಲ್ಲೆಗೈದು ಮೊಬೈಲ್ ಫೋನನ್ನು ದೋಚಿರುವ ಕುರಿತಂತೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.



2024 ರ ಡಿಸೆಂಬರ್ ತಿಂಗಳಲ್ಲಿ ತಲಪಾಡಿ ಟೋಲ್‌ಗೇಟ್‌ನ ಸಿಬ್ಬಂದಿಗಳಿಗೂ ಹಲ್ಲೆ ನಡೆಸಿರುವ ಕುರಿತಂತೆ ನಿಫಾನ್ ಅಹ್ಮದ್ ವಿರುದ್ಧ ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

## ನಿಧನ ಸುದ್ದಿ

### ಜಾಹ್ನವಿ ಆರ್. ನಗರ್‌ಕರ್

**ಕುಂದಾಪುರ:** ಇಲ್ಲಿನ ಹಿರಿಯ ಸ್ವಯಂಸೇವಕರಾದ ರಘುವೀರ್ ನಗರ್‌ಕರ್ ಅವರ ಪತ್ನಿ ಜಾಹ್ನವಿ ಆರ್.ನಗರ್‌ಕರ್ ಅವರು ಬುಧವಾರ ಮಧ್ಯಾಹ್ನ ಮಣಿಪಾಲದ ಕಸ್ತೂರ್‌ಬಾ ಆಸ್ಪತ್ರೆಯಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಅವರಿಗೆ 78 ವರ್ಷ ಪ್ರಾಯವಾಗಿತ್ತು. ಅವರು ಪತಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.



ಅವರ ನಿಧನದ ಸುದ್ದಿ ತಿಳಿದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಂಬೈ ಮಹಾನಗರ ಕಾರ್ಯವಾಹರಾದ ಸಂಜಯ್ ನಗರ್‌ಕರ್ ಸೇರಿದಂತೆ ಅನೇಕ ಪ್ರಮುಖರು ಆಗಮಿಸಿ ಅಂತಿಮ ನಮನ ಸಲ್ಲಿಸಿದರು.

### ಕಮಲಾಕ್ಷಿ ಎಸ್. ಗಟ್ಟಿ

**ಮಂಗಳೂರು:** ಕೋಡಿಕಲ್ ನಿವಾಸಿ ಕಮಲಾಕ್ಷಿ ಎಸ್. ಗಟ್ಟಿ ಅವರು ಬುಧವಾರ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.



### ಕೆ.ಸರೋಜಿನಿ

**ಕಾಸರಗೋಡು:** ಪಿಲಿಕುಂಜೆ ಶಾಲೆ ಬಳಿಯ ದಿ.ನಾರಾಯಣನ್ ಎಂಬವರ ಪತ್ನಿ ಕೆ.ಸರೋಜಿನಿ (73) ನಿಧನ ಹೊಂದಿದರು. ಮೃತರು ಸಹೋದರ, ಸಹೋದರಿಯರಾದ ರಾಘವನ್, ದಾಮೋದರನ್, ವಸಂತಕುಮಾರಿ ಅವರನ್ನು ಅಗಲಿದ್ದಾರೆ.

### ಕೋಟ ರಮಾನಾಥ ಜೋಗಿ

**ಕೋಟ:** ಕೋಟದ ಶ್ರೀ ಅಮೃತೇಶ್ವರಿ ಹಲವು ಮಕ್ಕಳ ತಾಯಿ ದೇವಸ್ಥಾನದ ಪ್ರಧಾನ ಅರ್ಚಕ ರಮಾನಾಥ ಜೋಗಿ (85) ಮಂಗಳವಾರ ಅನಾರೋಗ್ಯದಿಂದ ನಿಧನರಾದರು. ಜೋಗಿ ಸಮಾಜದ ಹಿರಿಯ ಮುಖಂಡರಾಗಿ, ಕೋಟದ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಅಧ್ಯಕ್ಷರಾಗಿ, ಉಡುಪಿ ಜೋಗಿ ಸಮಾಜ ಸೇವಾ ಸಮಿತಿ ಉಡುಪಿ ಕಾರ್ಕಳ ಘಟಕದ. ಗೌರವ ಸಲಹೆಗಾರರಾಗಿ, ಉಡುಪಿ ಜೋಗಿ ಸಮಾಜ ವಿವಿಧೋದ್ದೇಶ ಸಹಕಾರ ಸಂಘದ ಮಾಜಿ ನಿರ್ದೇಶಕರಾಗಿ, ಕೋಟ ರಾಮನಾಥ್ ಜೋಗಿ ಸೇವೆ ಸಲ್ಲಿಸಿದ್ದಾರೆ. ಇಬ್ಬರು ಪುತ್ರರು, ಪುತ್ರಿಯರನ್ನು ಅಗಲಿದ್ದಾರೆ.



## ಕಾಸರಗೋಡು, ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ರಂಗೇರುತ್ತಿದೆ ಚುನಾವಣಾ ಕಣ

# ಮನೆಮನಗಳತ್ತ ಈಗ ಅಭ್ಯರ್ಥಿಗಳ ಚಿತ್ತ!

### ಮಂಜೇಶ್ವರ ಶಾಸಕರ ಬೇಜವಾಬ್ದಾರಿಗೆ ಕ್ಷೇತ್ರದ ಅಭಿವೃದ್ಧಿ ಕುಂಠಿತವೇ ಸಾಕ್ಷಿ: ಸುರೇಂದ್ರನ್ ಟೀಕೆ

**ಮಂಜೇಶ್ವರ:** ಮಂಜೇಶ್ವರ ವಿಧಾನಸಭಾ ಕ್ಷೇತ್ರವು ಎಲ್ಲಾ ವಲಯಗಳಲ್ಲೂ ವಿಫಲಗೊಂಡಿದೆ. ಶಿಕ್ಷಣ ಕ್ಷೇತ್ರ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಆರೋಗ್ಯ ಮತ್ತು ಉದ್ಯೋಗ ಕ್ಷೇತ್ರದ ಬಲವರ್ಧನೆ ಸಾಧ್ಯವಾಗಿಲ್ಲ. ಮಂಜೇಶ್ವರ ಶಾಸಕರ ಬೇಜವಾಬ್ದಾರಿಗೆ ಇಲ್ಲಿನ ಹಿಂದುಳಿಯುವಿಕೆ ಸಾಕ್ಷಿಯಾಗಿದೆ ಎಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಕಟುವಾಗಿ ಟೀಕಿಸಿದ್ದಾರೆ.



ಮೀಂಜ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧೆಡೆಗೆ ಬುಧವಾರ ತೆರಳಿ ಮತದಾರರನ್ನು ಭೇಟಿಯಾಗಿ ಮತಯಾಚಿಸಿದ ಅವರು ಬಳಿಕ ಮಾತನಾಡಿದರು. ಈ ಸಂದರ್ಭದಲ್ಲಿ ಅವರು ದೇವಾಲಯಗಳಿಗೆ ಭೇಟಿಯಿತ್ತು ಶ್ರೀ ದೇವರ ದರ್ಶನ ಪಡೆದರು.

ಮಂಜೇಶ್ವರ ಮಂಡಲವು ಕರ್ನಾಟಕ ರಾಜ್ಯದೊಂದಿಗೆ ಬೆಸೆದುಕೊಂಡಿರುವ ಕನ್ನಡ ಮತ್ತು ತುಳು ಭಾಷಿಗರೇ ಹೆಚ್ಚಿರುವ ನಾಡಾಗಿದೆ. ಈ ಮಂಡಲದಲ್ಲಿ ಸುಸಜ್ಜಿತ ಆಸ್ಪತ್ರೆಗಳಿಲ್ಲದೆ ಇಲ್ಲಿನ ಜನರು ಮಂಗಳೂರು ಸಹಿತ ಕರ್ನಾಟಕದ ವಿವಿಧ ಭಾಗಗಳ ಆಸ್ಪತ್ರೆಗಳನ್ನೇ ಇಂದಿಗೂ ಆಶ್ರಯಿಸುವಂತಾಗಿದೆ. ಸರಕಾರಿ ವಲಯದ ಆಸ್ಪತ್ರೆಗಳು ಮಂಜೇಶ್ವರ ಮಂಡಲದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿಂದ ನಲುಗುತ್ತಿವೆ.

#### ಮಾ.27: ತಿರುವನಂತಪುರ ಮೇಯರ್ ಮಂಜೇಶ್ವರಕ್ಕೆ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಚುನಾವಣಾ ಪ್ರಚಾರದ ಅಂಗವಾಗಿ ತಿರುವನಂತಪುರ ಮೇಯರ್ ವಿ.ವಿ.ರಾಜೇಶ್ ಮಾ.27ರಂದು ಮಂಜೇಶ್ವರ ಮಂಡಲಕ್ಕೆ ಆಗಮಿಸಲಿದ್ದಾರೆ. ಆ ದಿನ ಬೆಳಗ್ಗೆ 11ಗಂಟೆಗೆ ಸೋಂಕಾಲ್‌ನಲ್ಲಿರುವ ಎನ್‌ಡಿಎ ಚುನಾವಣಾ ಕಚೇರಿಯಲ್ಲಿ ತ್ರಿಸ್ತರ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ ಬಿಜೆಪಿ ಅಭ್ಯರ್ಥಿಗಳ ಸಮಾವೇಶದಲ್ಲಿ ಅವರು ಭಾಗವಹಿಸುವರು. ಬಳಿಕ ಕುಂಬಳೆ ಪೇಟೆಯಲ್ಲಿ ಸಂಜೆ 5ಗಂಟೆಗೆ ಜರಗುವ ರೋಡ್ ಶೋ ಕಾರ್ಯಕ್ರಮದಲ್ಲಿ ವಿ.ವಿ.ರಾಜೇಶ್ ಪಾಲ್ಗೊಳ್ಳುವರು. ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಭಾಗವಹಿಸಲಿದ್ದಾರೆ.






ಈ ಅವ್ಯವಸ್ಥೆಗೆ ಮಂಜೇಶ್ವರದಲ್ಲಿ ಇದುವರೆಗೆ ಆರಿಸಿ ಬಂದ ಎಡರಂಗ ಮತ್ತು ಐಕ್ಯರಂಗ ಶಾಸಕರೇ ನೇರ ಹೊಣೆಯಾಗಿದ್ದಾರೆ ಎಂದು ಆರೋಪಿಸಿದರು.

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ. ಆದ್ದರಿಂದ ಈ ಬಾರಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಿಕೊಂಡುವಂತೆ ಅವರು ಮತದಾರರಲ್ಲಿ ಮನವಿ ಮಾಡಿದರು. ಈ ಮೂಲಕ ಮಂಜೇಶ್ವರ ಮಂಡಲದ ಸಮಗ್ರ ಅಭಿವೃದ್ಧಿ ನಡೆಸುತ್ತೇನೆಂದು ಅವರು ಭರವಸೆ ನೀಡಿದರು.

#### ಚುನಾವಣೆ: ಕಾಸರಗೋಡು ಜಿಲ್ಲೆಯಲ್ಲಿ ಒಟ್ಟು 11,03,618 ಮಂದಿ ಮತದಾರರು

ಕಾಸರಗೋಡು: ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಾಗಿ ಒಟ್ಟು 11,03,618 ಮಂದಿ ಮತದಾರರಿದ್ದಾರೆ. ಇದರಲ್ಲಿ 5,44,543 ಮಂದಿ ಪುರುಷರು, 5,59,063 ಮಂದಿ ಮಹಿಳೆಯರು, 12 ಮಂದಿ ಟ್ರಾನ್ಸ್‌ಜೆಂಡರ್ ಮತದಾರರು ಒಳಗೊಂಡಿದ್ದಾರೆ. ಜಿಲ್ಲೆಯಲ್ಲಿ 1141 ಮತಗಟ್ಟೆಗಳಿವೆ.

### ಪುಳಿಕ್ಕೂರ್‌ನಲ್ಲಿ ಮತಯಾಚಿಸಿ ಚಾ ಪೇ ಚರ್ಚಾ ನಡೆಸಿದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ

**ಕಾಸರಗೋಡು:** ಆರೋಗ್ಯ, ಶಿಕ್ಷಣ, ಉದ್ಯೋಗ ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸದೆ ಪಿಣರಾಯಿ ವಿಜಯನ್ ಸರಕಾರವು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಹಿಂದುಳಿದಿರುವ ಜನ ವಿಭಾಗವನ್ನು ವಂಚಿಸಿದೆ ಎಂದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಆರೋಪಿಸಿದ್ದಾರೆ.



ಬಿಜೆಪಿ ಮಧೂರು ಪೂರ್ವ ವಲಯ ವ್ಯಾಪ್ತಿಗೊಳಪಟ್ಟ ಪುಳಿಕ್ಕೂರ್‌ನಲ್ಲಿ ಮತಯಾಚಿಸಿ ಹಾಗೂ ಚಾ ಜೊತೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮನೆಗಳಲ್ಲಿ ಶುದ್ಧಜಲ ಖಾತರಿಪಡಿಸುವ ಜಲಜೀವನ್ ಮಿಷನ್ ಯೋಜನೆ, ವಯೋಜನರಿಗಿರುವ ಆಯುಷ್ಮಾನ್ ಆರೋಗ್ಯ ವಿಮಾ ಸಂರಕ್ಷಣೆ ಎಂಬಿವುಗಳನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೊಳಿಸದಿರುವುದರಿಂದ ಅತೀ ಹೆಚ್ಚು ಸಂಕಷ್ಟಗಳನ್ನು ಅನುಭವಿಸುವವರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಾಗಿದ್ದಾರೆ ಎಂದು ಅಶ್ವಿನಿಯವರು ಹೇಳಿದರು.

ಬಿಜೆಪಿ ಕಾಸರಗೋಡು ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಜಿಲ್ಲಾ ಕಾರ್ಯದರ್ಶಿಗಳಾದ ಪ್ರಮೀಳಾ ಮಜಲ್, ಸಂಜೀವ ಪುಳಿಕ್ಕೂರು, ಮಹೇಶ್, ಅನಿಲ್ ಪಕ್ಕಳ, ಮಹಿಳಾಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿತಾ ನಾಯ್ಕ್, ಬಿಜೆಪಿ ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಜನಪ್ರತಿನಿಧಿಗಳಾದ ಚಂದ್ರನ್, ನವನೀತ್ ರೈ ಮತ್ತಿತರರು ಉಪಸ್ಥಿತರಿದ್ದರು.

**ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಮಧೂರು ಪರಿಸರದಲ್ಲಿ ಪರ್ಯಟನೆ**

ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅವರು ಬುಧವಾರ ಮಧೂರು ಗ್ರಾಮ ಪಂಚಾಯತ್‌ನ 14ನೇ ವಾರ್ಡ್‌ನಲ್ಲಿ ನರೇಂದ್ರ ಮೋದಿ ಸರಕಾರದ ವಿಕಸಿತ್ ಭಾರತ ಸಂಕಲ್ಪ ಯಾತ್ರೆಯ ಭಾಗವಾಗಿ ಉದ್ಯೋಗ ಖಾತರಿ ಯೋಜನೆಯಡಿ ತೋಡು ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಮಹಿಳಾ ಕಾರ್ಮಿಕೆಯರೊಂದಿಗೆ ಮತಯಾಚನೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಎಂ.ಎಲ್.ಅಶ್ವಿನಿ ಅವರು, ಕೇಂದ್ರದ ನರೇಂದ್ರ ಮೋದಿ ಸರಕಾರವು ಜಾರಿಗೊಳಿಸುವ ಎಲ್ಲಾ ಜನಪರವಾದ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಕೇರಳ ಸರಕಾರವು ಕಾರ್ಯಗತಗೊಳಿಸದೆ ಜನಸಾಮಾನ್ಯರನ್ನು ವಂಚಿಸಿದೆ ಎಂದು ದೂರಿದರು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ಮತ್ತು ಐಕ್ಯರಂಗ ಒಕ್ಕೂಟಗಳಿಗೆ ನಡುಕ ಆರಂಭವಾಗಿದೆ ಎಂದು ಅವರು ನುಡಿದರು. ಮಧೂರು, ಪರಕ್ಕಿಲ, ಉಳಿಯತ್ತಡ್ಕ ಮೊದಲಾದೆಡೆಗಳಲ್ಲಿ ಉರಿಬಿಸಿಲನ್ನೂ ಲೆಕ್ಕಿಸದೆ ಕಾರ್ಯಕರ್ತರೊಂದಿಗೆ ಸಂಚರಿಸಿ ಅವರು ಮತಯಾಚಿಸಿದರು.

#### ಸಂಸದ ತೇಜಸ್ವಿ ಸೂರ್ಯ ಬದಿಯಡ್ಕದಲ್ಲಿ ಮಾ.28ರಂದು ಎನ್‌ಡಿಎ ಅಭ್ಯರ್ಥಿ ಅಶ್ವಿನಿ ರೋಡ್ ಶೋ

ಬದಿಯಡ್ಕ: ಕಾಸರಗೋಡು ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರ ರೋಡ್ ಶೋ ಬದಿಯಡ್ಕದಲ್ಲಿ ಮಾ.28ರಂದು ನಡೆಯಲಿದೆ. ಸಂಜೆ 4 ಗಂಟೆಗೆ ಬೋಳುಕಟ್ಟೆ ಮೈದಾನ ಬಳಿಯಿಂದ ರೋಡ್ ಶೋ ಆರಂಭವಾಗಲಿದೆ. ಬದಿಯಡ್ಕ ಪೇಟೆ ಸುತ್ತಿ ಪೇಟೆಯಲ್ಲಿಯೇ ಕೊನೆಗೊಳ್ಳುವುದು.



ರೋಡ್ ಶೋದಲ್ಲಿ ಬೆಂಗಳೂರು ಸಂಸದ ತೇಜಸ್ವಿ ಸೂರ್ಯ ಅವರು ಭಾಗವಹಿಸಲಿದ್ದು ಪ್ರಧಾನ ಭಾಷಣ ಮಾಡಲಿರುವರು. ಪಕ್ಷದ ಪ್ರಮುಖರು, ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ.

### ಮಾ.28: ಆಹ್ವಾನಿತರಿಂದ ಸಾಂಪ್ರದಾಯಿಕ, ಪಾರಂಪರಿಕ ಭಜನಾ ಸ್ಪರ್ಧೆ ಆಯೋಜನೆ

**ಕಾಪು:** ಪಲಿಮಾರು ಸಪ್ತಸ್ವರ ಕಲಾ ಕೇಂದ್ರ ಇದರ 12ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಪ್ರಸಿದ್ಧ ಆಹ್ವಾನಿತ ಭಜನಾ ತಂಡಗಳಿಂದ ಸಾಂಪ್ರದಾಯಿಕ, ಪಾರಂಪರಿಕ ಭಜನಾ ಸ್ಪರ್ಧೆ–2026 ಎಂಬ ಕಾರ್ಯಕ್ರಮವು ಶ್ರೀಭುವನೇಂದ್ರತೀರ್ಥಸಭಾಭವನದಲ್ಲಿ ಮಾ.28ರಂದು ನಡೆಯಲಿದೆ ಎಂದು ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಸಂದೀಪ್ ಪಲಿಮಾರ್ ತಿಳಿಸಿದರು.

ಅವರು ಮಾ.25ರಂದು ಕಾಪು ಪ್ರೆಸ್ ಕ್ಲಬ್‌ನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿಯನ್ನು ನೀಡುತ್ತಾ ಮಾತನಾಡಿದರು.

ನಮ್ಮ ಭಜನಾ ಪರಂಪರೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಭಜನೆಯನ್ನು ಸ್ಪರ್ಧಾತ್ಮಕರೂಪದಲ್ಲಿನಡೆಸುವಮೂಲಕ ಇನ್ನೂ ಹೆಚ್ಚು ಯುವ ಜನತೆ ಭಜನೆಯಲ್ಲಿ ತೊಡಗಿಸಿಕೊಳ್ಳ ಬೇಕೆಂಬುವುದು ಮೂಲ ಉದ್ದೇಶವಾಗಿರುತ್ತದೆ.

ಹಾಗಾಗಿ ಶನಿವಾರ ಬೆಳಿಗ್ಗೆ ಗ್ರಾಮ ದೇವರಾದ ಪಲಿಮಾರು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವರು ಇಲ್ಲಿ ಎಲ್ಲಾ ಭಜನಾ ತಂಡದ ಸದಸ್ಯರನ್ನೊಳಗೊಂಡಂತೆ ಸಾಮೂಹಿಕ ಪ್ರಾರ್ಥನೆ ನೆರವೇರಿಸಿ. ನಂತರ ಶ್ರೀ ಭುವನೇಂದ್ರ ತೀರ್ಥ ಸಭಾಭವನದಲ್ಲಿ ಡಾ. ಪ್ರಭಾ ನಂಬಿಯಾರ್ ಹಾಗೂ ಉಪಸ್ಥಿತ ಗಣ್ಯರಿಂದ ಉದ್ಘಾಟನೆ ನಡೆಸಲಾಗುತ್ತದೆ.




ನಂತರ ಸರಸ್ವತಿ ಪೂಜೆ ಸಂಪನ್ನಗೊಳಿಸಿ ಹಾಗೂ ಚೀಟಿ ಎತ್ತುವ ಮೂಲಕ ಭಜನೆಗೆ ಸಾಂಕೇತಿಕ ಚಾಲನೆ ನೀಡಲಾಗುವುದು. ಬೆಳಿಗ್ಗೆ 9.00 ರಿಂದ ಮಧ್ಯಾಹ್ನ ಭೋಜನಾ ವಿರಾಮದವರೆಗೆ ಭಜನಾ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ ವಿರಾಮದ ಸಮಯದಲ್ಲಿ ಸಪ್ತಸ್ವರ ಕಲಾಕೇಂದ್ರದ ವಿದ್ಯಾರ್ಥಿಗಳಿಂದ ಸ್ಯಾಕ್ರೋಫೋನ್ ಕಛೇರಿ ನೆರವೇರಲಿದೆ.

ಸಂಜೆ 5 ಗಂಟೆಗೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಶ್ರೀ ಪಲಿಮಾರುಮಠದಮಠಾಧೀಶರುಗಳಾದ ಹಿರಿಯಯತಿಗಳುಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ಹಾಗೂ ಕಿರಿಯ ಯತಿಗಳಾದ ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಗಳು, ಸಾಂಸದ ಕೋಟಾ ಶ್ರೀನಿವಾಸ ಪೂಜಾರಿ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಅದಾನಿ ಗ್ರೂಪ್ ಕಾರ್ಯನಿರ್ವಾಹಕ ಅಧ್ಯಕ್ಷ ಕಿಶೋರ್‌ಆಳ್ವ ಗಣ್ಯರ ಉಪಸ್ಥಿತಿಯಲ್ಲಿ ನಡೆಯಲಿದ್ದು, ಸಾಧಕರಿಗೆ, ಗಣ್ಯರಿಗೆ ಗೌರವ ಸಮ್ಮಾನ ಹಾಗೂ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ನೆರವೇರಲಿದೆ. ಬಳಿಕ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಲಿಮಾರು ಮಠದ ವಾಸುದೇವ ಆಚಾರ್ಯ, ಸಪ್ತಸ್ವರ ಕಲಾ ಕೇಂದ್ರದ ಪ್ರಧಾನ ಕಾರ್ಯದರ್ಶಿ ಸತೀಶ್ ಕುಮಾರ್, ಕೋಶಾಧಿಕಾರಿ ಕರುಣಾಕರ್‌ದೇವಾಡಿಗ ಉಪಸ್ಥಿತರಿದ್ದರು.

## ವಿವೇಕಾನಂದ ಸೆಂಟ್ರಲ್ ಸ್ಕೂಲ್‌ನಲ್ಲಿ ನೂತನ ಕಟ್ಟಡ ಉದ್ಘಾಟನೆ

### ಶಿಕ್ಷಣದೊಂದಿಗೆ ವ್ಯವಹಾರ ಜ್ಞಾನ ಅತ್ಯಗತ್ಯ

**ಪುತ್ತೂರು:** ಒಬ್ಬ ವಿದ್ಯಾರ್ಥಿಯಲ್ಲಿ ಶಿಕ್ಷಣ, ಆರೋಗ್ಯ, ಸಂಸ್ಕಾರವೆಂಬ ಮೂರು ವಿಚಾರಗಳಿದ್ದಾಗ ಮಾತ್ರ ಅವನು ಉತ್ತಮ ವಿದ್ಯಾರ್ಥಿಯಾಗಿ ಹೊರಹೊಮ್ಮಲು ಸಾಧ್ಯ. ಶಿಕ್ಷಣದೊಂದಿಗೆ ಉತ್ತಮ ವ್ಯವಹಾರ ಜ್ಞಾನ ಅತ್ಯಗತ್ಯ. ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರ ಕಡಿಮೆಯಾಗುತ್ತಿದ್ದು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವೆಗಳ ಬಗೆಗೆ ತಿಳಿಸಿಕೊಡುವುದು ಬಹಳಷ್ಟು ಅಗತ್ಯವಿದೆ ಎಂದು ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ ಸಿಎ ಶಾಂತಾರಾಮ ಶೆಟ್ಟಿ ಹೇಳಿದರು.

ವಿವೇಕಾನಂದ ವಿದ್ಯಾವರ್ಧಕ ಸಂಘದಡಿಯಲ್ಲಿ ಪುತ್ತೂರು ನೆಹರುನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವೇಕಾನಂದ ಸೆಂಟ್ರಲ್ ಸ್ಕೂಲ್ 7ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಶಾಲೆಯ ಕಟ್ಟಡದ 2ನೇ ವಿಸ್ತರಿತ ಮಹಡಿಯನ್ನು ಅವರು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ದೇಹ ಭಕ್ತಿಯೊಂದಿಗೆ ದೇಶ ಭಕ್ತಿಯನ್ನು ಒಗ್ಗೂಡಿಸಿಕೊಳ್ಳಬೇಕು. ಆಗ ಮಾತ್ರ ದೇಶದ ಸಮಗ್ರ ಪ್ರಗತಿ ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಮಾತನಾಡಿ, ಮಾನವೀಯತೆಯನ್ನು ಜಗತ್ತಿಗೆ ತಿಳಿಸಿ ಕೊಟ್ಟವರು ವಿವೇಕಾನಂದರು. ಭಾರತ ಒಂದು ಭದ್ರ ದೇಶ. ಆದರೆ, ಇದನ್ನು ಬೇರ್ಪಡಿಸುವಕಾರ್ಯ ಬಹಳಷ್ಟು ಬಾರಿ ನಡೆದರೂ ಅದನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಹೆಣ್ಣನ್ನು ದೇವರೆಂದು ಪೂಜಿಸುವ ದೇಶ ನಮ್ಮದು. ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು ಜಗತ್ತಿಗೆ ಕೊಟ್ಟಿದೆ. ಭಾರತೀಯರಾದ ನಾವೆಲ್ಲರೂ ಒಗ್ಗಟ್ಟಾಗಿರುವುದು ಇಂದು ಅವಶ್ಯ ಎಂದು ಹೇಳಿದರು.




- ವಿವೇಕಾನಂದ ಸೆಂಟ್ರಲ್ ಸ್ಕೂಲ್ 7ನೇ ವರ್ಷಕ್ಕೆ ಪಾದಾರ್ಪಣೆ ಸಂದರ್ಭದಲ್ಲಿ ಶಾಲೆಯ ಕಟ್ಟಡದ 2ನೇ ವಿಸ್ತರಿತ ಮಹಡಿ ಉದ್ಘಾಟನೆ

ವೇದಿಕೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ಸತೀಶ್ ರಾವ್, ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಪ್ರಾಂಶುಪಾಲೆ ಸಿಂಧು ವಿ.ಜಿ., ಉಪ ಪ್ರಾಂಶುಪಾಲೆ ಶ್ರೀದೇವಿ ಹೆಗಡೆ, ಶೈಕ್ಷಣಿಕ ಆಡಳಿತಾಧಿಕಾರಿ ಅನುರಾಧ ಉಪಸ್ಥಿತರಿದ್ದರು.

ಸೆಂಟ್ರಲ್ ಶಾಲಾ ಆಡಳಿತಮಂಡಳಿಯ ಸಂಚಾಲಕ ಭರತ್ ಪೈ ಸ್ವಾಗತಿಸಿ, ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷೆ ವಸಂತಿ ವಂದಿಸಿದರು. ಜಯಶ್ರೀ ಕೆ.ಎನ್. ಹಾಗೂ ಲತಾ ಶಂಕರಿ ಕಾರ್ಯಕ್ರಮ ನಿರ್ವಹಿಸಿದರು.

## ಕಾಪು ಶ್ರೀ ಹಳೇ ಮಾರಿಗುಡಿ, ಹೊಸ ಮಾರಿಗುಡಿ, ಮೂರನೇ ಮಾರಿಯಮ್ಮ ದೇವಸ್ಥಾನದಲ್ಲಿ ಸಂಭ್ರಮ । ಪುಣ್ಯಕ್ಷಣಗಳನ್ನು ಕಣ್ತುಂಬಿಕೊಂಡ ಭಕ್ತ ಗಡಣ

# ಶ್ರೀ ಮಾರಿಯಮ್ಮ ದೇವಿ ಸನ್ನಿಧಿಯಲ್ಲಿ ಏಕಕಾಲದಲ್ಲಿ ಕಾಲಾವಧಿ ಸುಗ್ಗಿ ಮಾರಿಪೂಜೆ

**ಕಾಪು :** ಕಾಪುವಿನ ಶ್ರೀ ಹಳೇ ಮಾರಿಗುಡಿ, ಹೊಸ ಮಾರಿಗುಡಿ, ಮೂರನೇ ಮಾರಿಯಮ್ಮ ದೇವಸ್ಥಾನ, ಮೂರೂ ಮಾರಿಗುಡಿಗಳಲ್ಲಿ ಆರಾಧನೆಗೊಳ್ಳುತ್ತಿರುವ ಉಚ್ಚಂಗೀ ಸಹಿತ ಶ್ರೀ ಮಾರಿಯಮ್ಮ ದೇವಿಯ ಸನ್ನಿಧಾನದಲ್ಲಿ ಏಕಕಾಲದಲ್ಲಿ ನಡೆಯುವ ಕಾಲಾವಧಿ ಸುಗ್ಗಿ ಮಾರಿಪೂಜೆಯು ಬುಧವಾರ ಸಂಜೆ ಸಮಾಪನಗೊಂಡಿತು.

ಕಾಪು ಶ್ರೀ ಹಳೇ ಮಾರಿಗುಡಿ ದೇವಸ್ಥಾನದಲ್ಲಿ ಪ್ರಧಾನ ಅರ್ಚಕ ವೇ. ಮೂ. ಕೆ. ಕಮಲಾಕ್ಷ ಭಟ್ ಮತ್ತು ವೇ. ಮೂ. ಶ್ರೀನಿವಾಸ ಭಟ್, ಶ್ರೀ ಹೊಸ ಮಾರಿಗುಡಿ ದೇವಸ್ಥಾನದಲ್ಲಿ ಪ್ರಧಾನ ತಂತ್ರಿ ವಿದ್ವಾನ್ ಕೆ. ಪಿ. ಕುಮಾರಗುರು ತಂತ್ರಿ ಕೊರಂಗ್ರಪಾಡಿ ಮತ್ತು ಅರ್ಚಕ ವೇ. ಮೂ. ಶ್ರೀನಿವಾಸ ತಂತ್ರಿ ಕಲ್ಯ ಹಾಗೂ ಶ್ರೀ ಮೂರನೇ ಮಾರಿಗುಡಿ ದೇವಸ್ಥಾನದಲ್ಲಿ ಪ್ರಧಾನ ತಂತ್ರಿ ವೇ. ಮೂ. ಶ್ರೀಶ ತಂತ್ರಿ ಕಲ್ಯ ಮತ್ತು ವೇ. ಮೂ. ಲಕ್ಷ್ಮಣ್ ರಾವ್ ಮಟ್ಟು ಅವರ ಸಹಕಾರದೊಂದಿಗೆ ವಿವಿಧ ಸೇವಾಕಾರ್ಯಗಳನ್ನು ನಿರ್ವಹಿಸುವ ಚಾಕರಿ ವರ್ಗದ ಸಿಬಂದಿಗಳ ಪಾಲ್ಗೊಳ್ಳುವಿಕೆಯೊಂದಿಗೆ ಸುಗ್ಗಿ ಮಾರಿಪೂಜೆಯ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ಸುಗ್ಗಿ ಮಾರಿಪೂಜೆ ಪ್ರಯುಕ್ತ ಮಂಗಳವಾರ ಮಧ್ಯಾಹ್ನದಿಂದಲೇ ಸಹಸ್ರಾರು ಸಂಖ್ಯೆಯ ಭಕ್ತರು ಮಾರಿಗುಡಿಗಳಿಗೆ ಭೇಟಿ ನೀಡಿದ್ದು ಬುಧವಾರ ಸಂಜೆ ನಾಲ್ಕು ಗಂಟೆಯವರೆಗೂ ಭಕ್ತ ಜನಸಾಗರ ಹರಿದು ಬಂದಿದೆ.

ಭಕ್ತರು ಸರತಿ ಸಾಲಿನಲ್ಲಿ ಬಂದು ದೇವರ ದರ್ಶನ ಪಡೆದು ಹಣ್ಣುಕಾಯಿ ಸಹಿತ ವಿವಿಧ ಹರಕೆ, ಸೇವೆಗಳನ್ನು ಸಮರ್ಪಿಸಿದರು. ಮಾರಿಯಮ್ಮ ದೇವಿಗೆ ಪ್ರಿಯವಾದ ಗದ್ದಿಗೆ ಪೂಜೆ, ಕುಂಕುಮಾರ್ಚನೆ, ಹೂವಿನ ಪೂಜೆ ಸಹಿತವಾಗಿ ಭಕ್ತಾದಿಗಳು ಸ್ವಯಂಪ್ರೇರಿತರಾಗಿ ಕುರಿ, ಆಡು, ಕೋಳಿ ಬಲಿ ಮೂಲಕ ರಕ್ತಾಹಾರ ಸೇವೆಯನ್ನೂ ಸಮರ್ಪಿಸಿದರು.

ಮೂರು ಮಾರಿಗುಡಿಗಳಲ್ಲಿಯೂ ದೇವಸ್ಥಾನದ ಆಡಳಿತ ಮಂಡಳಿ, ಪೊಲೀಸ್ ಇಲಾಖೆ, ಪುರಸಭೆ, ಆರೋಗ್ಯ ಇಲಾಖೆ ಮತ್ತು ಸ್ವಯಂ ಸೇವಕರ ಸಹಕಾರದೊಂದಿಗೆ ಭಕ್ತಾದಿಗಳ ಅನುಕೂಲಕ್ಕಾಗಿ ವಿವಿಧಮುಂಜಾಗ್ರತಾಕ್ರಮಗಳನ್ನುಕೈಗೊಳ್ಳಲಾಗಿತ್ತು. ಪುರಸಭೆ ವತಿಯಿಂದ ನಡೆಸಲಾದ ಸ್ವಚ್ಛತೆ, ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ಬಂದೋಬಸ್ತ್, ಟ್ರಾಫಿಕ್ ನಿರ್ವಹಣೆ ಸುರಕ್ಷತಾ ಕ್ರಮ ಕೈಗೊಂಡರು.





ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕಾಪು ತಹಶೀಲ್ದಾರ್ ಅನಂತ ಶಂಕರ ಬಿ. ಸೇರಿದಂತೆ ಗಣ್ಯರು ಮಾರಿಗುಡಿಗಳಿಗೆ ಭೇಟಿ ನೀಡಿದರು.

- ಸರತಿ ಸಾಲಿನಲ್ಲಿ ಬಂದು ದೇವರ ದರ್ಶನ ಪಡೆದು ಭಕ್ತರು ವಿವಿಧ ಹರಕೆ, ಸೇವೆಗಳನ್ನು ಸಮರ್ಪಿಸಿದರು.
- ಪುರಸಭೆ ವತಿಯಿಂದ ನಡೆಸಲಾದ ಸ್ವಚ್ಛತೆ, ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ಬಂದೋಬಸ್ತ್, ಟ್ರಾಫಿಕ್ ನಿರ್ವಹಣೆ ಸುರಕ್ಷತಾ ಕ್ರಮ ಕೈಗೊಂಡರು.
- ಸಹಸ್ರಾರು ಸಂಖ್ಯೆಯ ಭಕ್ತರು ಮಾರಿಗುಡಿಗಳಿಗೆ ಭೇಟಿ ನೀಡಿದ್ದು ಭಕ್ತ ಜನಸಾಗರ ಹರಿದು ಬಂದಿದೆ.

ಹಳೇ ಮಾರಿಗುಡಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಸಾದ್ ಜಿ. ಶೆಣೈ, ಸಹ ಮೊಕ್ತೇಸರರಾದ ಸದಾಶಿವ ಕಾಮತ್, ರಾಮ ನಾಯಕ್, ಶ್ರೀಕಾಂತ್ ಭಟ್, ರಾಜೇಶ್ ಎಂ. ಶೆಣೈ, ಆಡಳಿತ ಮಂಡಳಿ ಸದಸ್ಯರಾದ ಮೋಹನದಾಸ್ ಕಿಣಿ, ಸುನಿಲ್ ಪೈ, ಚಂದ್ರಕಾಂತ್ ಕಾಮತ್, ಕೃಷ್ಣಾನಂದ ನಾಯಕ್, ರಾಜೇಶ್ ಶೆಣೈ, ಮಜೂರು, ಹೊಸ ಮಾರಿಗುಡಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಕಾರ್ಯ ನಿರ್ವಹಣಾಧಿಕಾರಿ ರವಿಕಿರಣ್, ಅಭಿವೃದ್ಧಿ ಸಮಿತಿ ಅಧ್ಯಕ್ಷ ವಾಸುದೇವ ಶೆಟ್ಟಿ, ಮೊಕ್ತೇಸರರಾದ ಮಾಧವ ಆರ್. ಪಾಲನ್, ಶೇಖರ್ ಎಲ್. ಸಾಲ್ಯಾನ್, ಮನೋಹರ ರಾವ್ ಕಲ್ಯ, ರವೀಂದ್ರ ಮಲ್ಲಾರು, ಜಯಲಕ್ಷ್ಮೀ ಎಸ್. ಶೆಟ್ಟಿ ಚರಿತಾ ಎಸ್. ದೇವಾಡಿಗ, ಮೂರನೇ ಮಾರಿಗುಡಿಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮನೋಹರ್ ಎಸ್. ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ಮಂಜುಳಾ ಟಿ.ಎನ್., ಮೊಕ್ತೇಸರರಾದ ನಾರಾಯಣ ತಂತ್ರಿ, ಶಶಿಧರ ಎನ್. ಸುವರ್ಣ, ಸದಾನಂದ ಎ. ಸುವರ್ಣ, ಶ್ರೀಕಾಂತ್ ಕಾಪು, ರವಿ ಕುಮಾರ್ ಮಂದಾರ, ನಾಗರಾಜ್ ಎಸ್., ಅಶ್ವಿನಿ, ಶಾಂತಲತಾ ಎಸ್. ಶೆಟ್ಟಿ, ಕಾಪು ಸಾವಿರ ಸೀಮೆಯ ಭಗವದ್ಭಕ್ತರು, ಭಜಕ ವೃಂದದವರು ಪಾಲ್ಗೊಂಡಿದ್ದರು.

## ಕಿರುಸುದ್ದಿ

### ಒಳಾಂಗಣ ಅಥ್ಲೆಟಿಕ್ಸ್: ಸಲೋನಿ ದಾಖಲೆ

**ಹೊಸದಿಲ್ಲಿ:** ಉತ್ತರ ಪ್ರದೇಶದ ಸಲೋನಿ ಕುಮಾರಿ ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ 400 ಮೀಟರ್ ಇಂಡೋರ್ ಸ್ಪರ್ಧೆಯಲ್ಲಿ ಹೊಸ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ. 21 ವರ್ಷದ ಸಲೋನಿ ಕುಮಾರಿ 53.73 ಸೆಕೆಂಡ್‌ನಲ್ಲಿ ಗುರಿ ತಲುಪಿ, ಪಿಂಕಿ ಪ್ರಮಾಣಿಕ್ ಅವರ ಹೆಸರಿನಲ್ಲಿದ್ದ 53.89 ಸೆಕೆಂಡ್ ಹಳೆಯ ದಾಖಲೆಯನ್ನು ಮುರಿದಿದ್ದಾರೆ. ಔಟ್‌ಡೋರ್ 400 ಮೀಟರ್ ಸ್ಪರ್ಧೆಯಲ್ಲಿ ಸಲೋನಿ ಅವರ ವೈಯಕ್ತಿಕ ಅತ್ಯುತ್ತಮ ಸಮಯ 57.16 ಸೆಕೆಂಡ್ ಆಗಿದ್ದು, 2025ರ ಜುಲೈನಲ್ಲಿ ಸಂಗೂರುನಲ್ಲಿ ನಡೆದ ಇಂಡಿಯನ್ ಓಪನ್ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಈ ಸಾಧನೆ ಮಾಡಿದ್ದಾರೆ. ಇದೇ ವೇಳೆ ಪುರುಷರ ಅಂಡರ್-20 ಹೈಜಂಪ್ ವಿಭಾಗದಲ್ಲಿ ರಾಜಸ್ಥಾನದ ಬಸಂತ್ 2.16 ಮೀಟರ್ ಜಿಗಿದು ವಿಶ್ವ ಅಂಡರ್-20 ಚಾಂಪಿಯನ್‌ಶಿಪ್‌ಗೆ ಅರ್ಹತಾ ಮಾನದಂಡವನ್ನು ತಲುಪಿದ್ದಾರೆ.

### ವಿಶ್ವ ಗೆಲುವಿನಿಂದ ಹೆಚ್ಚಿದ ವಿಶ್ವಾಸ: ಕೌರ್

**ಮುಂಬೈ:** ಕಳೆದ ವರ್ಷ ದೇಶದಲ್ಲಿ ಗೆದ್ದ ಏಕದಿನ ವಿಶ್ವಕಪ್ ಪ್ರಶಸ್ತಿ ತಂಡಕ್ಕೆ ಆತ್ಮವಿಶ್ವಾಸ ಹೆಚ್ಚಿಸಿದೆ ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ತಿಳಿಸಿದ್ದಾರೆ. ನವೀ ಮುಂಬೈನಲ್ಲಿ ನಡೆದ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಭಾರತ ತನ್ನ ಮೊದಲ ಐಸಿಸಿ ಪ್ರಶಸ್ತಿಯನ್ನು ಕಳೆದ ನವೆಂಬರ್‌ನಲ್ಲಿ ಗೆದ್ದಿತ್ತು. ಈ ಜಯದಿಂದ ತಂಡಕ್ಕೆ ಮತ್ತಷ್ಟು ಉತ್ಸಾಹ ಸಿಕ್ಕಿದ್ದು, ಜೂನ್ 12ರಿಂದ ಜುಲೈ 5ರವರೆಗೆ ಯುನೈಟೆಡ್ ಕಿಂಗ್ಡಮ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಮತ್ತೊಂದು ಪ್ರಶಸ್ತಿ ಗೆಲ್ಲುವ ವಿಶ್ವಾಸ ವ್ಯಕ್ತವಾಗಿದೆ. ದ್ವಾರಕಾದ ಓಮಾಕ್ಸ್ ಕ್ರೀಡಾಂಗಣದಲ್ಲಿ ತಮ್ಮ ಹೆಸರಿನ ಸ್ಟ್ಯಾಂಡ್ ನಾಮಕರಣ ಸಮಾರಂಭದ ವೇಳೆ ಹರ್ಮನ್‌ಪ್ರೀತ್ ಮಾತನಾಡಿ, ಯಾವ ಕ್ಷೇತ್ರದಲ್ಲಾದರೂ ಗುರುತಿಸಿಕೊಳ್ಳಲು ವಿಶೇಷ ಸಾಧನೆ ಅಗತ್ಯ. ಪ್ರಶಸ್ತಿ ಗೆದ್ದಾಗ ಮಾತ್ರ ನಿಜವಾದ ಮಾನ್ಯತೆ ಸಿಗುತ್ತದೆ. ಇಲ್ಲದಿದ್ದರೆ ನಮ್ಮ ಪರಿಶ್ರಮ ವ್ಯರ್ಥವಾಗಿದೆಯೆನ್ನಿಸುತ್ತದೆ ಎಂದು ಹೇಳಿದರು. ನಮ್ಮ ತಂಡ ಮಾತ್ರವಲ್ಲ, ನಮ್ಮ ಹಿಂದಿನ ಮಹಿಳಾ ಕ್ರಿಕೆಟಿಗರೂ ಸಾಕಷ್ಟು ತ್ಯಾಗ ಮಾಡಿದ್ದಾರೆ. ಕೆಲವೊಮ್ಮೆ ತಮ್ಮ ಖರ್ಚಿನಿಂದಲೇ ಆಡಿದ್ದಾರೆ. ಆದ್ದರಿಂದ ಪ್ರಶಸ್ತಿ ಗೆಲ್ಲುವುದು ಬಹಳ ಮುಖ್ಯವಾಗಿತ್ತು. ಈಗ ನಾವು ಪಡೆಯುತ್ತಿರುವ ಅಭಿಮಾನಿಗಳ ಹಾಗೂ ಮಾಧ್ಯಮದ ಪ್ರತಿಕ್ರಿಯೆ ತುಂಬಾ ದೊಡ್ಡದು ಎಂದು ಅವರು ಹೇಳಿದ್ದಾರೆ.

### ಆಫ್ರಿಕಾ ಸರಣಿಗೆ ಭಾರತ ಮಹಿಳಾ ತಂಡ

**ಮುಂಬೈ:** ಐದು ಪಂದ್ಯಗಳ ದ.ಆಫ್ರಿಕಾ ಟಿ20 ಸರಣಿಗಾಗಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿ 15 ಆಟಗಾರ್ತಿಯರ ತಂಡವನ್ನು ಬಿಸಿಸಿಐ ಪ್ರಕಟಿಸಿದೆ. ಕಾಶ್ವಿ ಗೌತಮ್ ಮತ್ತು ಅನುಷ್ಕಾ ಶರ್ಮಾ ಮೊದಲ ಬಾರಿಗೆ ಅವಕಾಶ ಪಡೆದಿದ್ದಾರೆ. ಸರಣಿಯು ಏಪ್ರಿಲ್ 17 ರಿಂದ 27 ರವರೆಗೆ ನಡೆಯಲಿದೆ.

**ಭಾರತ ಮಹಿಳಾ ತಂಡ:** ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ, ಶೆಫಾಲಿ ವರ್ಮಾ, ಜೆಮಿಮಾ ರಾಡ್ರಿಗ್ಸ್, ದೀಪ್ತಿ ಶರ್ಮಾ, ರಿಚಾ ಘೋಷ್, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಶ್ರೀ ಚರಣಿ, ಶ್ರೇಯಂಕಾ ಪಾಟೀಲ್, ಕಾಶ್ವಿ ಗೌತಮ್, ಭಾರತಿ ಫುಲ್ಮಾಲಿ, ಉಮಾ ಛೆಟ್ರಿ, ಅನುಷ್ಕಾ ಶರ್ಮಾ.

**ಪಂದ್ಯಗಳು ಯಾವಾಗ?:** ಭಾರತೀಯ ಮಹಿಳಾ ಕ್ರಿಕೆಟ್ ತಂಡದ ದಕ್ಷಿಣ ಆಫ್ರಿಕಾ ಪ್ರವಾಸ ಏಪ್ರಿಲ್ 17 ರಂದು ಪ್ರಾರಂಭವಾಗಲಿದೆ. ಪ್ರವಾಸವು ಐದು ಪಂದ್ಯಗಳ ಟಿ20 ಸರಣಿಯನ್ನು ಒಳಗೊಂಡಿದ್ದು, ಅಂತಿಮ ಪಂದ್ಯ ಏಪ್ರಿಲ್ 27 ರಂದು ನಡೆಯಲಿದೆ. ಮೊದಲ ಎರಡು ಪಂದ್ಯಗಳು ಏಪ್ರಿಲ್ 17 ಮತ್ತು 19 ರಂದು ಡರ್ಬನ್‌ನಲ್ಲಿ ನಡೆಯಲಿವೆ. ಮುಂದಿನ ಎರಡು ಪಂದ್ಯಗಳು ಏಪ್ರಿಲ್ 22 ಮತ್ತು 25 ರಂದು ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯಲಿವೆ. ಸರಣಿಯ ಅಂತಿಮ ಪಂದ್ಯ ಏಪ್ರಿಲ್ 27 ರಂದು ಬೆನೋನಿಯಲ್ಲಿ ನಡೆಯಲಿದೆ.

### ಏ.5ಕ್ಕೆ ಕ್ರೀಡಾಭಾರತಿ ಚೆಸ್ ಕೂಟ

**ಬೆಂಗಳೂರು:** ಕ್ರೀಡಾ ಭಾರತಿ ವಾರ್ಷಿಕ ಸಮಾರೋಪ ಸಮಾರಂಭ ಬೆನ್ನಲ್ಲೇ ಚೆಸ್ ಪಂದ್ಯಾವಳಿ ಆಯೋಜನೆ ಮಾಡಿದ್ದು ಕೂಟ ಏ.5ರಂದು ನಡೆಯಲಿದೆ. ನಗದು ಬಹುಮಾನದ ಪಂದ್ಯಾವಳಿಯು ಯಲಹಂಕಾದ ಮಂಗಳ ವಿದ್ಯಾಮಂದಿರದಲ್ಲಿ ನಡೆಯಲಿದ್ದು, ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದೆಂದು ಆಯೋಜಕರು ತಿಳಿಸಿದ್ದಾರೆ. ಪಂದ್ಯಾವಳಿಯಲ್ಲಿ ಮೂರು ವಿಭಾಗಗಳಿರುತ್ತವೆ. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಬೇರೆ ವಿಭಾಗ, ಮಧ್ಯಮ-ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಬೇರೆ ವಿಭಾಗ ಮತ್ತು ಮುಕ್ತ ವಿಭಾಗವೂ ಇರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ವಿಜೇತರಿಗೆ ನಗದು ಬಹುಮಾನಗಳೊಂದಿಗೆ ಟ್ರೋಫಿಗಳನ್ನೂ ನೀಡಲಾಗುವುದು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ವೇದಿಕೆ ಸಜ್ಜಾಗಿದೆ. ಎಲ್ಲಾ ತಂಡಗಳು ಸಿದ್ಧತೆಗಳೊಂದಿಗೆ ಪಂದ್ಯಾವಳಿಗಿಳಿಯಲು ಅಣಿಯಾಗಿವೆ. ಈ ನಡುವೆ ಮುಂಬೈನಲ್ಲಿ ಬುಧವಾರದಂದು ನಾಯಕರ ಸಮಾಗಮ ಮತ್ತು ಫೋಟೋಶೂಟ್ ಕಾರ್ಯಕ್ರಮ ನಡೆಯಿತು. ಬುಧವಾರದಂದು ನಾಯಕನಿಲ್ಲದಿದ್ದರೂ ಅಭ್ಯಾಸಕ್ಕೆ ಯಾವುದೇ ಅಡೆತಡೆ ಇಲ್ಲದಂತೆ ಎಲ್ಲಾ ತಂಡಗಳು ಅಭ್ಯಾಸ ನಡೆಸಿದವು. ಗಾಯದ ಹಿನ್ನಡೆಯ ಕಹಿ ತಂಡಗಳೊಂದಿಗಿದ್ದರೆ ಯುವ ಆಟಗಾರರ ಭರವಸೆ ಬಲವಾಗಿದೆ. ಇದೇ ಮೊದಲ ಬಾರಿಗೆ ಹತ್ತೂ ತಂಡದ ನಾಯಕರು ಭಾರತೀಯರೇ ಆಗಿದ್ದರು. ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಇದ್ದರೂ ಅವರ ಅಲಭ್ಯತೆಯಿಂದಾಗಿ ಇಶಾನ್ ಕಿಶನ್ ಅವರು ತಾತ್ಕಾಲಿಕ ನಾಯಕರಾಗಿ ನಾಯಕರ ಸಮಾಗಮದಲ್ಲಿ ಕಾಣಿಸಿಕೊಂಡಿದ್ದರು.

# ಬಹು ನಿರೀಕ್ಷಿತ ಐಪಿಎಲ್‌ಗೆ ಅಖಾಡ ಸಿದ್ಧ

ಕಳೆದ ಎರಡು ವಾರದ ಹಿಂದೆ ಟಿ20 ವಿಶ್ವಕಪ್ ಪಂದ್ಯಾವಳಿ ನಡೆದಿತ್ತು. ಎಲ್ಲಾ ತಂಡಗಳಲ್ಲಿ ಒಬ್ಬರಾದರೂ ವಿಶ್ವಕಪ್‌ನಲ್ಲಿ ಮಿಂಚಿದ ಆಟಗಾರರಿದ್ದಾರೆ. ಎಲ್ಲರಿಗೂ ಟಿ20 ಪಂದ್ಯಾವಳಿಯ ಆವೇಗವಿರುವುದು ಈ ಬಾರಿಯ ವಿಶೇಷ. ಹೀಗಿರುವಾಗ ಆಟಗಾರರ ಅಲಭ್ಯತೆಗಾಗಿ ಹೊಸ ಆಟಗಾರರನ್ನೂ ತಂಡಗಳು ಬರಮಾಡಿಕೊಂಡಿವೆ. ವಿವಿಧ ಫ್ರಾಂಚೈಸಿಗಳು ಹಾಗೇ ಬಿಟ್ಟಿವೆ. ಹಾಗಾದರೆ ಪಂದ್ಯಾವಳಿಗಾಗಿ ತಂಡಗಳ ಸಿದ್ಧತೆ ಹೇಗಿವೆ?



### ಆರ್‌ಸಿಬಿ

ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಫಿಲ್ ಸಾಲ್ಟ್, ಟೀಮ್ ಡೇವಿಡ್, ವಿರಾಟ್ ಕೊಹ್ಲಿ ಅಂತಹ ಪ್ರಮುಖ ಆಟಗಾರರೊಂದಿಗೆ ಮೈದಾನಕ್ಕಿಳಿಯಲಿದೆ. ಪಾಟಿದಾರ್ ಮತ್ತು ಜೋಕಬ್ ಬ್ಯಾಥೆಲ್ ಈ ಬಾರಿ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಹರಾಜಿನಲ್ಲಿ ಹೆಚ್ಚಿನ ಆಟಗಾರರನ್ನು ಆಯ್ಕೆ ಮಾಡಿಕೊಂಡಿರುವ ತಂಡವು, ಲಿವಿಂಗ್‌ಸ್ಟೋನ್ ಅಂಥ ಆಟಗಾರರನ್ನು ಬಿಡುಗಡೆ ಮಾಡಿತ್ತು. ಸಮತೋಲಿತ ಬ್ಯಾಟಿಂಗ್ ಹೊಂದಿದ್ದು, ಭುವನೇಶ್ವರ್ ಕುಮಾರ್, ಮಂಗೇಶ್ ಯಾದವ್ ಅಂತಹ ಬೌಲರ್‌ಗಳನ್ನು ಹೊಂದಿದೆ. ಸ್ಪಿನ್ ವಿಭಾಗದಲ್ಲಿ ಸುಯಷ್, ಕೃಣಾಳ್ ಅಂಥವರಿದ್ದಾರೆ. ಜೋಶ್ ಹ್ಯಾಜೆಲ್ವುಡ್ ತಾತ್ಕಾಲಿಕವಾಗಿ, ಯಶ್ ದಯಾಳ್ ಪೂರ್ಣವಾಗಿ ಹೊರಬಿದ್ದಿದ್ದಾರೆ.

**ಅಲಭ್ಯ ಆಟಗಾರರು:** ಜೋಶ್ ಹ್ಯಾಜೆಲ್ವುಡ್, ಯಶ್ ದಯಾಳ್

### ಚೆನ್ನೈ

ರುತುರಾಜ್ ಗಾಯಕ್ವಾಡ್ ಅವರ ನೇತೃತ್ವದಲ್ಲಿ ಆಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಬಾರಿ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಸಂಜು ಸ್ಯಾಮ್ಸನ್, ಶಿವಂ ದುಬೆ ಭರ್ಜರಿ ಲಯದಲ್ಲಿರುವುದು ಭರವಸೆ ಹೆಚ್ಚಿಸಿದೆ. ಡೆವಾಲ್ಡ್ ಬ್ರೆವಿಸ್ ಹಾಗೂ ಆಯೂಷ್ ಮಾತ್ರೆ ಅವರನ್ನು ತಂಡದಲ್ಲಿದ್ದು ಸ್ಫೋಟಕ ಬ್ಯಾಟಿಂಗ್ ಮಾಡುವ ಭರವಸೆಯಿದೆ. ನಾಥನ್ ಎಲ್ಲಿಸ್ ತಂಡದಲ್ಲಿಲ್ಲ. ಧೋನಿ ಅವರ ಮಾರ್ಗದರ್ಶನ ತಂಡದ ಪ್ರಮುಖ ಬಲವಾಗಿರಲಿದೆ. ಹರಾಜಿನಲ್ಲಿ ದೇಶಿ ಯುವ ಆಟಗಾರರ ಮೇಲೆ ಹೆಚ್ಚಿನ ಗಮನ ಹರಿಸಿರುವ ಸಿಎಸ್‌ಕೆ ಯುವ ಬಲದೊಂದಿಗೆ ಮೈದಾನಕ್ಕಿಳಿಯಲಿದೆ.

**ಅಲಭ್ಯ:** ನಾಥನ್ ಎಲ್ಲಿಸ್, ಬದಲಿ ಆಟಗಾರ: ಸ್ಪೆನ್ಸರ್ ಜಾನ್ಸನ್

### ಮುಂಬೈ

ಪಾಂಡ್ಯ ನೇತೃತ್ವದಲ್ಲಿ ಆಡಲಿರುವ ಮುಂಬೈ ಬಲಿಷ್ಠ ಪಡೆಯನ್ನು ಹೊಂದಿದೆ. ಸೂರ್ಯಕುಮಾರ್, ರಿಕೆಲ್ಟನ್, ತಿಲಕ್ ವರ್ಮಾ ಅಂತಹ ಬ್ಯಾಟಿಂಗ್ ಪಡೆಗೆ ರೋಹಿತ್ ಶರ್ಮ ಅವರ ಅನುಭವದ ಬಲ ಸಿಗಲಿದೆ. ಸ್ಯಾಂಟ್ನರ್, ಪಾಂಡ್ಯ, ಸೂರ್ಯ ಹಾಗೂ ರೋಹಿತ್ ಅಂತಹ ನಾಯಕತ್ವ ಬಲವಿದ್ದ ತಂಡದಲ್ಲಿ ಟ್ರೆಂಟ್ ಬೋಲ್ಟ್, ಬೂಮ್ರಾ, ದೀಪ್ ಚಾಹರ್ ಅಂತಹ ಬೌಲರ್‌ಗಳಿರುವುದು ವಿಶೇಷ.

**ಅಲಭ್ಯ:** ಅಥರ್ವ ಅಂಕೋಲೆಕರ್

### ರಾಜಸ್ಥಾನ

ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟುಕೊಟ್ಟ ನಂತರ ಜಡೇಜಾ ಹಾಗೂ ಸ್ಯಾಮ್ ಕರ್‍ರನ್ ಅವರನ್ನು ಪಡೆದ ರಾಜಸ್ಥಾನ ತಂಡ ಬದಲಾವಣೆಯೊಂದಿಗೆ ಕಣಕ್ಕಿಳಿಯಲಿದೆ. ರಿಯಾನ್ ಪರಾಗ್ ನಾಯಕತ್ವ ವಹಿಸಲಿದ್ದಾರೆ. ಆಲ್‌ರೌಂಡರ್‌ಗಳ ಭರಾಟೆಯೊಂದಿಗೆ ಯುವ ಆಟಗಾರರ ಬಲಿಷ್ಠ ಪಡೆ ತಂಡದಲ್ಲಿದೆ. ವಿಶ್ವಕಪ್‌ನಲ್ಲಿ ಮಿಂಚಿರುವ ಹಲವು ಆಟಗಾರರೊಂದಿಗೆ ವೈಭವ್ ಸೂರ್ಯವಂಶಿ ಅವರನ್ನು ಹೊಂದಿರುವ ತಂಡವು ಸ್ಯಾಮ್ ಕರ್‍ರನ್ ಅವರ ಅಲಭ್ಯತೆಯ ಹಿನ್ನಡೆಯೊಂದಿಗೆ ಕಣಕ್ಕಿಳಿಯಲಿದೆ.

**ಅಲಭ್ಯ: ಸ್ಯಾಮ್ ಕರ್‍ರನ್**
**ಬದಲಿ ಆಟಗಾರ: ಶಣಕ**

### ಲಖನೌ

ಪಂತ್ ಅವರ ನಾಯಕತ್ವದಲ್ಲಿ ಬದಲಾದ ತಂಡದೊಂದಿಗೆ ಲಖನೌ ಕಣಕ್ಕಿಳಿಯಲಿದೆ. ಅರ್ಜುನ್ ತೆಂಡೂಲ್ಕರ್, ರಾಥಿ, ಬದೋನಿ ಅಂಥ ಯುವಕರು ತಂಡದಲ್ಲಿದ್ದಾರೆ. ಯಾವುದೇ ಗಾಯದ ಚಿಂತೆ ತಂಡಕ್ಕಿಲ್ಲ. ವಿಶ್ವಕಪ್‌ನಲ್ಲಿ ಮಿಂಚಿರುವ ಏಡನ್ ಮಾರ್ಕ್ರಂ ಕೂಡ ಭರವಸೆ ಹೆಚ್ಚಿಸಿದ್ದು, ಪಂತ್, ಮಾರ್ಷ್, ಪೂರನ್ ಅಂತವರು ಬಲ ತುಂಬಿದ್ದಾರೆ. ಮೊದಲಿನ ನಾಲ್ಕು ಪಂದ್ಯಗಳಲ್ಲಿ ಜೋಶ್ ಇಂಗ್ಲಿಸ್ ಕೂಡ ಆಡಲಿದ್ದಾರೆ. ಬೌಲಿಂಗ್ ವಿಭಾಗವನ್ನು ಶಮಿ ಬಲಪಡಿಸಿದ್ದಾರೆ.

### ದಿಲ್ಲಿ

ಕೆ.ಎಲ್.ರಾಹುಲ್, ಅಕ್ಷರ್ ಪಟೇಲ್ ಅಂತಹ ಪ್ರಮುಖರಿರುವ ತಂಡಕ್ಕೆ ಈ ಬಾರಿ ಸ್ಟಾರ್ಕ್, ಡಕೆಟ್ ಅಲಭ್ಯತೆಯ ಬಿಸಿ ತಟ್ಟಿದೆ. ತಂಡದಲ್ಲಿ ಬಲಿಷ್ಠ ಬ್ಯಾಟಿಗರಿದ್ದಾರೆ. ಬೌಲಿಂಗ್‌ನಲ್ಲೂ ಅಚ್ಚುಕಟ್ಟಾದ ದಾಳಿ ಸಂಘಟಿಸುವ ಮುಖೇಶ್ ಕುಮಾರ್ ಅಂತಹ ಆಟಗಾರರಿದ್ದು ವಿಶ್ವಾಸದಲ್ಲಿದೆ.

**ಅಲಭ್ಯ: ಸ್ಟಾರ್ಕ್(ಕೆಲವು ಪಂದ್ಯಗಳಿಗೆ), ಡಕೆಟ್**

### ಪಂಜಾಬ್

ಶ್ರೇಯಸ್ ಅಯ್ಯರ್ ಅವರ ನಾಯಕತ್ವದಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಹಾಲಿ ರನ್ನರ್-ಅಪ್ ಪಂಜಾಬ್ ತಂಡವು ಈ ಬಾರಿ ಜೋಶ್ ಇಂಗ್ಲಿಸ್ ಅವರಿಲ್ಲದೆ ಕಣಕ್ಕಿಳಿಯಲಿದೆ. ಆದಾಗ್ಯೂ ನೆಹಾಲ್ ವಧೇರಾ, ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್, ಶಶಾಂಕ್ ಸಿಂಗ್ ಅಂತಹ ಯುವಕರು ತಂಡದಲ್ಲಿದ್ದಾರೆ. ಯಾವುದೇ ಅಲಭ್ಯತೆಯ ಕಾಟ ತಂಡಕ್ಕಿಲ್ಲ. ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್ ಅಂಥವರನ್ನು ತಂಡ ಹೊಂದಿದೆ.

### ಗುಜರಾತ್

ಯಾವುದೇ ಅಲಭ್ಯತೆಯ ಚಿಂತೆ ತಂಡಕ್ಕಿಲ್ಲ. ಗಿಲ್, ಸುದರ್ಶನ್ ಅಂತಹ ಪ್ರಮುಖ ಆಟಗಾರರು ತಂಡದಲ್ಲಿದ್ದು, ಜಾಸ್ ಬಟ್ಲರ್ ಕೂಡ ತಂಡದ ವಿಶ್ವಾಸ ಹೆಚ್ಚಿಸಿದ್ದಾರೆ. ಶಮಿ ಅವರ ಬಲ ಕಳೆದುಕೊಂಡರೂ ಸಿರಾಜ್, ರಬಾಡ, ರಶೀದ್ ಖಾನ್ ಅವರನ್ನು ಹೊಂದಿದ್ದು ವಿಶ್ವಾಸದಲ್ಲಿದೆ.

### ಹೈದರಾಬಾದ್

ಪ್ಯಾಟ್ ಕಮ್ಮಿನ್ಸ್ ತಂಡದಲ್ಲಿಲ್ಲ. ಇಶಾನ್ ಕಿಶನ್ ತಾತ್ಕಾಲಿಕ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ಹೆಡ್, ಕಿಶನ್, ಅಭಿಷೇಕ್, ಕ್ಲಾಸೆನ್, ನಿತಿಶ್‌ಕುಮಾರ್ ರೆಡ್ಡಿ ಅಂತಹ ಸ್ಫೋಟಕ ಬ್ಯಾಟಿಂಗ್ ಪಡೆ ಉಳ್ಳ ತಂಡಕ್ಕೆ ಬೌಲಿಂಗ್‌ನಲ್ಲೂ ಇಶಾನ್ ಮಾಲಿಂಗಾ, ಉನಾದಕಟ್, ಅಂತವರು ವಿಶ್ವಾಸ ಹೆಚ್ಚಿಸಿದ್ದಾರೆ.

**ಅಲಭ್ಯ:** ಪ್ಯಾಟ್ ಕಮ್ಮಿನ್ಸ್(ಕೆಲವು ಪಂದ್ಯಗಳ ಮಟ್ಟಿಗೆ ಮಾತ್ರ), ಜ್ಯಾಕ್ ಇಡ್ವಾರ್ಡ್ಸ್,



### ಕೋಲ್ಕತ್ತಾ

ಹರಾಜಿನಲ್ಲಿ ಆಯ್ಕೆ ಮಾಡಿಕೊಂಡವರು ತಂಡದಲ್ಲಿಲ್ಲ. ರಸ್ಸೆಲ್ ಅಂತಹ ಪ್ರಮುಖ ಆಟಗಾರರು ನಿವೃತ್ತರಾಗಿದ್ದಾರೆ. ಹತ್ತಾರು ಹಿನ್ನಡೆಗಳ ನಡುವೆಯೂ ದೊಡ್ಡ ದೊಡ್ಡ ಆಟಗಾರರ ಬಲದೊಂದಿಗೆ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ ಕೆಕೆಆರ್. ಅಜಿಂಕ್ಯಾ ರಹಾನೆ, ರಿಂಕು ಸಿಂಗ್, ರಘುವಂಶಿ ಅವರೊಂದಿಗೆ ಬ್ಯಾಟಿಂಗ್ ಪಡೆಯಿದ್ದರೆ, ಅವರಿಗೆ ಕ್ಯಾಮ್ರನ್ ಗ್ರೀನ್ ಬಲ ತಂದಿದ್ದಾರೆ. ಫಿನ್ ಅಲೆನ್, ಟೀಮ್ ಸೈಫರ್ಟ್ ತಂಡದಲ್ಲಿದ್ದು ಬ್ಯಾಟಿಂಗ್ ಪಡೆ ವಿಶ್ವಕಪ್‌ನಲ್ಲಿ ಮಿಂಚಿದ ಆಟಗಾರರನ್ನೇ ಹೊಂದಿದೆ. ಆದರೆ ಬೌಲಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ತಂಡವು ವೈಭವ್ ಅರೋರಾ, ಸುನಿಲ್ ನರೈನ್ ಚಕ್ರವರ್ತಿ ಅವರ ಅನುಭವದೊಂದಿಗೆ ಮಾತ್ರ ಕಣಕ್ಕಿಳಿಯಲಿದೆ.

**ಅಲಭ್ಯ:** ಹರ್ಷಿತ್ ರಾಣಾ, ಮುಸ್ತಾಫಿಝುರ್ ರೆಹಮಾನ್, ಆಕಾಶ್‌ದೀಪ್
**ಬದಲಿ:** ಸೌರಭ್ ದುಬೆ, ನವದೀಪ್ ಸೈನಿ

## ಟಿಸಿಐ ಘೋಷಣೆ | ಪ್ರತಿಭಾನ್ವಿತರಿಗೆ ತರಬೇತಿ
# ವಿಶ್ವ ಕಾರ್ ರೇಸಿಂಗ್‌ನಲ್ಲಿ ಟಿಸಿಐ ತಂಡ

**ಬೆಂಗಳೂರು:** ಹದಿನೆಂಟು ವರ್ಷಗಳ ಬಳಿಕ ಟಿಸಿಐ ರೇಸಿಂಗ್ ಮತ್ತೊಮ್ಮೆ ಜಾಗತಿಕ ವೇದಿಕೆಯಲ್ಲಿ ಮಿಂಚಲು ಸಜ್ಜಾಗಿದ್ದು, ವರ್ಲ್ಡ್ ರ್‍ಯಾಲಿ ಚಾಂಪಿಯನ್‌ಶಿಪ್‌ನಲ್ಲಿ ಈ ಬಾರಿ ಭಾರತದ ಅತ್ಯುತ್ತಮ ಯುವ ರ್‍ಯಾಲಿ ಪ್ರತಿಭೆಗಳನ್ನು ಡಬ್ಲ್ಯುಆರ್‌ಸಿಯಲ್ಲಿ ಟಿಸಿಐ ಕಣಕ್ಕಿಳಿಸಲಿದೆ.

2025ನೇ ಸಾಲಿನ ಐಎನ್‌ಆರ್‌ಸಿ ಡಬಲ್ ಚಾಂಪಿಯನ್ ಡೀನ್ ಮಸ್ಕರೇನಸ್ ಮತ್ತು ಕೋ-ಡ್ರೈವರ್ ಗಗನ್ ಕರುಂಬಯ್ಯ ಅವರು ಏಪ್ರಿಲ್‌ನಲ್ಲಿ ನಡೆಯಲಿರುವ ರ್‍ಯಾಲಿ ಇಸ್ಲಾಸ್ ಕ್ಯಾನಾರಿಯಾಸ್ ಚಾಂಪಿಯನ್‌ಶಿಪ್‌ನ ಡಬ್ಲ್ಯುಆರ್‌ಸಿ 3 ಕ್ಲಾಸ್ ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆಂದು ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು. ಬೆಂಗಳೂರು ಮೂಲದ ತಂಡವು ರೇಸಿಂಗ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ಕರ್ನಾಟಕಕ್ಕೆ ಮಾತ್ರವಲ್ಲ, ಭಾರತೀಯ ಮೋಟರ್‌ಸ್ಪೋರ್ಟ್‌ಗೆ ಹೆಮ್ಮೆಯ ವಿಷಯವಾಗಿದೆ. ಜಾಗತಿಕ ವೇದಿಕೆಯಲ್ಲಿ ಭಾರತದ ನರೇನ್ ಕುಮಾರ್ ಮತ್ತು ಗೌರವ್ ಗಿಲ್ ಬಳಿಕ ಟಿಸಿಐ ರೇಸಿಂಗ್ ಧ್ವಜವನ್ನು ಹಾರಿಸುತ್ತಿರುವ ಮೂರನೇ ರೇಸ್ ಕಾರ್ ಚಾಲಕನಾಗಿ ಡೀನ್ ಮಸ್ಕರೇನಸ್ ಹೊರಹೊಮ್ಮಲಿದ್ದಾರೆ. ಈ ಚಾಂಪಿಯನ್‌ಶಿಪ್‌ಗಾಗಿ ಯುರೋಪ್‌ನ ಅತ್ಯಂತ ಪ್ರತಿಷ್ಠಿತ ರ್‍ಯಾಲಿ ಸ್ಪೆಷಲಿಸ್ಟ್ ಸಂಸ್ಥೆಯಾಗಿರುವ ಪಿಎಚ್ ಸ್ಪೋರ್ಟ್ ಸಂಸ್ಥೆಯ ಜೊತೆ ಟಿಎಸ್‌ಐ ರೇಸಿಂಗ್ ಪಾಲುದಾರಿಕೆ ಮಾಡಿಕೊಂಡಿದೆ. ಡೀನ್ ಮತ್ತು ಮತ್ತು ಗಗನ್ ಅವರು ಫೋರ್ಡ್ ಫಿಯೆಸ್ಟಾ ರ್‍ಯಾಲಿ 3 ಕಾರನ್ನು ಡಬ್ಲ್ಯುಆರ್‌ಸಿಯಲ್ಲಿ ಓಡಿಸಲಿದ್ದಾರೆ.

**ನಾವು ಸನ್ನದ್ಧ:** ಟಿಸಿಐ ರೇಸಿಂಗ್ ಜೊತೆ ಕೈಜೋಡಿಸಿರುವ ಸಿದ್ವಿನ್ ಎನರ್ಜಿ ಎಂಜಿನಿಯರಿಂಗ್‌ನ ಚೇರ್ಮನ್ ಮೋಹನ್ ನಾಗರಾಜನ್ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾತನಾಡಿ, ನಾವು ಟಿಸಿಐ ರೇಸಿಂಗ್ ತಂಡವನ್ನು ಕೇವಲ ಸ್ಪರ್ಧೆಯಲ್ಲಿ ಗೆಲ್ಲುವುದಕ್ಕಾಗಿ ಕಟ್ಟಿಲ್ಲ. ಈವರೆಗೆ ಭಾಗವಹಿಸಿದ ಪ್ರತಿ ಸ್ಪರ್ಧೆ, ಪ್ರತಿ ಸೀಸನ್, ನಮ್ಮೊಂದಿಗಿದ್ದ ಪ್ರತಿ ಡ್ರೈವರ್ ಕೂಡ ನಮ್ಮ ತಂಡ ಇಲ್ಲಿಯವರೆಗೆ ಬರುವುದಕ್ಕೆ ಕೊಡುಗೆ ನೀಡಿದ್ದಾರೆ. ಡೀನ್ ಮತ್ತು ಗಗನ್ ಇದೀಗ ಡಬ್ಲ್ಯುಆರ್‌ಸಿಗೆ ಸಿದ್ಧರಾಗಿದ್ದಾರೆ. ಜಗತ್ತನ್ನು ಎದುರಿಸಲು ನಾವು ಸನ್ನದ್ಧರಾಗಿದ್ದೇವೆ ಎಂದು ಹೇಳಿದರು.

### ಟಿಎಸ್‌ಐ-ಪಿಎಚ್ ಸಹಭಾಗಿತ್ವ

ಡಬ್ಲ್ಯುಆರ್‌ಸಿ ಸ್ಪರ್ಧೆಗಾಗಿ ಟಿಸಿಐ ರೇಸಿಂಗ್ ತಂಡವು ಪಿಎಚ್ ಸ್ಪೋರ್ಟ್ ಜೊತೆಗೆ ಒಪ್ಪಂದ ಮಾಡಿಕೊಂಡಿದೆ. ಯುರೋಪ್ ಮೂಲದ ಪಿಎಚ್ ಸ್ಪೋರ್ಟ್ ಸಂಸ್ಥೆಯು ಮೋಟರ್ ಕಾರ್ ರ್‍ಯಾಲಿಗೆ ಕಾರುಗಳನ್ನು ಸಿದ್ಧಪಡಿಸುವ ವಿಷಯದಲ್ಲಿ ಜಗತ್ತಿಗೇ ಹೆಸರುವಾಸಿಯಾಗಿದೆ. ಸೆಬಾಸ್ಟಿಯನ್ ಲಿಯೋಬ್, ಸೆಬಾಸ್ಟಿಯನ್ ಓಜಿಯೆರ್, ಡ್ಯಾನಿ ಸೋರ್ಡೋ, ಥಿಯೆರಿ ನ್ಯೂವಿಲ್ಲೆ ಹಾಗೂ ಕಿಮಿ ರೈಕ್ಕೋನೆನ್‌ರಂತಹ ದಿಗ್ಗಜ ರೇಸರ್‌ಗಳಿಗೆ ಈ ಸಂಸ್ಥೆಯು ಕಾರುಗಳನ್ನು ಸಿದ್ಧಪಡಿಸಿಕೊಟ್ಟಿದೆ.

# ಐಐಎಸ್‌ನೊಂದಿಗೆ ಎಂ ರಿಸೋರ್ಸಸ್ ಸಹಭಾಗಿತ್ವ

**ಬೆಂಗಳೂರು:** ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ ತನ್ನ ಸ್ಕ್ವಾಷ್ ಎಕ್ಸಲೆನ್ಸ್ ಕಾರ್ಯಕ್ರಮಕ್ಕೆ ಜಾಗತಿಕ ಸಹಭಾಗಿ ಎಂ ರಿಸೋರ್ಸಸ್ ಜೊತೆ ಪಾಲುದಾರಿಕೆಯನ್ನು ಘೋಷಿಸಿದೆ. 2028ರ ಒಲಿಂಪಿಕ್ಸ್‌ನಲ್ಲಿ ಸ್ಕ್ವಾಷ್ ಪ್ರವೇಶದ ಹಿನ್ನೆಲೆಯಲ್ಲಿ ಭಾರತದ ಪ್ರತಿಭಾವಂತ ಆಟಗಾರರನ್ನು ತಯಾರಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಸ್ಕ್ವಾಷ್ ಎಕ್ಸಲೆನ್ಸ್ ಕಾರ್ಯಕ್ರಮವು ಉದಯೋನ್ಮುಖ ಕ್ರೀಡೆಗಳಿಗೆ ಬೆಂಬಲ ನೀಡುವ ಐಐಎಸ್‌ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದೆ. ಜಾಗತಿಕ ಮಟ್ಟದಲ್ಲಿ ಸ್ಕ್ವಾಶ್‌ಗೆ ಹೆಚ್ಚುತ್ತಿರುವ ಮಹತ್ವ ಹಾಗೂ ಒಲಿಂಪಿಕ್ಸ್‌ನಲ್ಲಿ ಅದರ ಸೇರ್ಪಡೆ ಹಿನ್ನೆಲೆಯಲ್ಲಿ ಈ ಹೆಜ್ಜೆ ಮಹತ್ವದ್ದಾಗಿದೆ ಎಂದು ಸಂಸ್ಥೆ ತಿಳಿಸಿದೆ. ಐಐಎಸ್ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಸ್ಥಾಪಕ ಪಾರ್ಥ್ ಜಿಂದಾಲ್ ಅವರು, ನಮ್ಮ ಆಟಗಾರರಿಗೆ ವಿಶ್ವಮಟ್ಟದ ಅವಕಾಶಗಳನ್ನು ನೀಡುವುದು ನಮ್ಮ ಉದ್ದೇಶ. ಏಷ್ಯನ್ ಗೇಮ್ಸ್ ಮತ್ತು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ದೃಷ್ಟಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅನಾಹತ್ ಸಿಂಗ್ ಸೇರಿದಂತೆ ಹಲವು ಯುವ ಆಟಗಾರರು ವಿಶ್ವದ ಟಾಪ್ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಎಂ ರಿಸೋರ್ಸಸ್‌ನ ಸಹಕಾರದಿಂದ ದೊಡ್ಡ ಟೂರ್ನಿ ಆಯೋಜಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

# ಕ್ರೀಡಾಂಗಣ ಆವರಣದಲ್ಲಿ ಮೃತರ ಸ್ಮಾರಕ!




**ಬೆಂಗಳೂರು:** ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಪ್ರಾಣ ಕಳೆದುಕೊಂಡ 11 ಜನ ಆರ್‌ಸಿಬಿ ಅಭಿಮಾನಿಗಳ ಸ್ಮರಣಾರ್ಥವಾಗಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಹೊರ ಆವರಣದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ 11 ಜನರ ಸ್ಮಾರಕ ನಿರ್ಮಿಸಿದೆ. ಮೈದಾನದ ಹಳೆಯ ಎನ್‌ಸಿಎ ಬಳಿ ಈ ಸ್ಮಾರಕ ನಿರ್ಮಿಸಲಾಗಿದ್ದು, ಬುಧವಾರದಂದು ವಿವಿಧ ಧಾರ್ಮಿಕ ಚಟುವಟಿಕೆಗಳ ನಂತರ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಅನಾವರಣಗೊಳಿಸಿದರು. ಇದಲ್ಲದೆ, ಕ್ರೀಡಾಂಗಣದ ಸುರಕ್ಷತಾ ಮತ್ತು ತಯಾರಿ ಬಗ್ಗೆ ಮಾಹಿತಿ ಪಡೆದುಕೊಂಡು ಸಭೆ ನಡೆಸಿದರು. ಸುಮಾರು 8 ತಿಂಗಳ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುತ್ತಿದೆ. ಎರಡು ದಿನಗಳು ಬಾಕಿ ಇದ್ದಂತೆ ಕ್ರೀಡಾಂಗಣದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲೆಲ್ಲೂ ಕ್ರಿಕೆಟ್ ಕಳೆ ಮೂಡಿತ್ತು. ಕ್ರೀಡಾಂಗಣದ ತೀರಾ ಒಳಗಡೆ ಪಿಚ್ ಸಜ್ಜುಗೊಳ್ಳುತ್ತಿತ್ತು. ಗೇಟುಗಳ ನವೀಕರಣ ಕಾಣಿಸಿಕೊಳ್ಳುತ್ತಿತ್ತು. ಇದಲ್ಲದೆ, ಮೈದಾನದ ಹೊರಗೆ ಸಂಪೂರ್ಣವಾಗಿ ಹೊಸ ಪದ್ಧತಿ, ಎಲ್ಲೆಲ್ಲೂ ಅಭಿಮಾನಿಗಳಿಗಾಗಿ ಬ್ಯಾರಿಕೇಡ್ ಸೇರಿದಂತೆ ಅಭಿಮಾನಿಗಳಿಗೆ ಹೊಸ ಪ್ಲಾನ್ ಕುರಿತ ಮಾಹಿತಿ ನೀಡುವ ಬೋರ್ಡ್‌ಗಳಿದ್ದವು.

**ಸ್ಮಾರಕ ನಿರ್ಮಾಣ:** ಮಂಗಳವಾರದಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 11 ಮೃತ ಅಭಿಮಾನಿಗಳಿಗಾಗಿ ವಿಶೇಷ ನಿರ್ಧಾರಗಳನ್ನು ತೆಗೆದುಕೊಂಡಿತ್ತು. ಇದೀಗ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಕೂಡ 11 ಅಭಿಮಾನಿಗಳ ಸ್ಮರಣಾರ್ಥವಾಗಿ ಕ್ರೀಡಾಂಗಣದ ಮುಂಭಾಗದಲ್ಲಿ ಸ್ಮಾರಕ ಕಟ್ಟಿಸಿದೆ. ಬುಧವಾರದಂದು ಪ್ರತಿಯೊಂದು ಧರ್ಮದ ಗುರುಗಳು ಶಾಂತಿ ಮಾಡಿದ ನಂತರ ರಾಜ್ಯ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಸ್ಮಾರಕ ಅನಾವರಣ ಮಾಡಿದರು.

### 11 ಆಸನ ಎಂದೆಂದಿಗೂ ಖಾಲಿ: ವೆಂಕಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಎಲ್ಲಾ ಆರ್‌ಸಿಬಿ ಪಂದ್ಯಗಳಲ್ಲಿ 11 ಅಭಿಮಾನಿಗಳ ನೆನಪಿಗಾಗಿ 11 ಆಸನಗಳನ್ನು ಖಾಲಿ ಬಿಡುವುದಾಗಿ ಬೆಂಗಳೂರು ಫ್ರಾಂಚೈಸಿ ನಿರ್ಧರಿಸಿತ್ತು. ಈಗ ಕೆಎಸ್‌ಸಿಎ ಕೂಡ ಇಂಥದ್ದೇ ನಿರ್ಧಾರ ಕೈಗೊಂಡಿದ್ದು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಯಾವುದೇ ಅಂತಾರಾಷ್ಟ್ರೀಯ, ದೇಶೀಯ ಹಾಗೂ ರಾಜ್ಯ ಕ್ರಿಕೆಟ್ ವೇಳೆ ಕೂಡ 11 ಆಸನಗಳು ಖಾಲಿ ಬಿಡಲಾಗುವುದು ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಘೋಷಿಸಿದ್ದಾರೆ.

### ಎಲ್ಲಾ ಧರ್ಮದ ಪದ್ಧತಿಯಲ್ಲಿ ಶಾಂತಿ

ಮೈದಾನದ ಹೊರಗಡೆ ನಿರ್ಮಿಸಲಾಗಿರುವ ಸ್ಮಾರಕ ಉದ್ಘಾಟನೆಗೂ ಮುನ್ನ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ್ ಸಂಪ್ರದಾಯದಲ್ಲಿ ಶಾಂತಿ ಮಾಡಿಸಲಾಯಿತು. ವೆಂಕಟೇಶ್ ಪ್ರಸಾದ್ ಮತ್ತು ಕೆಎಸ್‌ಸಿಎದ ಪ್ರಮುಖ ಸದಸ್ಯರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಿತು. ಅರ್ಚಕರು, ಮೌಲ್ವಿಗಳು, ಸಿಖ್ ಗುರುಗಳು ಮತ್ತು ಚರ್ಚ್‌ನ ಫಾದರ್ ಕೂಡ ಈ ವೇಳೆ ಇದ್ದರು. ಇದಕ್ಕೂ ಮುನ್ನವೇ ಮೈದಾನದ ಕಚೇರಿಯ ಎದುರಿಗೆ ಗಣಹೋಮ ಕೂಡ ಮಾಡಲಾಗಿದೆ.

- ಪ್ರಾಣ ಕಳೆದುಕೊಂಡವರ ಸ್ಮರಣಾರ್ಥವಾಗಿ ನಿರ್ಮಾಣ
- ಭದ್ರತಾ ಕ್ರಮಗಳ ಕುರಿತು ಮಾಹಿತಿ ಪಡೆದ ಸಚಿವ

## ಏಷ್ಯಾ ಕಪ್ ವರ್ಲ್ಡ್ ರ್‍ಯಾಂಕಿಂಗ್ ಟೂರ್ನಿ | ಮಿಂಚಿದ ಭಾರತೀಯರು
# ಆರ್ಚರಿ ಭಾರತಕ್ಕೆ 2 ಕಂಚು, ಇನ್ನೂ 2 ಪದಕ ಖಚಿತ

**ಹೊಸದಿಲ್ಲಿ:** ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಆರ್ಚರಿ ಏಷ್ಯಾ ಕಪ್ ವರ್ಲ್ಡ್ ರ್‍ಯಾಂಕಿಂಗ್ ಟೂರ್ನಿ ಮೊದಲ ಹಂತದ ಎರಡನೇ ದಿನ ಭಾರತ ಭರ್ಜರಿ ಪ್ರದರ್ಶನ ನೀಡಿದ್ದು, ಎರಡು ಕಂಚಿನ ಪದಕಗಳನ್ನು ಗೆದ್ದು, ಎರಡು ವಿಭಾಗಗಳ ಫೈನಲ್‌ಗೆ ಪ್ರವೇಶಿಸಿದೆ.

ಮಹಿಳಾ ಕಾಂಪೌಂಡ್ ತಂಡ ಫೈನಲ್‌ಗೆ ಪ್ರವೇಶಿಸುವ ಮೂಲಕ ಕಳೆದ ಆವೃತ್ತಿಯ ಕಂಚಿನ ಸಾಧನೆಯನ್ನು ಮತ್ತಷ್ಟು ಉತ್ತಮಗೊಳಿಸಿದೆ. ಚಿಕಿತಾ ತನಿಪಾರ್ಥಿ, ರಾಜ್ ಕೌರ್ ಮತ್ತು ತೇಜಲ್ ಸಾಳ್ವೆ ತ್ರಯ ಥೈಲ್ಯಾಂಡ್ ತಂಡವನ್ನು 229-226 ಅಂತರದಲ್ಲಿ ಸೋಲಿಸಿ ಕಝಾಕಿಸ್ತಾನ್ ವಿರುದ್ಧ ಅಂತಿಮ ಪಂದ್ಯಕ್ಕೆ ಪ್ರವೇಶಿಸಿತು.

ಪುರುಷರ ಕಾಂಪೌಂಡ್ ವಿಭಾಗದಲ್ಲಿ ಸ್ವಲ್ಪ ನಿರಾಸೆ ಎದುರಾಯಿತು. ಅರ್ಹತಾ ಸುತ್ತಿನಲ್ಲಿ ಅಗ್ರ ನಾಲ್ಕು ಸ್ಥಾನಗಳನ್ನು ಭಾರತ ಕಬಳಿಸಿದ್ದರೂ, ಸೆಮಿಫೈನಲ್‌ನಲ್ಲಿ ವಿಯೆಟ್ನಾಂ ವಿರುದ್ಧ 233-234 ಅಂತರದಲ್ಲಿ ಸೋತು ಪ್ರಶಸ್ತಿ ರಕ್ಷಣೆ ವಿಫಲವಾಯಿತು. ರಾಜತ್ ಚೌಹಾಣ್, ರಿಷಭ್ ಯಾದವ್ ಮತ್ತು ಉದಯ್ ಕಾಂಬೋಜ್ ಉತ್ತಮ ಆರಂಭ ಪಡೆದರೂ ನಂತರ ಮುನ್ನಡೆಯನ್ನು ಕಳೆದುಕೊಂಡರು.




ಆದರೆ ಕಂಚಿನ ಪದಕ ಪಂದ್ಯದಲ್ಲಿ ಭೂತಾನ್ ವಿರುದ್ಧ 234-232 ಅಂತರದಲ್ಲಿ ಜಯ ಸಾಧಿಸಿ ಮೂರನೇ ಸ್ಥಾನ ಪಡೆದರು.

**ರಿಕರ್ವ್ ವಿಭಾಗದಲ್ಲಿ:** ರಿಕರ್ವ್ ವಿಭಾಗದಲ್ಲಿ ಭಾರತ ಪುರುಷರ ತಂಡ ಮಲೇಷಿಯಾ ವಿರುದ್ಧ 5-1 ಅಂತರದಲ್ಲಿ ಗೆದ್ದು ಫೈನಲ್‌ಗೆ ಪ್ರವೇಶಿಸಿದೆ. ದೇವಾಂಗ್ ಗುಪ್ತಾ, ಸುಖ್‌ಚೈನ್ ಸಿಂಗ್ ಮತ್ತು ಜುಯೆಲ್ ಸರ್ಕಾರ್ ತ್ರಯ ಯಾವುದೇ ಸೆಟ್ ಕಳೆದುಕೊಳ್ಳದೆ ಸುಲಭವಾಗಿ ಜಯ ಸಾಧಿಸಿತು. ಫೈನಲ್‌ನಲ್ಲಿ ಕಝಾಕಿಸ್ತಾನ್ ಎದುರಾಗಲಿದೆ. ಇದೇ ವೇಳೆ ಮಹಿಳಾ ರಿಕರ್ವ್ ತಂಡವೂ ಕಂಚಿನ ಪದಕ ಜಯಿಸಿದೆ. ರೂಮಾ ಬಿಸ್ವಾಸ್, ಕೀರ್ತಿ ಮತ್ತು ರಿಧಿ ಫೋರ್ ತ್ರಯ ಮಲೇಶಿಯಾ ವಿರುದ್ಧ 5-1 ಅಂತರದಲ್ಲಿ ಗೆದ್ದು ಮೂರನೇ ಸ್ಥಾನ ಪಡೆದಿದೆ. ಒಟ್ಟಿನಲ್ಲಿ ಭಾರತ ಎರಡು ಕಂಚಿನ ಪದಕಗಳೊಂದಿಗೆ, ಇನ್ನೂ ಎರಡು ವಿಭಾಗಗಳಲ್ಲಿ ಚಿನ್ನದ ಅವಕಾಶವನ್ನು ಜೀವಂತವಾಗಿರಿಸಿದೆ.

## ಪದಬಂಧ

ರಾಜಾ ಸಂಗಮೇಶ ಹಿರೇಮಠ



**5934**

**5933 ಉತ್ತರ**

**ಎಡದಿಂದ ಬಲಕ್ಕೆ:**
1.ಶಿಕಳಾರ 3.ಗಜಾನನ
5.ಕಮಲಾಕರ 6.ತಮ
8.ಬಂಧು 9.ಮೂಸು
12.ರವಿ 14.ಲೋಕಾಭಿರಾಮ
15.ನಳಪಾಕ 16.ತಮೋಹರ

**ಮೇಲಿನಿಂದ ಕೆಳಕ್ಕೆ:**
1.ಪಿತ್ರಾರ್ಜಿತ 2.ರಸಮಯ
3.ಗಜಕರ್ಣ 4.ನವವಧು
7.ಮನಸು 8.ಬಂಗಾರ
9.ಮೂಲಮಾನ 10.ಸಕಾಲಿಕ
11.ವಿರಾಜಿತ 12.ವಿದ್ಯಾಧರ

**ಎಡದಿಂದ ಬಲಕ್ಕೆ**
2.ಮನೆಯ ಹಿರಿತನದ ಪಟ್ಟ (5)
4. ನಡೆಸುತ್ತಿರುವ ಜೀವನ (2)
5.ಆ ವಲಯದಲ್ಲಿ ಕಂಡ ನ್ಯಾಯವಾದಿ (3)
6.ಮನೋಹರವಾಗಿ ಚಲಿಸುವ ಹಕ್ಕಿ-ಹಂಸ (4)
8. ಇದು ಮಾಲಿಕತ್ವದ ಅಧಿಕಾರ (2)
9. ವಾಸಸ್ಥಳವಿದು (2)
14. ಆರೋಪ ಮಾಡದೆ ಕಾರ್ಯಕ್ರಮ ಮುಕ್ತಾಯಗೊಳಿಸುವುದು (4)
16. ಕೂದಲು ನಿಮಿರುವಂತಹ ವಿಸ್ಮಯ (3)
17.ದೇಹದ ನಿರ್ದಿಷ್ಟ ಕಾರ್ಯ ನಿರ್ಧರಿಸುವ ಭಾಗ (2)
18. ನಡವಳಿಕೆಯನ್ನು ಕೆಡಿಸಿಕೊಳ್ಳು (5)

**ಮೇಲಿನಿಂದ ಕೆಳಕ್ಕೆ**
1.ನಳಿಕೆ ಒಳಗೊಂಡ ವರ್ತನೆ (5)
3.ಲಕ್ಷ್ಮಿಯ ಒಡೆಯ-ವಿಷ್ಣು (3)
4.ಮಕ್ಕಳಿಗೆ ಕಾಟ ಕೊಡುವ ಆಕಾಶಕಾಯ (4)
6.ಮುಖದಲ್ಲಿ ಆನಂದ ವ್ಯಕ್ತಪಡಿಸುವ ಕ್ರಿಯೆ (2)
7.ಭತ್ತದ ಕಾಳು ತಲೆಕೆಳಗಾಗಿದೆ (2)
10.ಇದು ಮೂರ್ಛೆ ಬರುವ ಕಾಯಿಲೆ (4)
11.ಹಳೆಯದನ್ನು ಹೊಸತು ಮಾಡುವದು (5)
12.ನಾಶ ಮಾಡುವುದು-ಹಾಳು ಮಾಡುವಿಕೆ (2)
13.ಭೌತಿಕವಾದ ಬಿಸಿ-ಮಾನಸಿಕ ಸಂಕಟ (2)
15.ಅಧಿಕೃತವಾಗಿ ಗುರುತಿಸಿ ಗೌರವಿಸುವುದು (3)

ಕಿರುಸುದ್ದಿ

## ಕಾರು ಡಿಕ್ಕಿ ಹೊಡೆದು ಸ್ಕೂಟರ್ ಸವಾರ ಮೃತ್ಯು

**ಕಾಸರಗೋಡು:** ಕಾಸರಗೋಡು – ಹೊಸದುರ್ಗ ರಾಜ್ಯ ಹೆದ್ದಾರಿ ಚೇಟುಕುಂಡ್‌ನಲ್ಲಿ ಕಾರು ಡಿಕ್ಕಿ ಹೊಡೆದು ಸ್ಕೂಟರ್ ಸವಾರ ಸಾವನ್ನಪ್ಪಿದ ಘಟನೆ ನಡೆದಿದೆ. ಚಿತ್ತಾರಿ ಕಡಪ್ಪುರದ ಕೆ.ವಿ.ಬಾಲಕೃಷ್ಣನ್ (58) ಸಾವನ್ನಪ್ಪಿದವರು. ಅವರು ಚೇಟುಕುಂಡ್‌ನಲ್ಲಿ ಕಾರ್ಯಾಚರಿಸುತ್ತಿರುವ ಹೊಟೇಲ್‌ನ ಪಾಲುದಾರರಾಗಿದ್ದರು. ಹೊಟೇಲ್‌ನಿಂದ ಆಹಾರ ಪೊಟ್ಟಣಗಳನ್ನು ವಿತರಿಸಲೆಂದು ಬಾಲಕೃಷ್ಣನ್ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ದಾರಿಮಧ್ಯೆ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತು. ಗಂಭೀರ ಗಾಯಗೊಂಡ ಬಾಲಕೃಷ್ಣನ್‌ರನ್ನು ಆಸ್ಪತ್ರೆಗೆ ಸಾಗಿಸಿದರೂ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲ.

## ಮನೆಗೆ ನುಗ್ಗಿ ಕಳವುಗೈದ ಇಬ್ಬರು ಆರೋಪಿಗಳ ಸೆರೆ

**ಕಾಸರಗೋಡು:** ಬೀಗ ಒಡೆದು ಮನೆಯೊಳಗೆ ನುಗ್ಗಿ ಭಾರೀ ಮೌಲ್ಯದ ಸಾಮಗ್ರಿಗಳನ್ನು ಕಳವುಗೈದ ಪ್ರಕರಣದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಪಾಲಕ್ಕಾಡ್ ನೈಮಾರ ನಿವಾಸಿ ಶೆಟ್ಟರ್ ಜಲೀಲ್ (38) ಮತ್ತು ಮಂಗಲಾಡಂ ನಿವಾಸಿ ವಿಶ್ವನಾಥನ್ (35) ಬಂಧಿತ ಆರೋಪಿಗಳು. ಕಳೆದ ಡಿಸೆಂಬರ್ 26ರಂದು ಆಂಬಲತ್ತರಕ್ಕೆ ಸಮೀಪದ ಮುಟ್ಟಿಚರಲಿಯ ಮನೆಯೊಂದರ ಬೀಗ ಒಡೆದು ಒಳನುಗ್ಗಿ ಲ್ಯಾಪ್‌ಟಾಪ್, ಕ್ಯಾಮರಾ ಸಹಿತ ಒಂದು ಲಕ್ಷ ರೂ. ಮೌಲ್ಯದ ಸಾಮಗ್ರಿಗಳನ್ನು ಕಳವುಗೈದ ಪ್ರಕರಣಕ್ಕೆ ಸಂಬಂಧಿಸಿ ಈ ಇಬ್ಬರು ಆರೋಪಿಗಳನ್ನು ಆಂಬಲತ್ತರ ಪೊಲೀಸರು ಬಂಧಿಸಿದ್ದಾರೆ. ಬೈಕ್‌ನಲ್ಲಿ ಬಂದು ಬೀಗ ಜಡಿದ ಮನೆಗಳನ್ನು ಮೊದಲು ಗುರುತಿಸಿ ಬಳಿಕ ರಾತ್ರಿ ವೇಳೆ ಅಂತಹ ಮನೆಗಳಿಗೆ ನುಗ್ಗಿ ಕಳವುಗೈಯ್ಯುತ್ತಿರುವುದು ಬಂಧಿತ ಆರೋಪಿಗಳ ಕಳವು ರೀತಿಯಾಗಿದೆ. ಬಂಧಿತರು ಕುಖ್ಯಾತ ಕಳವು ಆರೋಪಿಗಳಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ದರ್ಗಾದ ಹೊರಭಾಗದಲ್ಲಿರುವ ಗೋರಿಯನ್ನು ಅಗೆದ ಅಸ್ವಸ್ಥ

**ಸುಳ್ಯ:** ಜಾಲ್ಸೂರು ಮಾಪಳಡ್ಕ ದರ್ಗಾದ ಹೊರಭಾಗದಲ್ಲಿರುವ ಗೋರಿಯನ್ನು ಅನಾಮಿಕನೋರ್ವ ರಾತ್ರಿ ವೇಳೆ ಬಂದು ಅಗೆದು ಹಾಕಿದ್ದು, ಆತನನ್ನು ಪೊಲೀಸರ ವಶಕ್ಕೆ ಒಪ್ಪಿಸಲಾದ ಘಟನೆ ಮಂಗಳವಾರ ರಾತ್ರಿ ನಡೆದಿದೆ. ಕೃತ್ಯವೆಸಗಿದ ವ್ಯಕ್ತಿ ಕಾಸರಗೋಡು ಜಿಲ್ಲೆಯ ಪರಪ್ಪೆ ನಿವಾಸಿ ಎಂದು ತಿಳಿದು ಬಂದಿದೆ. ಆತ ಮಾನಸಿಕ ಅಸ್ವಸ್ಥತೆಯಿಂದ ಈ ಕೃತ್ಯ ಮಾಡಿರುವುದಾಗಿದೆ ಶಂಕಿಸಲಾಗಿದೆ. ಕೃತ್ಯ ಎಸಗಿದ ವ್ಯಕ್ತಿ ರಾತ್ರಿ 9ರ ವೇಳೆಗೆ ಬಂದಿದ್ದಾನೆ ಎನ್ನಲಾಗಿದೆ. ತಡರಾತ್ರಿ ದರ್ಗಾ ಬಳಿಯಿಂದ ಶಬ್ದ ಕೇಳಿ ಅಲ್ಲೇ ಪಕ್ಕದಲ್ಲಿದ್ದ ಸಂಸ್ಥೆಯ ಅಡುಗೆ ಸಿಬ್ಬಂದಿ ಮತ್ತು ಇತರರು ಬಂದು ಹೊರಗಡೆ ನೋಡಿದಾಗ ಈತ ಹಾರೆ ಮತ್ತು ಪಿಕ್ಕಾಸಿನಿಂದ ಗೋರಿಯನ್ನು ಒಡೆಯುತ್ತಿರುವುದು ಕಂಡು ಬಂದಿದೆ. ಕೂಡಲೇ ಅವರು ಸಂಸ್ಥೆಯ ಅಧ್ಯಕ್ಷರಿಗೆ, ಇತರರಿಗೆ ಮಾಹಿತಿ ನೀಡಿದ್ದಾರೆ. ಅವರು ಸುಳ್ಯ ಪೊಲೀಸರಿಗೆ ಮಾಹಿತಿ ನೀಡಿದ್ದು ಪೊಲೀಸರು ಸ್ಥಳಕ್ಕೆ ಆಗಮಿಸಿ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ. ಗೋರಿಯನ್ನು ಅಗೆಯುವ ಸಂದರ್ಭದಲ್ಲಿ ಆ ವ್ಯಕ್ತಿ ಇದು ನಮ್ಮ ಅಜ್ಜನ ಗೋರಿಯಾಗಿದೆ ಎಂದು ಹೇಳುತ್ತಿದ್ದ ಎನ್ನಲಾಗಿದೆ. ಇದೀಗ ಆ ವ್ಯಕ್ತಿಯನ್ನು ಮಂಗಳೂರಿನ ಕಂಕನಾಡಿ ಆಸ್ಪತ್ರೆಯಲ್ಲಿ ದಾಖಲಿಸಿರುವುದಾಗಿ ತಿಳಿದು ಬಂದಿದೆ. ಈ ಕುರಿತು ಯಾವುದೇ ದೂರುಗಳು ದಾಖಲಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿದೆ.

## ಪೊಲೀಸ್ ಕರ್ತವ್ಯಕ್ಕೆ ಅಡ್ಡಿ: ಐವರ ವಿರುದ್ಧ ದೂರು ದಾಖಲು

**ಸುಳ್ಯ:** ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿದ್ದ ಐವರು ಕಲ್ಲುಗುಂಡಿ ಹೊರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಎಸ್‌ಐ ಚಂದ್ರಶೇಖರ್ ಅವರ ಕರ್ತವ್ಯಕ್ಕೆ ಅಡ್ಡಿ ಮಾಡಿರುವ ಆರೋಪದಡಿ ಸುಳ್ಯ ಪೊಲೀಸ್ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಾಗಿದೆ. ಮಂಗಳವಾರ ರಾತ್ರಿ ಸುಮಾರು 12 ಗಂಟೆಗೆ ಸಂಪಾಜೆ ಗ್ರಾಮದ ಕಡೆಪಾಲದ ಹನೀಫ್ ಎಂಬುವರ ಹೊಸ ಮನೆಯ ಕಟ್ಟಡ ನಿರ್ಮಾಣದ ಬಗ್ಗೆ ಅಕ್ರಮವಾಗಿ ಮರಳು ಸಂಗ್ರಹಿಸಿರುವ ಮಾಹಿತಿ ತಿಳಿದು ಎಎಸ್‌ಐ ಚಂದ್ರಶೇಖರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮರಳು ಸಾಗಾಣಿಕೆಯ ಅನುಮತಿ ಪತ್ರವನ್ನು ತೋರಿಸುವಂತೆ ಕೇಳಿಕೊಂಡಿದ್ದರು. ಈ ವೇಳೆ ಈಚರ್ ವಾಹನದಲ್ಲಿ ಮರಳು ತಂದಿದ್ದ ಅದರ ಚಾಲಕ ವಿಜಯೇಂದ್ರ ಎಂಬಾತ ಪರವಾನಿಗೆ ಇಲ್ಲ ಎಂದು ಹೇಳಿದ್ದು, ಈ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ಹನೀಫ್, ಮುನೀರ್, ಸಲೀಂ ಮಾಲಿಕ್ ಎಂಬವರು ಮರಳನ್ನು ಡಂಪ್ ಮಾಡುವಂತೆ ವಿಜಯೇಂದ್ರನಿಗೆ ಸೂಚಿಸಿದ್ದಾರೆ. ಎಎಸ್‌ಐಯವರ ಸೂಚನೆಯನ್ನು ಉಲ್ಲಂಘಿಸಿ ಮರಳನ್ನು ಡಂಪ್ ಮಾಡಿ ಲಾರಿಯನ್ನು ಅಲ್ಲಿಂದ ತೆಗೆದುಕೊಂಡು ಹೋಗಿದ್ದಾರೆಂದು ಅಧಿಕಾರಿ ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ಸುಳ್ಯ ಠಾಣೆಯಲ್ಲಿ ಐವರು ಆರೋಪಿಗಳಾದ ವಿಜಯೇಂದ್ರ, ಚರಣರಾಜ್ ಅಡ್ಕಬಳೆ, ಹನೀಫ್, ಮುನೀರ್, ಸಲೀಂ ಮಾಲಿಕ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

## ವಾರೆಂಟ್ ಆರೋಪಿ ಬಂಧನ

**ಉಳ್ಳಾಲ:** ಅಪರಾಧ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಉಳ್ಳಾಲ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ಉಳ್ಳಾಲ,ಬಂಡಿಕೊಟ್ಯ ನಿವಾಸಿ ಅಬ್ದುಲ್ ರಹಿಮಾನ್ ಅರ್ಫಾನ್ ಅಲಿಯಾಸ್ ಜಲ್ದಿ ಅರ್ಫಾನ್ (29) ಬಂಧಿತ ಆರೋಪಿ.ಜಲ್ದಿ ಅರ್ಫಾನ್ ವಿರುದ್ಧ ಉಳ್ಳಾಲ ಪೊಲೀಸ್ ಠಾಣೆಯಲ್ಲೇ ಎಂಟು ಪ್ರಕರಣಗಳು ದಾಖಲಾಗಿದ್ದು, ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದನೆನ್ನಲಾಗಿದೆ. ಆರೋಪಿ ಜಲ್ದಿ ಅರ್ಫಾನ್ ವಿರುದ್ಧ ನ್ಯಾಯಾಲಯವು ಜಾಮೀನು ರಹಿತ ವಾರೆಂಟ್ ಜಾರಿಗೊಳಿಸಿತ್ತು.

## ತಲೆಮರೆಸಿಕೊಂಡ ಆರೋಪಿ ಸೆರೆ

**ಮುಳ್ಳೇರಿಯ:** ತಂದೆಯನ್ನು ಕೊಲೆಗೈದ ಪ್ರಕರಣಕ್ಕೆ ಸಂಬಂಧಿಸಿ ಬಂಧಿತನಾಗಿ ನಂತರ ಜಾಮೀನಿನಲ್ಲಿ ಬಿಡುಗಡೆಗೊಂಡಿದ್ದ ಆರೋಪಿಯನ್ನು ಆದೂರು ಪೊಲೀಸರು ಬಂಧಿಸಿದ್ದಾರೆ. ಅಡೂರು ಸಮೀಪದ ಪಾಂಡಿ ವೆಳ್ಳರಿಕಯ ನಿವಾಸಿ ನರೇಂದ್ರ ಪ್ರಸಾದ್ (28) ಬಂಧಿತ ಆರೋಪಿ. 2022 ಏಪ್ರಿಲ್ 5ರಂದು ತಂದೆ ಬಾಲಕೃಷ್ಣ ನಾಯ್ಕರನ್ನು ಹೊಡೆದು ಕೊಲೆಗೈದ ಆರೋಪದಂತೆ ನರೇಂದ್ರ ಪ್ರಸಾದ್‌ನನ್ನು ಪೊಲೀಸರು ಬಂಧಿಸಿದ್ದರು. ನಂತರ ನ್ಯಾಯಾಂಗ ಬಂಧನಕ್ಕೊಳಗಾದ ಆರೋಪಿಗೆ ಆ ಬಳಿಕ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ನಂತರ ಆತ ತಲೆಮರೆಸಿಕೊಂಡಿದ್ದನೆಂದು ಪೊಲೀಸರು ತಿಳಿಸಿದ್ದಾರೆ.

### ಉಡುಪಿಯಲ್ಲಿ ವಿವಿಧ ಕೈಗಾರಿಕಾ ಸಮಿತಿಗಳ ಸಭೆ | ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ

# ಕಾಲ ಮಿಂಚಿದರೆ ಮಂಜೂರಾತಿ ರದ್ದು

**ಉಡುಪಿ:** ಕೈಗಾರಿಕೆ ಘಟಕಗಳ ಸ್ಥಾಪನೆಯೊಂದಿಗೆ ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಲು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿ, ಆಸಕ್ತ ಉದ್ಯಮಿಗಳಿಗೆ ಹಂಚಿಕೆ ಮಾಡಿದ್ದು, ಘಟಕಗಳನ್ನು ನಿಗದಿತ ಕಾಲಾವಧಿಯ ಒಳಗೆ ಯೋಜನೆಗಳನ್ನು ಪೂರ್ಣಗೊಳಿಸಬೇಕು. ತಪ್ಪಿದ್ದಲ್ಲಿ ಮಂಜೂರಾತಿಯನ್ನು ರದ್ದುಪಡಿಸಿ, ನವ ಉದ್ಯಮಿಗಳಿಗೆ ಹಂಚಿಕೆ ಮಾಡಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.

ಅವರು ಬುಧವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ, ಕೈಗಾರಿಕಾ ಸ್ಪಂದನ, ಜಿಲ್ಲಾ ಮಟ್ಟದ ರಫ್ತು ಉತ್ತೇಜನ ಸಮಿತಿ ಸಭೆ, ಪ್ರಧಾನಮಂತ್ರಿಯವರ ಉದ್ಯೋಗ ಸೃಜನ ಯೋಜನೆಯ ಡಿ.ಎಲ್.ಎಂ.ಸಿ ಸಭೆ ಹಾಗೂ ಪಿ.ಎಂ ವಿಶ್ವಕರ್ಮ ಯೋಜನೆಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಘಟಕ ಸ್ಥಾಪನೆಗೆ ಹೆಚ್ಚಿನ ಕಾಲಾವಕಾಶ ಪಡೆದಿರುವ ಘಟಕಗಳು ನಿಗದಿತ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕು. ತಪ್ಪಿದ್ದಲ್ಲಿ ಸದ್ಯಿಯವರಿಗೆ ಮಂಜೂರಾಗಿರುವ ನಿವೇಶನವನ್ನು ರದ್ದುಪಡಿಸಿ, ಹೊಸದಾಗಿ ಅರ್ಜಿ ಸಲ್ಲಿಸಿರುವ ಉದ್ಯಮಿಗಳಿಗೆ ನಿವೇಶನವನ್ನು ಹಂಚಿಕೆ ಮಾಡಲು ಕ್ರಮವಹಿಸಬೇಕು ಎಂದು ಕೆ.ಐ.ಎ.ಡಿ.ಬಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಕೈಗಾರಿಕೋದ್ಯಮಿಗಳು ಘಟಕ ಸ್ಥಾಪನೆಗೆ ಹಂಚಿಕೆಯಾದ ನಿವೇಶನಗಳಲ್ಲಿ ಉದ್ದಿಮೆ ಪ್ರಾರಂಭಿಸದೇ ಪ್ರತೀ ಸಭೆಯಲ್ಲಿಯೂ ವಿವಿಧ ನೆಪವೊಡ್ಡಿ ಹೆಚ್ಚುವರಿ ಕಾಲಾವಕಾಶ ಕೋರುತ್ತಾರೆ. ಹೆಚ್ಚುವರಿ ಕಾಲಾವಕಾಶ ಪಡೆದ ಹಾಗೂ ಚಟುವಟಿಕೆ ಬದಲಾಯಿಸಿಕೊಂಡ ಘಟಕಗಳ ಸ್ಥಿತಿ–ಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ವರದಿ ನೀಡುವಂತೆ ತಿಳಿಸಿದ ಅವರು, ಇದು ಪುನರಾವರ್ತನೆಯಾದಲ್ಲಿ ಕೈಗಾರಿಕೆ ಪ್ರಾರಂಭಿಸಲು ನಿವೇಶನ ಕೋರಿ ಅರ್ಜಿ ಸಲ್ಲಿಸುವ ಆಸಕ್ತರುಗಳಿಗೆ ನಿವೇಶನವನ್ನು ಮರು ಹಂಚಿಕೆ ಮಾಡಲು ಕ್ರಮವಹಿಸಲಾಗುವುದು ಎಂದರು.

ಹೊಸ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕೆ ಹೆಬ್ರಿ ತಾಲೂಕು ಶಿವಪುರದಲ್ಲಿ 74.84 ಎಕ್ರೆ ಹಾಗೂ ಕೆರೆಬೆಟ್ಟುವಿನಲ್ಲಿ 38.75 ಎಕ್ರೆ ಖಾಸಗಿ ಹಾಗೂ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 113.59 ಎಕ್ರೆ ಜಮೀನಿನ ಗಡಿ ಗುರುತಿಸುವ ಕಾರ್ಯವನ್ನು ಆದ್ಯತೆ ಮೇಲೆ ಕೈಗೊಳ್ಳುವಂತೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು. ಅದರಂತೆ ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಮೋಜಿಣಿ ಶಿವಮೊಗ್ಗ ಇವರು ಜಂಟಿ ಸಮೀಕ್ಷೆ ನಡೆಸಿದ್ದು, ಗಡಿ ಕಲ್ಲುಗಳನ್ನು ಅಳವಡಿಸುವ ಕಾರ್ಯವನ್ನು ಈಗಾಗಲೇ ಕೈಗೊಂಡಿದ್ದು, ವರದಿಯನ್ನು ಆದ್ಯತೆಯ ಮೇಲೆ ಶೀಘ್ರದಲ್ಲಿಯೇ ನೀಡಬೇಕೆಂದರು.

ಬ್ರಹ್ಮಾವರ ತಾಲೂಕು ಉಪ್ಪೂರಿನಲ್ಲಿ 101.1950 ಎಕ್ರೆ ಖಾಸಗಿ ಜಮೀನನ್ನು ಸಣ್ಣ ಕೈಗಾರಿಕಾ ವಸಾಹತು ಸ್ಥಾಪನೆಗೆ ಗುರುತಿಸಲಾಗಿದ್ದು, ಈ ಕುರಿತ ಪ್ರಸ್ತಾವನೆಗೆ ಸಂಬಂಧಿಸಿದಂತೆ ಬೇಡಿಕೆಯ ವಿವರಗಳನ್ನು ಸಚಿವರಿಗೆ ಸಲ್ಲಿಸಲಾಗಿದೆ. ಸರಕಾರದ ಮಟ್ಟದಲ್ಲಿ ಇದನ್ನು ಅನುಸರಿಸಿ, ಕೈಗಾರಿಕಾ ಪ್ರದೇಶಗಳ ಪ್ರಸ್ತಾವನೆಗೆ ಅನುಮೋದನೆ ಪಡೆಯಬೇಕು ಎಂದರು.



### ಆಸಕ್ತರಿಗೆ ಟೂಲ್ ಕಿಟ್ ವಿತರಿಸಿ: ಡೀಸಿ

**ಪಿ.ಎಂ ವಿಶ್ವಕರ್ಮ ಯೋಜನೆಯಡಿ ಆರ್ಥಿಕ ನೆರವು ಪಡೆಯಲು 5875 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, 1383 ಅರ್ಜಿಗಳು ತಿರಸ್ಕೃತಗೊಂಡು, 4064 ಫಲಾನುಭವಿಗಳಿಗೆ ಆರ್ಥಿಕ ನೆರವು ನೀಡಲು ಸಾಲಸೌಲಭ್ಯ ಮಂಜೂರಾಗಿದ್ದು, 3782 ಫಲಾನುಭವಿಗಳಿಗೆ 37.07 ಕೋಟಿ ರೂ. ಆರ್ಥಿಕ ಸಹಾಯಧನ ವಿತರಿಸಲಾಗಿದೆ ಎಂದ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಕೌಶಲ್ಯಾಭಿವೃದ್ಧಿ ಇಲಾಖೆಯ ವತಿಯಿಂದ ಪಿ.ಎಂ. ವಿಶ್ವಕರ್ಮ ಯೋಜನೆಯಡಿ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದ ಆಸಕ್ತರಿಗೆ ಟೂಲ್ ಕಿಟ್ ವಿತರಿಸುವಂತೆ ತಿಳಿಸಿದರು.**

> **ಕೈಗಾರಿಕಾ ಪ್ರದೇಶಗಳಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಬೆಳಪು ಕೈಗಾರಿಕಾ ಪ್ರದೇಶದ ಸಂಪರ್ಕ ರಸ್ತೆ ವಿಸ್ತರಣೆಗೆ ಅಗತ್ಯವಿರುವ ಭೂಸ್ವಾಧೀನ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳುವುದರೊಂದಿಗೆ ಭೂ ಮಾಲೀಕರಿಗೆ ಪರಿಹಾರಧನ ಪಾವತಿಸುವ ಕಾರ್ಯವನ್ನು ಚುರುಕುಗೊಳಿಸಬೇಕು. ಮಿಯ್ಯಾರು ಕೈಗಾರಿಕಾ ಪ್ರದೇಶದಲ್ಲಿನ ಕೈಗಾರಿಕಾ ಘಟಕಗಳಲ್ಲಿ ಹಾಲಿ ಇರುವ ಪರಿವರ್ತಕಗಳು ಓವರ್‌ಲೋಡ್ ಆಗುವುದರಿಂದ ಹೆಚ್ಚುವರಿ ವಿದ್ಯುತ್ ಪರಿವರ್ತಕ ಅಥವಾ ಹಾಲಿ ಇರುವ ಪರಿವರ್ತಕದ ಸಾಮರ್ಥ್ಯವನ್ನು ಹೆಚ್ಚಿಸಲು ಆದ್ಯತೆಯ ಮೇಲೆ ಕ್ರಮವಹಿಸಬೇಕು.**
> ■ **ಸ್ವರೂಪ ಟಿ.ಕೆ. ಜಿಲ್ಲಾಧಿಕಾರಿ**

ಉಡುಪಿ ತಾಲೂಕು ಕೋಡಿಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ಪೆರ್ಣಂಕಿಲ ಗ್ರಾಮದ ಸ.ನಂ. 06 ರಲ್ಲಿನ 28 ಎಕರೆ ಸರ್ಕಾರಿ ಜಮೀನಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ಮಂಜೂರು ಮಾಡುವಂತೆ ಉಡುಪಿ ತಹಶೀಲ್ದಾರರಿಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಕ್ರಮವಹಿಸುವಂತೆ ತಿಳಿಸಿದರು.

ಜಿಲ್ಲೆಯ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಗುತ್ತಿಗೆ ಕರಾರು ನಿರ್ವಹಿಸಿಕೊಂಡು ಯೋಜನೆ ಪ್ರಾರಂಭಿಸದೇ ಇರುವ ಘಟಕಗಳ ಮಾಹಿತಿ ಪಡೆದು ಮಾತನಾಡಿದ ಜಿಲ್ಲಾಧಿಕಾರಿಗಳು, ನಂದಿಕೂರು, ಬೆಳಪು ಹಾಗೂ ಮಿಯ್ಯಾರು ಕೈಗಾರಿಕಾ ಪ್ರದೇಶದ 18.39 ಎಕ್ರೆಯಲ್ಲಿ ಒಟ್ಟು 26 ಘಟಕಗಳು ಗುತ್ತಿಗೆ ಕರಾರು ನಿರ್ವಹಿಸಿಕೊಂಡಿದ್ದು, 6 ಘಟಕಗಳು ಅನುಷ್ಠಾನದ ಹಂತದಲ್ಲಿದ್ದು, 1 ಘಟಕವು ನ್ಯಾಯಾಲಯದ ಹಂತದಲ್ಲಿದ್ದು, 19 ಘಟಕಗಳು ಯಾವುದೇ ಕೆಲಸ ಆರಂಭಿಸಿಲ್ಲ. ಘಟಕ ಪ್ರಾರಂಭಿಸದೇ ಇರುವ ಉದ್ದಿಮೆದಾರರ ಕರಾರು ರದ್ದುಪಡಿಸಿ, ಕೈಗಾರಿಕಾ ಘಟಕ ಸ್ಥಾಪನೆಗೆ ಮುಂದೆ ಬರುವ ಆಸಕ್ತರಿಗೆ ಅವಕಾಶ ಕಲ್ಪಿಸಬೇಕು ಎಂದರು.

ಕೌಶಲ್ಯಾಭಿವೃದ್ಧಿ ಇಲಾಖೆಯು ಕೈಗಾರಿಕೆಗಳಿಗೆ ಸಂಬಂಧಪಟ್ಟ ಕೌಶಲ್ಯಗಳ ಕೋರ್ಸುಗಳನ್ನು ಹೆಚ್ಚುವರಿಯಾಗಿ ತಮ್ಮ ಕೋರ್ಸುಗಳಲ್ಲಿ ಅಳವಡಿಸಿಕೊಳ್ಳುವುದರೊಂದಿಗೆ ಐ.ಟಿ.ಐ, ಡಿಪ್ಲೋಮಾ ಪಡೆದ ಸ್ಥಳೀಯ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಬೇಕು ಎಂದ ಅವರು, ಉದ್ಯಮಿಗಳು ಬ್ಯಾಂಕುಗಳಲ್ಲಿ ಕೈಗಾರಿಕಾ ಘಟಕಕ್ಕೆ ಸಾಲ ಸೌಲಭ್ಯ ಪಡೆಯುವ ಸಂದರ್ಭದಲ್ಲಿ ಬ್ಯಾಂಕುಗಳ ಸಿಬಿಲ್ ರೇಟಿಂಗ್ಸ್ ಕ್ರಮದಿಂದ ತೊಂದರೆ ಅನುಭವಿಸುತ್ತಿದ್ದು, ಈ ಬಗ್ಗೆ ಲೀಡ್ ಬ್ಯಾಂಕ್ ಅಧಿಕಾರಿಗಳು ಆರ್.ಬಿ.ಐ ಅಧಿಕಾರಿಗಳ ಗಮನಕ್ಕೆ ತರುವುದರೊಂದಿಗೆ ಸಮಸ್ಯೆ ಬಗೆಹರಿಸಲು ಕ್ರಮವಹಿಸುವಂತೆ ಸೂಚಿಸಿದರು.

ಪ್ರಧಾನಮಂತ್ರಿ ಉದ್ಯೋಗ ಸೃಜನ ಯೋಜನೆಯಡಿ ಫಲಾನುಭವಿಗಳ 570 ಘಟಕಗಳಿಗೆ 2190.10 ಲಕ್ಷ ರೂ. ಮಾರ್ಜಿನ್ ಹಣ ಬಿಡುಗಡೆಯಾಗಬೇಕಿದ್ದು, ಈವರೆಗೆ 233 ಘಟಕಗಳಿಗೆ 872.08 ಲಕ್ಷ ರೂ. ಮಾತ್ರ ಬಿಡುಗಡೆಯಾಗಿದೆ. ಬಾಕಿ ಉಳಿದ 337 ಘಟಕಗಳಿಗೆ 1318.02 ಲಕ್ಷ ರೂ. ಮಾರ್ಜಿನ್ ಹಣ ಶೀಘ್ರದಲ್ಲಿ ನೀಡಲು ಕ್ರಮವಹಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ್ ವಿ. ನಾಯಕ್, ಸಣ್ಣ ಕೈಗಾರಿಕಾ ಸಂಘದ ಜಿಲ್ಲಾ ಅಧ್ಯಕ್ಷ ವಸಂತ ಕಿಣಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಸೀತಾರಾಮ ಶೆಟ್ಟಿ, ನಗರಸಭೆ ಆಯುಕ್ತ ಮಂಹಾತೇಶ ಹಂಗರಗಿ, ಕಾಸಿಯಾ ಪ್ರತಿನಿಧಿ ಹರೀಶ್ ಕುಂದರ್, ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು, ಜಿಲ್ಲೆಯ ಸಣ್ಣ ಕೈಗಾರಿಕಾ ಉದ್ದಿಮೆದಾರರು ಹಾಗೂ ಮತ್ತಿತರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# 14 ವರ್ಷದ ಎಲ್ಲ ಬಾಲಕಿಯರು ಉಚಿತ ಲಸಿಕೆ ಹಾಕಿಸಿಕೊಳ್ಳಲು ಸಂಸದ ಚೌಟ ಕರೆ

### ಗರ್ಭಕಂಠದ ಕ್ಯಾನ್ಸರ್ ತಡೆಗೆ ಕೇಂದ್ರ ಸರ್ಕಾರದಿಂದ ಎಚ್‌ಪಿವಿ ಲಸಿಕೆ ಅಭಿಯಾನ

**ಮಂಗಳೂರು:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಹೆಣ್ಣುಮಕ್ಕಳ ಆರೋಗ್ಯದ ಶ್ರೀರಕ್ಷೆಗೆ ಹಮ್ಮಿಕೊಂಡಿರುವ ಮಹತ್ವಾಕಾಂಕ್ಷೆಯ ಉಚಿತ ಎಚ್.ಪಿ.ವಿ. ಲಸಿಕಾ ಅಭಿಯಾನದ ಪೂರ್ಣ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಕರೆ ನೀಡಿದ್ದಾರೆ.

ನಮ್ಮ ಜಿಲ್ಲೆಯ 14ರಿಂದ 15 ವರ್ಷದೊಳಗಿನ ಎಲ್ಲಾ ಕಿಶೋರಿಯರು ಸ್ವಯಂಪ್ರೇರಿತರಾಗಿ ಈ ಲಸಿಕೆಯನ್ನು ಪಡೆದುಕೊಳ್ಳುವ ಮೂಲಕ 'ಆರೋಗ್ಯವಂತ ಭಾರತ – ಆರೋಗ್ಯವಂತ ದಕ್ಷಿಣ ಕನ್ನಡ' ನಿರ್ಮಾಣಕ್ಕೆ ಸಹಕರಿಸಬೇಕು. ವಿಶೇಷವಾಗಿ ಹೆಣ್ಣುಮಕ್ಕಳ ತಾಯಂದಿರಲ್ಲಿ ವಿನಂತಿಸಿರುವ ಅವರು, ಶಾಲಾ ಪರೀಕ್ಷೆಗಳು ಮುಗಿದ ತಕ್ಷಣ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ, ತಮ್ಮ ಮಕ್ಕಳಿಗೆ ಈ ಎಚ್.ಪಿ.ವಿ. ಲಸಿಕೆಯನ್ನು ಕೊಡಿಸುವಂತೆ ಕೋರಿದ್ದಾರೆ.

ದ.ಕ. ಜಿಲ್ಲೆಯಲ್ಲಿ 22,473 ಕಿಶೋರಿಯರಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದ್ದು, ಈಗಾಗಲೇ ರಾಜ್ಯಕ್ಕೆ 2.54 ಲಕ್ಷ ಡೋಸ್ ಎಚ್‌ಪಿವಿ ಲಸಿಕೆ ಉಚಿತವಾಗಿ ಸರಬರಾಜಾಗಿದೆ. ಖಾಸಗಿ ಆಸ್ಪತ್ರೆಯಲ್ಲಿ ಈ ಲಸಿಕೆಗೆ ಗರಿಷ್ಠ 8000 ರೂ.ವರೆಗೆ ದರ ಇದ್ದು, ಆದರೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಮಿಷನ್ ನಡಿಯಲ್ಲಿ ಉಚಿತವಾಗಿ ನೀಡಲಾಗುತ್ತದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಎಚ್.ಪಿ.ವಿ. ಲಸಿಕೆಯು ಪಡೆದುಕೊಳ್ಳಬಹುದು. ಮುಂದಿನ ಮೂರು ತಿಂಗಳು ಅಂದರೆ ಮೇ ತಿಂಗಳಾಂತ್ಯದವರೆಗೆ ಈ ಲಸಿಕೀಕರಣ ಅಭಿಯಾನ ಮುಂದುವರಿಯಲಿದೆ ಎಂದು ಹೇಳಿದ್ದಾರೆ.

ಜಿಲ್ಲೆಯ ಪ್ರತಿಯೊಬ್ಬ ಅರ್ಹ ಹೆಣ್ಣುಮಗುವಿಗೂ ಈ ಲಸಿಕೆ ತಲುಪುವಂತೆ ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಲಸಿಕೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ಪೋಷಕರಲ್ಲಿ ಜಾಗೃತಿ ಮೂಡಿಸಲು ಆಶಾ ಕಾರ್ಯಕರ್ತರು ಸೇರಿದಂತೆ ಆರೋಗ್ಯ ಇಲಾಖೆಯು ಇದನ್ನು ಆಂದೋಲನದಂತೆ ಕೈಗೆತ್ತಿಕೊಳ್ಳಬೇಕು ಎಂದು ತಿಳಿಸಿದ್ದಾರೆ.






### U-WIN ಪ್ಲಾಟ್ ಫಾರ್ಮ್‌ನಲ್ಲಿ ಪೂರ್ವ-ನೋಂದಣಿಗೆ ಅವಕಾಶ

ಫಲಾನುಭವಿಗಳು U-WIN ಡಿಜಿಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಪೂರ್ವ-ನೋಂದಣಿ ಮಾಡಿ ಈ ಲಸಿಕೆ ಹಾಕಿಸಿಕೊಳ್ಳುವುದಕ್ಕೆ ಅಪಾಯಿಂಟ್‌ಮೆಂಟ್ ನಿಗದಿಪಡಿಸಬಹುದು ಅಥವಾ ನೇರವಾಗಿ ಗೊತ್ತುಪಡಿಸಿದ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ತೆರಳಿ ಲಸಿಕೆಯನ್ನು ಪಡೆದು ಕೊಳ್ಳಬಹುದು. ಲಸಿಕೆ ಪಡೆಯಲು ಪೋಷಕರ ಒಪ್ಪಿಗೆ ಕಡ್ಡಾಯವಾಗಿದೆ.

# ಭಯ ಹುಟ್ಟಿಸಿದೆ ಮಡಿಕೇರಿ ನಗರದ ಹೊರವಲಯದಲ್ಲಿ ಹುಲಿ ಸಂಚಾರ!

**ಮಡಿಕೇರಿ:** ನಗರದ ಹೊರವಲಯದ ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿಯ ಚಲನವಲನ ಕಂಡು ಬಂದಿದ್ದು, ಗ್ರಾಮಸ್ಥರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

ಮಡಿಕೇರಿ ನಗರದಿಂದ ಕೇವಲ ಎರಡು ಕೀ.ಮೀ.ದೂರದಲ್ಲಿರುವ ಇಬ್ನಿವಳವಾಡಿ ಗ್ರಾಮದ ಪೊನ್ನಚೆಟ್ಟಿರ ಸಂದೀಪ್ ಎಂಬವರ ತೋಟದಲ್ಲಿ ಹುಲಿ ಓಡಾಡಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಈ ಕುರಿತು ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿದ್ದು, ಸ್ಥಳಕ್ಕೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಆ ಭಾಗದ ಏಳೆಂಟು ಕಿ.ಮೀ ವ್ಯಾಪ್ತಿಯಲ್ಲಿ ಹುಲಿಯನ್ನು ಹೋಲುವ ಪ್ರಾಣಿಯ ಓಡಾಟದ ಬಗ್ಗೆ ಮಾಹಿತಿ ಇತ್ತು. ಅದು ಹುಲಿಯೋ, ಪೆರ್ಣವೋ ಎಂಬ ಗೊಂದಲವೂ ಇತ್ತು. ಇದೀಗ ಅದು ಹುಲಿ ಎಂಬುದು ಖಚಿತವಾಗಿದ್ದು, ಅದನ್ನು ಸೆರೆಹಿಡಿಯಲು ಸರಕಾರದ ಅನುಮತಿ ಕೋರಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಅವರು ತಿಳಿಸಿದ್ದಾರೆ.



### ಗ್ರಾಮಸ್ಥರ ಮನವಿ

ಜಿಲ್ಲಾ ಕೇಂದ್ರದ ಸನಿಹದಲ್ಲೇ ಹುಲಿಯ ಓಡಾಟ ಕಂಡು ಬಂದಿರುವುದರಿಂದ ಕೂಡಲೇ ಕಾರ್ಯಾಚರಣೆ ನಡೆಸುವಂತೆ ಮಡಿಕೇರಿ ಶಾಸಕ ಡಾ. ಮಂಥರ್ ಗೌಡ ಅವರು ಅರಣ್ಯ ಇಲಾಖೆಗೆ ಸೂಚನೆ ನೀಡಿದ್ದಾರೆ. ಅಲ್ಲದೆ ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದ್ದಾರೆ. ಪ್ರಸಕ್ತ ಇಬ್ನಿವಳವಾಡಿ ಗ್ರಾಮದ ಭದ್ರಕಾಳಿ ದೇವರ ಊರ ಹಬ್ಬ ನಡೆಯುತ್ತಿದ್ದು, ಈ ಸಂದರ್ಭದಲ್ಲೇ ಗ್ರಾಮದಲ್ಲಿ ಹುಲಿಯ ಓಡಾಟ ಕಂಡು ಬಂದಿರುವುದು ಗ್ರಾಮಸ್ಥರ ಆತಂಕವನ್ನು ಹೆಚ್ಚಿಸಿದೆ.

### ಕೇಂದ್ರ ಸಚಿವರಿಗೆ ಬಿಜೆಪಿ ನಿಯೋಗ ಮನವಿ

# ಮೀನುಗಾರಿಕಾ ದೋಣಿಗಳಿಗೆ ಡಿಸೇಲ್ ಪೂರೈಸಿ

**ಉಡುಪಿ:** ಮೀನುಗಾರಿಕಾ ದೋಣಿಗಳಿಗೆ ಅಗತ್ಯ ಪ್ರಮಾಣದ ಡಿಸೇಲ್ ಪೂರೈಕೆಗೆ ವಿಶೇಷ ಕ್ರಮ ವಹಿಸುವಂತೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಕ್ಯಾಪ್ಟನ್ ಬ್ರಿಜೇಶ್ ಚೌಟ ನೇತೃತ್ವದಲ್ಲಿ ಉಡುಪಿ ಶಾಸಕರಾದ ಯಶ್‌ಪಾಲ್ ಸುವರ್ಣ ಕೇಂದ್ರ ಪೆಟ್ರೋಲಿಯಂ ಸಚಿವರಾದ ಹರ್ದೀಪ್ ಸಿಂಗ್ ಪುರಿ ಹಾಗೂ ಮೀನುಗಾರಿಕೆ ಸಚಿವರಾದ ರಾಜೀವ್ ರಂಜನ್ ಸಿಂಗ್ ರನ್ನು ದಿಲ್ಲಿಯಲ್ಲಿ ಭೇಟಿಯಾಗಿ ಮನವಿ ಮಾಡಲಾಯಿತು.

ಕರಾವಳಿ ಜಿಲ್ಲೆಯ ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುತ್ತಿರುವ ಮೀನುಗಾರಿಕೆಗೆ ಕಳೆದ ಕೆಲವು ದಿನಗಳಿಂದ ಮಧ್ಯ ಪ್ರಾಚ್ಯ ದೇಶಗಳ ಯುದ್ಧದ ಪರಿಣಾಮದಿಂದ ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯಗೊಂಡು ಮೀನುಗಾರಿಕಾ ಬೋಟ್‌ಗಳಿಗೆ ಡೀಸೆಲ್ ಕೊರತೆಯಿಂದ ಬಹುತೇಕ ಮೀನುಗಾರಿಕೆ ಚಟುವಟಿಕೆ ಸ್ತಬ್ಧಗೊಂಡಿದೆ. ಡಿಸೇಲ್ ಕೊರತೆಯಿಂದ ಮೀನುಗಾರಿಕೆ ಚಟುವಟಿಕೆ ಸ್ತಬ್ಧಗೊಂಡಲ್ಲಿ ಮೀನುಗಾರರು ಸಹಿತ ಮೀನುಗಾರಿಕೆಯನ್ನೇ ಪರೋಕ್ಷವಾಗಿ ಅವಲಂಬಿಸಿರುವ ಲಕ್ಷಾಂತರ ಮಂದಿಯ ಜನಜೀವನಕ್ಕೆ ಸಮಸ್ಯೆಯಾಗಲಿದೆ ಎಂದು ಸಚಿವರಿಗೆ ಮಾಹಿತಿ ನೀಡಿದರು.



» ಮೀನುಗಾರಿಕೆಯನ್ನೇ ಪರೋಕ್ಷವಾಗಿ ಅವಲಂಬಿಸಿರುವ ಲಕ್ಷಾಂತರ ಮಂದಿಯ ಜನಜೀವನಕ್ಕೆ ಸಮಸ್ಯೆಯಾಗಲಿದೆ

ಮನವಿಗೆ ಪೂರಕವಾಗಿ ಸ್ಪಂದಿಸಿದ ಸಚಿವರು ದೇಶದ ಡೀಸೆಲ್ ದಾಸ್ತಾನು ಪ್ರಮಾಣಕ್ಕೆ ಅನುಗುಣವಾಗಿ ಮೀನುಗಾರಿಕಾ ವಲಯಕ್ಕೆ ಅಗತ್ಯ ಪ್ರಮಾಣದ ನಿರಂತರ ಡಿಸೇಲ್ ಪೂರೈಕೆಗೆ ವಿಶೇಷ ಆದ್ಯತೆ ನೀಡಲು ಪ್ರಯತ್ನಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಲ್ಪೆ ಯಾರ್ಡ್ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶಿವಪ್ರಸಾದ್ ಕೋಟ್ಯಾನ್ ಉಪಸ್ಥಿತರಿದ್ದರು.

# ಬಂತು ಎಲ್‌ಪಿಜಿ ಹೊತ್ತ ಇನ್ನೊಂದು ಹಡಗು

**ಮಂಗಳೂರು:** ಎಲ್ ಪಿಜಿ ಹೊತ್ತ ಇನ್ನೊಂದು ಹಡಗು ನವ ಮಂಗಳೂರು ಬಂದರಿಗೆ ಬುಧವಾರ ಆಗಮಿಸಿದೆ.

ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ತಲಾ ಒಂದೊಂದು ಕಚ್ಚಾತೈಲ, ಎಲ್‌ಪಿಜಿ ಹಡಗು ಮಂಗಳೂರಿಗೆ ಈಗಾಗಲೇ ಆಗಮಿಸಿದ್ದು, ಇಂಧನ ಕೊರತೆ ಕೊಂಚ ಮಟ್ಟಿಗೆ ನೀಗಿದೆ. ಇದರ ಬೆನ್ನಲ್ಲೇ ಬುಧವಾರ ಇನ್ನೊಂದು ಎಲ್ ಪಿಜಿ ಹಡಗು ಆಗಮಿಸಿತು.

ಇತ್ತೀಚೆಗೆ ವಿದೇಶದಿಂದ ಎಲ್‌ಪಿಜಿ ಹೊತ್ತುಕೊಂಡು ಬಂದ ಶಿವಾಲಿಕ್ ಹೆಸರಿನ ಸರಕು ಹಡಗು ನೇರವಾಗಿ ಗುಜರಾತ್ ಬಂದರಿಗೆ ತೆರಳಿತ್ತು. ಅಲ್ಲಿ ಅರ್ಧದಷ್ಟು ಎಲ್‌ಪಿಜಿ ಇಳಿಸಿ, ಉಳಿದರ್ಧವನ್ನು ಮಂಗಳೂರಿಗೆ ತರಲಾಗುತ್ತದೆ ಎಂದು ಎನ್‌ಎಂಪಿಎಗೆ ತಿಳಿಸಲಾಗಿದ್ದರೂ, ನೌಕೆ ಬಂದಿರಲಿಲ್ಲ.

ಶಿವಾಲಿಕ್ ಹಡಗಿನಿಂದ ಸಂಪೂರ್ಣ ಎಲ್‌ಪಿಜಿಯನ್ನು ಗುಜರಾತ್‌ನಲ್ಲೇ ಇಳಿಸಲಾಗಿತ್ತು. ಹೀಗೆ ಇಳಿಸಿದ ಎಲ್ ಪಿಜಿಯನ್ನು ಇನ್ನೊಂದು ಸರಕು ಹಡಗಿನ ಮೂಲಕ ಗುಜರಾತ್ ಬಂದರಿನಿಂದ ಮಂಗಳೂರಿಗೆ ತರಿಸಲಾಗಿದೆ. ಒಟ್ಟು 16 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಈ ನೌಕೆ ಬುಧವಾರ ರಾತ್ರಿ ವೇಳೆಗೆ ಬಂದರು ತಲುಪಿದೆ.

ಶೀಘ್ರದಲ್ಲೇ ಮತ್ತೆರಡು ಕಚ್ಚಾತೈಲ ಹೊತ್ತ ಹಡಗುಗಳು ಮಂಗಳೂರಿಗೆ ಆಗಮಿಸಲಿದ್ದು, ಅವು ತಲುಪುವ ದಿನಾಂಕ ಇನ್ನಷ್ಟೇ ಗೊತ್ತಾಗಬೇಕಿದೆ ಎಂದು ಎನ್‌ಎಂಪಿಎ ಅಧಿಕಾರಿಗಳು ತಿಳಿಸಿದ್ದಾರೆ.

» **ಒಟ್ಟು 16 ಸಾವಿರ ಮೆ. ಟನ್ ಎಲ್‌ಪಿಜಿ ಹೊತ್ತ ಈ ನೌಕೆ ಬುಧವಾರ ರಾತ್ರಿ ವೇಳೆಗೆ ಬಂದರು ತಲುಪಿದೆ.**

### ವೆನ್‌ಲಾಕ್ ಆಸ್ಪತ್ರೆಯಲ್ಲಿ ಆರೋಗ್ಯ ರಕ್ಷಾ ಸಮಿತಿ ಕಾರ್ಯಕಾರಿ ಸಮಿತಿ ಸಭೆ | ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಸೂಚನೆ

# ರೋಗಿಗಳ ಸ್ನೇಹಿ ಆಸ್ಪತ್ರೆಯಾಗಿಸಲು ಸಮಗ್ರ ಮಾಸ್ಟರ್ ಪ್ಲಾನ್

**ಮಂಗಳೂರು:** ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯ ಸಮಗ್ರ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ತಯಾರಿಸಿ ಕಾರ್ಯರೂಪಕ್ಕೆ ತರುವಂತೆ ಜಿಲ್ಲಾಧಿಕಾರಿ ದರ್ಶನ್ ಹೆಚ್. ವಿ. ಸೂಚಿಸಿದ್ದಾರೆ.

ಅವರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಬುಧವಾರ ನಡೆದ ಆರೋಗ್ಯ ರಕ್ಷಾ ಸಮಿತಿ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಸ್ಪತ್ರೆಯಲ್ಲಿ ವಿವಿಧ ವಿಭಾಗಗಳನ್ನು ರೋಗಿಗಳಿಗೆ ಸ್ನೇಹಿಯಾಗಿ ಕಾರ್ಯರೂಪಕ್ಕೆ ತರಲು ಮಾಸ್ಟರ್ ಪ್ಲಾನ್ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಶೀಘ್ರವಾಗಿ ಕಾರ್ಯಪ್ರವೃತ್ತರಾಗಬೇಕು ಎಂದು ಅವರು ಸೂಚಿಸಿದರು.


ವೆನ್‌ಲಾಕ್ ಆಸ್ಪತ್ರೆಯ ಪ್ರಸಕ್ತ ಇರುವ ಹೊರರೋಗಿ ವಿಭಾಗಗಳ ಕಟ್ಟಡವನ್ನು ತೆರವುಗೊಳಿಸಿ ನೂತನ ಅತ್ಯಾಧುನಿಕ ಮಾದರಿಯ ಒ.ಪಿ.ಡಿ ಕಟ್ಟಡವನ್ನು ನಿರ್ಮಿಸಲು ರಾಜ್ಯ ಸರಕಾರದಿಂದ 70 ಕೋಟಿ ರೂ. ಅನುದಾನ ಮಂಜೂರಾಗಿದೆ. ಪ್ರಸಕ್ತ ಅಲ್ಲಿರುವ ಎಲ್ಲಾ ವಿಭಾಗಗಳನ್ನು ಟ್ರಾಮಾ ಬ್ಲಾಕ್‌ಗೆ ಸ್ಥಳಾಂತರಿಸಿ ಹಳೆ ಒ.ಪಿ.ಡಿ ಕಟ್ಟಡವನ್ನು ಕೆಡವಲಾಗುವುದು. ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ವೆನ್‌ಲಾಕ್ ಅಧೀಕ್ಷಕ ಡಾ. ಶಿವಪ್ರಕಾಶ್ ತಿಳಿಸಿದರು.

ರೋಗಿಗಳಿಗೆ ನೆರವಾಗಲು ಒ.ಪಿ.ಡಿ, ಎಕ್ಸ್ ರೇ, ರೇಡಿಯೋಲಜಿ ಮತ್ತಿತರ ಘಟಕಗಳನ್ನು ಒಂದೇ ಕಡೆ ನಿರ್ಮಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಲೇಡಿಗೋಶನ್ ಆಸ್ಪತ್ರೆಗೆ ಪ್ರತ್ಯೇಕ ಆರೋಗ್ಯ ರಕ್ಷಾ ಸಮಿತಿ ರಚಿಸಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ವೆನ್‌ಲಾಕ್‌ನಲ್ಲಿ ಪಿ.ಎಂ ಅಭಿಮ್ ಯೋಜನೆಯಡಿ 50 ಬೆಡ್‌ಗಳ ಕ್ರಿಟಿಕಲ್ ಕೇರ್ ಕಟ್ಟಡದ ಕಾಮಗಾರಿ ಕೊನೆಯ ಹಂತದಲ್ಲಿದೆ. ಅತ್ತಾವರ ರಸ್ತೆಯಲ್ಲಿರುವ ವೆನ್‌ಲಾಕ್‌ನ 2.71 ಎಕರೆ ಖಾಲಿ ಜಾಗದಲ್ಲಿ ಪಾರ್ಕಿಂಗ್ ಮಾಡಲು ಪೇ ಆ್ಯಂಡ್ ಪಾರ್ಕಿಂಗ್ ಕಾಮಗಾರಿಗೆ ಮಹಾನಗರಪಾಲಿಕೆಗೆ ಪತ್ರ ಬರೆಯಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ವೆನ್‌ಲಾಕ್ ಹೊಸ ಸರ್ಜಿಕಲ್ ಬ್ಲಾಕ್ ಕಟ್ಟಡದ ನೆಲಮಹಡಿಯ ಮಳಿಗೆಗಳನ್ನು ವಾಣಿಜ್ಯ ಉಪಯೋಗಕ್ಕೆ ಹರಾಜು ಮೂಲಕ ನೀಡಲು ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ, ಲೇಡಿಗೋಶನ್ ಅಧೀಕ್ಷಕ ಡಾ. ದುರ್ಗಾಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ತಿಮ್ಮಯ್ಯ ಮತ್ತಿತರರು ಉಪಸ್ಥಿತರಿದ್ದರು.



» **ವೆನ್‌ಲಾಕ್ ಆಸ್ಪತ್ರೆಯ ಪ್ರಸಕ್ತ ಇರುವ ಹೊರರೋಗಿ ವಿಭಾಗಗಳ ಕಟ್ಟಡವನ್ನು ತೆರವುಗೊಳಿಸಿ ನೂತನ ಅತ್ಯಾಧುನಿಕ ಮಾದರಿಯ ಒ.ಪಿ.ಡಿ ಕಟ್ಟಡವನ್ನು ನಿರ್ಮಿಸಲು ರಾಜ್ಯ ಸರಕಾರದಿಂದ 70 ಕೋಟಿ ರೂ. ಅನುದಾನ ಮಂಜೂರಾಗಿದೆ.**

» **ವೆನ್‌ಲಾಕ್‌ನಲ್ಲಿ ಪಿ.ಎಂ ಅಭಿಮ್ ಯೋಜನೆಯಡಿ 50 ಬೆಡ್‌ಗಳ ಕ್ರಿಟಿಕಲ್ ಕೇರ್ ಕಟ್ಟಡದ ಕಾಮಗಾರಿ ಕೊನೆಯ ಹಂತದಲ್ಲಿದೆ.**

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
# ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಗುರುವಾರ 26, ಮಾರ್ಚ್ 2026 | e-mail diganthamlr@gmail.com | Website www.hosadigantha.com
ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಇಂದಿನ ಹವಾಮಾನ

| ದಕ್ಷಿಣ ಕನ್ನಡ | ಉಡುಪಿ |
|---|---|
| 37° 25° | 33° 26° |

## ಅಭ್ಯರ್ಥಿಗಳು ಈಗ ಚುನಾವಣಾ ಪ್ರಚಾರದಲ್ಲಿ ಬಿಝೀ!



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಮಂಜೇಶ್ವರ ಮಂಡಲದಲ್ಲಿ ಹಾಗೂ ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಕಾಸರಗೋಡು ಮಂಡಲದಲ್ಲಿ ಮತಯಾಚನೆ ನಡೆಸಿದರು.

ಹೊಸ ದಿಗಂತ
ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ

ಹೆಚ್ಚಿನ ಮಾಹಿತಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ
88612 09102
88612 09100

## ಆಪತ್ತಿನಲ್ಲಿದೆ ಪಂಚಗಂಗಾವಳಿ

# ನದಿ ಉಳಿಸಲು ಆಂದೋಲನ

### ಸೌಪರ್ಣಿಕಾ, ಖೇಟಾ, ಚಕ್ರಾ, ಕುಬ್ಜಾ ವಾರಾಹಿ ಸಂಗಮ ತಾಣದಲ್ಲಿ ಹೂಳು

**ಕುಂದಾಪುರದ ಜೀವನದಿ ಪಂಚಗಂಗಾವಳಿ ಈಗ ಆಪತ್ತಿನಲ್ಲಿದೆ. ಇಲ್ಲಿ ತುಂಬಿಕೊಂಡಿರುವ ವಿಪರೀತ ಹೂಳು, ಕಾಂಡ್ಲವನದ ಕಾರಣಕ್ಕೆ ವರ್ಷದಿಂದ ವರ್ಷಕ್ಕೆ ನದಿಯ ನೀರಿನಮಟ್ಟ ಸತತವಾಗಿ ಕುಸಿತವಾಗುತ್ತಿದೆ. ಮುಂದೆ ಈ ನದಿ ಅಸ್ತಿತ್ವವನ್ನೇ ಕಳೆದುಕೊಳ್ಳುವ ಭೀತಿ ಎದುರಾಗಿದ್ದು, ಈ ಹಿನ್ನೆಲೆಯಲ್ಲಿ ಪಂಚಗಂಗಾವಳಿ ಉಳಿಸುವ ಆಂದೋಲನಕ್ಕೆ ಸಿದ್ಧತೆ ನಡೆಯುತ್ತಿದೆ.**



**ಕುಂದಾಪುರ:** ವಿಪರೀತ ಹೂಳು, ಕಾಂಡ್ಲಾ ವನದ ಕಾರಣದಿಂದ ಈಗ ವರ್ಷದಿಂದ ವರ್ಷಕ್ಕೆ ಪಂಚಗಂಗಾವಳಿ ನದಿಯ ಅಸ್ತಿತ್ವ ಮರೆಯಾಗುತ್ತಿರುವ ಭೀತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕುಂದಾಪುರದ ಜೀವನದಿ ಪಂಚಗಂಗಾವಳಿ ಉಳಿಸುವ ಆಂದೋಲನಕ್ಕೆ ಎಲ್ಲೆಡೆಯಲ್ಲಿ ಸಿದ್ಧತೆ ನಡೆಯುತ್ತಿದೆ.

**ಹೋರಾಟಕ್ಕೆ ಸ್ಥಳೀಯರ ಸಾಥ್**

ಕುಂದಾಪುರದ ಜನರ ಜೀವನಾಡಿ ಎಂದೇ ಕರೆಯಿಸಿಕೊಳ್ಳುವ ಈ ನದಿಯನ್ನು ತೀರಾ ನಿರ್ಲಕ್ಷಿಸಲಾಗುತ್ತಿದೆ ಎಂದು ಆರೋಪಿಸಿ ಪಂಚಗಂಗಾವಳಿ ಅಸ್ತಿತ್ವ ಉಳಿಸುವಂತೆ ಇಲ್ಲಿ ದಶಕಗಳಿಂದ ಹೋರಾಟ ನಡೆಸಿ ಕೊಂಡು ಬರಲಾಗುತ್ತಿದೆ. ಈ ಬಾರಿಯ ಆಂದೋಲನಕ್ಕೆ ಸ್ಥಳೀಯರು ಸಿದ್ಧರಾಗಿದ್ದಾರೆ.

**ನೀರಿನ ಮಟ್ಟ ಸತತವಾಗಿ ಕುಸಿತ**

ಪಂಚನದಿ ಒಂದುಗೂಡುವ ಪಂಚಗಂಗಾವಳಿ ಇಳಿತದ ವೇಳೆ ಬಟಾಬಯಲಾಗಿ ಗೋಚರಿಸುತ್ತದೆ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಗಂಗೊಳ್ಳಿ ಅಳಿವೆ ಮೂಲಕ ಸಮುದ್ರ ಸೇರುವ ಸೌಪರ್ಣಿಕಾ, ಖೇಟಾ, ಚಕ್ರಾ, ಕುಬ್ಜಾ ಮತ್ತು ವಾರಾಹಿ ನದಿ ಸಂಗಮಿಸುವ ತಾಣದಲ್ಲಿ ಈಗ ವರ್ಷದಿಂದ ವರ್ಷಕ್ಕೆ ನೀರಿನ ಮಟ್ಟ ಕುಸಿಯುತ್ತಿದೆ ಎಂದು ಹೋರಾಟಗಾರರು ಕಳವಳ ವ್ಯಕ್ತಪಡಿಸಿದ್ದಾರೆ.

**ಇಳಿತವಾದರೆ ಕೆಸರು, ಕಾಂಡ್ಲವನ**

ಸಮುದ್ರದಲ್ಲಿ ಉಬ್ಬರ, ಇಳಿತ ವೇಳೆ ನೀರಿನ ಮಟ್ಟ ಏರುವುದು, ಕುಸಿಯುವುದು ಇಲ್ಲಿ ವಾಡಿಕೆ. ಆದರೆ ಇಳಿತದ ವೇಳೆ ಸಂಪೂರ್ಣ ಬರಿದಾಗಿ ಕೇವಲ ಕೆಸರು ಮತ್ತು ಕಾಂಡ್ಲವನ ಗೋಚರಿಸುತ್ತದೆ. ಬಬ್ಬುಕುದ್ರು, ಉಪ್ಪಿನಕುದ್ರು, ಕೋಡಿ ಹಿನ್ನೀರು ಪ್ರದೇಶ ಒಳಗೊಂಡ ಪಂಚಗಂಗಾವಳಿ ಇಳಿತದ ವೇಳೆ ಸಂಪೂರ್ಣವಾಗಿ ಬರಿದಾಗುತ್ತದೆ. ನದಿ ತುಂಬು ಕಾಂಡ ದಿಬ್ಬಗಳು ಸೃಷ್ಟಿಯಾಗಿವೆ. ಕೆಸರು, ಹೂಳಿನ ಕಾರಣಕ್ಕೆ ನದಿಯಲ್ಲಿ ನೀರು ಉಳಿಯುತ್ತಿಲ್ಲ. ಪರಿಸ್ಥಿತಿ ಇದೆ ತರನಾಗಿ ಮುಂದುವರಿದರೆ ಮುಂದೊಂದು ದಿನ ನದಿಯೇ ಮರೆಯಾಗಬಹುದು ಎಂಬ ಆತಂಕ ಸ್ಥಳೀಯರನ್ನು ಕಾಡಲಾರಂಭಿಸಿದೆ.

### ಕಡತದಲ್ಲಿಯೇ ಉಳಿದ ಜನರ ಬೇಡಿಕೆಗಳ ಪಟ್ಟಿ

**ಈ ಪರಿಸ್ಥಿತಿ ಕಳವಳಕಾರಿ**

ದಶಕದಿಂದ ನದಿ ಉಳಿಸಲು ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ. ಪ್ರಸ್ತುತ ಪರಿಸ್ಥಿತಿ ಅತ್ಯಂತ ಕಳವಳಕಾರಿ ಎನಿಸಿದೆ. ನದಿ ಉಳಿಸುವ ನಿಟ್ಟಿನಲ್ಲಿ ಆಂದೋಲನ ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ.

- ಚಂದ್ರಶೇಖರ ಖಾರ್ವಿ, ನದಿಪಾತ್ರದ ನಿವಾಸಿ, ಕುಂದಾಪುರ

**ಯಾವುದೇ ಪ್ರಗತಿಯಿಲ್ಲ**

ಗಂಗೊಳ್ಳಿ- ಕುಂದಾಪುರ ನಡುವೆ ಪಂಚಗಂಗಾವಳಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ, ನದಿಯ ಹೂಳೆತ್ತುವಿಕೆ, ಪ್ರಕೃತಿದತ್ತ ಕುದ್ರುಗಳ ರಕ್ಷಣೆ, ಹೂಳು ಮೇಲಕ್ಕೆತ್ತಿ ನೀರು ನಿಲ್ಲಿಸುವಿಕೆ, ಟೂರಿಸಂ ಅಭಿವೃದ್ಧಿ ಸಹಿತ ಮತ್ತು ಹಲವು ಬೇಡಿಕೆಗಳು ಸರಕಾರಕ್ಕೆ ಸಲ್ಲಿಕೆಯಾಗಿದ್ದರೂ ಈವರೆಗೆ ಯಾವುದೇ ಪ್ರಗತಿಯಿಲ್ಲ

- ಯು.ಎಸ್. ಶೆಣೈ, ಸಂಚಾಲಕ, ಪಂಚಗಂಗಾವಳಿ ಉತ್ಸವ ಸಮಿತಿ, ಕುಂದಾಪುರ.

## ಸುತ್ತಮುತ್ತ

### ಮತ್ತೆ ಏರಿಕೆ ಕಂಡ ಹೊಸ, ಹಳೆ ಅಡಿಕೆಯ ಧಾರಣೆ: ಕೃಷಿಕ ಖುಷ್

**ಮಂಗಳೂರು:** ಹಲವು ದಿನದ ಬಳಿಕ ಕ್ಯಾಂಪ್ಕೋ ಹೊಸ ಹಾಗೂ ಹಳೆ ಅಡಿಕೆ ಧಾರಣೆ ಯನ್ನು ತಲಾ 10 ರೂ. ಏರಿಸಿದ್ದು, ಈ ಮೂಲಕ ಹೊಸ ಅಡಿಕೆ 460 ರೂ.ವಿನಿಂದ 470 ರೂ.ಗೆ ಏರಿಕೆ ಕಂಡಿದೆ. ಹಳೆ ಅಡಿಕೆ 530 ರೂ.ವಿನಿಂದ 540 ರೂ.ಗೆ ಏರಿಕೆ ಕಂಡಿದೆ.

**ಕೃಷಿಕರಿಗೆ ಖುಷಿ ನೀಡಿದ ಕ್ಯಾಂಪ್ಕೋ**

ಖಾಸಗಿ ಮಾರುಕಟ್ಟೆಯಲ್ಲಿ ವಾರಗಳ ಹಿಂದೆಯೇ ಈ ಧಾರಣೆಯಲ್ಲಿ ಅಡಿಕೆ ಖರೀದಿಯಾಗುತ್ತಿತ್ತು. ಇದೀಗ ಕ್ಯಾಂಪ್ಕೋ ಕೂಡ ಧಾರಣೆ ಹೆಚ್ಚಿಸುವ ಕೃಷಿಕರಿಗೆ ಬೇಡಿಕೆಯನ್ನು ಈಡೇರಿಸಿದೆ. ಅಲ್ಲದೇ ಮುಂದಿನ ಕೆಲ ದಿನಗಳವರೆಗೆ ಇದೇ ಧಾರಣೆ ಕಾಯ್ದುಕೊಳ್ಳುವ ಸಾಧ್ಯತೆ ಹೆಚ್ಚಿದೆ. ಉಳಿದಂತೆ ಡಬಲ್ ಚೋಲ್ 5 ರೂ. ಏರಿಕೆ ಯೊಂದಿಗೆ 540 ರೂ.ವಿನಲ್ಲಿ ಸ್ಥಿರವಾಗಿದೆ. ಹೊಸ ಪಟೋರ 390, ಹಳೆ ಪಟೋರ 405 ರೂ. ವಿನಲ್ಲಿ ಖರೀದಿಯಾಗುತ್ತಿದೆ.

### ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರ ಬಂಧನ: ಸೊತ್ತು ವಶಕ್ಕೆ

**ಸೋಮವಾರಪೇಟೆ:** ಹೊರ ಜಿಲ್ಲೆಯಿಂದ ತೆನೆ ಬರಿತ ಗಾಂಜಾ ತರಿಸಿ ಪಟ್ಟಣ ವ್ಯಾಪ್ತಿಯಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಅಬಕಾರಿ ಇಲಾಖೆ ಯಶಸ್ವಿಯಾಗಿದೆ. ನಗರದ ಕರ್ಕಳ್ಳಿ ಬಾಣೆ ನಿವಾಸಿಗಳಾದ ಎಸ್.ಡಿ. ಯಶವಂತ ಹಾಗೂ ಎಸ್.ಡಿ. ಚೇತನ್ ಬಂಧಿತ ಆರೋಪಿಗಳು. ಮಾಹಿತಿ ಆಧಾರದ ಮೇಲೆ ಅಬಕಾರಿ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದರು. ದಾಳಿ ವೇಳೆ ಆರೋಪಿಗಳು ಸ್ವತಃ ಗಾಂಜಾ ಸೇವನೆ ಮಾಡುತ್ತಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಅಧಿಕಾರಿಗಳು ಅವರ ಬಳಿಯಿಂದ ಸುಮಾರು 339 ಗ್ರಾಂ ತೆನೆ ಬರಿತ ಗಾಂಜಾ ಹಾಗೂ ಮಾರಾಟಕ್ಕೆ ಬಳಸಲಾಗುತ್ತಿದ್ದ ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಅಬಕಾರಿ ನಿರೀಕ್ಷಕರಾದ ಕೆ.ಬಿ. ರಾಜೇಂದ್ರ, ವೇದೆ ಎಚ್.ಎ. ರಾಜು ಹಾಗೂ ವಾಹನ ಚಾಲಕರಾದ ಮಧುಸೂದನ್ ಭಾಗವಹಿಸಿದ್ದರು.

### ಅಜೆಕಾರು ಪರಿಸರದಲ್ಲಿ ಭಾರೀ ಗಾಳಿಮಳೆ: ಮೆಸ್ಕಾಂಗೆ ಅಪಾರ ನಷ್ಟ

**ಕಾರ್ಕಳ:** ತಾಲೂಕಿನ ಅಜೆಕಾರು ಪರಿಸರದ ಅಂಡಾರು,ಶಿರ್ಲಾಲು, ಕಾಡುಹೊಳೆ, ಮುನಿಯಾಲು, ಮುಟ್ಲುಪಾಡಿ ಮುಂತಾದ ಕಡೆಗಳಲ್ಲಿ ಮಂಗಳವಾರ ಸಂಜೆ ಸುರಿದ ಮುಂಗಾರುಪೂರ್ವ ಭಾರೀ ಗಾಳಿ ಮಳೆಗೆ ಅಪಾರ ನಷ್ಟ ಸಂಭವಿಸಿದೆ. ಸಿಡಿಲು ಸಹಿತ ಸುರಿದ ಭಾರೀ ಗಾಳಿಮಳೆಗೆ ಅಜೆಕಾರು ಮೆಸ್ಕಾಂ ಸಬ್ ಸ್ಟೇಷನ್‌ನಲ್ಲಿನ ಹಲವಾರು ಕಂಬಗಳು ತುಂಡಾಗಿದ್ದು, ಅಂಡಾರು ಶಿರ್ಲಾಲು ಪರಿಸರದಲ್ಲಿ ಸುಮಾರು 30 ಕ್ಕೂ ಅಧಿಕ ವಿದ್ಯುತ್ ಕಂಬಗಳು ಧರೆಗುರುಳಿ ಮೆಸ್ಕಾಂಗೆ 5 ಲಕ್ಷಕ್ಕೂ ಅಧಿಕ ಹಾನಿ ಸಂಭವಿಸಿದೆ. ಕಾಡುಹೊಳೆ ಪರಿಸರದಲ್ಲಿ ಭಾರೀ ಗಾಳಿಮಳೆಗೆ ಶಂಕರ ನಾಯ್ಕ ಎಂಬವರ ಮನೆಯ ಮೇಲ್ಛಾವಣಿಗೆ ಮರ ಬಿದ್ದು ಸುಮಾರು 5 ಸಿಮೆಂಟ್ ಶೀಟ್ ತುಂಡಾಗಿ 5 ಸಾವಿರ ನಷ್ಟ ಸಂಭವಿಸಿದೆ.

### ವಿಧಾನಸಭಾ ಚುನಾವಣೆಗೆ ಇನ್ನಷ್ಟು ಸಿದ್ಧತೆ: ಕೈಪಿಡಿ, ಪೋಸ್ಟರ್ ಬಿಡುಗಡೆ

**ಕಾಸರಗೋಡು:** ವಿಧಾನಸಭಾ ಚುನಾವಣೆಗೆ ಕಾಸರಗೋಡು ಜಿಲ್ಲೆಯಲ್ಲಿ ಭರದ ಸಿದ್ಧತೆ ಮುಂದುವರಿದಿದೆ. ಹಸಿರು ನೀತಿ ಸಂಹಿತೆ ಖಚಿತಪಡಿಸಿಕೊಳ್ಳುವ ಭಾಗವಾಗಿ ಸಿದ್ಧಪಡಿಸಲಾದ ಹಸಿರು ನೀತಿ ಸಂಹಿತೆ ಅನುಸರಣೆ ಪ್ರಶ್ನೆಗಳು, ಉತ್ತರಗಳು ಕೈಪಿಡಿ ಹಾಗೂ ಅದರ ಜೊತೆಗಿನ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ಪುಸ್ತಕವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಅವರಿಗೆ ನೀಡಿ ಬಿಡುಗಡೆ ಮಾಡಿದರು.

## ಅಭಿವೃದ್ಧಿಗೆ 85,00,000 ರೂ. ಮಂಜೂರು

# ಪೇಟೆಗೆ 'ಪೇಟ'!

## ಬೋವಿಕ್ಕಾನಕ್ಕೆ ಸಿಕ್ಕಿತು ನವೀಕರಣ ಭಾಗ್ಯ

**ಕಾಸರಗೋಡು:** ಮೂಲಭೂತ ಸೌಲಭ್ಯ ತೀವ್ರವಾದ ಅಭಾವ ಎದುರಿಸುತ್ತಿರುವ ಜಿಲ್ಲೆಯ ಪ್ರಮುಖವಾದ ಪೇಟೆಗಳಲ್ಲಿ ಒಂದಾದ ಬೋವಿಕ್ಕಾನ ಪೇಟೆ ಚಿತ್ರಣ ಬದಲಿಸಲಿರುವ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.

**ಮಳೆ ಬಿದ್ದರೂ ಸಂಕಷ್ಟ ಇತ್ತು..**

ಕಳೆದ ಅನೇಕ ವರ್ಷಗಳಿಂದ ಸಣ್ಣದೊಂದು ಮಳೆ ಸುರಿದರೂ ಬೋವಿಕ್ಕಾನ ಸಿಟಿಯಲ್ಲಿ ನೀರು ಕಟ್ಟಿ ನಿಲ್ಲುವುದು, ಚರಂಡಿ ವ್ಯವಸ್ಥೆ ಇಲ್ಲದಿರುವುದು, ಮಳೆನೀರು ರಸ್ತೆಯ ಮೂಲಕವೇ ಹರಿದು ಹೋಗಿ ವ್ಯಾಪಾರಿಗಳಿಗೆ, ಸಾರ್ವಜನಿಕರಿಗೆ ಅಪಾರ ಸಮಸ್ಯೆ ಎದುರಾಗುತ್ತಿದೆ. ಮಾತ್ರವಲ್ಲದೆ ಪೇಟೆಯ ತುಂಬೆಲ್ಲಾ ಕೆಸರು ನೀರಿನ ತೊಂದರೆ ಕಾಣಿಸಿಕೊಳ್ಳುತ್ತದೆ.

**ಕಾಲುದಾರಿಯಲ್ಲೂ ತಾಪತ್ರಯ**

ಇಲ್ಲಿ ಕಾಲುದಾರಿಗಳ ಕೊರತೆಯಿಂದಾಗಿ ಬೋವಿಕ್ಕಾನ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ, ಪಾದಚಾರಿಗಳಿಗೆ ನಡೆದಾಡಲೂ ಕಷ್ಟವಾಗುತ್ತಿದೆ. ಅಸ್ತಿತ್ವದಲ್ಲಿ ಇರುವ ಚರಂಡಿಗಳು ಮುಳಿಯಾರು ಗ್ರಾಮ ಪಂಚಾಯತ್ ಜಂಕ್ಷನ್‌ನಲ್ಲಿನ ಕಲ್ವರ್ಟ್‌ನ ಮಣ್ಣು, ತ್ಯಾಜ್ಯ ತುಂಬಿದ ನೀರು ಹರಿಯುವಿಕೆಗೂ ತೀರ ಅಡ್ಡಿಯಾಗುತ್ತಿದೆ. ಇದರಿಂದ ಮಳೆಗಾಲದಲ್ಲಿ ಕೊಳಚೆ ನೀರು ಸಹಿತ ರಸ್ತೆಯಲ್ಲಿ ಹರಿದು ದುರ್ನಾತ ಬೀರುವಂತಾಗಿದೆ. »ಪುಟ 6



**ಚರಂಡಿ, ಸುರಕ್ಷಾ ತಡೆಗೋಡೆ, ಫುಟ್‌ಪಾತ್...**

ಬೋವಿಕ್ಕಾನ ಪೇಟೆಯಲ್ಲಿ ಚೆರ್ಕಳ - ಜಾಲ್ಸೂರು ಅಂತಾರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಚರಂಡಿ, ಸುರಕ್ಷಾ ತಡೆಗೋಡೆ, ಫುಟ್‌ಪಾತ್, ಮಳೆ ನೀರು ಹರಿದು ಹೋಗಲು ಕೊಳವೆ ಮಾರ್ಗ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಅಲ್ಲದೆ ಪಂಚಾಯತ್ ಕಚೇರಿ ರಸ್ತೆಯಿಂದ ಭಜನಾ ಮಂದಿರದ ವರೆಗಿನ 440 ಮೀ.ನಲ್ಲಿ, ಇನ್ನೊಂದು ಭಾಗದಲ್ಲಿ 200 ಮೀಟರ್ ಉದ್ದಕ್ಕೆ ಅತ್ಯಾಧುನಿಕ ಚರಂಡಿ ನಿರ್ಮಿಸಲಾಗುವುದು.

**ಆರೇ ತಿಂಗಳಲ್ಲಿ ಪೂರ್ಣವಾಗಲಿದೆ!**

ನಿರ್ಮಾಣ ಕಾಮಗಾರಿ 6 ತಿಂಗಳೊಳಗೆ ಪೂರ್ಣಗೊಳ್ಳಲಿದೆ. ಈ ಮೂಲಕ ಬೋವಿಕ್ಕಾನ ಪೇಟೆಯ ಮುಖಛಾಯೆಯನ್ನು ಬದಲಾಯಿಸಲು ತೀರ್ಮಾನಿಸಲಾಗಿದ್ದು, ಇಡೀ ಪೇಟೆಯ ಸಮಗ್ರ ಅಭಿವೃದ್ಧಿಗೆ ರೂಪರೇಷೆ ಸಿದ್ಧಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

## ಪುತ್ತೂರು ದೇವಳದ ದೇವರಮಾರು ಗದ್ದೆ ಉದ್ಯಾನವನಕ್ಕೂ ಅನಾಥ ಭಾವ

# ಈ ಬಾರಿ ಜಾತ್ರೆಗೆ ಶಿವನ ವಿಗ್ರಹಕ್ಕಿಲ್ಲ ಶೃಂಗಾರ?

**ಪುತ್ತೂರು:** ಜಿಲ್ಲೆಯ ಹೆಸರಾಂತ ಶಿವಕ್ಷೇತ್ರ ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಳ ಜಾತ್ರೆಗೆ ಏ.1ರಿಂದ ಅಧಿಕೃತ ಚಾಲನೆ ದೊರೆಯಲಿದ್ದು, ದೇವಸ್ಥಾನದ ಜಾತ್ರೆ ಸಂದರ್ಭ ಪ್ರತೀ ವರ್ಷ ದೇವರಮಾರು ಗದ್ದೆಕೊನೆ ಭಾಗದಲ್ಲಿರುವ ಶಿವನ ವಿಗ್ರಹಕ್ಕೆ ಬಣ್ಣ ಬಳಿದು ಶೃಂಗಾರಗೊಳಿಸುವ ಕಾರ್ಯ ನಡೆಯುತ್ತದೆ. ಆದರೆ, ಈ ಬಾರಿ ಮಾತ್ರ ವಿಗ್ರಹಕ್ಕೆ ಬಣ್ಣ ಬಳಿಯದೆ ಅನಾಥವಾಗಿ ಬಿಡಲಾಗಿದೆ.

**ಗೋಪುರದ ನಿರ್ಮಾಣ ಆಗಿತ್ತು**

ಈ ಹಿಂದೆ ದೇವಳದ ಈಗಿನ ಗೋಪುರ ಇದ್ದ ಸ್ಥಳದಲ್ಲಿ ಈ ವಿಗ್ರಹವನ್ನು ಇಡಲಾಗಿತ್ತು. ಆ ಬಳಿಕದ ದಿನಗಳಲ್ಲಿ ಈ ವಿಗ್ರಹ ತೆಗೆದು ಅದೇ ಜಾಗದಲ್ಲಿ ಈಗಿರುವ ಗೋಪುರದ ನಿರ್ಮಾಣ ಮಾಡಲಾಗಿತ್ತು. ಗೋಪುರ ನಿರ್ಮಾಣವಾದ ಬಳಿಕ ಈ ಶಿವನ ವಿಗ್ರಹ ಎಲ್ಲಿ ಇಡುವುದು ಎನ್ನುವ ಚರ್ಚೆ ನಡೆದು ಕೊನೆಗೆ ದೇವರಮಾರು ಗದ್ದೆಯ ಕೊನೆಯಲ್ಲಿ, ಸ್ಮಶಾನ ಇರುವ ಪಕ್ಕದಲ್ಲಿ ಈ ವಿಗ್ರಹವಿಟ್ಟು, ವಿಗ್ರಹವಿರುವ ಜಾಗದಲ್ಲಿ ಪುಟ್ಟದೊಂದು ಉದ್ಯಾನವನ ಕೂಡಾ ನಿರ್ಮಿಸಲಾಗಿತ್ತು. ಆ ಬಳಿಕದ ದಿನಗಳಲ್ಲಿ ದೇವಸ್ಥಾನದಲ್ಲಿ ಪ್ರತೀ ವರ್ಷ ನಡೆಯುವ ಜಾತ್ರೋತ್ಸವದ ಸಂದರ್ಭ ಈ ವಿಗ್ರಹಕ್ಕೆ ಬಣ್ಣ ಹಚ್ಚಿ ಸುಂದರವಾಗಿ ಮಾಡಲಾಗಿತ್ತು. »ಪುಟ 6



**ಪ್ರಶ್ನಾ ಚಿಂತನೆ ಬಳಿಕ ಸೂಕ್ತ ವ್ಯವಸ್ಥೆಗೆ ಕ್ರಮ**

ಈ ಬಾರಿ ಜಾತ್ರೆಗೆ ಈ ವಿಗ್ರಹವನ್ನು ಈಗಿರುವ ಸ್ಥಿತಿಯಲ್ಲೇ ಬಿಟ್ಟು ಬಿಡಲು ತೀರ್ಮಾನಿಸಲಾಗಿದೆ. ಈ ವಿಚಾರದಲ್ಲಿ ಜಾತ್ರೋತ್ಸವ ಮುಗಿದ ಬಳಿಕ ದೈವಜ್ಞರ ಈ ವಿಗ್ರಹದ ಬಗ್ಗೆ ಪ್ರಶ್ನಾ ಚಿಂತನ ಕೇಳಿ ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಭಕ್ತರಿಗೆ ಭರವಸೆ ನೀಡಿದ್ದಾರೆ.

## ಕೊಳವೂರು ಐನದಲ್ಲಿ ಗುಡ್ಡಕ್ಕೆ ಬೆಂಕಿ: ಹಸಿರು ಸಂಪತ್ತಿಗೆ ಹಾನಿ

**ಕೈಕಂಬ:** ಗುಡ್ಡಕ್ಕೆ ಬೆಂಕಿ ತಗುಲಿ ಮರಮಟ್ಟು ಪೂರ್ತಿ ಉರಿದು ಬೂದಿಯಾದ ಘಟನೆ ಬಜಪೆ ಪೊಲೀಸ್ ಠಾಣಾ ವ್ಯಾಪ್ತಿ ಕೊಳವೂರಿನ ಐನ ಎಂಬಲ್ಲಿ ಮಂಗಳವಾರ ಸಂಜೆ ನಡೆದಿದೆ. ಇಲ್ಲಿನ ಗುಡ್ಡದಲ್ಲಿ ಏಕಾಏಕಿ ಕಾಣಿಸಿಕೊಂಡ ಬೆಂಕಿಗೆ ಒಣಗಿದ ತರಗೆಲೆಗಳಿಂದ ಇನ್ನಷ್ಟು ವ್ಯಾಪಿಸಿತ್ತು. ಹತ್ತಿರದ ಮೈದಾನದಲ್ಲಿ ಆಟವಾಡುತ್ತಿದ್ದ ಯುವಕರು ಬೆಂಕಿ ಗಮನಿಸಿ ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಿದ್ದರು. ಬಳಿಕ ಬಂಟ್ವಾಳದಿಂದ ಆಗಮಿಸಿದ ಅಗ್ನಿಶಾಮಕ ದಳ ವೇಗವಾಗಿ ಹರಡುತ್ತಿದ್ದ ಬೆಂಕಿಯನ್ನು ಆರಿಸಿ ನಿಯಂತ್ರಣಕ್ಕೆ ತಂದಿತು. ಒಂದು ವೇಳೆ ಬೆಂಕಿ ಹೆಚ್ಚಿನ ಪ್ರದೇಶಕ್ಕೆ ವ್ಯಾಪಿಸಿದ್ದರೆ ಗುಡ್ಡದ ಆಕ್ಕಪಕ್ಕದಲ್ಲಿರುವ ಹಲವು ಮನೆಗಳಿಗೂ ಅಪಾಯ ಉಂಟಾಗುತ್ತಿತ್ತು ಬಜಪೆ ಪೊಲೀಸರು ಸ್ಥಳಕ್ಕೆ ಧಾವಿಸಿದ್ದರು. ಬೆಂಕಿ ಆಕಸ್ಮಿಕವಾಗಿ ತಗುಲಿದ್ದೆ ಅಥವಾ ಉದ್ದೇಶಪೂರ್ವಕವಾಗಿ ಯಾರೋ ಬೆಂಕಿ ಹಚ್ಚಿದರೆ ಎಂಬುದು ತಿಳಿದು ಬಂದಿಲ್ಲ.ಬುಧವಾರ ಮಧ್ಯಾಹ್ನವೂ ಗುಡ್ಡದಲ್ಲಿ ಅಲ್ಲಲ್ಲಿ ಬೆಂಕಿ ಉರಿಯುತ್ತಲೇ ಇದ್ದು, ಗಾಳಿಗೆ ಮತ್ತೆ ಹರಡುವ ಸಾಧ್ಯತೆಯೂ ಇದೆ.



## ಪ್ಲಾಸ್ಟಿಕ್ ಬ್ಯಾನರ್, ಫ್ಲೆಕ್ಸ್‌ಗಳ ಪ್ರಚಾರದ ಜಮಾನದಲ್ಲಿ ಗಮನಸೆಳೆಯಲು ಸಜ್ಜಾಗಿದೆ ಈ ಪರಿಸರ ಸ್ನೇಹಿ ಫಲಕಗಳು

# ನಂದಳಿಕೆಯ ಭಕ್ತರಿಗೆ ಮಹಾರಾಜರ ಓಲೆಯಲ್ಲಿ ಸಿರಿಜಾತ್ರೆ ಆಮಂತ್ರಣ!

**ಕಾರ್ಕಳ:** ತುಳುನಾಡಿನ ಪವಿತ್ರ ಹಾಗೂ ಐತಿಹಾಸಿಕ ಕಾರ್ಣಿಕ ಕ್ಷೇತ್ರಗಳಲ್ಲಿ ಒಂದಾದ ನಂದಳಿಕೆಯ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ನಡೆಯುವ ಸಿರಿ ಜಾತ್ರೆ ಪ್ರತೀ ಬಾರಿಯೂ ತನ್ನ ಪ್ರಚಾರ ವೈಖರಿಯಿಂದಲೇ ನಾಡಿನಾದ್ಯಂತ ಸುದ್ದಿಯಾಗಿದೆ.

**ಈ ಬಾರಿ ರಾಜಾಜ್ಞೆಯ ಓಲೆಯ ಮಾದರಿ**

ಸದಾ ಹೊಸತನಕ್ಕೆ ಸಾಕ್ಷಿಯಾಗುವ ನಂದಳಿಕೆ ಸಿರಿಜಾತ್ರೆ ಆಯನೋತ್ಸವ ಈ ವರ್ಷ ಭಕ್ತರನ್ನು ಆಮಂತ್ರಿಸಲು ರಾಜಾಜ್ಞೆಯ ಓಲೆಯ ಮಾದರಿಯಲ್ಲಿ ಫಲಕವನ್ನು ತಯಾರಿಸಿದ್ದು ಇದು ಅಂದಿನ ಅರಸರ ಕಾಲದ ವೈಭವವನ್ನು ಮರು ಸೃಷ್ಟಿಸಿದಂತಿದೆ. ಹಿಂದಿನ ಪರಂಪರೆಯನ್ನು ಉಳಿಸಿಕೊಂಡು ನಡೆವ ಜಾತ್ರೆಗಳಲ್ಲಿ ಒಂದಾದ ಈ ಸಿರಿ ಜಾತ್ರೆ, ಈ ಬಾರಿಯೂ ಏ.2ರಂದು ನಡೆಯಲಿದ್ದು ಪ್ರತೀ ವರ್ಷದಂತೆ ಈ ಬಾರಿಯೂ ಲಕ್ಷಾಂತರ ಭಕ್ತರು ಇಲ್ಲಿಗೆ ಭೇಟಿ ನೀಡುವ ನಿರೀಕ್ಷೆಯಿದೆ. ಅಚ್ಚುಕಟ್ಟಿನ ವ್ಯವಸ್ಥೆ, ಶಿಸ್ತಿನ ಸ್ವಯಂ ಸೇವಕರ ತಂಡವನ್ನು ಹೊಂದಿರುವ ಆಯನೋತ್ಸವಕ್ಕೆ ಈ ಭಾರಿ ಭಕ್ತರನ್ನು ಸೆಳೆಯಲು ವಿಶೇಷ ಮಾದರಿಯ ಆಮಂತ್ರಣದ ಫಲಕವನ್ನು ತಯಾರಿಸಲಾಗಿದೆ.

**ಮೈಲಿಗಲ್ಲು, ಅಂಚೆಚೀಟಿ, ತೋರಣ...**

ಈ ಹಿಂದೆ ಮೈಲಿಗಲ್ಲು, ಅಂಚೆಚೀಟಿ, ಛತ್ರಿ, ಮಾವಿನ ಎಳೆಯ ತೋರಣ, ಗೋಣಿ ಚೀಲ, ಹಕ್ಕಿಗಳಿಗೆ ನೀರು ನೀಡುವ ವಿಶೇಷ ಕಾಳಜಿಯುಳ್ಳ ಫಲಕ ಹೀಗೆ ಅನೇಕ ಬಗೆಯ ಪ್ರಚಾರದ ಮೂಲಕ ಗಮನ ಸೆಳೆದ ಸಿರಿಜಾತ್ರೆ ಆಯನೋತ್ಸವದ ಆಮಂತ್ರಣ, ಈ ಬಾರಿ ರಾಜರ ಕಾಲದ ಓಲೆ ಮಾದರಿಯಲ್ಲಿ ಬಟ್ಟೆಯಲ್ಲಿ ರಚಿಸಿ ತಯಾರಿಸಲಾಗಿದೆ. ಈ ಪರಿಕಲ್ಪನೆಯ ಹಿಂದಿನ ರೂವಾರಿಯಾಗಿರುವುದು ಇಲ್ಲಿನ ನಂದಳಿಕೆ ಚಾವಡಿ ಅರಮನೆ ಸುಹಾಸ್ ಹೆಗ್ಡೆಯವರು.




**ಸಕಲ ಸಿರಿಕ್ಷೇತ್ರಗಳ ತವರೂರು**

ಆದಿ ಆಲಡೆ, ಸಿರಿಕ್ಷೇತ್ರ, ಸಕಲ ಸಿರಿಕ್ಷೇತ್ರಗಳ ತವರೂರು ಎಂದೇ ಪ್ರಸಿದ್ಧಿಯನ್ನು ಪಡೆದ ಐತಿಹಾಸಿಕ ನಾಲ್ಕುಸ್ಥಾನ ನಂದಳಿಕೆಯಲ್ಲಿ ಪ್ರತೀ ವರ್ಷ ಮೀನಾ ಪೌರ್ಣಮಿಯಂದು ನಡೆಯುವ ಸಿರಿ ಜಾತ್ರೆ ಇಡೀ ನಾಡಿನಲ್ಲೆ ಅಪಾರವಾದ ಪ್ರಸಿದ್ಧಿಯನ್ನು ಪಡೆದಿದೆ.

**ಸಿದ್ಧವಾಗಿವೆ ಸುಮಾರು ಎರಡು ಸಾವಿರ ಪ್ರಚಾರ ಫಲಕ**

ಸಾಮಾನ್ಯವಾಗಿ ಜಾತ್ರೆ ಎಂದರೆ ಪ್ಲಾಸ್ಟಿಕ್ ಬ್ಯಾನರ್ ಅಥವಾ ಫ್ಲೆಕ್ಸ್ ಅಬ್ಬರವಿರುತ್ತದೆ. ಆದರೆ ಇದಕ್ಕೆ ಭಿನ್ನವಾಗಿ, ನಂದಳಿಕೆ ಕ್ಷೇತ್ರವು ರಾಜರ ಕಾಲದಲ್ಲಿ ಸಂದೇಶ ರವಾನಿಸಲು ಬಳಸುತ್ತಿದ್ದ ಓಲೆ ಮಾದರಿಯ ಸುಮಾರು 2 ಸಾವಿರ ಪ್ರಚಾರ ಫಲಕಗಳನ್ನು ಸಿದ್ಧಪಡಿಸಿದೆ. ಅವಿಭಜಿತ ದ.ಕ. ಹಾಗೂ ಉಡುಪಿ ಜಿಲ್ಲೆಯಲ್ಲದೆ ಶಿವಮೊಗ್ಗ, ಚಿಕ್ಕಮಗಳೂರು, ಸೇರಿದಂತೆ ಮಳೆನಾಡಿನ ರಸ್ತೆಯ ಇಕ್ಕೆಡೆಗಳಲ್ಲಿಯೂ ಈ ಪ್ರಚಾರ ಫಲಕ ಕಾಣಸಿಗಲಿದೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

## ಸುತ್ತಮುತ್ತ

### ಶರವೂರು ಬ್ರಹ್ಮಕಲಶ: ಇಂದಿನ ಕಾರ್ಯಕ್ರಮ

**ಆಲಂಕಾರು:** ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬ್ರಹ್ಮಕಲಶೋತ್ಸವದ 2ನೇ ದಿನವಾದ ಇಂದು ಬೆಳಗ್ಗೆ ಉಷಾ ಪೂಜೆ, ಮಹಾಗಣಪತಿ ಹೋಮ, ದುರ್ಗಾ ಪೂಜೆ ಮುಂತಾದ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಳಗ್ಗೆ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕಲಾ ಸಂಘದಿಂದ ಶ್ರೀಕೃಷ್ಣ ಲೀಲಾಮೃತ ಯಕ್ಷಗಾನ, ಚಾಮುಂಡೇಶ್ವರಿ ಕುಣಿತ ಭಜನಾ ತಂಡದಿಂದ ಭಜನೆ, ಸಂಜೆ ಹರಿಕಥೆ, ಧಾರ್ಮಿಕ ಸಭೆಯಲ್ಲಿ ಶ್ರೀ ಡಾ. ಧರ್ಮಪಾಲನಾಥ ಸ್ವಾಮೀಜಿ ಆದಿಚುಂಚನಗಿರಿ ಅವರಿಂದ ಆಶೀರ್ವಚನ, ಅರುಣ್ ಕುಮಾರ್ ಪುತ್ತಿಲ ಅವರಿಂದ ದೀಪ ಪ್ರಜ್ವಲನೆ, ಪಂಜ ಭಾಸ್ಕರ್ ಭಟ್ ಅವರಿಂದ ಧಾರ್ಮಿಕ ಉಪನ್ಯಾಸ, ರಾತ್ರಿ 8ರಿಂದ ವಿಜಯ ಕುಮಾರ್ ಕೋಡಿಯಾಲ್‌ಬೈಲ್ ನಿರ್ದೇಶನದ ನಾಟಕ 'ಛತ್ರಪತಿ ಶಿವಾಜಿ' ಪ್ರದರ್ಶನಗೊಳ್ಳಲಿದೆ.

### ಕನ್ಯಾಡಿ ಶ್ರೀಕ್ಷೇತ್ರಕ್ಕೆ ಕಲ್ಲಡ್ಕ ಪ್ರಭಾಕರ ಭಟ್ ಭೇಟಿ

**ಬೆಳ್ತಂಗಡಿ:** ಶ್ರೀರಾಮ ನಾಮ ಸಪ್ತಾಹ ಹಾಗೂ ವಾರ್ಷಿಕ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ



ಧರ್ಮಸ್ಥಳ ಗ್ರಾಮದ ನಿತ್ಯಾನಂದ ನಗರದಲ್ಲಿನ ಶ್ರೀರಾಮ ಕ್ಷೇತ್ರ ಸಂಸ್ಥಾನಕ್ಕೆ ಹಿರಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಲ್ಲಡ್ಕ ಪ್ರಭಾಕರ ಭಟ್ ಭೇಟಿ ನೀಡಿ ಶ್ರೀ ದೇವರ ದರುಶನ ಪಡೆದರು. ಬಳಿಕ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರ ಆಶೀರ್ವಾದ ಪಡೆದರು.

### ಲಾಡಿ ದೇವಸ್ಥಾನ: ನೂತನ ಅಧ್ಯಕ್ಷರನ್ನಾಗಿ ರವಿಪ್ರಸಾದ್ ಕೆ. ಶೆಟ್ಟಿ

**ಮೂಡುಬಿದಿರೆ:** ಇಲ್ಲಿನ ಪುರಸಭೆ ವ್ಯಾಪ್ತಿಯ ಪ್ರಾಂತ್ಯ ಗ್ರಾಮದ ಲಾಡಿ ಶ್ರೀ ನಾಗಬ್ರಹ್ಮ ದೇವಸ್ಥಾನ ವ್ಯವಸ್ಥಾಪನ ಸಮಿತಿ ನೂತನ ಅಧ್ಯಕ್ಷರನ್ನಾಗಿ ರವಿಪ್ರಸಾದ್ ಕೆ. ಶೆಟ್ಟಿ ಅವರನ್ನು ಆಯ್ಕೆ



ಮಾಡಲಾಗಿದೆ. ಮುಂದಿನ ಮೂರು ವರ್ಷದ ಅವಧಿಗೆ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಆಯ್ಕೆ ಮಾಡಿ ಆದೇಶ ಹೊರಡಿಸಿದೆ. ಪ್ರಶಾಂತ್, ರೇಣುಕಾ, ಸ್ವಿತಾ ಕೆ., ಎಂ ಗಣೇಶ್ ರಾವ್, ಪ್ರಸಾದ್ ದೇವಾಡಿಗ, ಸದಾನಂದ ಬಿ.ಪೂಜಾರಿ, ಗಿರೀಶ್ ಹಾಗೂ ಪ್ರಧಾನ ಅರ್ಚಕರನ್ನು ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.

### ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ಕ್ಷೇತ್ರದಲ್ಲಿ ದೊಂಪದ ಬಲಿ



**ಉಪ್ಪಿನಂಗಡಿ:** ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಾಲಯದ ಸಂತಗದ್ದೆಯಲ್ಲಿ ಮಂಗಳವಾರ ರಾತ್ರಿ ದೊಂಪದ ಬಲಿ ಕಾರ್ಯಕ್ರಮ ಪರಂಪರಾಗತ ವಿಧಿ ವಿಧಾನಗಳೊಂದಿಗೆ ನಡೆಯಿತು. ದೇವಳದ ರಥದ ಮುಗುಳಿಯನ್ನು ತೆರವುಗೊಳಿಸಲು ದೈವದ ಸೂಚನೆ ನೀಡುವ ಪರಿಪಾಠದಂತೆ ದೊಂಪದ ಬಲಿಯ ವೇಳೆ ದೈವ ನೀಡಿದ ಸೂಚನೆಯಂತೆ ರಥದ ಮುಗುಳಿಯನ್ನು ತೆರವುಗೊಳಿಸಲಾಯಿತು. ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣನ್ನಾಯ್ಕ್, ಸದಸ್ಯ ವೆಂಕಪ್ಪ ಪೂಜಾರಿ ಮರುವೇಲು, ಅರ್ತಿಲ ಕೃಷ್ಣರಾವ್, ದೇವಿದಾಸ್ ರೈ, ಗೋಪಾಲಕೃಷ್ಣರೈ, ಪ್ರಮುಖರಾದ ಡಾ. ರಾಜಾರಾಮ್ ಕೆ.ಬಿ., ಕಂಗ್ವೆ ವಿಶ್ವನಾಥ ಶೆಟ್ಟಿ, ರಾಮಚಂದ್ರ ಮಣಿಯಾಣಿ, ಕೈಲಾರ್ ರಾಜಗೋಪಾಲ ಭಟ್, ಬಾಲಕೃಷ್ಣ ಶೆಟ್ಟಿ ಕಜೆಕ್ಕರ್, ಜಗದೀಶ್ ಕಜೆಕ್ಕಾರ್, ಅಭಯ ಜೈನ್, ವಿದ್ಯಾಧರ ಜೈನ್, ಜಯಂತ ಪೊರೋಳಿ, ಶರತ್ ಕೋಟೆ ಮತ್ತಿತರರು ಭಾಗವಹಿಸಿದ್ದರು. ಗಯಾಪದ ಕಲಾವಿದರಿಂದ ನಾಟಕ ಪ್ರದರ್ಶನ ನಡೆಯಿತು.

## ಬೋಳಾರದಲ್ಲಿ ಆತ್ಮಶಕ್ತಿ ಸಹಕಾರಿ ಸಂಘದ 34ನೇ ಶಾಖೆ ಉದ್ಘಾಟಿಸಿ ಕೃಷ್ಣ ಜೆ. ಪಾಲೆಮಾರ್ ಅಭಿಪ್ರಾಯ

# ಉತ್ತಮ ಸಹಕಾರಿಗಳಾಗಿ ರೂಪುಗೊಳ್ಳಲು ಆತ್ಮಶಕ್ತಿ ಅಗತ್ಯ

**ಮಂಗಳೂರು:** ಆತ್ಮಶಕ್ತಿ ಸಹಕಾರಿ ಸಂಘ ಜನರ ವಿಶ್ವಾಸ ಗಳಿಸಿದೆ. ಮುಂದಿನ ದಿನಗಳಲ್ಲಿ ಸಂಘದ ನೂರಾರು ಶಾಖೆಗಳು ಆರಂಭವಾಗಲಿ ಎಂದು ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಹೇಳಿದರು.

ಸಹಕಾರಿ ಕ್ಷೇತ್ರದಲ್ಲಿ ವೇಗವಾಗಿ ಮುನ್ನಡೆಯುವ ಜತೆಗೆ ಗ್ರಾಹಕರ ವಿಶ್ವಾಸ ಗಳಿಸಿರುವ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ 34ನೇ ಬೋಳಾರ ಶಾಖೆಯನ್ನು ಜಪ್ಪು ಮಾರ್ಕೆಟ್‌ನ ಭಗಿನಿ ಸಮಾಜದ ಬಳಿಯ ಯುನಿಕ್ ಸ್ಕ್ವೀಕ್ ಕಾಂಪ್ಲೆಕ್ಸ್‌ನ ನೆಲಮಹಡಿಯಲ್ಲಿ ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಒಳ್ಳೆಯ ಸಹಕಾರಿಗಳಾಗಿ ರೂಪುಗೊಳ್ಳಲು ಆತ್ಮಶಕ್ತಿ ಅಗತ್ಯ. ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆಯನ್ನು ಮಾಡಿಕೊಂಡು ಸಮಾಜಮುಖಿ ಕಾರ್ಯಗಳಲ್ಲೂ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಅವರು ತೊಡಗಿಸಿಕೊಂಡಿದ್ದಾರೆ. ಅವರ ಸ್ವಂತ ಊರಾದ ಬೋಳಾರದಲ್ಲಿ 34ನೇ ಶಾಖೆ ತೆರೆಯಲಾಗಿದ್ದು ಅದಕ್ಕೆ ಸಹಕಾರಿಗಳ ಸಹಕಾರ ಬೇಕಿದೆ. ಆತ್ಮಶಕ್ತಿ ವಿಶೇಷವಾಗಿ ಬೆಳೆದುಬರಬೇಕು. ಜನರಲ್ಲಿ ಶಕ್ತಿ ತುಂಬಿಸುವ ಕೆಲಸವಾಗಬೇಕು. ವಿಶ್ವಾಸವಿರಿಸುವ ಗ್ರಾಹಕರ ಹಣಕ್ಕೆ ಸೂಕ್ತ ಬಡ್ಡಿದರ ಹಾಗೂ ಭದ್ರತೆ ಒದಗಿಸುವ ಮೂಲಕ ಸಂಸ್ಥೆ ಬೆಳೆಯಲಿ ಎಂದು ಶುಭ



ಹಾರೈಸಿದರು. ಜತೆಗೆ ನೂತನ ಶಾಖೆಯಲ್ಲಿ 1 ಕೋ. ರೂ. ಠೇವಣಿ ಇರಿಸುವ ಘೋಷಣೆ ಮಾಡಿದರು.

**14 ವರ್ಷದಲ್ಲಿ 34 ಶಾಖೆ**

ಗಣಕೀಕೃತ ಕೋಶವನ್ನು ಉದ್ಘಾಟಿಸಿದ ಮೈಸೂರು ಪ್ರಾಂತ್ಯ ಸಹಕಾರಿ ಸಂಘಗಳ ಜಂಟಿ ನಿಬಂಧಕ ಸಿ. ಪ್ರಸಾದ್ ರೆಡ್ಡಿ ಮಾತನಾಡಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ 14 ವರ್ಷದಲ್ಲಿ 34 ಶಾಖೆ ತೆರೆದು 300 ಕೋ. ರೂ. ಠೇವಣಿ ಸಂಗ್ರಹಿಸಿದೆ. 10 ಸಾವಿರ ಸದಸ್ಯರನ್ನು ಹೊಂದಿದೆ. ಸಂಘದ ದೃಢ ಸಂಕಲ್ಪ ಹಾಗೂ ಆತ್ಮಶಕ್ತಿಯಿಂದ ಸಂಘ ಬೆಳೆದಿದೆ. ಜನರಿಗೆ ಹೇಗೆ ಸೇವೆ ನೀಡಬೇಕು ಎಂಬುವುದನ್ನು ಆತ್ಮಶಕ್ತಿಯಿಂದ ಕಲಿತುಕೊಳ್ಳಬೇಕು. ಸಹಕಾರಿ ಸಂಘ ಸ್ಥಾಪಿಸಿ ಬೆಳೆಯಲು ನಿರ್ದಿಷ್ಟ ಗುರಿ, ದೃಷ್ಟಿಕೋನ, ಶಿಸ್ತು, ದೂರದೃಷ್ಟಿ ಸೇವಾ ಮನೋಭಾವ ಅಗತ್ಯ. ನಿಸ್ವಾರ್ಥವಾದ ಸೇವಾ ಮನೋಭಾವ ಇದ್ದಲ್ಲಿ ಮಾತ್ರ ಸಹಕಾರಿ ಸಂಘ ಬೆಳೆಯಲು ಸಾಧ್ಯ. ಸ್ವಾರ್ಥ ಎಂಬುವುದು ಹುಟ್ಟಿಕೊಂಡರೆ ಸಂಘ ಬೆಳೆಸಲು ಸಾಧ್ಯವಿಲ್ಲ. ಸಂಘದ ಮೇಲೆ ಜನರಿಗೆ ನಂಬಿಕೆ ಅಗತ್ಯ. ಸಾಲ ಪಡೆಯುವವರಿಗೆ ಉತ್ತಮ ಸೇವೆ ನೀಡುವುದು ಮುಖ್ಯವಾಗಿದೆ. ಆತ್ಮ ಶಕ್ತಿ ಜನರಲ್ಲಿ ಶಕ್ತಿ ಮೂಡಿಸುವ ಜತೆಗೆ ಸಂಸ್ಥೆಯೂ ಕೂಡ ಶಕ್ತಿ ಶಾಲಿಯಾಗಿ ಬೆಳೆಯಲಿ ಎಂದರು.

ಸಮಾಜ ಸೇವಕಿ ತಾರಾ ಹೇಮಚಂದ್ರ ದೀಪ ಬೆಳಗಿಸಿ ಶುಭಹಾರೈಸಿದರು. ಭದ್ರತಾ ಕೋಶವನ್ನು ಮಂಗಳೂರು ಕೋ ಆಪರೇಟಿವ್ ಬಿಲ್ಡಿಂಗ್ ಸೊಸೈಟಿಯ ಅಧ್ಯಕ್ಷ ರಂಜನ್ ಮಿಜಾರ್ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್, ಮಂಗಳಾದೇವಿ ಸೇವಾ ಸಮಿತಿಯ ಗೌರವಾಧ್ಯಕ್ಷ ಅಶೋಕ್ ಕುಮಾರ್, ದ.ಕ. ಜಿಲ್ಲಾ ಅಮೆಚೂರು ಕುಸ್ತಿ ಅಸೋಸಿಯೇಷನ್ ಅಧ್ಯಕ್ಷ ದಿಲ್‌ರಾಜ್ ಆಳ್ವ, ಮಂಗಳಾದೇವಿ ಬಿಲ್ಲವ ಸಂಘದ ಅಧ್ಯಕ್ಷ ರಾಜರತ್ನ ಸನಿಲ್, ಸಹಕಾರಿ ಸಂಘಗಳ ಉಪನಿಬಂಧಕ ರಮೇಶ್ ಎಚ್. ಎನ್., ಮನಪಾ ನಿಕಟಪೂರ್ವ ಸದಸ್ಯೆ ಭಾನುಮತಿ, ಉದ್ಯಮಿ ರಮಾನಂದ ಪೂಜಾರಿ, ಕಟ್ಟಡ ಮಾಲಕ ಜೆನೆಟ್ ಮೆಲ್ವಿನ್ ಡಿಸೋಜ, ಆಡಳಿತ ಮಂಡಳಿಯ ನಿರ್ದೇಶಕರು, ವಿವಿಧ ಸಹಕಾರಿ ಸಂಘದ ಅಧ್ಯಕ್ಷರು ಮುಖ್ಯಸ್ಥರು ಉಪಸ್ಥಿತರಿದ್ದರು.

ಕಾರ್ಯನಿರ್ವಹಣಾ ಅಧಿಕಾರಿ ಸೌಮ್ಯ ವಿಜಯ್ ಸ್ವಾಗತಿಸಿದರು. ಉಪಾಧ್ಯಕ್ಷ ನೇಮಿರಾಜ್ ಪಿ. ವಂದಿಸಿ, ವಿಶ್ವನಾಥ್ ರೆಂಜಾಳ ಕಾರ್ಯಕ್ರಮ ನಿರೂಪಿಸಿದರು.

> **ಗ್ರಾಹಕರಿಗೆ ವಿಶೇಷ ಸವಲತ್ತು**
> ಮಾರ್ಚ್ ಅಂತ್ಯದೊಳಗೆ 10 ಕೋ. ರೂ. ಠೇವಣಿ ಸಂಗ್ರಹದ ಗುರಿ ಇದೆ. ಈಗಾಗಲೇ 3 ಕೋ.ರೂ. ಠೇವಣಿ ಸಂಗ್ರಹವಾಗಿದೆ. ಉದ್ಘಾಟನಾ ಸಮಾರಂಭದ ಪ್ರಯುಕ್ತ ವಿಶೇಷ ಬಡ್ಡಿ ದರಗಳಿವೆ. 100 ದಿನಗಳಿಗೆ ಶೇ. 8.50, 500 ದಿನಗಳಿಗೆ 10 ಶೇ. ಹಾಗೂ ಸಾವಿರ ದಿನಗಳಿಗೆ 10.50 ಶೇ. ಬಡ್ಡಿದರ ಸಿಗಲಿದೆ. ಕಡಿಮೆ ಬಡ್ಡಿ ದರದಲ್ಲಿ ಚಿನ್ನಾಭರಣ ಸಾಲ ನೀಡಲಾಗುತ್ತದೆ. ಅಲ್ಲದೆ, ಶಾಖೆಯಲ್ಲಿ ವಿವಿಧ ಸಾಲ ಸೌಲಭ್ಯಗಳನ್ನು ಗ್ರಾಹಕರು ಪಡೆಯಬಹುದಾಗಿದೆ. ಆತ್ಮ ಶಕ್ತಿ ಭವಿಷ್ಯ ಸುರಕ್ಷಾ ವಿಶೇಷ ಯೋಜನೆಗಳಿವೆ. ದೇಶದಾದ್ಯಂತ ಡಿಡಿ, ನೆಫ್ಟ್ ಆರ್ ಟಿಜಿಎಸ್, ಗಣಕೀಕೃತ ಬ್ಯಾಂಕಿಂಗ್ ಸೇವೆ ಮತ್ತು ಈಸಿ ಪೇಪರ್ ಸೇವೆ, ಆವರ್ತನ ಠೇವಣಿ, ಪಿಗ್ಮಿ, ಮೈಕ್ರೋ ಸಾಲಗಳು ಸಂಸ್ಥೆಯ ಮೂಲಕ ಲಭ್ಯವಿದೆ.
> ● ಚಿತ್ತರಂಜನ್ ಬೋಳಾರ್, ಆತ್ಮಶಕ್ತಿ ಸಹಕಾರಿ ಸಂಘದ ಅಧ್ಯಕ್ಷ

## ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಧಾರ್ಮಿಕ ಸಭೆ

# ಜಾತಿ ಕಟ್ಟುಪಾಡು ದೂರವಾಗಲಿ: ಮಾಣಿಲ ಶ್ರೀ



**ಆಲಂಕಾರು:** ದೇವಾಲಯಗಳು ಸಂಸ್ಕಾರಯುತ ಧರ್ಮದ ಸನ್ನಡತೆ, ಸದ್ಭಾವನೆಗಳನ್ನು ಮೂಡಿಸುವ ಕೇಂದ್ರಗಳಾಗಿ ಮೂಡಿಬರಬೇಕು ಎಂದು ಶ್ರೀಧಾಮ ಮಾಣಿಲ ಮೋಹನದಾಸ ಪರಮಹಂಸ ಸ್ವಾಮೀಜಿ ಕರೆ ನೀಡಿದರು.

ಅವರು ಬುಧವಾರ ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾ ಪರಮೇಶ್ವರೀ ದೇವಾಲಯದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿ, ದೇವಾಲಯಗಳು ಸನಾತನ ಹಿಂದೂ ಧರ್ಮದ ಬದ್ಧತೆಯ ಮೂಲಕ ಸಮಾಜ ಬಹಳಷ್ಟು ರೀತಿಯ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ತ್ಯಾಗ, ಸಮರ್ಪಣಾ ಸೇವಾ ಮನೋಭಾವದೊಂದಿಗೆ ಯಾವ ಮನಸ್ಸಿಗೂ ನೋವಾಗದ ರೀತಿಯಲ್ಲಿ ಯಾವ ಜೀವಿಗೂ ಹಿಂಸೆಯಾಗದ ರೀತಿಯಲ್ಲಿ ಹಿಂದೂ ಧರ್ಮ ಸಾಗಿ ಬಂದ ಇತಿಹಾಸವಿದೆ ಎಂದರು.

ದೇಶದಲ್ಲಿ ಸಾಕಷ್ಟು ದೇವಾಲಯಗಳು ಮಠಮಂದಿರಗಳಿವೆ. ದೇವಸ್ಥಾನ ಭಜನಾ ಮಂದಿರಗಳು ಅಭಿವೃದ್ಧಿಯಾದರೆ ಗ್ರಾಮದ ಅಭಿವೃದ್ಧಿಯಾದಂತೆ. ಎಲ್ಲಾ ಕಡೆ ಇರುವ ಆರಾಧನಾ ಸಾನಿಧ್ಯಗಳು ಅದರದ್ದೇ ಆದ ಮಹತ್ವ ವೈಶಿಷ್ಟತೆ, ಪಾವಿತ್ರತೆಯಿಂದ ಕೂಡಿದೆ. ಪವಿತ್ರ ಮನಸ್ಸಿನ ಮುಗ್ದ ಭಕ್ತಿಗೆ ದೇವರು ಒಲಿಯುತ್ತಾನೆ. ಈ ದೇಶದ ಪರಂಪರೆ ಸಂಸ್ಕೃತಿ, ಸಂಸ್ಕಾರಗಳನ್ನು ಜನತೆ ಅರ್ಥ ಮಾಡಿಕೊಳ್ಳಲು ಇಂತಹ ಧಾರ್ಮಿಕ ಸಭೆಗಳಿಂದ ಮಾತ್ರ ಸಾಧ್ಯ. ಸಮಾಜದಲ್ಲಿರುವ ಜಾತಿ ಜಾತಿಯ ಕಟ್ಟುಪಾಡುಗಳನ್ನು ಬಿಟ್ಟು ನೀತಿಯ ಕಟ್ಟುಪಾಡು ಕಾಪಾಡುವ ಮಹಾನ್ ಕಾರ್ಯಗಳಾಗಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಮಾಜಿ ಶಾಸಕ ಸಚಿವ ಎಸ್. ಅಂಗಾರ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಶರವೂರು ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡುವ ಮೂಲಕ ದೇವಿಯ ಸೇವೆ ಮಾಡಲು ಸಿಕ್ಕ ಅವಕಾಶ ಸುಸಂದರ್ಭವಾಗಿ ಮಾಡಿದ್ದೇನೆ. ಬೇರೆಧರ್ಮದಲ್ಲಿನ ಧರ್ಮ ರಕ್ಷಣೆ ಆಗುತ್ತಿದ್ದು ಹಿಂದೂ ಧರ್ಮದ ಧಾರ್ಮಿಕ ಮೌಲ್ಯಗಳ ಬಗ್ಗೆ ಅರಿವು ಜಾಗೃತಿ ಮೂಡಿಸುವ ಕಾರ್ಯ ನಡೆದಾಗ ಮಾತ್ರ ಧರ್ಮ ರಕ್ಷಣೆ ಸಾಧ್ಯ ಎಂದರು.

ಸವಣೂರು ವಿದ್ಯಾರಶ್ಮಿ ವಿದ್ಯಾಸಂಸ್ಥೆಗಳ ಮುಖ್ಯಸ್ಥ ಸವಣೂರು ಸೀತಾರಾಮ ರೈ, ಮಾತನಾಡಿ, ಬಾಹ್ಯ ಆಕರ್ಷಣೆಗೆ ಒಳಗಾಗಿ ಇಂದಿನ ಯುವ ಸಮುದಾಯ ದಾರಿ ತಪ್ಪುತ್ತಿದೆ. ಇದು ಆಘಾತಕಾರಿ ಬೆಳವಣಿಗೆ. ಯುವ ಸಮುದಾಯ ದೇವಾಲಯ ಮಠ ಮಂದಿರಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರೇರಣೆಯಾಗಬೇಕು ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಎ. ಬಾಬು ನಾಯ್ಕ ಮಾತನಾಡಿದರು. ಶರವೂರು ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್ ಅಧ್ಯಕ್ಷತೆ ವಹಿಸಿದ್ದರು. ಭದ್ರತಾ ಕೊಠಡಿಯನ್ನು ಡಾ. ಮಮತಾ ಪಿ. ಶೆಟ್ಟಿ ಉದ್ಘಾಟಿಸಿದರು. ಮಂಗಳೂರಿನ ಉದ್ಯಮಿ ಸುರೇಶ ರೈ ಮನವಳಿಕೆಗುತ್ತು, ನವ್ಯಶ್ರೀ ಪ್ರಾಂಶುಪಾಲ ವಿಠಲ ರೈ ಕೋಣಾಲುಗುತ್ತು ಮತ್ತಿತರರು ಉಪಸ್ಥಿತರಿದ್ದರು. ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಹೇಮಂತ್ ರೈ ಮನವಳಿಕೆ ಗುತ್ತು ಸ್ವಾಗತಿಸಿ, ಕಡಬ ಉಪ ತಹಶೀಲ್ದಾರ್ ಜಿ. ಗೋಪಾಲ ವಂದಿಸಿದರು. ಗಣರಾಜ ಕುಂಬ್ಳೆ ನಿರ್ವಹಿಸಿದರು. ಶಿಕ್ಷಕ ಚಂದ್ರಹಾಸ ಕೆ.ಸಿ., ಉಪನ್ಯಾಸಕ ಜನಾರ್ದನ ಪ್ರಶಾಂತ್ ರೈ ಮನವಳಿಕೆ ಸಹಕರಿಸಿದರು.

## ಮಾ.29ರಿಂದ ಏ.6ರವರೆಗೆ ವಿವಿಧ ಕಾರ್ಯಕ್ರಮ | ಶಾಸಕ ಪೂಂಜ ಮಾಹಿತಿ

# ಬ್ರಹ್ಮಕಲಶೋತ್ಸವಕ್ಕೆ ಸಜ್ಜಾಗಿದೆ ಬಳ್ಳಮಂಜ ಶ್ರೀಕ್ಷೇತ್ರ



**ಬೆಳ್ತಂಗಡಿ:** 'ಬಳ್ಳೊಡು ಮಂಜಲ್' ಎಂಬ ನಾಣ್ಣುಡಿಯಂತೆ ಬಳ್ಳದಲ್ಲಿ ಉದಿಸಿದ ಶ್ರೀ ದೇವರು ಅನಂತೇಶ್ವರ. ಇತಿಹಾಸ ಪ್ರಸಿದ್ಧ ಕ್ಷೇತ್ರವಾಗಿ ಬಳ್ಳಮಂಜ ಶ್ರೀ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಾಸ್ತುಶಾಸ್ತ್ರಾನ್ವಯ ಪುನರ್ನಿರ್ಮಾಣಗೊಂಡ ನೂತನ ಧ್ವಜಸ್ತಂಭ, ನೂತನ ಬ್ರಹ್ಮರಥ ಸಹಿತ ಈಶ್ವರ ದೇವರ ನೂತನ ಶಿಲಾಮಯ ಮಂಟಪ ಗರ್ಭಗೃಹದ ಸಮರ್ಪಣಾ ಪೂರ್ವಕ ಶ್ರೀ ಈಶ್ವರ ದೇವರ ಲಿಂಗ ಪುನಃಪ್ರತಿಷ್ಠೆ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ನೂತನ ಬ್ರಹ್ಮರಥದಲ್ಲಿ ಪ್ರಥಮ ಬ್ರಹ್ಮರಥೋತ್ಸವವು ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ದೇರೆಬೈಲು ಡಾ. ಶಿವಪ್ರಸಾದ ತಂತ್ರಿವರೇಣ್ಯರ ನೇತೃತ್ವದಲ್ಲಿ ವೇದಾಗಮ ತಜ್ಞರು, ವೈದಿಕೋತ್ತಮರ ಸಹಯೋಗದೊಂದಿಗೆ ಮಾ.29ರಿಂದ ಏ.6ರವರೆಗೆ ನೆರವೇರಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಶಾಸಕ ಹರೀಶ್ ಪೂಂಜ ಹೇಳಿದರು.

ಅವರು ಬಳ್ಳಮಂಜ ಮಹತೋಭಾರ ಶ್ರೀ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕ್ಷೇತ್ರದ ಆನುವಂಶೀಯ ಆಡಳಿತ ಮೊಕ್ತೇಸರ ಡಾ. ಎಂ. ಹರ್ಷ ಸಂಪಿಗೆತ್ತಾಯ ಮಾತನಾಡಿ, 'ಸುಮಾರು 3 ಕೋಟಿಗೂ ಅಧಿಕ ವೆಚ್ಚದಲ್ಲಿ ದೇವಸ್ಥಾನದ ಹಲವಾರು ಕೆಲಸ ಕಾರ್ಯಗಳು ನಡೆದಿವೆ. ಬ್ರಹ್ಮಕಲಶೋತ್ಸವದ ಪ್ರಯುಕ್ತ ಶೇ.90ರಷ್ಟು ಕೆಲಸಗಳು ಈಗಾಗಲೇ ನಡೆದಿವೆ. ಕರಸೇವೆಯ ಮೂಲಕ ಸಾವಿರಾರು ಭಕ್ತಾದಿಗಳು ನಿತ್ಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸಭೆ ಸಮಾರಂಭಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅದ್ಧೂರಿ ನೀಡದೆ ಧಾರ್ಮಿಕ ವಿಧಿ ವಿಧಾನಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಶಾಸಕ ಹರೀಶ್ ಪೂಂಜರ 10 ಲಕ್ಷ ರೂ. ಅನುದಾನದಿಂದ ದೇವಾಲಯದ ಪಶ್ಚಿಮ ಭಾಗದಲ್ಲಿ ಶೀಟ್ ಅಳವಡಿಕೆ ನಡೆಸಲಾಗುತ್ತಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಸಂತ ಗೌಡ ಮರಕ್ಕಡ ಮಾತನಾಡಿದರು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ದೇರೆಬೈಲು ಡಾ. ಶಿವಪ್ರಸಾದ ತಂತ್ರಿ ಅವರು ವೈದಿಕ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸುಧೀರ್ ಕುಮಾರ್ ಶೆಟ್ಟಿ ಕೊರೊಟ್ಟು, ಆರ್ಥಿಕ ಲಕ್ಷ್ಮಣ ಶಾಂತ್ಯಾಯ, ಡಾ. ಪಿ. ಅನಂತಕೃಷ್ಣ ಭಟ್ ಮಂಗಳೂರು, ಚಂದ್ರಕಾಂತ್ ನಿಡ್ಡಾಜೆ, ಹೊನ್ನಪ್ಪ ಕುಲಾಲ್ ಮಣಾರು, ನಾರಾಯಣ ಪೂಜಾರಿ ಬಳ್ಳಮಂಜ, ಅವಿನಾಶ್ ಕುಲಾಲ್ ಮಣಾರು, ಗೋಪಾಲ ಪೂಜಾರಿ ಕೊಲಾಜೆ, ಪ್ರಶಾಂತ್ ಶೆಟ್ಟಿ ಮೂಡಯೂರು, ತುಳಸಿದಾಸ್ ಪೈ ಸಹಿತ ಮುತ್ತಿತರರು ಇದ್ದರು.

> ನಾಡಿನ ಪ್ರಸಿದ್ಧ ನಾಗಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ ಕಳೆಕಟ್ಟಿದೆ. ಈಗಾಗಲೇ ಜೀರ್ಣೋದ್ಧಾರ ಕಾರ್ಯ ಮುಕ್ತಾಯದ ಹಂತದಲ್ಲಿದೆ. ಬ್ರಹ್ಮಕಲಶೋತ್ಸವಕ್ಕೆ 50 ಸಾವಿರ ಜನ ಸೇರುವ ನಿರೀಕ್ಷೆಯಿದೆ. ಇಂದು ಮಡಂತ್ಯಾರಿನಿಂದ ತಣ್ಣೀರುಪಂಥ ತನಕ ರಸ್ತೆ ಬದಿ ಸ್ವಚ್ಛತೆ ನಡೆಸಲಾಗುವುದು. ಸ್ವಚ್ಛತಾ ಕಾರ್ಯದಲ್ಲಿ ಸಾವಿರಕ್ಕೂ ಮಿಕ್ಕಿ ಭಕ್ತರು ಭಾಗವಹಿಸಲಿದ್ದಾರೆ.
> ● ವಸಂತ ಗೌಡ ಮರಕ್ಕಡ

# ದೇಂದಡ್ಕ ಪುತ್ತೂರು ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂಭ್ರಮ



**ಮುಲ್ಕಿ:** ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಮಾ.25ರಂದು ಶ್ರೀ ದೇವರಿಗೆ ಅಷ್ಟಬಂಧ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕವು ವಿಜೃಂಭಣೆಯಿಂದ ನಡೆಯಿತು.



ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿಗಳ ಅಮೃತ ಹಸ್ತದಲ್ಲಿ, ಪ್ರಧಾನ ಅನುವಂಶಿಕ ಅರ್ಚಕ ಪಿ. ಸುಬ್ರಹ್ಮಣ್ಯ ಭಟ್ ಉಪಸ್ಥಿತಿಯಲ್ಲಿ ಪ್ರಾತಃಕಾಲ ವಿಶೇಷ ಪ್ರಾರ್ಥನೆ ನಡೆದು, ಬೆಳಗ್ಗೆ 10.11ಕ್ಕೆ ಒದಗುವ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರಿಗೆ ಬ್ರಹ್ಮಕಲಶಾಭಿಷೇಕ ನಡೆಯಿತು.

ಬಳಿಕ ರುದ್ರ ಯಾಗ, ಮಹಾಪೂಜೆ ಪಲ್ಲಪೂಜೆ ಹಾಗೂ ಪುತ್ತೂರ ಬಾವ ರಾಮಣ್ಣ ಮತ್ತು ಕಮಲ ಶೆಟ್ಟಿ ಸಭಾಂಗಣ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ 7ರಿಂದ ರಂಗ ಪೂಜೆ ಉತ್ಸವ ಮಹಾಮಂತ್ರಾಕ್ಷತೆ ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ಕ್ಷೇತ್ರದ ಬ್ರಹ್ಮಕಲಶೋತ್ಸವ ಹಾಗೂ ಜೀರ್ಣೋದ್ಧಾರ ಸಮಿತಿ, ಆಡಳಿತ ಮಂಡಳಿ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.

# ಕರಾಯ ಶ್ರೀಕ್ಷೇತ್ರದ ಬ್ರಹ್ಮಕಲಶೋತ್ಸವ: ಆಮಂತ್ರಣ ಪತ್ರಿಕೆ ಬಿಡುಗಡೆ

**ಉಪ್ಪಿನಂಗಡಿ:** ಬೆಳ್ತಂಗಡಿ ತಾಲೂಕಿನ ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಅಣಿಯಾಗುತ್ತಿದೆ. ನಾಡಿನಲ್ಲಿ ವಿಶೇಷ ರೀತಿಯ ಶೈಲಿಯಲ್ಲಿ ಉತ್ತಮ ರಾಜಗೋಪುರ ಇಲ್ಲಿ ನಿರ್ಮಾಣಗೊಂಡಿದೆ ಎಂದು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ, ಶಾಸಕ ಹರೀಶ್ ಪೂಂಜ ಹೇಳಿದರು.



ಅವರು ಬುಧವಾರ ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಆಮಂತ್ರಣ ಬಿಡುಗಡೆಗೊಳಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ದೇವಳದಲ್ಲಿ ಏ.15ರಿಂದ ಆರಂಭಗೊಂಡು ಏ.25ರ ತನಕ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಮಾರ್ಗದರ್ಶನದಲ್ಲಿ, ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಶ್ರೀಗಳ ದಿವ್ಯ ಉಪಸ್ಥಿತಿಯಲ್ಲಿ ಸಹಸ್ರ ಕಲಶ ಸಹಿತ ಅಷ್ಟಬಂಧ ಬ್ರಹ್ಮಕಲಶೋತ್ಸವ, ನೂತನ ಧ್ವಜಸ್ತಂಭ ಪ್ರತಿಷ್ಠೆ ನೂತನ ಬ್ರಹ್ಮರಥ ಸಮರ್ಪಣೆ, ವಾರ್ಷಿಕ ಜಾತ್ರಾ ಮಹೋತ್ಸವ ಮತ್ತು ಬ್ರಹ್ಮರಥೋತ್ಸವ ಹಾಗೂ ನೇಮ ನಡೆಯಲಿದೆ ಎಂದು ಅವರು ಹೇಳಿದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಅತುಲ್ ಕುಮಾರ್ ಕೆ.ಎನ್. ಹಲೇಜಿ ಮಾತನಾಡಿ, ಜೀರ್ಣೋದ್ಧಾರ ಕಾರ್ಯಗಳು ಭರದಿಂದ ಸಾಗುತ್ತಿದೆ. ಶಾಸಕ ಹರೀಶ್ ಪೂಂಜರು ರೂ.50 ಲಕ್ಷ ಅನುದಾನ ಒದಗಿಸಿದ್ದಾರೆ. ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ನಾಗಾರ್ಜುನ ರಾವ್ ಬೆಂಗಳೂರು ರೂ.17 ಲಕ್ಷ ದೇಣಿಗೆ ನೀಡಿದ್ದು, ಎಲ್ಲರ ಸಹಕಾರದೊಂದಿಗೆ ಅನ್ನಛತ್ರ, ರಾಜಗೋಪುರ, ಹೊಸ ನಮಸ್ಕಾರ ಮಂಟಪ, ಸುತ್ತು ಪೌಳಿಗೆ 16 ಕಲ್ಲಿನ ಕಂಬಗಳು ನಿರ್ಮಾಣದೊಂದಿಗೆ ಜೀರ್ಣೋದ್ಧಾರ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ ಎಂದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಅನಂತಕೃಷ್ಣ ಕುದ್ದಣ್ಣಾಯ ಮಾತನಾಡಿ, ಕ್ಷೇತ್ರದಲ್ಲಿ ರೂ.3.5 ಕೋಟಿ ವೆಚ್ಚದಲ್ಲಿ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಗೌರಾಧ್ಯಕ್ಷ ನಾಗಾರ್ಜುನ ರಾವ್ ಬೆಂಗಳೂರು, ಕಾರ್ಯಾಧ್ಯಕ್ಷ ಜಗದೀಶ್ ಶೆಟ್ಟಿ ಮೈರಾ ಹಾಗೂ ಜಯವಿಕ್ರಮ್ ಕಲ್ಲಾಪು, ಪ್ರಧಾನ ಕಾರ್ಯದರ್ಶಿ ದುರ್ಗೇಶ್ ವಿ. ಕೆದಿಲಾಯ, ಜೊತೆ ಕಾರ್ಯದರ್ಶಿ ಗೀತಾ ಕುದ್ದಣ್ಣಾಯ, ಡಾ. ಅಣ್ಣು ಗೌಡ ಕಡ್ತಿಮಾರು, ಗುಣಾಕರ ಅಗ್ನಾಡಿ, ಕೋಶಾಧಿಕಾರಿ ಸಾಮ್ರಾಟ್ ಕರ್ಕೇರ, ಜೊತೆ ಕೋಶಾಧಿಕಾರಿ ಉಮೇಶ್ ಗೌಡ ಬನಾರಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸುದರ್ಶನ್ ಸುಪ್ರಭಾತ ಕೊಲ್ನಿ, ಅರ್ಚಕ ಶಶಿಕಾಂತ್ ಕೆ. ರಾವ್, ಉಪಾಧ್ಯಕ್ಷ ಯುವರಾಜ್ ಅನಾರು, ಜೊತೆ ಕಾರ್ಯದರ್ಶಿ ರಾಜಶೇಖರ ರೈ ಪೆರೋಡಿ, ಕೇಶವ ಕುಂದರ್ ಪೂಂಜಾಳ, ವಾಸುದೇವ ಹರ್ಷಿತ ಕಲ್ಲೇರಿ, ಸಮಿತಿ ಸದಸ್ಯ ದಯಾನಂದ ಪಂಜಿಕುಡೇಲು, ಜಯಪ್ರಕಾಶ್ ಶೆಟ್ಟಿ ಮೈರ, ಕುಶಾಲಪ್ಪಗೌಡ ಇಜಿಮಾನ್, ಸೂರ ಪಡ್ಡಾಯಿಬೆಟ್ಟು, ನಂದಿನಿ ದೇವರಮಾರು ಹಾಗೂ ತೇಜಸ್ವಿನಿ ಗರಡಿಬಳಿ, ನಿವೃತ್ತ ಸೇನಾಧಿಕಾರಿ ಸುರೇಶ್ ಕೆ., ತಣ್ಣೀರುಪಂಥ ಸಹಕಾರಿ ಸಂಘದ ಅಧ್ಯಕ್ಷ ಜಯಾನಂದ ಕಲ್ಲಾಪು, ಪ್ರಮುಖರಾದ ಕಿಶೋರ್ ಪಂಜಿಕುಡೇಲು, ಬಾಲಕೃಷ್ಣ ಕುಲಾಲ್, ರಾಮಚಂದ್ರ ಗೌಡ, ರಾಮಕೃಷ್ಣ ಶೆಟ್ಟಿ ನವೀನ್, ಬೂದಪ್ಪ ರಾಧಾಕೃಷ್ಣ ಲಿಂಗಪ್ಪ ಪ್ರಮೀಳಾ ಕೊಲ್ನಿ ಇಂಚರ, ಪ್ರಭಾಕರ ಪಸಂತೋಡಿ, ಗೀತಾ ಕುದ್ದಣ್ಣಾಯ, ಚಂಚಲಾಕ್ಷಿ, ವೇದಾವತಿ, ಮಾಜಿ ತಾ.ಪಂ. ಸದಸ್ಯ ಮಂಜುನಾಥ್ ಸಾಲಿಯಾನ್, ಭಾಸ್ಕರ್ ನಾಯಕ್ ಕಡ್ತಿಮಾರು, ಜಗದೀಶ್ ಗೌಡ, ರಘುರಾಮ ಶೆಟ್ಟಿ ಗೋಪಾಲಕೃಷ್ಣ ಪೈ, ತೀರ್ಥರಾಮ, ಟೈಲರ್ ವಿಶ್ವನಾಥ್, ಆನಂದ, ನೋಣಯ್ಯ ಗೌಡ, ಬೊಮ್ಮಯ್ಯ ಬಂಗೇರ, ಉಮೇಶ್ ಗೌಡ, ಉಷಾ ಕುದ್ದಣ್ಣಾಯ, ನೋಣಯ್ಯ ಪೂಜಾರಿ, ಅಶೋಕ್ ಭಟ್, ಉಮಾನಾಥ್ ಪೂಜಾರಿ, ಕಿಶೋರ್ ಕರಾಯ, ನವೀನ್ ಪಂಜಿಕುಡೇಲು, ಗೀತಾ ರಾವ್, ಸೀತಾಲಕ್ಷ್ಮೀ, ವಿಠಲ ಭಟ್, ಧ.ಗ್ರಾ. ಯೋಜನಾಧಿಕಾರಿ ಅಶೋಕ್ ಮತ್ತಿತರರಿದ್ದರು.

## 7 ಕಿ.ಮೀ. ಉದ್ದದ ವಾಹನ ಜಾಥಾದಲ್ಲಿ ನೂರಾರು ಹೊರೆಕಾಣಿಕೆ ವಾಹನಗಳ ಮೆರವಣಿಗೆ | ಟ್ಯಾಬ್ಲೋ, ಯಕ್ಷಗಾನ, ಪೌರಾಣಿಕ ವೇಷಗಳ ಆಕರ್ಷಣೆ

# ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮಕ್ಕೆ ಚಾಲನೆ

**ಆಲಂಕಾರು:** ಕಡಬ ತಾಲೂಕಿನ ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬ್ರಹ್ಮಕಲಶೋತ್ಸವ ಕಾರ್ಯಕ್ರಮಕ್ಕೆ ಬುಧವಾರ ಭಕ್ತಾದಿಗಳು ಹೊರೆಕಾಣಿಕೆ ಸಮರ್ಪಿಸುವ ಮೂಲಕ ಚಾಲನೆ ದೊರೆಯಿತು.

ಕ್ಯೊಲ, ರಾಮಕುಂಜ, ಹಳೆನೇರೆಂಕಿ, ಪೆರಾಬೆ, ಆಲಂಕಾರು, ಕುಂತೂರು, ಕುದ್ಮಾರು, ಸವಣೂರು, ಕಾಣಿಯೂರು, ಬಲ್ಯ, ಚಾರ್ವಾಕ ಗ್ರಾಮಗಳಿಂದ ಆಗಮಿಸಿದ ಭಕ್ತಾದಿಗಳು ಆಲಂಕಾರು ಪೇಟೆಯ ಮುಖ್ಯ ದ್ವಾರದ ಬಳಿ ಸೇರಿ, ಮೆರವಣಿಗೆಯಲ್ಲಿ ಸಾಗಿದರು. ಸುಮಾರು 7 ಕಿ.ಮೀ. ಉದ್ದದ ವಾಹನ ಜಾಥಾದಲ್ಲಿ ನೂರಾರು ಹೊರೆಕಾಣಿಕ ತುಂಬಿದ ವಾಹನಗಳು ಸಾಗಿದವು. ಮಹಿಳೆಯರ ಕುಣಿತ ಭಜನೆ, ಪೂರ್ಣಕುಂಭ ಸ್ವಾಗತ, ನಾಸಿಕ್ ಬ್ಯಾಂಡ್,





ಸಿಂಗಾರಿ ಮೇಳದ ಚೆಂಡೆ, ಚೆಂಡೆ ಪ್ರದರ್ಶನ, ಟ್ಯಾಬ್ಲೋ, ಯಕ್ಷಗಾನ, ಪೌರಾಣಿಕ ವೇಷಗಳು, ಛತ್ರಿ, ಚಾಮರ, ಕೊಂಬು ವಾಲಗ, ಮೆರವಣಿಗೆಯ ಉದ್ದಕ್ಕೂ ಮೆರಗು ನೀಡಿದವು.

**ಮೆರವಣಿಗೆ ಉದ್ಘಾಟನೆ**

ಆರಿಕೋಡಿ ಶ್ರೀ ಚಾಮುಂಡೇಶ್ವರೀ ಕ್ಷೇತ್ರದ ಧರ್ಮದರ್ಶಿ ಹರೀಶ ಆರಿಕೋಡಿ ಹೊರೆಕಾಣಿಕೆಯ ಮೆರವಣಿಗೆಯನ್ನು ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ಹೊರೆಕಾಣಿಕೆ ಸಮಿತಿ ಸಂಚಾಲಕ ಜನಾರ್ದನ ಗೌಡ ಕಯ್ಯಪೆ ತೆಂಗಿನಕಾಯಿ ಒಡೆಯುವ ಮೂಲಕ ಚಾಲನೆ ನೀಡಿದರು. ರಾಜಗೋಪುರ ಉದ್ಘಾಟನೆ ಹಾಗೂ ಉಗ್ರಾಣ ಮುಹೂರ್ತವನ್ನು ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ್ ಸ್ವಾಮೀಜಿ ನೆರವೇರಿಸಿದರು.

ವೇದಮೂರ್ತಿ ಕುಡುಪು ನರಸಿಂಹ ತಂತ್ರಿಗಳು ದೇವಸ್ಥಾನದ ಮಹಾದ್ವಾರವನ್ನು, ಮಾಜಿ ಸಚಿವ ಎಸ್. ಅಂಗಾರ ಕಾರ್ಯಾಲಯವನ್ನು, ಅಭಿಮತ ಟಿ.ವಿ.ಯ ಆಡಳಿತ ಪಾಲುದಾರೆ ಡಾ. ಮಮತಾ ಪಿ. ಶೆಟ್ಟಿ ಭದ್ರತಾ ಕೊಠಡಿಯನ್ನು ಉದ್ಘಾಟಿಸಿದರು. ಆಲಂಕಾರ ಸಮಿತಿಯ ವತಿಯಿಂದ ಕೊಡ ಮಾಡಿದ ಆ್ಯಂಬುಲೆನ್ಸ್ ಅನ್ನು ಮುಳುಗು ತಜ್ಞ ಈಶ್ವರ ಮಲ್ಪೆ ಲೋಕಾರ್ಪಣೆ ಮಾಡಿದರು.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆಗುತ್ತು, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ, ಪವಿತ್ರಪಾಣಿ ಎನ್. ಹರೀಶ್ ಆಚಾರ್ಯ ನಗ್ರಿಗುತ್ತು, ಪ್ರಮುಖರಾದ ಮತ್ತಪ್ಪ ಪೂಜಾರಿ ನೆಯ್ಯಲ್ಗ, ವಿಠಲ್ ರೈ ಕೋಣಾಲುಗುತ್ತು, ದಯಾನಂದ ರೈ ಮನವಳಿಕೆಗುತ್ತು, ಅಜಿತ್ ಮನವಳಿಕೆಗುತ್ತು, ಸಾಮಾಜಿಕ ಕಾರ್ಯಕರ್ತ ರವಿ ಕಕ್ಕೆಪದವು, ವ್ಯವಸ್ಥಾಪನಾ ಸಮಿತಿಯ ಸದಸ್ಯರು, ವಿವಿಧ ಸಮಿತಿಗಳ ಪದಾಧಿಕಾರಿಗಳು ಮತ್ತಿತರರಿದ್ದರು. ಹೊರೆಕಾಣಿಕೆ ಉದ್ಘಾಟನಾ ಕಾರ್ಯಕ್ರಮವನ್ನು ಶಿಕ್ಷಕ ಚಂದ್ರಹಾಸ ಕುಂಟ್ಯಾನ ನಿರೂಪಿಸಿದರು.

> **ಋತ್ವಿಜರಿಗೆ ಪೂರ್ಣಕುಂಭ ಸ್ವಾಗತ, ಧಾರ್ಮಿಕ ಕಾರ್ಯಕ್ರಮ**
> ಬೆಳಗ್ಗೆ ಕ್ಷೇತ್ರದ ತಂತ್ರಿಗಳಿಗೆ ಮತ್ತು ಋತ್ವಿಜರಿಗೆ ಪೂರ್ಣಕುಂಭ ಸ್ವಾಗತ, ಶಿಲ್ಪಿ ಸಮ್ಮಾನ, ಆಲಯ ಪರಿಗ್ರಹ, ಸಾಮೂಹಿಕ ದೇವತಾ ಪ್ರಾರ್ಥನೆ, ಗಣಹೋಮ, ಭದ್ರಕಾಳಿ ಅಮ್ಮನವರಲ್ಲಿ ಕ್ಷಾಳನಾದಿ ಬಿಂಬ ಶುದ್ಧಿ, ಪ್ರಾಯಶ್ಚಿತ್ತ ಹೋಮಗಳು ನಡೆದವು. ಸಂಜೆ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

## ಸುತ್ತಮುತ್ತ


### ಮಾ.27-29: ಬೃಹತ್ ಆಹಾರ, ಸ್ವದೇಶಿ ಉತ್ಪನ್ನ ಮಾರಾಟ ಮೇಳ

**ಕಾಪು:** ರೋಟರಿ ಕ್ಲಬ್ ಪಡುಬಿದ್ರಿ, ಓಂಕಾರ್ ಕಾಸ್ಟ್ಯೋಮ್ಸ್ ಮತ್ತು ಕಲಾ ಸಂಗಮ ಪಡುಬಿದ್ರಿ, ಸರ್ವ ಕಾಲೇಜು ವಿದ್ಯಾರ್ಥಿ ಶಕ್ತಿ ಕರ್ನಾಟಕ ಮತ್ತು ಬೆನಕ ಇವೆಂಟ್ಸ್ ಆಯೋಜಕತ್ವದಲ್ಲಿ ಪಡುಬಿದ್ರಿ ಬಂಟರ ಭವನದಲ್ಲಿ ಬೃಹತ್ ಆಹಾರ ಮತ್ತು ಸ್ವದೇಶಿ ಉತ್ಪನ್ನಗಳ ಮಾರಾಟ ಮೇಳವು ಮಾ. 27, 28 ಮತ್ತು 29 ರಂದು ನಡೆಯಲಿದೆ ಎಂದು ಗಣೇಶ್ ಶೆಟ್ಟಿ ಬಾರ್ಕೂರು ತಿಳಿಸಿದರು. ಅವರು ಕಾಪು ಪ್ರೆಸ್ ಕ್ಲಬ್‌ನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿಯನ್ನು ನೀಡುತ್ತಾ ಮಾತನಾಡಿದರು.

ವಿವಿಧ 80 ಸ್ಟಾಲ್‌ಗಳಲ್ಲಿ ಸ್ವದೇಶಿ ಉತ್ಪನ್ನಗಳು ಮತ್ತು ಆಹಾರ ಮಾರಾಟ ಹಾಗೂ ಹಲಸು ಮತ್ತು ವಿವಿಧ ಬಗೆಯ ಹಣ್ಣುಗಳ ಮಾರಾಟ ಮತ್ತು ಪ್ರದರ್ಶನ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಓಂಕಾರ ಕಲಾ ಸಂಗಮ ಪಡುಬಿದ್ರಿ ತಂಡದವರಿಂದ ಕಲಾ ವೈಭವ ಕಾರ್ಯಕ್ರಮ, ವಾಯ್ಸ್ ಆಫ್ ಪಡುಬಿದ್ರಿ 2026 ಕರೋಕೆ ಗಾಯನ ಸ್ಪರ್ಧೆ ನಡೆಯಲಿದೆ. ಬಂಟರ ಸಂಘದ ಮಾಜಿ ಅಧ್ಯಕ್ಷ ನವೀನ್‌ಚಂದ್ರ ಜೆ ಶೆಟ್ಟಿ ಉದ್ಘಾಟಿಸಲಿದ್ದಾರೆ. ಬಂಟರ ವೆಲ್ ಫೇಲ್ ಟ್ರಸ್ಟ್ ಅಧ್ಯಕ್ಷ ಡಾ. ವೈ.ಎನ್ ಶೆಟ್ಟಿ ಸಹಿತ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರೋಟರಿ ಅಧ್ಯಕ್ಷ ಸುನಿಲ್ ಕುಮಾರ್, ಓಂಕಾರ ಕಲಾ ಸಂಗಮ ಆಡಳಿತ ನಿರ್ದೇಶಕ ಗೀತಾ ಅರುಣ್, ಸರ್ವ ಕಾಲೇಜು ವಿದ್ಯಾರ್ಥಿ ಶಕ್ತಿ ರಾಜ್ಯಾಧ್ಯಕ್ಷ ರಚನ್ ಸಾಲ್ಯಾನ್, ಕಾರ್ಯಕ್ರಮ ನಿರ್ದೇಶಕ ಸಂತೋಷ ಪಡುಬಿದ್ರಿ, ಮಾಜಿ ರೋಟರಿ ಕಾರ್ಯದರ್ಶಿ ಹೇಮಲತಾ ಸುವರ್ಣ ಇದ್ದರು.

### ಹೆಜಮಾಡಿಯಲ್ಲಿ ಒಳಾಂಗಣ ಕ್ರೀಡಾಂಗಣ: ರೂ. 14 ಕೋಟಿ ಪ್ರಸ್ತಾವನೆ

**ಕಾಪು:** ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಬೆಂಗಳೂರು ಅಧಿವೇಶನದಲ್ಲಿ ಕಾಪು ವಿಧಾನಸಭಾ ಕ್ಷೇತ್ರದ ಕಾಪು ತಾಲೂಕಿನ ತಾಲೂಕು ಕ್ರೀಡಾಂಗಣವನ್ನು ಗ್ರಾಮೀಣ ಭಾಗದ ಕ್ರೀಡಾ ಪಟುಗಳು ಹಾಗೂ ಅಥ್ಲೇಟ್ ಗಳು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತಾಗಲು ಹಾಗೂ ಈ ಕ್ರೀಡಾಂಗಣದಲ್ಲಿ ಮೂಲಭೂತ ಸೌಕರ್ಯವನ್ನು ಒದಗಿಸಲು ಸರಕಾರವು ರೂಪಿಸಿರುವ ಯೋಜನೆಗಳು ಯಾವುವು..? ಕ್ರೀಡಾಂಗಣದ ಸಮಗ್ರ ಅಭಿವೃದ್ಧಿಗೆ ಸರಕಾರದ ನಿಲುವೇನು ಎಂಬುದರ ಬಗ್ಗೆ ಪ್ರಶ್ನೆಯನ್ನು ಕ್ರೀಡಾ ಸಚಿವರಿಗೆ ಕೇಳಲಾಗಿತ್ತು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಉತ್ತರಿಸುತ್ತಾ, ಕಾಪು



ತಾಲೂಕಿನ ಹೆಜಮಾಡಿ ತಾಲೂಕು ಕ್ರೀಡಾಂಗಣವನ್ನು ನೆಲಸಮಟ್ಟಮಾಡಲಾಗಿದ್ದು ಪೆವಿಲಿಯನ್ ಕಟ್ಟಡ 2 ಕಚೇರಿ ಕೊಠಡಿಗಳು ಪೆವಿಲಿಯನ್ ಕಟ್ಟಡದಲ್ಲಿನ ಪೂರ್ವ ಭಾಗದಲ್ಲಿ ಪ್ರೇಕ್ಷಕರ ಗ್ಯಾಲರಿ, ಪಶ್ಚಿಮ ಭಾಗದಲ್ಲಿ 6 ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿದ್ದು ಕ್ರೀಡಾಂಗಣದಲ್ಲಿ ಶೌಚಾಲಯ, ನೀರು ಸರಬರಾಜು, ವಿದ್ಯುತ್ ವ್ಯವಸ್ಥೆ ಒಳಗೊಂಡಂತೆ ಎಲ್ಲಾ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಕ್ರೀಡಾ ಪಟುಗಳ ಬಳಕೆಯಲ್ಲಿದೆ. ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಹೆಜಮಾಡಿಯಲ್ಲಿ ಬಹುಪಯೋಗಿ ಒಳಾಂಗಣ ಕ್ರೀಡಾಂಗಣ ಕಾಮಗಾರಿಗಾಗಿ 14 ಕೋಟಿ ಅಂದಾಜು ವೆಚ್ಚದ ಪ್ರಸ್ತಾವನೆಯನ್ನು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಹೆಜಮಾಡಿ ಕ್ರೀಡಾಂಗಣವನ್ನು ಅವಶ್ಯಕತೆಗನುಗುಣವಾಗಿ ದುರಸ್ತಿ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನದ ಲಭ್ಯತೆಯನುಸಾರ ಯೋಜನೆಗಳನ್ನು ರೂಪಿಸಿರುವುದಾಗಿ ಉತ್ತರಿಸಿದ್ದಾರೆ.

### ಇಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

**ಉಡುಪಿ:** ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಅವರು ಮಾ.26ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ಕುಂದಾಪುರ ಯುವ ಮೆರಿಡಿಯನ್ ಹೆಲಿಪ್ಯಾಡ್‌ಗೆ ಹೆಲಿಕಾಪ್ಟರ್ ಮೂಲಕ ಆಗಮಿಸುವ ಅವರು, 11.30ಕ್ಕೆ ಬೈಂದೂರು ತಾಲೂಕು ಹೇರಂಜಾಲು ಗ್ರಾಮದ ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನದ ನೂತನ ರಾಜಗೋಪುರ ಉದ್ಘಾಟನೆ ಹಾಗೂ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ನಂತರ ಕುಂದಾಪುರದಿಂದ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

## ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಪ್ರಶ್ನೆಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉತ್ತರ

# ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆ ಬಲವರ್ಧನೆಗೆ ಕ್ರಮ


**ಬೆಳ್ತಂಗಡಿ:** 2009-10ನೇ ಸಾಲಿನಿಂದ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳ ಕೊರತೆ, ವಲಸೆ ಹೋಗುವ ಕುಟುಂಬಗಳ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮಧ್ಯಾಂತರದಲ್ಲಿ ತರಗತಿಗಳಿಗೆ ಪ್ರವೇಶ ಪಡೆಯುವ ಸಮಸ್ಯೆಯಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉಂಟಾಗಿದ್ದ ಒತ್ತಡವನ್ನು ಕಡಿಮೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡಲಾಗಿರುತ್ತದೆ. ಇವುಗಳಲ್ಲಿ ಬೋಧನೆಯ ಕಲಿಕಾ ವಿಧಾನವು ಒಂದಾಗಿರುತ್ತದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಕ್ರಮೇಣವಾಗಿ ಬಲಪಡಿಸಲಾಗುತ್ತಿದ್ದು, ಶಿಕ್ಷಕರನ್ನು ಹಾಗೂ ಭೌತಿಕ ಸೌಲಭ್ಯಗಳನ್ನು ಒದಗಿಸಲಾಗಿರುವುದರಿಂದ ಸನ್ನಿವೇಶಕ್ಕೆ ಬಹುವರ್ಗ ಕಲಿಕಾ ವಿಧಾನವು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿರುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್‌ಗೆ ತಿಳಿಸಿದ್ದಾರೆ.

ರಾಜ್ಯದಲ್ಲಿ ಅಂದಾಜು 6,500ಕ್ಕೂ ಹೆಚ್ಚಿನ ಏಕಶಿಕ್ಷಕ ಶಾಲೆಗಳು ಮೂಲ ಸೌಕರ್ಯ ಕಲ್ಪಿಸದ ಕುಗ್ರಾಮಗಳಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು ನಲಿ ಕಲಿ ಯೋಜನೆಯನ್ನು ರದ್ದುಪಡಿಸುವುದರಿಂದ ಮಕ್ಕಳು ಶಿಕ್ಷಣದಿಂದ ಶಾಶ್ವತವಾಗಿ ವಂಚಿತರಾಗುವ ಸಂಭವವಿದೆ. ಅಲ್ಲದೆ ಮಕ್ಕಳ ದಾಖಲಾತಿ ಸಂಖ್ಯೆ

### 2402 ಕೆ.ಪಿ.ಎಸ್. ಶಾಲೆಗಳ ಆರಂಭಕ್ಕೆ ಅನುಮೋದನೆ

**ಈಗಾಗಲೇ 309 ಕೆ.ಪಿ.ಎಸ್. ಶಾಲೆಗಳು ಕಾರ್ಯನಿರ್ವಹಿಸುತ್ತವೆ. ಪ್ರಸ್ತುತ 2402 ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭಿಸಲು ಅನುಮೋದಿಸಲಾಗಿದೆ. ಸರಕಾರಿ ಶಾಲೆಗಳಲ್ಲಿ 1ನೇ ತರಗತಿಯಿಂದ ಮೇಲ್ಪಟ್ಟು ವಿಭಾಗಗಳಿಗೆ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ 2018-19ನೇ ಸಾಲಿನಿಂದ ಪೂರ್ವಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದ್ದು ಪ್ರಸ್ತುತ 2619 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ನಡೆಸಲಾಗುತ್ತಿದ್ದು, ಪ್ರಸಕ್ತ ಬಜೆಟ್‌ನಲ್ಲಿ ಘೋಷಿಸಿರುವಂತೆ 4056 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ವಿಭಾಗ ಪ್ರಾರಂಭಿಸಲು ಅನುಮೋದನೆ ನೀಡಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದರು.**





ಕಡಿಮೆ ಇದೆ ಎಂಬ ಕಾರಣ ನೀಡಿ ಸಮೀಪದ ಶಾಲೆಗಳಿಗೆ ಈ ಶಾಲೆಗಳನ್ನು ವಿಲೀನ ಮಾಡಲು ಮುಂದಾದರೆ ಕುಗ್ರಾಮದಲ್ಲಿನ ಮಕ್ಕಳ ಶಿಕ್ಷಣದ ಗತಿಯೇನು ಎಂದು ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಉಜಿರೆ ಅವರು ಚುಕ್ಕೆ ಗುರುತಿನ ಪ್ರಶ್ನೆಯ ಮೂಲಕ ಸರಕಾರದ ನಡೆಯನ್ನು ಕೇಳಿದ್ದರು.

ಪ್ರಸ್ತುತ ರಾಜ್ಯದಲ್ಲಿ 46,675 ಸರಕಾರಿ ಶಾಲೆಗಳಿದ್ದು, ಇವುಗಳಲ್ಲಿ 41,776 ಶಾಲೆಗಳು ಸರ್ಕಾರಿ ಪ್ರಾಥಮಿಕ ಶಾಲೆಗಳಾಗಿರುತ್ತವೆ. ಈ ಪೈಕಿ 19,567 ಶಾಲೆಗಳು ಕಿರಿಯ ಪ್ರಾಥಮಿಕ, 21,430 ಹಿರಿಯ ಪ್ರಾಥಮಿಕ ಶಾಲೆಗಳಿರುತ್ತವೆ ಈ ಶಾಲೆಗಳಲ್ಲಿ ಒಟ್ಟಾರೆಯಾಗಿ 28,96,827 ವಿದ್ಯಾರ್ಥಿಗಳು ದಾಖಲಾಗಿದ್ದು 1,06,325 ಪ್ರಾಥಮಿಕ ಶಾಲಾ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸುಮಾರು 7,000 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದ್ದು ತರಗತಿಗಳಿಗೆ ಏಕತರಗತಿ ಬೋಧನಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಏಕ ತರಗತಿ ಪದ್ಧತಿಯಿಂದ ಬಹುವರ್ಗ ಬೋಧನಾ ಪದ್ಧತಿ ಹೊಂದಿರುವ ಪ್ರಾಥಮಿಕ ತರಗತಿಗಳಿಗೆ ಸೇರಲು ಹಿಂಜರಿಯುತ್ತಿರುವುದನ್ನು ಗಮನಿಸಲಾಗಿದೆ. ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಶೇ. 46ರಿಂದ ಶೇ. 38ಕ್ಕೆ ಕುಸಿದಿದ್ದು ಸರಕಾರಿ ಶಾಲೆಗಳ ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಏಕ ತರಗತಿ ಬೋಧನೆಗೆ ಒಳಪಡಿಸಲು ಇಚ್ಛಿಸುತ್ತಿರುವುದು ದಾಖಲಾತಿ ಪ್ರಮಾಣವು ಇಳಿಕೆಯಾಗುತ್ತಿರುವುದಕ್ಕೆ ಕಾರಣವಾಗಿದೆ. ಇದಲ್ಲದೆ ಖಾಸಗಿ ಶಾಲೆಗಳು ಪ್ರಾಥಮಿಕ ತರಗತಿಗಳಿಗೆ ಬಹುವರ್ಗ ಬೋಧನಾ ಪದ್ಧತಿ ಹೊಂದಿರುವುದಿಲ್ಲ.

ಈ ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಕಾಲಕಾಲಕ್ಕೆ ಸರ್ಕಾರವು ಅನೇಕ ಅಗತ್ಯ ಉಪಕ್ರಮಗಳನ್ನು ಜಾರಿಗೊಳಿಸುತ್ತಾ ಬಂದಿದೆ. ಅದರಂತೆ ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳಲ್ಲಿ 2018-19ನೇ ಸಾಲಿನಿಂದ 2025-26 ನೇ ಸಾಲಿನವರೆಗೆ ವಿವಿಧ ಹಂತಗಳಲ್ಲಿ 9522 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಬೋಧನಾ ಕ್ರಮವನ್ನು ಅನುಷ್ಠಾನಗೊಳಿಸಲು ಅನುಮತಿಸಲಾಗಿದೆ. ಅಲ್ಲದೇ ಪ್ರಸಕ್ತ ಸಾಲಿನಲ್ಲಿ 474 ಕೆಪಿಎಸ್, 100 ಉರ್ದು ಕೆಪಿಎಸ್, ಕೆಕೆಆರ್‌ಡಿಬಿ ವತಿಯಿಂದ 200 ಕೆಪಿಎಸ್ ಶಾಲೆಗಳು, ಈ ಹಿಂದೆ ಅನುಮತಿ ಪಡೆದು ನಡೆಯುತ್ತಿರುವ 309 ಕೆಪಿಎಸ್ ಶಾಲೆಗಳು ಒಳಗೊಂಡಂತೆ ಒಟ್ಟು 1083 ಕೆಪಿಎಸ್ ಶಾಲೆಗಳು, 10 ಸಿಇಪಿಎಂಐರುಡ್ ತಾಲೂಕುಗಳಲ್ಲಿ ಉನ್ನತೀಕರಿಸಲಾಗುತ್ತಿರುವ 100 ಕೆಪಿಎಸ್ ಶಾಲೆಗಳು, 585 ಪಿಎಂಶ್ರೀ ಶಾಲೆಗಳಲ್ಲಿ 1 ರಿಂದ 5ನೇ ತರಗತಿ ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಈ ವರೆವಿಗೆ 6675 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಪೂರ್ವ ಪ್ರಾಥಮಿಕ ತರಗತಿಗಳಿಗೆ ಅನುಮತಿ ನೀಡಲಾಗಿದೆ ಎಂದರು.

**ಅತಿಥಿ ಶಿಕ್ಷಕರ ನೇಮಕ**

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ವಿಶೇಷವಾಗಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಹಾಗೂ ಸ್ಮಾರ್ಟ್ ಕ್ಲಾಸ್ ಮೂಲಕ ತರಗತಿಗಳನ್ನು ನಿರ್ವಹಿಸಲಾಗುತ್ತಿದೆ. ಪ್ರತೀ ವರ್ಷ ಸಮೀಕ್ಷೆಯಲ್ಲಿ ಗುರುತಿಸಲಾದ ಶಾಲೆಯಿಂದ ಹೊರಗುಳಿದ 6ರಿಂದ 14 ನೇ ವಯೋಮಾನದ ಮಕ್ಕಳಿಗೆ ವಿಶೇಷ ತರಬೇತಿ ನೀಡಿ ಶೈಕ್ಷಣಿಕ ಮುಖ್ಯವಾಹಿನಿಗೆ ತರಲಾಗುತ್ತಿದೆ. ದಾಖಲಾತಿಗೆ ಅನುಗುಣವಾಗಿ ಶಾಲೆಗಳಲ್ಲಿ ಮೂಲಸೌಕರ್ಯಗಳನ್ನು ಗುರುತಿಸಿ ಅರ್ಹತೆ ಮತ್ತು ಆದ್ಯತೆಗನುಗುಣವಾಗಿ ಅನುದಾನದ ಲಭ್ಯತೆಯನ್ನು ಆಧರಿಸಿ ಮೂಲಕಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಸರ್ಕಾರಿ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

## ಕೇಪು ಶಾಲೆಯಲ್ಲಿ ಮೆಟ್ರಿಕ್ ಮೇಳ



**ಪುತ್ತೂರು:** ಕೇಪುವಿನ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿ, ಹಾಜರಾತಿ ಮತ್ತು ಭವಿಷ್ಯದ ಯೋಜನೆಗಳ ಕುರಿತು ಚರ್ಚಿಸುವ ಸಲುವಾಗಿ ಮೆಗಾ ಪೋಷಕರ ಸಭೆ ನಡೆಯಿತು.

ಜತೆಗೆ, ಮಕ್ಕಳಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸುವ ಸಲುವಾಗಿ ವಿಜ್ಞಾನ ಮೇಳ, ವ್ಯವಹಾರಿಕ ಜ್ಞಾನ ಬಿತ್ತರಿಸುವ ಸಲುವಾಗಿ ಮೆಟ್ರಿಕ್ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲಾ ಮಕ್ಕಳು ತಮ್ಮ ಮನೆಗಳಲ್ಲಿ ಬೆಳೆದಂತಹ ತರಕಾರಿ ಮತ್ತಿತರ ವಸ್ತುಗಳನ್ನು ತಂದು ಮಾರಾಟ ಮಾಡಿದರು. ಇದಕ್ಕೆ ಊರವರಿಂದ ಉತ್ತಮ ಸ್ಪಂದನೆ ದೊರಕಿತು.

ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ವೆಂಕಟ ರಾಘವೇಂದ್ರ ಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಉಳ್ಳಾಲ್ತಿ ಸೇವಾ ಟ್ರಸ್ಟ್‌ನ ಕೋಶಾಕಾರಿ ಬಾಲಕೃಷ್ಣ ಶೆಟ್ಟಿ ಬೆಂಗ್ರೋಡಿ, ಕಾರ್ಯದರ್ಶಿ ಉಮೇಶ್ ಗೌಡ ಕೊರತಿಗದ್ದೆ, ಎಸ್.ಡಿ.ಎಂ.ಸಿ. ಉಪಾಧ್ಯಕ್ಷೆ ಲಲಿತಾ ಕೋಡಂದೂರು, ಎಸ್‌ಡಿಎಂಸಿ ಸರ್ವ ಸದಸ್ಯರು ಹಾಗೂ ಸುಮಾರು 150ಕ್ಕೂ ಹೆಚ್ಚು ಪೋಷಕರು, ಊರಿನವರು ಇದ್ದರು. ಸಮೂಹ ಸಂಪನ್ಮೂಲ ವ್ಯಕ್ತಿ ನವೀನ್ ಕುಮಾರ್ ಇಲಾಖೆ ಬಗ್ಗೆ ಮಾಹಿತಿ ನೀಡಿ ಶಾಲೆಯಲ್ಲಿ ನಡೆದ ಕಾರ್ಯಕ್ರಮದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

## ನೀರುಮಾರ್ಗ ಸ್ಕಂದಶ್ರೀ ಸೇವಾ ಸಮಿತಿಯ 12ನೇ ವಾರ್ಷಿಕೋತ್ಸವ



**ಮಂಗಳೂರು:** ನೀರುಮಾರ್ಗ ಸ್ಕಂದಶ್ರೀ ಸೇವಾ ಸಮಿತಿ 12ನೇ ವಾರ್ಷಿಕೋತ್ಸವದ ಸಮಾರಂಭ ನೀರುಮಾರ್ಗ ಶ್ರೀ ಸುಬ್ರಹ್ಮಣ್ಯ ಭಜನಾ ಮಂಡಳಿ ಮುಂಭಾಗದಲ್ಲಿ ಇತ್ತೀಚೆಗೆ ನಡೆಯಿತು.

ಈ ವೇಳೆ ಜಗದೀಶ್ ಐತಾಳ್ ಸುರತ್ಕಲ್ ಅವರ ನೇತೃತ್ವದಲ್ಲಿ ಸಾರ್ವಜನಿಕ ಶನೈಶ್ಚರ ಪೂಜೆ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವಿದುಷಿ ಶ್ರೀನಿಧಿ ಸುವರ್ಣ ಅವರ ಶಿಷ್ಯೆಯರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಿತು.

ಸಭೆಯಲ್ಲಿ ಮನಪಾ ಮಾಜಿ ಸದಸ್ಯ ಕಿರಣ್ ಕುಮಾರ್ ಕೋಡಿಕಲ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕದ್ರಿ ಮಂಜುನಾಥ ದೇವಸ್ಥಾನ ಅರ್ಚಕ ಕೆ. ಕೃಷ್ಣ ಅಡಿಗ ಧಾರ್ಮಿಕ ಉಪನ್ಯಾಸ ನೀಡಿದರು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕ ಡಾ.ವೈ. ಭರತ್ ಶೆಟ್ಟಿ ಪ್ರಮುಖರಾದ ವಿಕ್ರಮ್ ಕೆಮ್ಮಾಯಿ, ಮುರಳೀಧರ್ ಪಾಂಚಜನ್ಯ ಕೊಟ್ಟಾರ, ಸುಜನ್‌ದಾಸ್ ಕುಡುಪು, ಮೋಹಿನಿ ಮೋನಪ್ಪ ಲೋಕೇಶ್ ಪೂಜಾರಿ, ಸ್ಕಂದಶ್ರೀ ಸೇವಾ ಸಮಿತಿಯ ಅಧ್ಯಕ್ಷ ತಾರಾನಾಥ ಅತಿಥಿಗಳಾಗಿದ್ದರು. ವಿವಿಧ ಕ್ಷೇತ್ರದ ಸಾಧಕರಾದ ಮೇಜರ್ ರೋಹಿತ್ ಸುವರ್ಣ ಬಜ್ಪೆ, ಸುಬೇದಾರ್ ಫ್ರಾನ್ಸಿಸ್ ಪಾಯ್ಸ್ ಬಜಪೆ, ರೆಮೋನಾ ಪೆರೇರಾ, ಆರೂರ್ ಲಕ್ಷ್ಮೀ ರಾವ್, ಗಂಗಾಧರ್ ಎಸ್. ಪೂಜಾರಿ, ಪ್ರೇಮಚಂದ್ರ ಭಟ್, ಹ್ಯಾರಿ ಮೆಂಡೋನ್ಸಾ, ಎ. ಎಚ್. ಮಹಮ್ಮದ್, ಶ್ರೀಧರ್ ಅಮೀನ್ ನಾಯರ್, ಮಾಲತಿ ಶೆಟ್ಟಿ ಮಾಣೂರು, ಈಶ್ವರ್ ಪೂಜಾರಿ ಅವರನ್ನು ಸನ್ಮಾನಿಸಲಾಯಿತು. ಹರೀಶ್ ನೀರುಮಾರ್ಗ ಸ್ವಾಗತಿಸಿದರು. ಶ್ರೀದೇವಿ ನೀರುಮಾರ್ಗ ವರದಿ ವಾಚಿಸಿದರು. ರಾಜೇಶ್ ಅಮೀನ್, ಪ್ರಮೀಳಾ ತಾರಾನಾಥ್, ಸೌಮ್ಯ ರಾಜೇಶ್ ಸನ್ಮಾನ ವಾಚಿಸಿದರು. ಜ್ಯೋತಿಲಕ್ಷ್ಮಿ ವಂದಿಸಿದರು. ಕೀರ್ತಿರಾಜ್ ಪಡು ನಿರೂಪಿಸಿದರು.

ಸಮಿತಿ ಉಪಾಧ್ಯಕ್ಷ ಪ್ರದೀಪ್, ಕಾರ್ಯದರ್ಶಿ ಅತುಲ್, ಕೋಶಾಧಿಕಾರಿ ತುಕಾರಾಮ್, ಸಮಿತಿಯ ಸದಸ್ಯರಾದ ಪ್ರಕಾಶ್ಚಂದ್ರ, ರಾಜೇಶ್ ಅಮೀನ್, ಅರುಣ್ ಸುಬ್ರಹ್ಮಣ್ಯ ನಗರ, ಅನಂತ ಆಚಾರ್ಯ, ರಾಜೇಶ್ ಸುಬ್ರಹ್ಮಣ್ಯ ನಗರ, ರಾಜೇಶ್ ಕುಮಾರ್, ದೇವಿಪ್ರಕಾಶ್, ವಿನೋದ್ ಕುಮಾರ್, ಕೇಶವ, ಅಭಿಮಾನ್ ಮಾಡ್ರಬೈಲ್ ಉಪಸ್ಥಿತರಿದ್ದರು.

ಬಳಿಕ ಕಲಾಶ್ರೀ ಕುಡ್ಲ ತಂಡದವರಿಂದ 'ಕುಸಲ್ದ ಕುರ್ಲರಿ' ಎಂಬ ಹಾಸ್ಯ ಕಾರ್ಯಕ್ರಮ ಜನಮನ ರಂಜಿಸಿತು.

## ಬಿದ್ಕಲ್‌ಕಟ್ಟೆ ಅಗ್ನಿ ಸುರಕ್ಷತೆ ಕಾರ್ಯಾಗಾರ



**ಕುಂದಾಪುರ:** ಬಿದ್ಕಲ್‌ಕಟ್ಟೆ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸೇಫ್ಟಿ ಮಾಸಾಚರಣೆ ಅಂಗವಾಗಿ ಅಗ್ನಿಶಾಮಕ ಠಾಣೆ ಕುಂದಾಪುರ ಇವರಿಂದ ಐಟಿಐ ತರಬೇತಿದಾರರಿಗೆ ಫೈಯರ್ ಸೇಫ್ಟಿ ಕಾರ್ಯಾಗಾರ ಮಂಗಳವಾರ ನಡೆಯಿತು.

ಅಗ್ನಿಶಾಮಕ ಠಾಣೆಯ ಲೀಡಿಂಗ್ ಫೈರ್ ಫೈಟರ್ ಬಾಲಕೃಷ್ಣ ಅವರು ವಿವಿಧ ವಿಧದ ಅಗ್ನಿ ಹಾಗೂ ಅದಕ್ಕೆ ಸರಿಯಾದ ಅಗ್ನಿನಂದಕ ಮತ್ತು ಅಗ್ನಿನಂದಕಗಳ ಹೊರತಾಗಿಯೂ ಸಾಮಾನ್ಯ ಜನರು ಹೇಗೆ ಬೆಂಕಿಯನ್ನು ನಿಗ್ರಹಿಸಬೇಕು ಎನ್ನುವ ಬಗ್ಗೆ ಸಮಗ್ರ ಮಾಹಿತಿ ನೀಡಿದರೆ, ಸಿಬ್ಬಂದಿ ಕೆ.ಎಲ್. ಹೊಸರಿತ್, ದೀಪಕ್, ಬಸವರಾಜ್, ಅಭಿಷೇಕ್ ಅಗ್ನಿ ನಂದಿಸುವ ವಿವಿಧ ವಿಧಾನಗಳ ಪ್ರಾತ್ಯಕ್ಷಿಕೆ ನೀಡಿದರು. ಪ್ರಾಚಾರ್ಯ ಹರೀಶ್ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಸಂಯೋಜಿಸಲಾಗಿತ್ತು. ಕಿರಿಯ ತರಬೇತಿ ಅಧಿಕಾರಿಗಳಾದ ಪ್ರಸನ್ನ ಆಚಾರ್ಯ, ಬಸವ ನಾಯ್ಕ್, ಪ್ರತಾಪ್ ಕುಮಾರ್, ಅಜಿತ್ ಆಚಾರ್, ಸುಚಿತ್ರ, ಪ್ರಫುಲ್ಲಾ ಕೆ.ಎಸ್., ಸುಮಂಗಲ, ರೂಪದೇವಿ, ಕಚೇರಿ ಸಿಬ್ಬಂದಿಗಳಾದ ಸುಮಾರಾಣಿ, ಮನೋಜ್ ಕುಮಾರ್ ಉಪಸ್ಥಿತರಿದ್ದರು.

ಐಟಿಐನ ತರಬೇತಿ ಅಧಿಕಾರಿ ಗಣೇಶ್ ಎಚ್. ಸಂಯೋಜಿಸಿ ಸ್ವಾಗತಿಸಿದರು. ಪ್ಲೇಸ್ಮೆಂಟ್ ಆಫೀಸರ್ ಮನೋಹರ್ ಶೆಟ್ಟಿ ವಂದಿಸಿದರು.

## ಬೆಳ್ತಂಗಡಿ ಪಂಚ ಗ್ಯಾರಂಟಿ ತಾಲೂಕು ಮಟ್ಟದ ಅನುಷ್ಠಾನ ಸಮಿತಿಯ ಸಭೆ



**ಬೆಳ್ತಂಗಡಿ:** ಪಂಚ ಗ್ಯಾರಂಟಿ ಯೋಜನೆಯ ತಾಲೂಕು ಮಟ್ಟದ ಅನುಷ್ಠಾನ ಸಮಿತಿಯ ಮಾಸಿಕ ಸಭೆಯು ಸಮಿತಿಯ ಅಧ್ಯಕ್ಷ ಪದ್ಮನಾಭ ಸಾಲ್ಯಾನ್ ಅಧ್ಯಕ್ಷತೆಯಲ್ಲಿ ಬೆಳ್ತಂಗಡಿ ತಾ.ಪಂ. ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿಯಲ್ಲಿ ನಡೆಯಿತು.

ಗೃಹ ಜ್ಯೋತಿ ಯೋಜನೆಯಡಿ ತಾಲೂಕಿಗೆ ಈವರೆಗೆ 116,81,92,414 ರೂ ಸಹಾಯಧನ ದೊರೆತಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರ ಕ್ಲೆಮೆಂಟ್ ಬಿ. ಬ್ರಾಗ್ಸ್ ತಿಳಿಸಿದರು.

ಗೃಹಲಕ್ಷ್ಮೀ ಯೋಜನೆಯಡಿ ಪ್ರಕೃತ 59,044 ಫಲಾನುಭವಿಗಳಿದ್ದು ಆಗಸ್ಟ್-2023ರಿಂದ ಅಕ್ಟೋಬರ್-2025ರವರೆಗೆ 282,15,90,000 ರೂ. ಸಹಾಯಧನ ದೊರೆತಿರುವುದಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಿಯಾ ಆಗ್ನೇಸ್ ಸಭೆಗೆ ಮಾಹಿತಿ ನೀಡಿದರು. ಅನ್ನಭಾಗ್ಯ ಯೋಜನೆಯಡಿ ಸರ್ಕಾರದ ಆದೇಶದಂತೆ ಸಮೀಕ್ಷೆ ನಡೆಸಲಾಗಿದ್ದು 764 ಪಡಿತರ ಚೀಟಿಗಳನ್ನು ಎಪಿಎಲ್ ಆಗಿ ಪರಿವರ್ತಿಸಲಾಗಿದೆ. 1556 ಪಡಿತರ ಚೀಟಿಗಳನ್ನು ಬಿಪಿಎಲ್ ಆಗಿ ಮುಂದುವರಿಸಲಾಗಿದೆ ಎಂದು ಆಹಾರ ನಿರೀಕ್ಷಕ ವಿಶ್ವ ಕೆ. ಸಭೆಗೆ ವಿವರ ನೀಡಿದರು.

ಯುವನಿಧಿಯಡಿ ಒಟ್ಟು 7392 ಫಲಾನುಭವಿಗಳಿದ್ದು, ಆಗಸ್ಟ್-2023 ರಿಂದ 2025ರ ನವೆಂಬರ್ ತಿಂಗಳವರೆಗೆ 2,70,22,500.00 ರೂ.ಗಳನ್ನು ಸರ್ಕಾರದಿಂದ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗಿದೆ ಎಂದು ಮಂಜೂಷ ತಿಳಿಸಿದರು. ಶಕ್ತಿ ಯೋಜನೆಯಡಿ ಧರ್ಮಸ್ಥಳ ಘಟಕದ ಬಸ್ಸುಗಳ ಮೂಲಕ 2026ರ ಫೆಬ್ರವರಿ ತಿಂಗಳಲ್ಲಿ 670490 ಮಹಿಳಾ ಪ್ರಯಾಣಿಕರು ಯೋಜನೆ ಸವಲತ್ತನ್ನು ಪಡೆದಿದ್ದು ಜೂನ್-2023 ರಿಂದ ಈವರೆಗೆ ರೂ.97,75,22,536/- ಬಿಡುಗಡೆಯಾಗಿರುವುದಾಗಿ ಧರ್ಮಸ್ಥಳ ಘಟಕದ ಮೇಲ್ವಿಚಾರಕ ರೋಶನ್ ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ತಾಲೂಕು ಅನುಷ್ಠಾನ ಸಮಿತಿಯ ಸದಸ್ಯರಾದ ಸೌಮ್ಯ ಲಾಯಿಲ, ಮೆರಿಟಾ ಪಿಂಟೋ, ವೀರಪ್ಪ ಮೊಯ್ಲಿ, ವಾಸುದೇವ ರಾವ್, ವಿಜಯಗೌಡ ಬೆಳಾಲು, ಶರೀಫ್ ಸಬರಬೈಲ್, ಕೆ.ನೇಮಿರಾಜ್ ಕಿಲ್ಲೂರು, ವಂದನಾ, ಸತೀಶ್ ಹೆಗ್ಡೆ ಕೇಶವ ನಾಯ್ಕ್ ಹಾಗೂ ನೋಡೆಲ್ ಅಧಿಕಾರಿ ಹೆರಾಲ್ಡ್ ಸ್ವಿಕ್ವೇರಾ ಇದ್ದರು.

## ಬಿ.ಬಿ.ಹೆಗ್ಡೆ ಪ್ರಥಮ ದರ್ಜೆ ಕಾಲೇಜು: 'ಬರವಣಿಗೆ ಕೌಶಲ' ಬಗ್ಗೆ ಕಾರ್ಯಾಗಾರ



**ಕುಂದಾಪುರ:** ಕೃತಕ ಬುದ್ಧಿಮತ್ತೆ ಚಾಲ್ತಿಯಲ್ಲಿರುವ ಇಂದಿನ ಕಾಲಘಟ್ಟದಲ್ಲಿ, ವಿದ್ಯಾರ್ಥಿಗಳಲ್ಲಿ ಸಂವೇದನಾಶೀಲತೆಯನ್ನು ಬೆಳೆಸಬೇಕಾಗಿರುವುದು ಅತ್ಯಂತ ಅಗತ್ಯ. ವಿದ್ಯಾರ್ಥಿಗಳನ್ನು ಆಂತರಿಕವಾಗಿ ಮತ್ತು ಭಾವನಾತ್ಮಕವಾಗಿ ಗಟ್ಟಿಗೊಳಿಸಲು ಸಾಹಿತ್ಯದ ಓದು ಮತ್ತು ಬರವಣಿಗೆ ಉಪಯೋಗಕಾರಿ. ಸಾಹಿತ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ನಿರಂತರವಾಗಿ ತೊಡಗಿಕೊಂಡರೆ ಭವಿಷ್ಯದಲ್ಲಿ ಮೌಲ್ಯಯುತ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ ಎಂದು ಕನ್ನಡ ಸಾಹಿತ್ಯ ಪರಿಷತ್ತು ಕುಂದಾಪುರ ತಾಲೂಕು ಘಟಕದ ಅಧ್ಯಕ್ಷ ಡಾ.ಉಮೇಶ ಪುತ್ರನ್ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಡಾ. ಶಿವರಾಮ ಕಾರಂತ ಪ್ರತಿಷ್ಠಾನ, ಕಾರಂತ ಥೀಮ್ ಪಾರ್ಕ್, ಕೋಟ ಇವರ ಸಹಯೋಗದೊಂದಿಗೆ ಸಾಹಿತ್ಯಾಸಕ್ತ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ 'ಬರವಣಿಗೆ ಕೌಶಲ' ಎನ್ನುವ ವಿಷಯದ ಕುರಿತ ಒಂದು ದಿನದ ಕಾರ್ಯಾಗಾರವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯದರ್ಶಿ ದಿನಕರ ಆರ್. ಶೆಟ್ಟಿ ಆಶಯ ನುಡಿಗಳನ್ನಾಡಿದರು. ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಅಕ್ಷತಾ ಗಿರೀಶ್, ಕೋಶಾಧಿಕಾರಿ ಕೆ.ಎಸ್.ಮಂಜುನಾಥ ಉಪಸ್ಥಿತರಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ್ ಶೆಟ್ಟಿ ಕೋವಾಡಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮ ಸಂಯೋಜಕಿ ರೇಷ್ಮಾ ಶೆಟ್ಟಿ ಅತಿಥಿಗಳನ್ನು ಪರಿಚಯಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ರಶ್ಮಿತಾ ಶೆಟ್ಟಿ ವಂದಿಸಿದರು. ಪ್ರವೀಣಾ ಎಂ. ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

## ಉಪ್ಪಿನಂಗಡಿ ವಳಾಲು ಟೋಲ್‌ಗೇಟ್ ನಿಯಮಬಾಹಿರ ಆರೋಪ: ಖಂಡನಾ ಸಭೆ



**ಉಪ್ಪಿನಂಗಡಿ:** ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಕೇವಲ 32 ಕಿ.ಮೀ. ಅಂತರದಲ್ಲಿ ವಳಾಲು ಮತ್ತು ಬ್ರಹ್ಮರಕೂಟ್ಲು ಎಂಬಲ್ಲಿ ಎರಡು ಟೋಲ್‌ಗೇಟ್‌ಗಳನ್ನು ಸ್ಥಾಪಿಸಿರುವುದು ನಾಗರಿಕರನ್ನು ಸುಲಿಯುವ ಕಾರ್ಯತಂತ್ರವಾಗಿದೆ. ಹೆದ್ದಾರಿ ಇಲಾಖೆಯ ನಿಯಮದಂತೆ ಸೂಕ್ತ ಅಂತರದಲ್ಲಿ ಟೋಲ್‌ಗೇಟ್ ಸ್ಥಾಪಿಸದೆ ಮನಸ್ಸೋ ಇಚ್ಛೆಯಂತೆ ಅಲ್ಲಲ್ಲಿ ಸ್ಥಾಪಿಸುವಂತಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದೆಂದು ಮಾಜಿ ಸಚಿವ ಬಿ. ರಮಾನಾಥ ರೈ ಎಚ್ಚರಿಸಿದರು.

ಅವರು ಬುಧವಾರದಂದು ಬಜತ್ತೂರು ಗ್ರಾಮ ವಳಾಲು ಎಂಬಲ್ಲಿ ನಿರ್ಮಾಣವಾಗಿರುವ ಟೋಲ್‌ಗೇಟ್ ಬಳಿ ಪರಿಶೀಲನಾ ಸಭೆ ನಡೆಸಿದರು.

ಮುನೀರ್ ಕಾಟಿಪಳ್ಳ ಮಾತನಾಡಿದರು. ಸಭೆಯಲ್ಲಿ ಕಾಂಗ್ರೆಸ್ ಮುಂದಾಳುಗಳಾದ ಯು.ಟಿ. ಮಹಮ್ಮದ್ ತೌಸೀಫ್, ಡಾ. ರಾಜಾರಾಮ ಕೆ.ಬಿ., ಶಬೀರ್ ಕೆಂಪಿ, ಪಿ.ಪಿ. ವರ್ಗೀಸ್, ಕೆ.ಕೆ. ಸಾಹುಲ್ ಹಮೀದ್, ಶೇಖರ್, ಮೋಹನ್ ಬಿ., ಬಿ.ಎಂ. ಭಟ್, ಉಷಾ ಅಂಚನ್, ಅಭಿಲಾಷ್, ಮುರಳೀಧರ್ ರೈ, ಅಜಿತ್ ಪಾಲೇರಿ, ಸರ್ವೋತ್ತಮ ಗೌಡ, ಪ್ರಶಾಂತ್, ಅಬ್ಬಾಸ್ ಅಲಿ, ಉಮಾನಾಥ್ ಶೆಟ್ಟಿ, ಯು.ಟಿ. ಇರ್ಷಾದ್, ರೂಪೇಶ್ ರೈ, ಮಹಮ್ಮದ್ ಫಾರೂಕ್ ಭಾಗವಹಿಸಿದ್ದರು.

## ಬಳಂಜ ಶ್ರೀ ಪಂಚಲಿಂಗೇಶ್ವರ ಮತ್ತು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜಾತ್ರೆ | ಪರಮೇಶ್ವರಿಯ ಮೂಲಸ್ಥಾನದೆಡೆಗೆ ಭಕ್ತರ ನಡಿಗೆ 'ಕೇರಿಂಜ ಯಾತ್ರೆ'

# ಕೇರಿಂಜ ಸಾನಿಧ್ಯ ಅಭಿವೃದ್ಧಿಗೊಂಡು ಭಗವಂತನ ನಾಮಸ್ಮರಣೆಯಾಗಲಿ: ಬಾಳೆಕುದ್ರು ಸ್ವಾಮೀಜಿ

**ಬೆಳ್ತಂಗಡಿ:** ಬಂದಿರುವ ಊರು ಬಳಂಜ. ಶಿವ ಬಿಟ್ಟು ಶಕ್ತಿ ಇಲ್ಲ ಹಾಗೇಯೇ ಶಕ್ತಿ ಬಿಟ್ಟು ಶಿವ ಇಲ್ಲ, ದುರ್ಗೆ ಪಾರ್ವತಿಗೆ ಸಮಾನವಾಗಿದ್ದು, ಪಾರ್ವತಿ-ಪಂಚಲಿಂಗೇಶ್ವರನ ದಿವ್ಯಾ ಸಾನಿಧ್ಯ ಬ್ರಹ್ಮಕಲಶದ ಶುಭ ಅವಸರದಲ್ಲಿದೆ ಎಂದು ಬಾಳೆಕುದ್ರು ಜಗದ್ಗುರು ಶಂಕರಾಚಾರ್ಯ ವಾಸುದೇವ ಸದಾಶಿವಶ್ರಮ ಮಹಾ ಸ್ವಾಮೀಜಿ ನುಡಿದರು.

ಅವರು ಬಳಂಜ ಶ್ರೀ ಪಂಚಲಿಂಗೇಶ್ವರ ಮತ್ತು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರೆ ಸಂದರ್ಭದಲ್ಲಿ ಪರಮೇಶ್ವರಿಯ ಮೂಲಸ್ಥಾನದೆಡೆಗೆ ಭಕ್ತರ ನಡಿಗೆ 'ಕೇರಿಂಜ ಯಾತ್ರೆ' ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ನವದುರ್ಗೆಯವರು ಪಾರ್ವತಿಯ ಸ್ವರೂಪ. ಇಲ್ಲಿ ಪಂಚಲಿಂಗೇಶ್ವರನ ರಮಾಣೀಯಾಗಿ ಪಾರ್ವತಿ



ಇಲ್ಲಿ ದುರ್ಗಾಪರಮೇಶ್ವರಿ ರೂಪದಲ್ಲಿ ನೆಲೆಸಿದ್ದಾರೆ. ಇಲ್ಲಿನ ಪಂಚಲಿಂಗೇಶ್ವರ ದೇವರಿಗೂ ಕೇರಿಂಜ ಬೆಟ್ಟದ ಮೇಲೆ ವಿರಜಮಾನರಾಗಿರುವ ದುರ್ಗೇ ದೇವಿಗೂ ಅವಿನಾಭಾವ ಸಂಬಂದವಿದೆ. ಶಾಂಡಿಲ್ಯ ಮುನಿಗಳು ಕೇರಿಂಜದಲ್ಲಿ ದುರ್ಗೇಯ ಆರಾಧನೆ ಮಾಡಿದ್ದರು. ಆದ್ದರಿಂದ ಕೇರಿಂಜ ಸಾನಿಧ್ಯ ಅಭಿವೃದ್ಧಿಗೊಳ್ಳಲಿ, ಕಲಿಯುಗದಲ್ಲಿ ಭಗವಂತನ ನಾಮಸ್ಮರಣೆಯಾಗಲಿ ಎಂದು ತಿಳಿಸಿದರು.

ಶಾಸಕ ಹರೀಶ್ ಪೂಂಜ ಮಾತನಾಡಿ, ಗುರುಗಳ ಪಾದಸ್ಪರ್ಶದಿಂದ ಮುಂಬರುವ ಬ್ರಹ್ಮಕಲಶೋತ್ಸವಕ್ಕೆ ಚಾಲನೆ ದೊರೆತಿದೆ. ಕಳೆದ 12 ವರ್ಷದ ಹಿಂದೆ ನಡೆದ ಬಳಂಜ ಬ್ರಹ್ಮಕಲಶೋತ್ಸವ ಜಿಲ್ಲೆಯಲ್ಲಿ ಸುಪ್ರಸಿದ್ಧಿ ಪಡೆದಿತ್ತು. ಮುಂದಿನ ಬ್ರಹ್ಮಕಲಶೋತ್ಸವ ಅತ್ಯಂತ ಯಶಸ್ವಿಗೊಳ್ಳಲು ಊರಿನ ಪ್ರತಿಯೊಬ್ಬರೂ ಸಹಕಾರ ಇರಲಿಎಂದು ಅಭಿಪ್ರಾಯಪಟ್ಟರು.

ಬಳಂಜ ಅತೀ ಹೆಚ್ಚು ಸಾಧಕರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ ವಿಶೇಷವಾದ ಊರು. ನನಗೆ ರಾಜಕೀಯ ಮತ್ತು ಧಾರ್ಮಿಕವಾಗಿ ಶಕ್ತಿ ನೀಡಿದ ಊರು ಕೂಡ ಬಳಂಜ. 12 ವರ್ಷಗಳ ಹಿಂದೆ ಬಳಂಜ ಕ್ಷೇತ್ರದ ಬ್ರಹ್ಮಕಲಶೋತ್ಸವದ ಅಧ್ಯಕ್ಷನಾಗಿ ದೇವರ ಸೇವೆ ಮಾಡುವ ಯೋಗ ಭಾಗ್ಯ ನನಗೆ ಸಿಕ್ಕಿದೆ ಎಂದರು.

ವೇದಿಕೆಯಲ್ಲಿ ಬಳಂಜ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಅನುವಂಶೀಯ ಆಡಳಿತ ಮೊಕ್ತೇಸರ ಬಿ.ಶೀತಲ್ ಪಡಿವಾಳ್, ಬಳಂಜ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸತೀಶ್ ರೈ ಬಾರ್ದಡ್ಕ, ಉದ್ಯಮಿ ದುರ್ಗಾಪರಮೇಶ್ವರಿ ದೇವಳದ ಸಂಬಂಧಪಟ್ಟವರಾದ ರಾಘವೇಂದ್ರ ಭಟ್ ಹೊಕ್ಕಾಡಿಗೋಳಿ ಉಪಸ್ಥಿತರಿದ್ದರು.

ಪ್ರಮುಖರಾದ ರಾಕೇಶ್ ಹೆಗ್ಡೆ ಬಳಂಜ, ಸಂತೋಷ್ ಕುಮಾರ್ ಕಾಪಿನಡ್ಕ, ಜಯ ಸಾಲಿಯಾನ್ ಕೊಂಗುಳ, ವಿಶ್ವನಾಥ ಹೊಳ್ಳ,ಚಂದ್ರಶೇಖರ ಪಿ.ಕೆ., ರಾಘವೇಂದ್ರ ಭಟ್ ಬಳಂಜ, ಸುರೇಶ್ ಶೆಟ್ಟಿ ಕುರ್ಲೆಲ್ಯ,ರತ್ನರಾಜ್ ಜೈನ್ ಪೇರಂದಬೈಲು, ಸತೀಶ್ ರೈ ಬಾರ್ದಡ್ಕ ಸತೀಶ್ ಶೆಟ್ಟಿ ಕುರ್ಲೆಲ್ಯ, ರವೀಂದ್ರ ಶೆಟ್ಟಿ ಬಳಂಜ ಸುರಭಿ ಉಜಿರೆ, ವಿನು ಬಳಂಜ, ರಾಘವೇಂದ್ರ ಭಟ್ ಹೊಕ್ಕಾಡಿಗೋಳಿ, ಗುರುಪ್ರಸಾದ್ ಹೆಗ್ಡೆ ದರಿಮಾರ್, ಮನೋಹರ್ ಬಳಂಜ, ಸಂತೋಷ್ ಪಿ. ಕೋಟ್ಯಾನ್ ಬಳಂಜ, ರಂಜಿತ್ ಮಜಲಡ್ಡ, ಸತೀಶ್ ಕೆ. ಬರಮೇಲು, ರಜತ್ ಹೆಗ್ಡೆ ಬಳಂಜ, ಹರೀಶ್ ವೈ. ಚಂದ್ರಮ, ಸುರೇಶ್ ಪೂಜಾರಿ ಜೈಮಾತ, ಗಣೇಶ್ ಬೊಂಟ್ರೋಟ್ಟು, ಸುರೇಶ್ ಪೂಜಾರಿ ಹೇವ, ಸತೀಶ್ ದೇವಾಡಿಗ ಶಾರಬೈಲು, ಜಗದೀಶ್ ಪೆರಾಜೆ,ತಿಮ್ಮಪ್ಪ ಪೂಜಾರಿ, ಪ್ರವೀಣ್ ಲಾಂತ್ಯಾರು, ಜಗದೀಶ್ ರೈ ಹಾನಿಂಜ,ದುಗ್ಗಯ್ಯ ಪೂಜಾರಿ,ರಮನಾಥ ರೈ ಪಂಬಾಜೆ ಉಪಸ್ಥಿತರಿದ್ದರು.

ಪ್ರಗತಿಪರ ಕೃಷಿಕ ವಿಶ್ವನಾಥ ಹೊಳ್ಳ ಸ್ವಾಗತಿಸಿದರು, ರವೀಂದ್ರ ಶೆಟ್ಟಿ ಬಳಂಜ ವಂದಿಸಿ, ಚಂದ್ರಶೇಖರ್ ಪಿ.ಕೆ. ಕಾರ್ಯಕ್ರಮ ನಿರೂಪಿಸಿದರು. ಮೂಲಸ್ಥಾನಕ್ಕೆ ಆಗಮಿಸಿದ ಭಕ್ತರಿಗೆ ಬಳಂಜದ ಸಮನ್ವಿ ಸ್ಟೋರ್‌ನ ಸಂತೋಷ್ ಜೈನ್ ಸಿದ್ದರಹಿತ್ಲು ಎಳ್ಳು ಪಾನೀಯ ನೀಡಿದರು.

## ಸುತ್ತಮುತ್ತ

### ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಮಂಗಳೂರು:** ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.26ರಂದು ಬೆಳಿಗ್ಗೆ 9.30ರಿಂದ ಸಂಜೆ 6ರವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಶಿರ್ತಾಡಿ, ಕೊಯಿಕುಡೆ, ಪಿದಮಲೆ, ಬೈಲಬರ್ಕೆ, ಬೋರುಗುಡ್ಡೆ, ಕರ್ನಲ್ ಗುಡ್ಡೆ, ಹೊಂಪೆಟ್ಟು, ಆನೆಗುಡ್ಡೆ, ಕುಕ್ಕುದಕಟ್ಟೆ, ಮರ್ಗರ್ ಕಳ, ಪಡುಕೊಣಾಜೆ, ಮೇಕಾರು ದ್ವಾರ, ಅರಸುಕಟ್ಟೆ, ಶುಭಮಂಗಳ, ವಿದ್ಯಾನಗರ, ಕಜೆ, ಕಾಶಿಪಟ್ನ, ಕಾನ, ಕಲ್ಲೋಳಿ, ನಡಿಗುಡ್ಡೆ, ಕಾಂತಾವರ ಕ್ರಾಸ್, ಬೆಳುವಾಯಿ, ಬನ್ನಡ್ಕ, ಕಾಯರ್ ಕಟ್ಟೆ, ಆಜಾದ್ ನಗರ, ಕರಿಯನಂಗಡಿ, ಮಲೆಬೆಟ್ಟು, ಮಂಜನಕಟ್ಟೆ, ಕಾಯದೆ, ಕೆಸರಗದ್ದೆ, ಪೆಲಕುಂಜ, ಮೂಡಾಯಿಕಾಡು, ಬೆಳುವಾಯಿ ಚರ್ಚ್, ಇರ್ವತ್ತೂರು ಕ್ರಾಸ್, ಗುಂಡುಕಲ್ಲು, ಮೂಡುಮಾರ್ನಾಡು, ಕೆಲ್ಲಪುತ್ತಿಗೆ ದರೆಗುಡ್ಡೆ, ಅರಸುಕಟ್ಟೆ, ಪಣಪಿಲ, ಅಳಿಯೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

### ಯುವವಾಹಿನಿ ಮಾಣಿ ಘಟಕದ ಅಧ್ಯಕ್ಷರಾಗಿ ಗಣೇಶ್ ಪೂಜಾರಿ

**ಬಂಟ್ವಾಳ:** ಯುವವಾಹಿನಿ ಮಾಣಿ ಘಟಕದ 2026–27ನೇ ಸಾಲಿನ ಅಧ್ಯಕ್ಷರಾಗಿ ಗಣೇಶ್ ಪೂಜಾರಿ ಕೊಡಾಜೆ ಆಯ್ಕೆಯಾಗಿದ್ದಾರೆ. ಪ್ರಥಮ ಉಪಾಧ್ಯಕ್ಷರಾಗಿ ಸುಜಿತ್ ಅಂಚನ್ ಮಾಣಿ,



2ನೇ ಉಪಾಧ್ಯಕ್ಷರಾಗಿ ಸತೀಶ್ ಕೊಪ್ಪರಿಗೆ, ಕಾರ್ಯದರ್ಶಿಯಾಗಿ ವಿಶ್ವನಾಥ ಉರ್ದಿಲ, ಜತೆ ಕಾರ್ಯದರ್ಶಿಯಾಗಿ ಶಶಿಪ್ರಭಾ ಮಿತ್ತೂರು, ಕೋಶಾಧಿಕಾರಿಯಾಗಿ ತ್ರಿವೇಣಿ ರಮೇಶ್ ಮುಜಲ, ಸಾಂಸ್ಕೃತಿಕ ನಿರ್ದೇಶಕ ರಾಗಿ ಕೃಪಾನ್ ಪುತ್ತೂರು, ನಾರಾಯಣ ಗುರು ತತ್ವ ನಿರ್ದೇಶಕರಾಗಿ ಶ್ರೀಧರ್ ಮುಜಲ, ವ್ಯಕ್ತಿತ್ವ ವಿಕಸನ ನಿರ್ದೇಶಕರಾಗಿ ಸತೀಶ್ ಮುರುವ, ಸಾಹಿತ್ಯ ಮತ್ತು ಕಲೆ ನಿರ್ದೇಶಕರಾಗಿ ರಾಜೇಶ್ ಕೋಟ್ಯಾನ್, ಕ್ರೀಡಾ ಕಾರ್ಯದರ್ಶಿಯಾಗಿ ಸಂದೇಶ್ ಕಡೇಶ್ವಾಲ್ಯ, ಆರೋಗ್ಯ ನಿರ್ದೇಶಕರಾಗಿ ರತಿ ಸುರ್ಲಾಜೆ, ಉದ್ಯೋಗ ಮತ್ತು ಭವಿಷ್ಯ ನಿರ್ಮಾಣ ನಿರ್ದೇಶಕರಾಗಿ ಕೇಶವ ಬರಿಮಾರ್, ಸಮಾಜ ಸೇವಾ ನಿರ್ದೇಶಕರಾಗಿ ಸುರೇಶ್ ಬಾಕಿಲ,ಪ್ರಚಾರ ನಿರ್ದೇಶಕರಾಗಿ ಚರಣ್ ಜೆ. ಅನಂತಾಡಿ, ಮಹಿಳಾ ನಿರ್ದೇಶಕರಾಗಿ ಪುಷ್ಪಶ್ರೀ ನಾಗೇಶ್,ವಿದ್ಯಾರ್ಥಿ ಸಂಘಟನೆ ನಿರ್ದೇಶಕರಾಗಿ ಯಶಸ್ವಿನಿ, ಶ್ರೇಯ, ಭವಿಷ್ಯ ಬಾಕಿಲ,ಸಂಘಟನಾ ಕಾರ್ಯದರ್ಶಿಗಳಾಗಿ ಅನಂತಾಡಿಗೆ ಸೀತಾಲಕ್ಷ್ಮಿ, ಸುಜೀತ್ ಬಾಕಿಲ, ಮಾಣಿಗೆ ಸ್ಮಿತಾ ಹಳೀರ, ಗಂಗಾಧರ್ ಮಾಣಿ, ಬರಿಮಾರ್‌ಗೆ ಸಾಯಿ ಪ್ರಣಾಮ್, ಭರತ್ ಕೇವ, ರಾಮಣ್ಣನೆಟ್ಲ, ಮೂಡ್ನೂರುಗೆ ಪ್ರಸಾದ್ ಮಿತ್ತಕೋಡಿ, ಮೋಹನ್ ಮುಜಲ,ಪೆರಾಜೆಗೆ ಲೋಹಿತ್ ಮಡಲ, ಸುಕೇಶ್ ಬಡೆಕೋಡಿ, ಕೆದಿಲಕ್ಕೆ ಬಾಲಕೃಷ್ಣ ಕೆರೆಕೋಡಿ, ನಿತಿನ್ ಅಂಗರಾಜೆ,ಇಡ್ಕಿದುಗೆ ನವೀನ್ ಸೂರ್ಯ, ರೇಖಾ ಇಡ್ಕಿದು, ಬಿಳಿಯೂರಿಗೆ ವಿಕ್ರಮ್ ಬಿಳಿಯೂರು, ಚೇತನ್ ಮಲ್ಲಡ್ಕ ಪೆರ್ನೆಗೆ ಉಮಾ ಪೆರ್ನೆ, ಶುಭ ಪೆರ್ನೆ, ಕಡೇಶ್ವಾಲ್ಯಕ್ಕೆ ಯಶೋಧ, ಶಿವಾನಿ, ಸಲಹೆಗಾರರಾಗಿ ಲೋಕನಾಥ್ ಶಿಮರಾಜೆ ಅವರನ್ನು ಆಯ್ಕೆ ಮಾಡಲಾಯಿತು. ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವು ಮಾ.29ರಂದು ಸಂಜೆ 7 ಗಂಟೆಗೆ ಕೋಡಾಜೆ ನಕ್ಷತ್ರ ಆಡಿಟೋರಿಯಂನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

### ಪಕ್ಷಿಕೆರೆ ಜಂಕ್ಷನ್ ಬಳಿ ಪಾದಚಾರಿಗೆ ಬೈಕ್ ಡಿಕ್ಕಿ ಹೊಡೆದು ಪರಾರಿ

**ಮುಲ್ಕಿ:** ಹಳೆಯಂಗಡಿ ಎಸ್ ಕೋಡಿ ಹೆದ್ದಾರಿಯ ಪಕ್ಷಿಕೆರೆ ಜಂಕ್ಷನ್ ಬಳಿ ಪಾದಚಾರಿಗೆ ಬೈಕ್ ಡಿಕ್ಕಿಯಾಗಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಗೊಂಡವರನ್ನು ವಾಸು ಪೂಜಾರಿ (45) ಎಂದು ಗುರುತಿಸಲಾಗಿದೆ. ಗಾಯಾಳು ವಾಸು ಪೂಜಾರಿ ಅವರು ಮನೆಗೆ ದಿನಸಿ ತರಲು ಪಕ್ಷಿಕೆರೆ ಜಂಕ್ಷನ್ ಗಣೇಶ್ ಕಟ್ಟೆಯ ಮುಂದೆ ರಸ್ತೆ ದಾಟುತ್ತಿದ್ದಾಗ ಎಸ್ ಕೋಡಿ ಕಡೆಯಿಂದ ಬಂದ ಬೈಕ್ ಡಿಕ್ಕಿ ಹೊಡೆದಿದೆ.

**ಗಂಭೀರ ಗಾಯ**

ಅಪಘಾತದ ರಭಸಕ್ಕೆ ವಾಸು ಪೂಜಾರಿಯವರು ರಸ್ತೆಗೆ ಬಿದ್ದು ತಲೆಗೆ ಸೇರಿದಂತೆ ಗಂಭೀರ ಗಾಯವಾಗಿದ್ದು ಚಿಕಿತ್ಸೆಗೆ ಮುಕ್ಕದ ಶ್ರೀನಿವಾಸ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಪಘಾತದ ಬಳಿಕ ಬೈಕ್ ಸವಾರ ತನ್ನ ವಾಹನವನ್ನು ನಿಲ್ಲಿಸದೆ ಪರಾರಿಯಾಗಿದ್ದು ಈ ಬಗ್ಗೆ ಮಂಗಳೂರು ಉತ್ತರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೊಡಗು ವಿಶ್ವಕ್ಷಯರೋಗ ನಿರ್ಮೂಲನಾ ದಿನಾಚರಣೆಯಲ್ಲಿ ಡಾ. ಸನತ್ ಕುಮಾರ್ ಮಾಹಿತಿ

# ಒಂದು ಲಕ್ಷ ಜನಸಂಖ್ಯೆಯಲ್ಲಿ 79 ಮಂದಿ ಕ್ಷಯ ರೋಗಿಗಳು

**ಮಡಿಕೇರಿ:** ಜಿಲ್ಲೆಯಲ್ಲಿ ಒಂದು ಲಕ್ಷ ಜನಸಂಖ್ಯೆಗೆ 79 ಕ್ಷಯ ರೋಗಿಗಳಿದ್ದು, ಇನ್ನೂ ಎರಡು ವರ್ಷದಲ್ಲಿ ಕ್ಷಯಮುಕ್ತ ಜಿಲ್ಲೆಯನ್ನಾಗಿ ಮಾಡಬಹುದಾಗಿದೆ ಎಂದು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸನತ್ ಕುಮಾರ್ ಅವರು ತಿಳಿಸಿದ್ದಾರೆ.

ನಗರದ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಾಲೇಜು ಸಭಾಂಗಣದಲ್ಲಿ ಜಿಲ್ಲಾಡಳಿತ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ನಡೆದ ವಿಶ್ವ ಕ್ಷಯರೋಗ ನಿರ್ಮೂಲನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮುಂದಿನ 1 ವರ್ಷದಲ್ಲಿ ಒಂದು ಲಕ್ಷ ಜನರಿಗೆ ನಲ್ವತ್ತಕ್ಕಿಂತ ಕಡಿಮೆ ಕ್ಷಯ ರೋಗಿಗಳು ಕಂಡು ಬರಲಿದ್ದು, ಸಂಪೂರ್ಣವಾಗಿ ಕ್ಷಯಮುಕ್ತ ಜಿಲ್ಲೆಯನ್ನಾಗಿ ಮಾಡಲು ಎಲ್ಲರೂ ಸಂಕಲ್ಪ ಮಾಡಬೇಕು ಎಂದು ಅವರು ಕೋರಿದರು.

**6ರಿಂದ 7 ಲಕ್ಷ ರೂ. ವರೆಗೆ ವೆಚ್ಚ**

ಕ್ಷಯರೋಗವನ್ನು ತಡೆಯುವಲ್ಲಿ 6 ರಿಂದ 7 ಲಕ್ಷ ರೂ. ವರೆಗೆ ಒಬ್ಬ ರೋಗಿಗೆ ಸರ್ಕಾರ ಭರಿಸಿ



ಅತ್ಯುತ್ತಮ ಚಿಕಿತ್ಸೆ ನೀಡಲಿದೆ. ಮುಂದಿನ ಪೀಳಿಗೆ ಕ್ಷಯ ರೋಗದಿಂದ ಬಳಲಬಾರದು. ಮೊಬೈಲ್ ಎಕ್ಸರೆ ಮೂಲಕವೂ ಕ್ಷಯವನ್ನು ಪತ್ತೆ ಹಚ್ಚಲಾಗುತ್ತಿದೆ. ಕಫ ಪರೀಕ್ಷೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಅವರು ಹೇಳಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ. ರಾಮಚಂದ್ರ ಕಾಮತ್ ಅವರು ಮಾತನಾಡಿ, ಕ್ಷಯ ರೋಗವನ್ನು ನಿಯಂತ್ರಿಸುವಲ್ಲಿ ಹಾಗೆಯೇ ಮತ್ತೊಬ್ಬರಿಗೆ ಕ್ಷಯ ರೋಗ ಹರಡದಂತೆ ಮುನ್ನೆಚ್ಚರ ವಹಿಸುವಲ್ಲಿ ಮಾಹಿತಿ, ಶಿಕ್ಷಣ ನೀಡಲಾಗುತ್ತಿದೆ. ರಸಪ್ರಶ್ನೆ ಹಾಗೂ ರಂಗೋಲಿ ಸ್ಪರ್ಧೆ ಮೂಲಕ ಕ್ಷಯರೋಗ ನಿಯಂತ್ರಣ ಸಂಬಂಧ ಜಾಗೃತಿ ಮೂಡಿಸಲು ಪ್ರಯತ್ನಿಸಲಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸತೀಶ್ ಕುಮಾರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಕ್ಷಯರೋಗ ಪತ್ತೆಗೆ ನೂತನ ವಿಧಾನವನ್ನು ಅಳವಡಿಸಿಕೊಂಡು ಕ್ಷಯರೋಗ ನಿಯಂತ್ರಣಕ್ಕೆ ಶ್ರಮಿಸಲಾಗುತ್ತಿದೆ. ಕ್ಷಯರೋಗ ನಿರ್ಮೂಲನೆ ಮಾಡುವಲ್ಲಿ ಅನೇಕ ನೂತನ ರೂಪರೇಷೆಗಳನ್ನು ಹಾಕಿಕೊಂಡು ಸಮರೋಪಾದಿಯಲ್ಲಿ ಕಾರ್ಯಗತ ಮಾಡಲಾಗುತ್ತಿದೆ ಎಂದರು.

> **100 ದಿನ ಪತ್ತೆ ಅಭಿಯಾನ**
>
> **ಜಿಲ್ಲೆಯ ಸೂಕ್ಷ್ಮ ಪ್ರದೇಶಗಳ ಮನೆ ಮನೆಗೆ ಭೇಟಿ ನೀಡಿ ಕ್ಷಯರೋಗ ಪತ್ತೆ ಹಚ್ಚುವ ಕಾರ್ಯಕ್ರಮ ಮಂಗಳವಾರದಿಂದ 100 ದಿನಗಳ ಕಾಲ ಹಮ್ಮಿಕೊಳ್ಳಲಾಗಿದ್ದು, ಕ್ಷಯರೋಗ ಪತ್ತೆ ಹಚ್ಚುವುದರ ಜತೆಗೆ ಚಿಕಿತ್ಸೆಯನ್ನು ನೀಡಲಾಗುತ್ತದೆ.**
>
> ● ಡಾ. ಸನತ್ ಕುಮಾರ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ

ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಸಭಾಪತಿ ರವೀಂದ್ರ ರೈ ಮಾತನಾಡಿ, ರೆಡ್‌ಕ್ರಾಸ್ ಸಂಸ್ಥೆ ಆರೋಗ್ಯ ಸೇರಿದಂತೆ ವಿವಿಧ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಜಾಗೃತಿ ಮೂಡಿಸುತ್ತಿದೆ ಎಂದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಲೋಕೇಶ್, ಆರೋಗ್ಯಯುತ ಸಮಾಜ ನಿರ್ಮಾಣ ಮಾಡುವಲ್ಲಿ ತಂಡವಾಗಿ ಕೆಲಸ ಮಾಡಬೇಕಿದೆ ಎಂದು ಸಲಹೆ ಮಾಡಿದರು.

**ಪ್ರಶಸ್ತಿ ಪತ್ರ ವಿತರಣೆ**

ರಂಗೋಲಿ ಹಾಗೂ ರಸಪ್ರಶ್ನೆ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. 2025ನೇ ಸಾಲಿನ ಕ್ಷಯಮುಕ್ತ ಗ್ರಾಮ ಪಂಚಾಯತ್‌ಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಬಲ್ಲಮಾವಟಿ ಮತ್ತು ಕಾಕೋಟುಪರಂಬು ಗ್ರಾ.ಪಂ.ಗಳಿಗೆ ಚಿನ್ನದ ಪದಕ, ಮೂರು ಗ್ರಾ.ಪಂ.ಗಳಿಗೆ ಬೆಳ್ಳಿ ಪದಕ ಹಾಗೂ 24 ಗ್ರಾ.ಪಂ.ಗಳಿಗೆ ಕಂಚಿನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್, ವೈದ್ಯಕೀಯ ವಿಜ್ಞಾನ ಸಂಸ್ಥೆಯ ವಿವಿಧ ವಿಭಾಗದ ಮುಖ್ಯಸ್ಥರು, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್, ಪಿಡಿಒಗಳು, ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳು ಇತರರು ಇದ್ದರು. ಕ್ಷಯ ರೋಗ ವಿಭಾಗದ ಮೇಲ್ವಿಚಾರಕ ಎಂ.ಮಹದೇವಪ್ಪ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ ನಿರೂಪಿಸಿ, ವಂದಿಸಿದರು.

## ಪುಂಜಾಲಕಟ್ಟೆ ಘಟಕದ ದ್ವಿವಾರ್ಷಿಕ ಮಹಾಸಭೆಯಲ್ಲಿ ದಿನೇಶ್ ಶೆಟ್ಟಿ ಬಣ್ಣನೆ

# ಕಲಾವಿದರ ಬಾಳಿಗೆ ಪಟ್ಲ ಫೌಂಡೇಶನ್‌ನಿಂದ ಬೆಳಕು

**ಬಂಟ್ವಾಳ:** ಯಕ್ಷಧ್ರುವ ಪಟ್ಲ ಫೌಂಡೇಶನ್ ಇದರ ಪುಂಜಾಲಕಟ್ಟೆ ಘಟಕದ ದ್ವಿವಾರ್ಷಿಕ ಮಹಾಸಭೆ ಪುಂಜಾಲಕಟ್ಟೆ ಶ್ರೀ ಮುರುಘೇಂದ್ರ ಮಿತ್ರ ಮಂಡಳಿಯ ಸಭಾಂಗಣದಲ್ಲಿ ನಡೆಯಿತು.

ಅತಿಥಿಯಾಗಿ ಭಾಗವಹಿಸಿದ್ದ ಯಕ್ಷಧ್ರುವ ಪಟ್ಲ ಫೌಂಡೇಶನ್ ಕೇಂದ್ರ ಸಮಿತಿ ಸದಸ್ಯ, ಹಿರಿಯ ಯಕ್ಷಗಾನ ಕಲಾವಿದ ದಿನೇಶ್ ಶೆಟ್ಟಿ ಕಾವಳಕಟ್ಟೆ ಅವರು ಮಾತನಾಡಿ, ಖ್ಯಾತ ಭಾಗವತ ಪಟ್ಲ ಸತೀಶ್ ಶೆಟ್ಟಿ ಅವರ ದೂರ ದೃಷ್ಟಿತ್ವದಿಂದ ಅಶಕ್ತ ಯಕ್ಷಗಾನ ಕಲಾವಿದರ ಶ್ರೇಯೋಭಿವೃದ್ಧಿಗೆ ಸ್ಥಾಪಿತವಾದ ಯಕ್ಷ ಧ್ರುವ ಪಟ್ಲ ಫೌಂಡೇಶನ್ ಈಗಾಗಲೇ ಸಾವಿರಾರು ಕಲಾವಿದರ ಪಾಲಿಗೆ ಬೆಳಕಾಗಿದೆ. ಇಂತಹ ಸಂಸ್ಥೆಯಲ್ಲಿ ತೊಡಗಿಸಿಕೊಳ್ಳುವುದು ಉತ್ತಮ ಕಾರ್ಯ. ಗ್ರಾಮೀಣ ಪ್ರದೇಶದಲ್ಲಿ ಯಕ್ಷ ಶಿಕ್ಷಣ ಸಹಿತ ಯಕ್ಷಗಾನ ಸೇವೆಗೈಯ್ಯುತ್ತಿರುವ ಪುಂಜಾಲಕಟ್ಟೆ ಘಟಕದ ಕಾರ್ಯ ಅಭಿನಂದನೀಯ ಎಂದು ಹೇಳಿದರು.

ಘಟಕದ ಗೌರವ ಮಾರ್ಗದರ್ಶಕ ಜಯಂತ ಶೆಟ್ಟಿ ಭಂಡಾರಿಗುಡ್ಡೆ ಅವರು ಮಾತನಾಡಿ, ಪಟ್ಲ ಫೌಂಡೇಶನ್ ಮೂಲಕ ಮುಂದಿನ ಪೀಳಿಗೆಗೆ ಯಕ್ಷಗಾನ ಕಲೆಯನ್ನು ಉಳಿಸಿ, ಬೆಳೆಸಲು ಸಹಕಾರಿ ಎಂದರು.

**ನೂತನ ಪದಾಧಿಕಾರಿಗಳ ಆಯ್ಕೆ**

ಘಟಕದ ಅಧ್ಯಕ್ಷ ಯಶೋಧರ ಶೆಟ್ಟಿ ದಂಡೆ ಅವರು ಅಧ್ಯಕ್ಷತೆ ವಹಿಸಿದ್ದರು.



ಈ ಸಂದರ್ಭದಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ಉದ್ಯಮಿ ಹರೀಂದ್ರ ಪೈ ಅವರನ್ನು ಆಯ್ಕೆ ಮಾಡಲಾಯಿತು. ಗೌರವ ಮಾರ್ಗದರ್ಶಕರಾಗಿ ಜಯಂತ್ ಶೆಟ್ಟಿ ಭಂಡಾರಿಗುಡ್ಡೆ, ಗೌರವಾಧ್ಯಕ್ಷರಾಗಿ ಪುರುಷೋತ್ತಮ ಪೂಜಾರಿ ಬುಳೆಕ್ಕಿನ ಕೋಡಿ, ಉಪಾಧ್ಯಕ್ಷರಾಗಿ ದಿವಾಕರ್ ದಾಸ್ ಕಾವಳಕಟ್ಟೆ, ಉದಯ್ ಕುಮಾರ್ ಶೆಟ್ಟಿ ಮೇಲ್ಮನೆ, ಗೌರವ ಸಲಹೆಗಾರರಾಗಿ ಯಶೋಧರ ಶೆಟ್ಟಿ ದಂಡೆ, ವಸಂತ ಶೆಟ್ಟಿ ಕೇದಗೆ, ಸಂಚಾಲಕರಾಗಿ ರಮೇಶ್ ಶೆಟ್ಟಿ ಮಜಲೋಡಿ,ಸಹಸಂಚಾಲಕರಾಗಿ ದಿನೇಶ್ ಶೆಟ್ಟಿ ಕಾವಳಕಟ್ಟೆ ಪ್ರಧಾನ ಕಾರ್ಯದರ್ಶಿಯಾಗಿ ಸತೀಶ್ ಆಚಾರ್ಯ ಬರ್ಕಳ, ಜತೆ ಕಾರ್ಯದರ್ಶಿಯಾಗಿ ದಿನಕರ್ ಶೆಟ್ಟಿ ಅಂಕದಳ, ಕೋಶಾಧಿಕಾರಿಯಾಗಿ ನವೀನ್ ಶೆಟ್ಟಿ ಸೇವಾ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಲೆಕ್ಕಪತ್ರ, ವರದಿ ಪುಸ್ತಕಗಳನ್ನು ನೂತನ ಸಮಿತಿ ಹಸ್ತಾಂತರಿಸಲಾಯಿತು.

ಗೌರವಾಧ್ಯಕ್ಷ ಪುರುಷೋತ್ತಮ ಪೂಜಾರಿ ಬುಳೆಕ್ಕಿನಕೋಡಿ, ವಸಂತ ಶೆಟ್ಟಿ ಕೇದಗೆ, ಹರೀಶ್ ಪ್ರಭು, ಶ್ರೀ ಮುರುಘೇಂದ್ರ ಮಿತ್ರ ಮಂಡಳಿಯ ಅಧ್ಯಕ್ಷ ಚಂದ್ರಶೇಖರ್ ಶೆಟ್ಟಿಗಾರ್, ಮಹಿಳಾ ಘಟಕದ ಅಧ್ಯಕ್ಷೆ ಉಮಾ ಡಿ. ಗೌಡ, ಸಂಚಾಲಕಿ ಆಶಾ ದಿನಕರ್, ಪ್ರಧಾನ ಕಾರ್ಯದರ್ಶಿ ಸೌಮ್ಯ ಮಹಾಬಲ ಶೆಟ್ಟಿ ಉಪಸ್ಥಿತರಿದ್ದರು. ಉದಯ ಕುಮಾರ್ ಶೆಟ್ಟಿ ಸ್ವಾಗತಿಸಿ, ಲೆಕ್ಕ ಪತ್ರ ಮಂಡಿಸಿದರು ಸತೀಶ್ ಆಚಾರ್ಯ ಬರ್ಕಳ ವಂದಿಸಿದರು.ಹರೀಶ್ಚಂದ್ರ ಶೆಟ್ಟಿಗಾರ್ ಕಾರ್ಯಕ್ರಮ ನಿರೂಪಿಸಿದರು.

## ಭಟ್ಟಿ ವಿನಾಯಕ ಭಜನಾ ಮಂಡಳಿ ಬೆಳ್ಳಿಹಬ್ಬದಲ್ಲಿ ಸುಬ್ರಹ್ಮಣ್ಯ ಶ್ರೀ ಸಂದೇಶ

# ಸನಾತನ ಸಂಸ್ಕೃತಿಯಿಂದ ಬದುಕು ಹಸನಾಗಲಿದೆ

**ಪುತ್ತೂರು:** ವಿದೇಶಿ ಸಂಸ್ಕೃತಿಯಿಂದ ಬದುಕಿಗೆ ನಿಜವಾದ ಅರ್ಥ ದೊರೆಯಲು ಸಾಧ್ಯವಿಲ್ಲ, ದೇಶೀಯ ಸಂಸ್ಕೃತಿಯಿಂದ ಮಾತ್ರ ಬದುಕು ಸಾರ್ಥಕವಾಗಲು ಸಾಧ್ಯ, ಸನಾತನ ಧರ್ಮ ಸಂಸ್ಕೃತಿಯನ್ನು ಅಳವಡಿಸಿಕೊಂಡಾಗ ನಮ್ಮ ಬದುಕು ಹಸನಾಗಲಿದೆ ಎಂದು ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಅವರು ಬಲ್ನಾಡು ಶ್ರೀ ಭಟ್ಟಿ ವಿನಾಯಕ ದೇವಸ್ಥಾನದಲ್ಲಿ ನಡೆದ ಶ್ರೀ ಭಟ್ಟಿ ವಿನಾಯಕ ಭಜನಾ ಮಂಡಳಿಯ ಬೆಳ್ಳಿ ಹಬ್ಬದ ಸಂಭ್ರಮದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ವಿದೇಶಿ ಸಂಸ್ಕೃತಿಯಿಂದಾಗಿ ಕುಟುಂಬದಲ್ಲಿ ಒಬ್ಬರಿಂದ ಒಬ್ಬರಿಗೆ ಸಂಪರ್ಕವಿಲ್ಲ, ಪೋಷಕರಿಗೆ ಮಕ್ಕಳ ಮೇಲೆ ನಿಯಂತ್ರಣ ವಿರುವುದಿಲ್ಲ, ಕೌಟುಂಬಿಕ ಸಂಬಂಧವೇ ಕಳೆದುಕೊಳ್ಳುತ್ತಿರುವ ವಿದೇಶಿ ಸಂಸ್ಕೃತಿಯು ಬಹಳಷ್ಟು ಅಪಾಯ ಕಾರಿಯಾಗಿದ್ದು ಪರಂಪರೆಯಿಂದ ಬಂದ ಜೀವನ ಪದ್ಧತಿ, ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದ ಹೊಣೆ ನಮ್ಮ ಮೇಲಿದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿ ಮಧ್ವಾಧೀಶ ವಿಠಲದಾಸ ನಾಮಾಂಕಿತ ಗಾಯಕ ರಾಮಕೃಷ್ಣ ಕಾಟುಕುಕ್ಕೆ ಮಾತನಾಡಿದರು. ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ



> **ಧರ್ಮಸ್ಥಳ ಭಜನಾ ಕಮ್ಮಟದಲ್ಲಿ ಪ್ರಾತ್ಯಕ್ಷಿಕೆ, ರಾಮಕೃಷ್ಣ ಕಾಟುಕುಕ್ಕೆ ಅವರ ಮಾರ್ಗದರ್ಶನದಲ್ಲಿ ದಾಸ ಸಾಹಿತ್ಯ ತರಬೇತಿ ಪಡೆದು ಭಜನಾ ಮಂಡಳಿಗೆ ಮತ್ತಷ್ಟು ಹುರುಪು ನೀಡಲಾಗಿದೆ. ತಿರುಪತಿ, ಉಡುಪಿ ಪರ್ಯಾಯದಲ್ಲಿ ಅಖಂಡ ಭಜನೆ, ಆದಿಚುಂಚನಗಿರಿ ಸೇರಿದಂತೆ ನೂರಾರು ಕಡೆಗಳಲ್ಲಿ ಭಜನಾ ಸೇವೆ ನೀಡಿದೆ.**
>
> ● ಮಾಧವ ಗೌಡ ಕಾಂತಿಲ, ಭಜನಾ ಮಂಡಳಿಯ ಗೌರವಾಧ್ಯಕ್ಷರು,

ಚನಿಲ ತಿಮ್ಮಪ್ಪ ಶೆಟ್ಟಿ ಮಾತನಾಡಿದರು. ಭಜನಾ ಮಂಡಳಿಯ ಗೌರವಾಧ್ಯಕ್ಷ ಮಾಧವ ಗೌಡ ಕಾಂತಿಲ ಅಧ್ಯಕ್ಷತೆ ವಹಿಸಿದ್ದರು. ಭಜನಾ ಮಂಡಳಿಯ ಅಧ್ಯಕ್ಷ ಯಶವಂತ ಗೌಡ ಕೋಡಿಯಡ್ಕ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್ ಇದ್ದರು.

**ಗುರುವಂದನೆ**

ಭಜನೋತ್ಸವದ ಹಾಡುಗಾರಿಕೆಯಲ್ಲಿ ಸಹಕರಿಸಿದ ರಾಮಕೃಷ್ಣ ಕಾಟುಕುಕ್ಕೆ ಅವರಿಗೆ ಗುರುವಂದನೆ ನೀಡಿ ಗೌರವಿಸಲಾಯಿತು. ಕುಣಿತ ಭಜನೆ ತರಬೇತಿ ನೀಡಿದ ಸದಾನಂದ ಆಚಾರ್ಯ ಕಾಣಿಯೂರು ಅವರನ್ನೂ ಗೌರವಿಸಲಾಯಿತು. ಸಚ್ಚಿತಾ ಎಂ.ಕೆ. ಕಾಂತಿಲ ಪ್ರಾರ್ಥಿಸಿದರು. ಭಜನಾ ಮಂಡಳಿ ಗೌರವಾಧ್ಯಕ್ಷ ಮಾಧವ ಗೌಡ ಕಾಂತಿಲ ಸ್ವಾಗತಿಸಿ, ಸಂಚಾಲಕ ಉಮೇಶ್ ಗೌಡ ಬ್ರಹ್ಮರಕೋಡಿ ವಂದಿಸಿದರು. ಶಿಕ್ಷಕ ಬಾಲಕೃಷ್ಣ ರೈ ಪೊರ್ದಾಲ್ ನಿರ್ವಹಿಸಿದರು. ಅರ್ಧ ಏಕಾಹ ಭಜನೆ, 12 ತೆಂಗಿನಕಾಯಿ ಗಣಪತಿ ಹವನ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಸಂಜೆ ಕುಂಕುಮಾರ್ಚನೆ, ಭಜನಾ ಮಂಗಳೋತ್ಸವ, ರಂಗಪೂಜೆ, ಕುಣಿತ ಭಜನೆ, ವಿಠಲ ನಾಯಕ್ ಕಲ್ಲಡ್ಕ ಬಳಗದಿಂದ ಗೀತಾ–ಸಾಹಿತ್ಯ–ಸಂಭ್ರಮ ನಡೆಯಿತು.

# ಏ.1ರಂದು ಕೆಎಫ್‌ಡಿಸಿ ಭ್ರಷ್ಟಾಚಾರದ ದಾಖಲೆ ಬಿಡುಗಡೆ: ಜೀವರತ್ನ ಹೇಳಿಕೆ

**ಸುಳ್ಯ:** ಕೆಎಫ್‌ಡಿಸಿ ಸುಳ್ಯ ಐವರ್ನಾಡು ಸುಬ್ರಹ್ಮಣ್ಯ ವಿಭಾಗ ಕಾರ್ಮಿಕರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಮತ್ತು ಧರಣಿ ಸತ್ಯಾಗ್ರಹ ಏ.1ರಿಂದ ಸುಳ್ಯ ಕಚೇರಿ ಬಳಿಯಲ್ಲಿ ನಡೆಯಲಿದೆ ಎಂದು ಜನರಲ್ ಎಂಪ್ಲಾಯಿಸ್ ಯೂನಿಯನ್ ಅಧ್ಯಕ್ಷ ಜೀವರತ್ನ ತಿಳಿಸಿದ್ದಾರೆ.

ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2013ರಿಂದ ಅನುಕಂಪ ಆಧಾರಿತ ನೌಕರಿಗೆ ಬಂದಿರುವ ಬೆರಳೆಣಿಕೆಯ ಜನರಿಗೆ ನೌಕರಿ ನೀಡಿಲ್ಲ, ಅಲ್ಲದೆ ಖಾಯಂ ಮತ್ತು ನಿರಂತರ ಕಾರ್ಮಿಕರು ಒಂದೇ ರೀತಿಯಲ್ಲಿ ಕೆಲಸಗಳನ್ನು ಮಾಡುತ್ತಿದ್ದು ಬಾಕಿ ವೇತನ (ಅರಿಯರ್ಸ್) ನೀಡುವ ಸಂದರ್ಭ ನಿರಂತರ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ಕೆಎಫ್‌ಡಿಸಿಯಲ್ಲಿ ಸಂಪೂರ್ಣವಾಗಿ ಭ್ರಷ್ಟಾಚಾರ ತುಂಬಿ ಹೋಗಿದ್ದು, ಇದರ ಸಂಪೂರ್ಣ ದಾಖಲೆಯನ್ನು ಏ.1ರಂದು ನಡೆಯುವ ಧರಣಿಯಲ್ಲಿ ಬಿಡುಗಡೆ ಗೊಳಿಸಲಾಗುವುದು ಎಂದು ತಿಳಿಸಿದರು.

**ಹಲವು ಬೇಡಿಕೆಗಳು**

ಬೇಡಿಕೆಗಳಾದ ಕಾರ್ಮಿಕರನ್ನು ಖಾಯಂ, ಬಾಕಿ ವೇತನ ಪಾವತಿ, ಅನುಕಂಪ ಆಧಾರಿತ ನೇಮಕ, ಮೇಸ್ತ್ರಿ ಕಾರ್ಮಿಕರ ನೇಮಕ ಹಾಗೂ ಇಎಸ್‌ಐ ಸೌಲಭ್ಯ ನೀಡಬೇಕು. ಏ.1ರಿಂದ ನಡೆಯುವ ಈ ಬೃಹತ್ ಧರಣಿ ಸತ್ಯಾಗ್ರಹಕ್ಕೆ ಕರ್ನಾಟಕ ಪ್ಲಾಂಟೇಷನ್ ಮತ್ತು ಇಂಡಸ್ಟ್ರಿಯಲ್ ವರ್ಕರ್ಸ್ ಟ್ರೇಡ್ ಯೂನಿಯನ್, ತೋಟ ತೋಳಿಲಾಲರ್ ಸಂಘ, ಕರ್ನಾಟಕ ತೋಟ ಮಜ್ದೂರ್ ಸಂಘ, ಕೆಎಫ್‌ಡಿಸಿ ಲೇಬರ್ಸ್ ಯೂನಿಯನ್ ಸುಳ್ಯ ಸೇರಿದಂತೆ ಎಲ್ಲಾ ಕಾರ್ಮಿಕ ಸಂಘಟನೆಗಳ ಪ್ರಮುಖರು ಮತ್ತು ಸದಸ್ಯರು ಭಾಗವಹಿಸಲಿದ್ದಾರೆ ಎಂದು ಜೀವರತ್ನ ಹೇಳಿದರು.

ಪ್ರಮುಖರಾದ ಶಿವಕುಮಾರ್, ಅರುಣಾಚಲ, ಸುಂದರ ಲಿಂಗಂ,ಶರತ್ ಕುಮಾರ್, ಶಶಿಕುಮಾರ್, ಕಾರ್ತಿಕ್, ಕ್ರೋಸ್ ನಾಗಪಟ್ಟಣ ಉಪಸ್ಥಿತರಿದ್ದರು.

> **ಬ್ಲಾಕ್‌ಗಳು ಖಾಲಿ**
>
> **ಕೆಎಫ್‌ಡಿಸಿ ನಷ್ಟದಲ್ಲಿದೆ ಎಂದು ಹೇಳುವ ನಿಗಮದ ಅಧಿಕಾರಿಗಳು ಮೊದಲು ಖಾಲಿ ಇರುವ ಬ್ಲಾಕ್‌ಗಳಿಗೆ ಜನರನ್ನು ನೇಮಕ ಮಾಡಲಿ. ಅದೇ ಮಾದರಿಯಲ್ಲಿ ರೂ.200ಕ್ಕೆ ಮಾರಾಟ ಮಾಡಬೇಕಾದ ರಬ್ಬರ್ ರೂ.100ಕ್ಕೆ ಮಾರಾಟ ಮಾಡಿದರೆ ಹೇಗೆ ಲಾಭವಾಗುತ್ತದೆ? ನಿಗಮದಲ್ಲಿ ನಡೆಯುವ ಭ್ರಷ್ಟಾಚಾರವನ್ನು ತೊಡೆದು ಹಾಕಿ ನಿಗಮ ಹಾಗೂ ಕಾರ್ಮಿಕರನ್ನು ಸರಕಾರ ರಕ್ಷಿಸಬೇಕು ಎಂದು ಜೀವರತ್ನ ಹೇಳಿದರು.**

# ತುಳು ಶಿವಳ್ಳಿ ಸಭಾ ಉಜಿರೆ ವಲಯದ ವಾರ್ಷಿಕ ಮಹಾಸಭೆ: ವರದಿ ಮಂಡನೆ



**ಬೆಳ್ತಂಗಡಿ:** ತುಳು ಶಿವಳ್ಳಿ ಸಭಾ ಉಜಿರೆ ವಲಯದ ವಾರ್ಷಿಕ ಮಹಾಸಭೆ, ಲಕ್ಷತುಳಸಿ ಅರ್ಚನೆ ಹಾಗೂ ಮಹಿಳಾ ದಿನಾಚರಣೆಯ ಸಮಾರಂಭವು ಉಜಿರೆ ಶ್ರೀ ರಾಮಕೃಷ್ಣ ಸಭಾಮಂಟಪದಲ್ಲಿ ಶನಿವಾರ ನಡೆಯಿತು.

ಜ್ಯೋತಿಷ್ಯ ವಿದ್ವಾನ್ ಕೆಮ್ಮಣ್ಣು ಪ್ರಸನ್ನ ಆಚಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ನಿವೃತ್ತ ಶಿಕ್ಷಕಿ ಮನೋರಮಾ ತೋಳ್ಪಡಿತ್ತಾಯ, ಮಹಿಳೆಯರು ತಮ್ಮ ಜೀವನಾಮೃತದಿಂದ ಸಮಾಜದಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ಗರ್ಭಾವಸ್ಥೆಯಿಂದಲೇ ಮಗುವನ್ನು ಉತ್ತಮ ಸಂಸ್ಕಾರ ನೀಡಿ ಸರಿಯಾದ ದಾರಿಯಲ್ಲಿ ತಿದ್ದುವ ಜವಾಬ್ದಾರಿ ತಾಯಿಯದ್ದು. ಮಾತೆಯರು ಉತ್ತಮ ಸಂಸ್ಕಾರವನ್ನು ಬೆಳೆಸಿಕೊಂಡು ಅದನ್ನು ಮಕ್ಕಳಿಗೆ ತಲುಪಿಸಬೇಕು ಎಂದರು.

ತುಳು ಶಿವಳ್ಳಿ ಉಜಿರೆ ವಲಯಾಧ್ಯಕ್ಷ ಗಿರಿರಾಜ ಬಾರಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಶರತ್ ಕೃಷ್ಣ ಪಡುವೆಟ್ನಾಯ, ತಾಲೂಕು ಅಧ್ಯಕ್ಷ ರಾಜ ಪ್ರಸಾದ ಪೋಲ್ನಾಯ, ತಾಲೂಕು ಮಹಿಳಾ ಘಟಕಾಧ್ಯಕ್ಷೆ ಜಯಾ ಅನಂತಕೃಷ್ಣ ಅರ್ಮುಡತ್ತಾಯ , ಉಜಿರೆ ವಲಯ ಮಹಿಳಾ ಘಟಕ ಅಧ್ಯಕ್ಷೆ ಜ್ಯೋತಿ ಗುರುರಾಜ್, ಕಾರ್ಯದರ್ಶಿ ಶೈಲಜಾ ಪೆಜತ್ತಾಯ ಉಪಸ್ಥಿತರಿದ್ದರು. ವಲಯದ ವಾರ್ಷಿಕ ವರದಿಯನ್ನು ಮುಖ್ಯ ಅತಿಥಿಗಳು ಬಿಡುಗಡೆಗೊಳಿಸಿದರು. ಡಾ. ಗಿರೀಶ್ ಕುಮಾರ್, ಜನಾರ್ದನ ತೋಳ್ಪಡಿತ್ತಾಯ ಮತ್ತು ಜ್ಯೋತಿ ಗುರುರಾಜ್ ಅತಿಥಿಗಳನ್ನು ಪರಿಚಯಿಸಿದರು. ವಲಯ ಕಾರ್ಯದರ್ಶಿ ಹರ್ಷಕುಮಾರ್ ಕೆದಿಲಾಯ ವಾರ್ಷಿಕ ವರದಿ, ಕೋಶಾಧಿಕಾರಿ ಪ್ರಕಾಶ್ ಕುದ್ದಣ್ಣಾಯ ವಾರ್ಷಿಕ ಲೆಕ್ಕಪತ್ರ ಮಂಡಿಸಿ, ಅನುಮೋದಿಸಲಾಯಿತು. ಉಪಾಧ್ಯಕ್ಷ ಸೂರ್ಯನಾರಾಯಣ ಕೊರ್ನಾಯ ಸ್ವಾಗತಿಸಿ, ವಾಣಿ ಸಂಪಿಗೆತ್ತಾಯ ಮತ್ತು ಗಾಯತ್ರಿ ಶ್ರೀಧರ್ ನಿರೂಪಿಸಿದರು. ಮಹಿಳಾ ಘಟಕದ ಉಪಾಧ್ಯಕ್ಷೆ ವೃಂದಾ ಪಡುವೆಟ್ನಾಯ ವಂದಿಸಿದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

# ಕೋಯ್ಲೂರು ಶ್ರೀಕ್ಷೇತ್ರದ ಬ್ರಹ್ಮಕಲಶ: ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ



**ಬಂಟ್ವಾಳ:** ತಾಲೂಕಿನ ಕುಕ್ಕಿಪಾಡಿ ಗ್ರಾಮದ ಸಿದ್ಧಕಟ್ಟೆಯಲ್ಲಿರುವ ಕೋಯ್ಲೂರು ಶ್ರೀ ದುರ್ಗಾ ಮಹಾಮ್ಮಾಯೀ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿದ್ದು, ಏ.27ರಿಂದ ಮೇ 1 ರವರೆಗೆ ಕ್ಷೇತ್ರದಲ್ಲಿ ನಡೆಯಲಿರುವ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ದೇವಸ್ಥಾನದಲ್ಲಿ ನಡೆಯಿತು.

ಸಿದ್ಧಕಟ್ಟೆ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ರತ್ನಕುಮಾರ ಚೌಟ, ಸಿದ್ಧಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು, ಸಿದ್ಧಕಟ್ಟೆ ರೋಟರಿ ಫಲ್ಗುಣಿ ಕ್ಲಬ್ ಅಧ್ಯಕ್ಷ ದುರ್ಗಾದಾಸ್ ಶೆಟ್ಟಿ ಕರಿಂಕಿಜೆ, ಕುಕ್ಕಿಪಾಡಿ ಗ್ರಾ.ಪಂ. ನಿಕಟಪೂರ್ವ ಉಪಾಧ್ಯಕ್ಷ ಯೋಗೀಶ್ ಆಚಾರ್ಯ, ಸುದರ್ಶನ ಶೆಟ್ಟಿ ಹಕ್ಕೇರಿ ಮತ್ತಿತರರು ಶುಭ ಹಾರೈಸಿದರು.

ಕ್ಷೇತ್ರದ ಆಡಳಿತ ಗುರಿಕಾರ ಗೋಪಾಲ ಗೌಡ, ರಾಯಭಾರಿ ಓಬಯ್ಯ ಗೌಡ, ಬ್ರಹ್ಮಕಲಶೋತ್ಸವ ಸಮಿತಿ, ಮಹಿಳಾ ಸಮಿತಿ ಪದಾಧಿಕಾರಿಗಳು, ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಮಂಗಳೂರು:** ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.27ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕುಡುಪು, ರಥಬೀದಿ, ಮುಂಡ್ರೆಲ್ಲಾ, ಪಿಲಿಕುಮೇರು, ಕುಡುಪು ನಡುಮನೆ, ಕುಡುಪು ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

# ತೊಕ್ಕೊಟ್ಟು ಶ್ರೀ ಉಮಾಮಹೇಶ್ವರಿ ದೇವಸ್ಥಾನದಲ್ಲಿ ದೃಢ ಕಲಶಾಭಿಷೇಕದ ಸಂಭ್ರಮ

**ಉಳ್ಳಾಲ:** ತೊಕ್ಕೊಟ್ಟು ಕಾಪಿಕಾಡುವಿನ ಉಮಾಪುರಿಯ ಶ್ರೀ ಉಮಾಮಹೇಶ್ವರಿ ದೇವಸ್ಥಾನದಲ್ಲಿ ಬುಧವಾರ ಬ್ರಹ್ಮಶ್ರೀ ಕುಂಟಾರು ರವೀಶ್ ತಂತ್ರಿವರ್ಯರ ನೇತೃತ್ವದಲ್ಲಿ ಉಮಾಮಹೇಶ್ವರಿ ಅಮ್ಮನವರಿಗೆ ದೃಢ ಕಲಶಾಭಿಷೇಕ ನಡೆಯಿತು.

ಮಧ್ಯಾಹ್ನ ಮಹಾಪೂಜೆ, ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು. ನೂರಾರು ಭಕ್ತರು ಉಪಸ್ಥಿತರಿದ್ದರು.

ಈ ಸಂದರ್ಭ ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಪ್ರಧಾನ ಅರ್ಚಕ ಪರಮೇಶ್ವರ ಜೋಷಿ,ಆಡಳಿತ ಮೊಕ್ತೇಸರ ಎ.ಜೆ.ಶೇಖರ್ ಮತ್ತು ಪೂರ್ಣಿಮಾ ಶೇಖರ್ ದಂಪತಿ, ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಅತ್ತಾವರ, ಕೋಶಾಧಿಕಾರಿ ಟಿ. ರಘುರಾಮ ಶೆಟ್ಟಿ ಮೊಕ್ತೇಸರರಾದ ಈಶ್ವರ್ ಉಳ್ಳಾಲ್, ನಿರ್ಮಲ ಕುಂಞಬು, ಮಹಾಲಿಂಗ,ಡಾ. ರಾಮಕೃಷ್ಣ ಶೆಟ್ಟಿ, ಕೂಸಪ್ಪ ಗಟ್ಟಿ ಬ್ರಹ್ಮಕಲಶೋತ್ಸವ



ಸಮಿತಿ ಕಾರ್ಯಾಧ್ಯಕ್ಷ ಸುರೇಶ್ ಭಟ್ನಗರ, ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಕಾಪಿಕಾಡು, ಉಮಾಮಹೇಶ್ವರಿ ಸೇವಾ ಸಮಿತಿಯ ಗೌರವಾಧ್ಯಕ್ಷ ಸುರೇಂದ್ರ ನಾಯಕ್, ಅಧ್ಯಕ್ಷ ದಿನೇಶ್ ರೈ ಕಳ್ಳಿಗೆ, ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್, ಪ್ರಮುಖರಾದ ಆನಂದ ಶೆಟ್ಟಿ ಭಟ್ನಗರ,ಸಂಜೀವ ಶೆಟ್ಟಿ ಪಿಲಾರ್, ಮೋಹನ್ ದಾಸ್ ಕಾಪಿಕಾಡ್, ಶಿವರಾಮ್ ಕಾಪಿಕಾಡು, ಚರಣ್ ಮತ್ತಿತರರಿದ್ದರು.

## ಶ್ರೀ ಕ್ಷೇತ್ರಕ್ಕೆ ಕರ್ಣಾಟಕ ಬ್ಯಾಂಕ್‌ನಿಂದ ನೀರು ವಿತರಣಾ ಯಂತ್ರ ಹಸ್ತಾಂತರ

**ಉಳ್ಳಾಲ:** ಕರ್ಣಾಟಕ ಬ್ಯಾಂಕ್ ಸ್ಥಾಪನೆಗೊಂಡು 102 ವರುಷಗಳಾಗಿದ್ದು, ಪ್ರತೀ ವರ್ಷವೂ ತನ್ನ ಲಾಭಾಂಶದ ಒಂದು ಭಾಗವನ್ನು ಸಮಾಜದ ಅಭಿವೃದ್ಧಿಗೆ ವಿನಿಯೋಗಿಸುತ್ತಾ ಬಂದಿದೆ ಎಂದು ಕರ್ಣಾಟಕ ಬ್ಯಾಂಕ್ ತೊಕ್ಕೊಟ್ಟು ಶಾಖಾ ಪ್ರಬಂಧಕ ದೀಪಕ್ ಎಸ್.ಜಿ ಹೇಳಿದರು.

ತೊಕ್ಕೊಟ್ಟು ಕಾಪಿಕಾಡುವಿನ ಉಮಾಪುರಿ ಶ್ರೀ ಉಮಾಮಹೇಶ್ವರಿ ಕ್ಷೇತ್ರಕ್ಕೆ ಕರ್ಣಾಟಕ ಬ್ಯಾಂಕಿನ ಸಿಎಸ್ ಆರ್ ನಿಧಿಯಡಿ ನೀಡಲಾದ ವಾಟರ್ ಡಿಸ್ಪೆನ್ಸರನ್ನು (ನೀರು ವಿತರಣಾ ಯಂತ್ರ) ಬುಧವಾರ ದೃಢ ಕಲಶೋತ್ಸವ ಸಂದರ್ಭ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಎ.ಜೆ.ಶೇಖರ್ ಅವರಿಗೆ ಹಸ್ತಾಂತರಿಸಿ ಅವರು ಮಾತನಾಡಿದರು. ಕ್ಷೇತ್ರದ ಆಡಳಿತ ಮೊಕ್ತೇಸರ ಎ.ಜೆ.ಶೇಖರ್, ಆಡಳಿತ



ಮಂಡಳಿ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಅತ್ತಾವರ, ಕೋಶಾಧಿಕಾರಿ ಟಿ. ರಘುರಾಮ ಶೆಟ್ಟಿ ಮೊಕ್ತೇಸರ ಈಶ್ವರ್ ಉಳ್ಳಾಲ್, ನಿರ್ಮಲ ಕುಂಞಬು, ಮಹಾಲಿಂಗ, ಡಾ. ರಾಮಕೃಷ್ಣ ಶೆಟ್ಟಿ, ಕೂಸಪ್ಪ ಗಟ್ಟಿ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಸುರೇಶ್ ಭಟ್ನಗರ, ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಕಾಪಿಕಾಡು, ಉಮಾಮಹೇಶ್ವರಿ ಸೇವಾ ಸಮಿತಿಯ ಗೌರವಾಧ್ಯಕ್ಷ ಸುರೇಂದ್ರ ನಾಯಕ್, ಅಧ್ಯಕ್ಷ ದಿನೇಶ್ ರೈ ಕಳ್ಳಿಗೆ, ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್, ಆನಂದ ಶೆಟ್ಟಿ ಭಟ್ನಗರ, ಸಂಜೀವ ಶೆಟ್ಟಿ ಪಿಲಾರ್, ಮೋಹನ್ ದಾಸ್ ಕಾಪಿಕಾಡ್, ಶಿವರಾಮ್ ಕಾಪಿಕಾಡು, ಚರಣ್ ಮತ್ತಿತರರಿದ್ದರು.

## ಸುತ್ತ ಮುತ್ತ

### ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ: ಮುಂದಿನ ಅವಧಿಗಳಲ್ಲೂ ಅವಕಾಶ

**ಕಾಸರಗೋಡು:** ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ ಮಾ.24ರಂದು ಆರಂಭಗೊಂಡು ಮಾ.27ರ ವರೆಗೆ ಕಾಸರಗೋಡು ಸರಕಾರಿ ಕಾಲೇಜು, ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್, ಕಾಞಂಗಾಡು ಎಸ್‌ಎನ್ ಪಾಲಿಟೆಕ್ನಿಕ್ ಕಾಲೇಜು ಮತ್ತು ನೆಹರೂ ಕಲಾ ಹಾಗೂ ವಿಜ್ಞಾನ ಕಾಲೇಜಿನಲ್ಲಿ ತರಬೇತಿ ನೀಡಲಾಗುವುದು.

ಎಸ್ಸೆಸ್ಸೆಲ್ಸಿ ಮತ್ತು ಹೈಯರ್ ಸೆಕೆಂಡರಿ ಪರೀಕ್ಷೆಗಳಿಂದಾಗಿ ಕೆಲವು ಶಿಕ್ಷಕರು , ಅಧಿಕಾರಿಗಳು ತರಬೇತಿ ಕೇಂದ್ರಗಳಿಗೆ ಸಮಯಕ್ಕೆ ಸರಿಯಾಗಿ ಹಾಜರಾಗಲು ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿದುಬಂದ ಹಿನ್ನೆಲೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾದ ಅಧಿಕಾರಿಗಳು ಆ ದಿನ ಅಥವಾ ಮರುದಿನ ಅವರಿಗೆ ನಿಗದಿಪಡಿಸಲಾದ ತರಬೇತಿ ಕೇಂದ್ರದಲ್ಲಿ ತರಬೇತಿಗೆ ಹಾಜರಾಗಬಹುದೆಂದು ಚುನಾವಣಾ ತರಬೇತಿ ನೋಡಲ್ ಅಧಿಕಾರಿ ತಿಳಿಸಿದ್ದಾರೆ.

ಸಾಕಷ್ಟು ಕಾರಣವಿದ್ದರೆ ಹತ್ತಿರದ ಕ್ಷೇತ್ರದ ತರಬೇತಿ ಕೇಂದ್ರಕ್ಕೆ ಹಾಜರಾಗಲು ಅವರಿಗೆ ಅವಕಾಶವಿದೆ ಎಂದು ಚುನಾವಣಾ ತರಬೇತಿ ನೋಡಲ್ ಅಧಿಕಾರಿ ಹೇಳಿದ್ದಾರೆ. ಮಾ.24, 25, 26 ಮತ್ತು 27 ರಂದು ತರಬೇತಿಗೆ ಹಾಜರಾಗಲು ಸಾಧ್ಯವಾಗದವರಿಗೆ ಮಾ.28 ರಂದು ಬೆಳಿಗ್ಗೆ 10 ಗಂಟೆಗೆ ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್ ಕೇಂದ್ರದಲ್ಲಿ ತರಬೇತಿ ನೀಡಲಾಗುವುದು ಎಂದು ಜಿಲ್ಲಾ ಚುನಾವಣಾ ವಿಭಾಗವು ತಿಳಿಸಿದೆ.

### ಸಿ-ವಿಜಿಲ್ ನಿಯಂತ್ರಣ ಕೊಠಡಿಗೆ ಇದುವರೆಗೆ 353 ದೂರುಗಳು

**ಕಾಸರಗೋಡು:** ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಜಿಲ್ಲೆಯ ಕಲೆಕ್ಟರೇಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ-ವಿಜಿಲ್ ನಿಯಂತ್ರಣ ಕೊಠಡಿಗೆ ಇದುವರೆಗೆ 353 ದೂರುಗಳು ಬಂದಿವೆ. ಎಲ್ಲಾ 353 ದೂರುಗಳನ್ನು ಪರಿಹರಿಸಲಾಗಿದೆ. ಹೆಚ್ಚಿನ ದೂರುಗಳಿಗೆ ತಕ್ಷಣಕ್ಕೆ ಪರಿಹಾರ ಒದಗಿಸಲಾಯಿತು.

ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಮತ್ತು ಚುನಾವಣಾ ವೆಚ್ಚಗಳಿಗೆ ಸಂಬಂಧಿಸಿದ ದೂರುಗಳನ್ನು ಸಿ-ವಿಜಿಲ್ ನಿಯಂತ್ರಣ ಕೊಠಡಿ ನಿರ್ವಹಿಸುತ್ತದೆ. ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾದ 45 ಕ್ಯಾಮೆರಾಗಳ ದೃಶ್ಯಾವಳಿಗಳೊಂದಿಗೆ ಸಿ-ವಿಜಿಲ್ ನಿಯಂತ್ರಣ ಕೊಠಡಿ ಲಭ್ಯವಿದೆ. ಸಿ-ವಿಜಿಲ್ ನಿಯಂತ್ರಣ ಕೊಠಡಿಯನ್ನು ಮಾ.16 ರಂದು ಪ್ರಾರಂಭಿಸಲಾಯಿತು.

ಸಿ-ವಿಜಿಲ್ ನಿಯಂತ್ರಣ ಕೊಠಡಿಯ ಉಸ್ತುವಾರಿಯನ್ನು ಎಡಿಎಂ ಕೆ.ವಿ.ಶ್ರುತಿ ವಹಿಸಿಕೊಂಡಿದ್ದಾರೆ. ತಾಂತ್ರಿಕ ಮೇಲ್ವಿಚಾರಣೆಗೆ ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಜವಾಬ್ದಾರರಾಗಿದ್ದಾರೆ. ಸಿ-ವಿಜಿಲ್ ನಿಯಂತ್ರಣ ಕೊಠಡಿಯಲ್ಲಿ ಸ್ವೀಕರಿಸಿದ ದೂರುಗಳ ವೆಚ್ಚವನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ ವಿಶೇಷ ಅಧಿಕಾರಿ ವಿ.ಚಂದ್ರನ್ ವಹಿಸಿದ್ದಾರೆ. ಕಲೆಕ್ಟರೇಟ್‌ನ ಸೂಟ್ ವಿಭಾಗದ ಹಿರಿಯ ಸೂಪರಿಂಟೆಂಡೆಂಟ್ ವಿ.ಶ್ರೀಕುಮಾರ್ ನಿಯಂತ್ರಣ ಕೊಠಡಿಯಲ್ಲಿ ಸ್ವೀಕರಿಸಿದ ದೂರುಗಳ ಪರಿಹಾರಕ್ಕಾಗಿ ನೋಡಲ್ ಅಧಿಕಾರಿಯಾಗಿದ್ದಾರೆ. ಸಾರ್ವಜನಿಕರು ಸಿ-ವಿಜಿಲ್ ಅಪ್ಲಿಕೇಶನ್ ಮೂಲಕ ಮತ್ತು ಫೋನ್ ಮೂಲಕ ದೂರುಗಳ ವರದಿ ಮಾಡಬಹುದು. ದೂರುಗಳನ್ನು 04994292650, 04994292651, 04994292652 ನಂಬರ್‌ಗಳ ಮೂಲಕ ತಿಳಿಸಬಹುದು.

### ಮಂಜೇಶ್ವರ ಸ್ವತಂತ್ರ ಅಭ್ಯರ್ಥಿ ಎನ್.ಕೇಶವ ನಾಯಕ್ ನಾಮಪತ್ರ ಹಿಂತೆಗೆತ

**ಮಂಜೇಶ್ವರ:** ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಎನ್.ಕೇಶವ ನಾಯಕ್ ತಮ್ಮ ನಾಮಪತ್ರ ಹಿಂತೆಗೆದುಕೊಂಡರು. ವಿಧಾನಸಭಾ ಚುನಾವಣೆಗೆ ನಾಮಪತ್ರಗಳ ಹಿಂಪಡೆಯಲು ಕೊನೆಯ ದಿನಾಂಕಕ್ಕೆ ಒಂದು ದಿನ ಬಾಕಿ ಇರುವಾಗ ಬುಧವಾರ ಜಿಲ್ಲೆಯ ಅಭ್ಯರ್ಥಿಯೊಬ್ಬರು ತಮ್ಮ ನಾಮಪತ್ರ ಹಿಂಪಡೆದರು. ಇದರೊಂದಿಗೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಸಂಖ್ಯೆ 13ಕ್ಕೆ ಇಳಿದಿದೆ. ಜಿಲ್ಲೆಯ ಉಳಿದ ನಾಲ್ಕು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂಪಡೆದಿಲ್ಲ. ಸೂಕ್ಷ್ಮ ಪರಿಶೀಲನೆಯ ನಂತರ ಇಡೀ ಜಿಲ್ಲೆಯಲ್ಲಿ 37 ಮಂದಿ ಅಭ್ಯರ್ಥಿಗಳಿದ್ದರು. ಎನ್.ಕೇಶವ ನಾಯಕ್ ಅವರ ನಾಮಪತ್ರ ಹಿಂಪಡೆಯುವಿಕೆಯೊಂದಿಗೆ 36ಕ್ಕೆ ಇಳಿದಿದೆ. ನಾಮಪತ್ರ ಹಿಂಪಡೆಯಲು ಮಾ.26 ಕೊನೆಯ ದಿನಾಂಕವಾಗಿದೆ.

### ಟೆಕ್ನಿಕಲ್ ಹೈಸ್ಕೂಲ್‌ನ 8ನೇ ತರಗತಿಗೆ ಅರ್ಜಿ ಆಹ್ವಾನ

**ಕಾಸರಗೋಡು:** 7ನೇ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು 2026-27ನೇ ಸಾಲಿನ ಶೈಕ್ಷಣಿಕ ತರಗತಿಗೆ ಮೊಗ್ರಾಲ್ ಪುತ್ತೂರು ಟೆಕ್ನಿಕಲ್ ಹೈಸ್ಕೂಲ್‌ನಲ್ಲಿ ಪ್ರವೇಶ ಪಡೆಯಬಹುದು. ಕಾಸರಗೋಡಿನ ಕನ್ನಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡಲು ಇಲ್ಲಿ ಅವಕಾಶವಿದೆ. ಈ ಕೋರ್ಸ್ ಪಾಸಾದವರಿಗೆ ಪಾಲಿಟೆಕ್ನಿಲ್, ಐಟಿಐಯವಲ್ಲಿ ಸೀಟು ಕಾದಿರಿಸಲಾಗುತ್ತದೆ. ಸಮವಸ್ತ್ರ , ಸ್ಕಾಲರ್‌ಶಿಪ್, ಗ್ರಾಂಟ್‌ಗಳು ಲಭ್ಯವಿದ್ದು, ಮಾಹಿತಿಗೆ ಮೊಗ್ರಾಲ್ ಪುತ್ತೂರು ಟೆಕ್ನಿಕಲ್ ಹೈಸ್ಕೂಲ್ ಅಥವಾ 8592887942 ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಪಡೆದುಕೊಳ್ಳಬಹುದು ಎಂದು ಕನ್ನಡವರ ಸಂಘಟನೆಗಳು ತಿಳಿಸಿವೆ.

### ಪೊಲೀಸ್ ದೂರು ಸಭೆ ಮುಂದೂಡಿಕೆ

**ಕಾಸರಗೋಡು:** ಮಾ.26ರಂದು ನಡೆಯಬೇಕಿದ್ದ ಪೊಲೀಸ್ ದೂರು ಪ್ರಾಧಿಕಾರದ ಸಭೆಯನ್ನು ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು ಎಂದು ಪೊಲೀಸ್ ದೂರು ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

### ಅಂತಿಮ ಹಂತದಲ್ಲಿದೆ ಚೆರ್ಕಳ - ಚಟ್ಟಂಚಾಲ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ | ಪ್ರಾಧಿಕಾರ ನಿರ್ದೇಶನ

# ಮಳೆಗಾಲ ಮೊದಲೇ ಭೂಕುಸಿತ ಪ್ರದೇಶದಲ್ಲಿ ಕೆಲಸ ಪೂರ್ಣಗೊಳಿಸಿ

**ಕಾಸರಗೋಡು:** ಬಹುನಿರೀಕ್ಷಿತ ಕಾಸರಗೋಡು ಜಿಲ್ಲೆಯ ಚೆರ್ಕಳ - ಚಟ್ಟಂಚಾಲ್ ಷಟ್ಪಥ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ಮಾ.31ರಿಂದ ವಾಹನ ಸಂಚಾರ ನಿಷೇಧಿಸಿ ತೆಕ್ಕಿಲ್, ಬೇವಿಂಜೆ ಮುಂತಾದ ಭಾಗಗಳಲ್ಲಿ ರೋಡ್ ಬದಿಯ ಗುಡ್ಡ ಅಗೆತ ನಡೆಯಲಿದೆ. ಈಗಾಗಲೇ ಬೇವಿಂಜೆ ಸ್ಟಾರ್‌ನಗರದಲ್ಲಿ ಗುಡ್ಡ ಅಗೆದು ತಗ್ಗಿಸಿ ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣ ಕಾಮಗಾರಿ ಭರದಿಂದ ಸಾಗುತ್ತಿದೆ.

ಕಾಸರಗೋಡು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯ ಎರಡನೇ ರೀಚ್ ಆಗಿರುವ ಚೆಂಗಳ - ನೀಲೇಶ್ವರ ವ್ಯಾಪ್ತಿಯನ್ನು ಅತ್ಯಧಿಕ ಅಪಾಯ ಸಂಭವಿಸುವ ವಲಯವಾಗಿ ಗುರುತಿಸಲಾಗಿದೆ. ಕಳೆದ ಮಳೆಗಾಲದಲ್ಲಿ ಈ ಪ್ರದೇಶದಲ್ಲಿ ಭಾರೀ ಪ್ರಮಾಣದಲ್ಲಿ ಭೂಕುಸಿತ ಸಂಭವಿಸಿ ಅಪಾರ ಸಮಸ್ಯೆ ಎದುರಾಗಿತ್ತು. ಅಲ್ಲದೆ ವಾಹನ ಸಂಚಾರಕ್ಕೂ ಸಂಚಾಕಾರ ತಲೆದೋರಿತ್ತು.

ಹೆದ್ದಾರಿಯ ಕೆಳಭಾಗದಲ್ಲಿದ್ದ ಕೃಷಿ ಪ್ರದೇಶಗಳಿಗೆ ಮತ್ತು ಮನೆಗಳಿಗೆ ಗುಡ್ಡ ಕುಸಿದು ಮಣ್ಣು



ನೀರಿನೊಂದಿಗೆ ಹರಿದು ಸೇರಿತ್ತು. ಆದ್ದರಿಂದ ಮಳೆಗಾಲ ಆರಂಭಕ್ಕೆ ಮೊದಲೇ ಈ ಪ್ರದೇಶದಲ್ಲಿ ನಿರ್ಮಾಣ ಕಾಮಗಾರಿ ಪೂರ್ತಿಗೊಳಿಸಲು ಗುತ್ತಿಗೆ ಪಡೆದ ಕಂಪೆನಿಯಾದ ಮೇಘ ಸಂಸ್ಥೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ನಿರ್ದೇಶನ ನೀಡಿದೆ. ಕಳೆದ ಮಳೆಗಾಲದಲ್ಲಿ ಕಾನತ್ತುಂಕುಂಡು , ತೆಕ್ಕಿಲ್ ಮತ್ತು ಬೇವಿಂಜೆಯಲ್ಲಿ ಮಣ್ಣು ಕುಸಿತಗೊಂಡು ತಿಂಗಳುಗಟ್ಟಲೆ ಸುಗಮ ವಾಹನ ಸಂಚಾರಕ್ಕೆ ಸಂಕಷ್ಟ ತಲೆದೋರಿತ್ತು. ಆದಕಾರಣ ಈ ಭಾಗದಲ್ಲಿ ಗುಡ್ಡ ಕುಸಿತ ಸಾಧ್ಯತೆಯಿರುವ ಬಹುತೇಕ ಪ್ರದೇಶ ಸಮತಟ್ಟುಗೊಳಿಸುವ ಯೋಜನೆ ಹಾಕಿಕೊಳ್ಳಲಾಗಿದೆ.

ಗುಡ್ಡದಿಂದ ಮಳೆನೀರು ಬರುವುದನ್ನು ತಡೆಗಟ್ಟಲು ವಿವಿಧ ಮಾದರಿಯಲ್ಲಿ ಚರಂಡಿ ನಿರ್ಮಾಣ ಮಾಡಲಾಗುತ್ತಿದೆ. ಮಾತ್ರವಲ್ಲದೆ ಕಾನತ್ತುಕುಂಡು, ಬೇವಿಂಜೆ ಪ್ರದೇಶಗಳಲ್ಲಿ ಮಣ್ಣು ಕುಸಿತ ಸಾಧ್ಯತೆಯನ್ನು ಮುಂದಿಟ್ಟುಕೊಂಡು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ತಡೆಗೋಡೆ ನಿರ್ಮಾಣ ಕಾರ್ಯವು ತ್ವರಿತವಾಗಿ ನಡೆಯುತ್ತಿದೆ.

**ಹಳೆಯ ತೆಕ್ಕಿಲ್ ಸೇತುವೆ ದ್ವಿಪಥ**

ಹಳೆಯ ತೆಕ್ಕಿಲ್ ಸೇತುವೆಯ ಪಶ್ಚಿಮ ಭಾಗದಲ್ಲಿ ಸಮಾನಾಂತರವಾಗಿ ನಿರ್ಮಿಸಿದ ನೂತನ ಸೇತುವೆ ಮೂಲಕ ಇದೀಗ ವಾಹನಗಳು ಸಂಚರಿಸುತ್ತಿವೆ. ತಪಾಸಣೆ ನಡೆಸಿದ ಬಳಿಕ ಹಳೆಯ ತೆಕ್ಕಿಲ್ ಸೇತುವೆಯನ್ನು ಮುರಿಯದೆ ಉಳಿಸಿಕೊಳ್ಳಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತೀರ್ಮಾನಿಸಿದೆ.

> **ಸಂಚಾರ ನಿಷೇಧ ಮುಂದೂಡಿಕೆ**
>
> **ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನಿರ್ಮಾಣ ಕಾಮಗಾರಿ ನಡೆಯುವ ಚಟ್ಟಂಚಾಲ್ - ತೆಕ್ಕಿಲ್ - ಬೇವಿಂಜೆ - ಚೆರ್ಕಳ ಮಾರ್ಗದಲ್ಲಿ ಕಾಮಗಾರಿಯ ಅಂಗವಾಗಿ ಸಾರಿಗೆ ಸಂಚಾರ ನಿಷೇಧ ಮಾ.31ರ ಬಳಿಕ ಜಾರಿಗೊಳಿಸಲು ತೀರ್ಮಾನಿಸಲಾಗಿದ್ದು, ಶಾಲೆಗಳಲ್ಲಿ ಪರೀಕ್ಷೆಗಳು ನಡೆಯುತ್ತಿರುವ ಹಿನ್ನೆಲೆ ವಿದ್ಯಾರ್ಥಿಗಳಿಗೆ ಸಂಚಾರ ಸಮಸ್ಯೆ ಎದುರಾಗದಿರಲು ಈ ಮೊದಲು ನಿರ್ಧರಿತ ದಿನಾಂಕ ಬದಲಾಯಿ ಸಲಾಗಿದೆ.**
>
> ● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ

**ಶೀಘ್ರದಲ್ಲಿ ಉದ್ಘಾಟನೆ**

**ಚೆಂಗಳ - ನೀಲೇಶ್ವರ ರಾಷ್ಟ್ರೀಯ ಹೆದ್ದಾರಿ ಕಾಸರಗೋಡು ಜಿಲ್ಲೆಯ ಎರಡನೇ ರೀಚ್ ರಾಷ್ಟ್ರೀಯ ಹೆದ್ದಾರಿ ಆಗಿರುವ ಚೆಂಗಳ - ನೀಲೇಶ್ವರ ಭಾಗದಲ್ಲಿ ನಿರ್ಮಾಣ ಕಾಮಗಾರಿ ವೇಗವಾಗಿ ನಡೆಯುತ್ತಿದ್ದು, ಈಗಾಗಲೇ ತಲಪಾಡಿ - ಕಾಸರಗೋಡು - ಚೆಂಗಳ ಪ್ರಥಮ ರೀಚ್ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ರಾಷ್ಟ್ರೀಯ ಹೆದ್ದಾರಿಯನ್ನು ಕೊಚ್ಚಿಯಲ್ಲಿ ಇತ್ತೀಚೆಗೆ ಜರಗಿದ ಸಮಾರಂಭದಲ್ಲಿ ಉದ್ಘಾಟಿಸಿ ನಾಡಿಗೆ ಸಮರ್ಪಿಸಿದ್ದರು. ಇದೀಗ ಎರಡನೇ ರೀಚ್‌ನ ಕಾಮಗಾರಿ ಅತ್ಯಂತ ತ್ವರಿತವಾಗಿ ನಡೆದು ಶೀಘ್ರ ಉದ್ಘಾಟನಾ ಕಾರ್ಯಕ್ರಮ ಜರಗಲಿ ರುವುದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಿಳಿಸಿದೆ.**

ನೂತನ ಸೇತುವೆಯಲ್ಲಿ ಚತುಷ್ಪಥ, ಹಳೆಯ ಸೇತುವೆಯಲ್ಲಿ ದ್ವಿಪಥ ಸಂಚಾರದ ವ್ಯವಸ್ಥೆ ಇರಲಿದೆ.

---

## ಶ್ರೀ ಮಲ್ಲಿಕಾರ್ಜುನ ದೇವಳದ ಜಾತ್ರಾ ಮಹೋತ್ಸವ: ಸಾಂಸ್ಕೃತಿಕ ಕಾರ್ಯಕ್ರಮ



**ಕಾಸರಗೋಡು:** ಇತಿಹಾಸ ಪ್ರಸಿದ್ಧ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವವು ಹಲವಾರು ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅತ್ಯಂತ ವಿಜೃಂಭಣೆಯಿಂದ ನಡೆದು ಸಂಪನ್ನಗೊಂಡಿತು.

ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಶ್ರೀ ಕ್ಷೇತ್ರಕ್ಕೆ ಆಗಮಿಸಿ ಶ್ರೀ ದೇವರ ದರುಶನ ಪಡೆದು ಕೃತಾರ್ಥರಾದರು.

**ಸಾಂಸ್ಕೃತಿಕ ಕಲಾ ವೈಭವ**

ಈ ಮಹೋತ್ಸವದ ಪ್ರಯುಕ್ತ ಜರಗಿದ ಉತ್ಸವದ ಕೊನೆಯ ದಿನವಾದ ಸೋಮವಾರ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ವತಿಯಿಂದ ಸಾಂಸ್ಕೃತಿಕ ಕಲಾ ವೈಭವ ಕಲಾವಿದರ ಕಲರವ ಕಾರ್ಯಕ್ರಮವು ನಯನ ಮನೋಹರವಾಗಿ ನಡೆದು ಕಲಾಭಿಮಾನಿಗಳ ಹಾಗೂ ಸಂಘಟಕರ ಪ್ರಶಂಸೆಗೆ ಪಾತ್ರವಾಯಿತು.

ಗುರುರಾಜ್ ಕಾಸರಗೋಡು ಅವರ ಸಂಯೋಜನೆ ಹಾಗೂ ನಿರೂಪಣೆಯೊಂದಿಗೆ ಈ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮದಲ್ಲಿ ಧಾರ್ಮಿಕ ಮುಂದಾಳುವಾದ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ ಅವರು ಸ್ವಾಗತಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆಯ ಕಲಾವಿದರಾದ ವರ್ಷಾ ಶೆಟ್ಟಿ, ದೀಕ್ಷಾ ಕುಲಾಲ್, ಹಂಶಿತ್ ಆಳ್ವ ಸುತನಿ, ಭಾನ್ವಿ ಕುಲಾಲ್, ಶ್ರಾವ್ಯ ವಿ.ಆರ್., ಭುವಿ ಶೆಟ್ಟಿ, ತಾನ್ಯ ಆರ್.ಶೆಟ್ಟಿ, ಭವಿಷ್ಯ ಪೂಜಾರಿ, ಆಶ್ವಿತಾ ಕೆ., ದ್ರುವಿ ಎಸ್.ಶೆಟ್ಟಿ, ತೇಜೂಷಾ, ನಿಕ್ಷಿತಾ ಕೆ. ಮುಂತಾದ ಕಲಾವಿದರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಕಲಾವಿದರಿಗೆ ಗೌರವ**

ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದ ದೇವಸ್ಥಾನದ ಎಕ್ಸ್‌ಕ್ಯೂಟಿವ್ ಆಫೀಸರ್ ಜಗದೀಶ್ ಪ್ರಸಾದ್ ಸಹಿತ ಇತರ ಗಣ್ಯರ ಸಮ್ಮುಖದಲ್ಲಿ ಭಾಗವಹಿಸಿದ ಎಲ್ಲಾ ಕಲಾವಿದರಿಗೆ ಸಂಸ್ಥೆಯ ವತಿಯಿಂದ ಗೌರವ ಸ್ಮರಣಿಕೆ ನೀಡಿ ಪುರಸ್ಕರಿಸಲಾಯಿತು.

## ಬಾಳೆಮೂಲೆ ಶಾಲೆಯಲ್ಲಿ 'ಅಮ್ಮ ಓದು' ವಿಶಿಷ್ಟ ಕಾರ್ಯಕ್ರಮದ ಸಮಾರೋಪ



**ಪೆರ್ಲ:** ಅಮ್ಮ ಓದು ಎಂಬುದು ವಿಶಿಷ್ಟ ಯೋಜನೆಯಾಗಿದ್ದು, ವಿದ್ಯಾರ್ಥಿಗಳನ್ನು ಓದಿನೆಡೆಗೆ ಪ್ರೇರೇಪಿಸುವುದರ ಜೊತೆಗೆ ವಿದ್ಯಾರ್ಥಿಗಳ ಹೆತ್ತವರಲ್ಲೂ ಜ್ಞಾನದ ಭಂಡಾರ ಹೆಚ್ಚಿಸಲು ಸಹಕಾರಿ ಎಂಬುದಾಗಿ ನಿವೃತ್ತ ಶಿಕ್ಷಕ ಬಟ್ಯ ಮಾಸ್ಟರ್ ತಿಳಿಸಿದ್ದಾರೆ.

ಎಣ್ಮಕಜೆ ಪಂಚಾಯತ್ ಬಾಳೆಮೂಲೆ ಸರಕಾರಿ ಕಿ.ಪ್ರಾ.ಶಾಲೆಯಲ್ಲಿ ಆಯೋಜಿಸಲಾಗಿದ್ದ 2025-26ನೇ ಸಾಲಿನ 'ಅಮ್ಮ ಓದು' ಕಾರ್ಯಕ್ರಮದ ಸಮಾರೋಪ, 4ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ , ಹೆತ್ತವರಿಗೆ ಪುಸ್ತಕ ವಿತರಣಾ ಸಮಾರಂಭದಲ್ಲಿ ಅತಿಥಿಯಾಗಿ ಅವರು ಮಾತನಾಡಿದರು.

ಪತ್ರಕರ್ತ ಪುರುಷೋತ್ತಮ ಬಿ.ಎಂ. ಸಮಾರಂಭವನ್ನು ಉದ್ಘಾಟಿಸಿದರು. ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ರಾಜೇಶ್ ಬಾಳೆಮೂಲೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಮೊಬೈಲ್ ಓದಿಗಿಂತ ಪುಸ್ತಕಗಳ ಓದು ಮಸ್ತಕಕ್ಕೆ ಹೆಚ್ಚಿನ ಜ್ಞಾನ ತಂದುಕೊಡಲು ಸಾಧ್ಯ. ಮಕ್ಕಳಲ್ಲಿ ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳುವ ಬಗ್ಗೆ ಹೆತ್ತವರು ಗಮನಹರಿಸಬೇಕು ಎಂದು ತಿಳಿಸಿದರು.

ಎಸ್‌ಎಂಸಿ ಅಧ್ಯಕ್ಷ ನಾರಾಯಣ ಪರಗುಡ್ಡೆ, ಉಪಾಧ್ಯಕ್ಷ ಪುರಂದರ, ಪಿಟಿಎ ಉಪಾಧ್ಯಕ್ಷ ಚನಿಯಪ್ಪ ನಾಯ್ಕ್, ಮಹಾಲಿಂಗ ನಾಯ್ಕ್ ಬಾಳೆಮೂಲೆ, ಮಾತೃ ಪಿಟಿಎ ಅಧ್ಯಕ್ಷೆ ಪದ್ಮಾವತಿ, ಶಾಲಾ ಶಿಕ್ಷಕವೃಂದ, ಬೋಧಕೇತರ ಸಿಬ್ಬಂದಿಗಳಿದ್ದರು. ಮುಖ್ಯ ಶಿಕ್ಷಕ ರಾಜೇಶ್ ಬಜಕೂಡ್ಲು ಸ್ವಾಗತಿಸಿ, ಜಯಪ್ರಭಾ ವಂದಿಸಿ, ಶಿಕ್ಷಕಿ ಸಹನಾ ನಿರೂಪಿಸಿದರು.

> **ಪ್ರೇರಣೆ ನೀಡಲಿದೆ**
>
> **ಓದುವಿಕೆಯಿಂದ ಮಕ್ಕಳು ದೂರಾಗುತ್ತಿರುವ ಕಾಲಘಟ್ಟದಲ್ಲಿ ಶಾಲೆಯಲ್ಲಿ ಆರಂಭಿಸಿರುವ 'ಅಮ್ಮ ಓದು' ಕಾರ್ಯಕ್ರಮ ಪುಸ್ತಕ ಸಂಸ್ಕೃತಿ ಬೆಳೆಯಲು ಪ್ರೇರಣೆ ನೀಡಲಿದೆ. ಹೆತ್ತವರು ಮೊಬೈಲ್ ಬಿಟ್ಟು ಓದಿನ ಕಡೆ ಗಮನ ಹರಿಸಿದಾಗ ಮಕ್ಕಳು ಓದಿನ ಕಡೆ ಗಮನ ಹರಿಸಲು ಸಾಧ್ಯ.**
>
> ● ಬಟ್ಯ ಮಾಸ್ಟರ್

## ಗೋ -ಕುಟೀರದ ಮೇಲ್ಛಾವಣಿ ನಿರ್ಮಾಣ ಕಾಮಗಾರಿಗೆ ಚಾಲನೆ



**ಕಾಸರಗೋಡು:** ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಕಾಸರಗೋಡು ಇದರ 36ನೇ ಸಂಸ್ಥಾಪನಾ ವರ್ಷಾಚರಣೆಯ ಪ್ರಯುಕ್ತ ಕಾಸರಗೋಡು ಕನ್ನಡ ಗ್ರಾಮದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಾಸರಗೋಡು ಗೋ - ಕುಟೀರದ ಎರಡನೇ ಹಂತವಾಗಿ ಮೊದಲ ಅಂತಸ್ತಿನ ಗೋ - ಮೇವು ಸಂಗ್ರಹಣಾಲಯಹಾಗೂಮೇಲ್ಛಾವಣಿನಿರ್ಮಾಣ ಕಾಮಗಾರಿಗೆ ಗೋ- ಧಾರ್ಮಿಕ ಪೂಜಾ ಕಾರ್ಯಕ್ರಮದೊಂದಿಗೆ ಚಾಲನೆ ನೀಡಲಾಯಿತು.

ಕಾಸರಗೋಡಿನ ಧಾರ್ಮಿಕ ಮುಂದಾಳು ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ದೀಪ ಬೆಳಗಿಸಿ ಚಾಲನೆ ನೀಡಿದರು. ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕಿರಣಕುಮಾರ್ ಬಿ.ಕೆ., ರಾಜೇಶ್ ಕುಮಾರ್ ಕೆ. ಬೀರಂತಬೈಲ್, ದೀಕ್ಷಿತ್ ಆಚಾರ್ಯ, ದೀಪಕ್‌ಚಂದ್ರ ಕೆ., ಪ್ರಸಾದ್ ಕೇಳುಗುಡ್ಡೆ, ಜಗದೀಶ್ ಕೇಳುಗುಡ್ಡೆ, ಅಶೋಕ, ಕಿಶೋರ್ ಕುಮಾರ್, ಕುಶಲಕುಮಾರ್, ರಾಧಾ ಕಾಸರಗೋಡು, ಸವಿತಾ ಕಿಶೋರ್, ಕಾವ್ಯ ಕುಶಲ, ಕೃಪಾನಿಧಿ, ಅನುಷಾ ಮೊದಲಾದವರು ಉಪಸ್ಥಿತರಿದ್ದರು.

### ಟೆಂಡರ್ ಆಹ್ವಾನ

**ಕಾಸರಗೋಡು:** ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಗೆ ವೈದ್ಯಕೀಯ ಆಮ್ಲಜನಕ ಪೂರೈಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನ ಏಪ್ರಿಲ್ 6 ರಂದು ಅಪರಾಹ್ನ 3 ಗಂಟೆ ಆಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನ ಏಪ್ರಿಲ್ 7 ರಂದು ಬೆಳಿಗ್ಗೆ 11.30 ಆಗಿದೆ. ಅದೇ ದಿನ ಅಪರಾಹ್ನ 3 ಗಂಟೆಗೆ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗೆ 04994 230080 ಕರೆ ಮಾಡಬಹುದು.

## ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಡೀಸಿ: ಗಮನ ಸೆಳೆಯಿತು 'ನಮಸ್ತೆ ಕಲೆಕ್ಟರ್' ಯೋಜನೆ



**ಕಾಸರಗೋಡು:** ಜಿಲ್ಲಾಡಳಿತ ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನವನ್ನು ಬಲಪಡಿಸುವ ಬಹುಮುಖ್ಯ ಉದ್ದೇಶವನ್ನಿಟ್ಟುಕೊಂಡು ಪ್ರಾರಂಭಿಸಲಾದ 'ನಮಸ್ತೆ ಕಲೆಕ್ಟರ್' ಯೋಜನೆ ಕಾಸರಗೋಡು ಜಿಲ್ಲೆಯಲ್ಲಿ ಗಮನಾರ್ಹವಾಯಿತು.

ಯೋಜನೆ ಭಾಗವಾಗಿ ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಚೆಮ್ನಾಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಗೆ ಬುಧವಾರ ಭೇಟಿ ನೀಡಿ ಶಾಲೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

20 ಮಂದಿ ಮಕ್ಕಳು ಮತ್ತು ಇಬ್ಬರು ಶಿಕ್ಷಕರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಮಕ್ಕಳ ಸಂದೇಹಗಳಿಗೆ ಮತ್ತು ಪ್ರಶ್ನೆಗಳಿಗೆ ಜಿಲ್ಲಾಧಿಕಾರಿ ಉತ್ತರಿಸಿದರು.

ಕಾಸರಗೋಡು ಜಿಲ್ಲೆಯಲ್ಲಿ ಸೇವೆ ಸಲ್ಲಿಸುವುದು ತಮಗೆ ಹೊಸ ಅನುಭವ, ಜಿಲ್ಲೆಯ ಆರೋಗ್ಯ, ಕ್ರೀಡೆ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪ್ರಾಮುಖ್ಯತೆ ನೀಡುವುದಾಗಿ ಮಕ್ಕಳಿಗೆ ಭರವಸೆ ನೀಡಿದರು. ಆಡಳಿತ ವ್ಯವಸ್ಥೆಗಳ ನೇರವಾಗಿ ಅರ್ಥಮಾಡಿಕೊಳ್ಳಲುವಿದ್ಯಾರ್ಥಿಗಳಿಗೆ ಅವಕಾಶ ನೀಡುವ ಈ ಜನಪ್ರಿಯ ಯೋಜನೆಮುಂಬರುವವಾರಗಳಲ್ಲಿಜಿಲ್ಲೆಯ ಇತರ ಸರಕಾರಿ ಶಾಲೆಗಳು , ಕಾಲೇಜುಗಳಿಗೆ ವಿಸ್ತರಿಸಲು ಜಿಲ್ಲಾಡಳಿತ ನಿರ್ಧರಿಸಿದೆ.

**ವಿನೂತನ ಯೋಜನೆ**

**ಸರಕಾರಿ ಶಾಲೆಗಳು, ಕಾಲೇಜುಗಳ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಕಾಸರಗೋಡು ಜಿಲ್ಲಾಡಳಿತ ಮತ್ತು ವಿದ್ಯಾರ್ಥಿಗಳ ನಡುವಿನ ಅಂತರ ಕಡಿಮೆ ಮಾಡಲು , ಆಡಳಿತಾತ್ಮಕ ವಿಷಯಗಳಲ್ಲಿ ಯುವಕರ ಭಾಗವಹಿಸುವಿಕೆ ಖಚಿತಪಡಿ ಸಿಕೊಳ್ಳಲು ಮಾ.18 ರಂದು 'ನಮಸ್ತೆ ಕಲೆಕ್ಟರ್' ವಿನೂತನ ಯೋಜನೆ ಪ್ರಾರಂಭಿಸಲಾಯಿತು.**

## ವಿಧಾನಸಭಾ ಚುನಾವಣೆ:ಹಸಿರು ಸಂಹಿತೆಯೊಂದಿಗೆ ಸ್ವಚ್ಛತಾಮಿಷನ್‌ನಿಂದ ಪೂರ್ವಸಿದ್ಧತಾ ಚಟುವಟಿಕೆ

**ಕಾಸರಗೋಡು:** ಜಿಲ್ಲೆಯಲ್ಲಿ ಏಪ್ರಿಲ್ 9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಹಸಿರು ಶಿಷ್ಟಾಚಾರಕ್ಕೆ ಅನುಗುಣವಾಗಿ ಕೈಗೊಳ್ಳಬೇಕಾದ ಪೂರ್ವಸಿದ್ಧತಾ ಚಟುವಟಿಕೆಗಳು ಜಿಲ್ಲಾ ಸ್ವಚ್ಛತಾ ಮಿಷನ್ ನೇತೃತ್ವದಲ್ಲಿ ಪ್ರಾರಂಭವಾಗಿವೆ.

ಚುನಾವಣೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಯೋಜನಾ ಸಮಿತಿ ಸಭಾಂಗಣದಲ್ಲಿ ಗ್ರಾಮ ಪಂಚಾಯತ್‌ಗಳ ನೋಡಲ್ ಅಧಿಕಾರಿಗಳು, ಸಹಾಯಕ ಕಾರ್ಯದರ್ಶಿಗಳು, ಆರೋಗ್ಯ ಅಧಿಕಾರಿಗಳು, ಶುಚಿತ್ವ ಮಿಷನ್ ಸಂಪನ್ಮೂಲ ವ್ಯಕ್ತಿಗಳು, ವೈ.ಪಿ.ಗಳು, ಹಸಿರು ಮಿಷನ್ ಆರ್.ಪಿ.ಗಳು ಇತ್ಯಾದಿ ವಿಭಾಗದವರಿಗೆ ಹಸಿರು ಶಿಷ್ಟಾಚಾರ ತರಬೇತಿ ತರಗತಿಯನ್ನು ಆಯೋಜಿಸಲಾಗಿತ್ತು.

ಸ್ವಚ್ಛತಾ ಮಿಷನ್‌ನ ಜಿಲ್ಲಾ ಸಂಯೋಜಕರು, ಸ್ಥಳೀಯ ಸಹಾಯಕ ನಿರ್ದೇಶಕರು ತರಬೇತಿಯನ್ನು ಸ್ಥಳೀಯಾಡಳಿತ ಇಲಾಖೆ, ಜಿಲ್ಲಾ ಜಾರಿ ದಳ ಇವುಗಳ ಸಹಯೋಗದಲ್ಲಿ ನಡೆಸಿಕೊಟ್ಟರು.

**ಪ್ರಮುಖ ವ್ಯಕ್ತಿಗಳ ಸಂದೇಶ ರೀಲ್**

ಹಸಿರು ಶಿಷ್ಟಾಚಾರ ಅಭಿಯಾನದ ಚಟುವಟಿಕೆಗಳ ಭಾಗವಾಗಿ ಪ್ರಮುಖ ವ್ಯಕ್ತಿಗಳ ಸಂದೇಶ ರೀಲ್‌ಗಳನ್ನು ಸಿದ್ಧಪಡಿಸಲಾಗುತ್ತದೆ. ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟರ್‌ಗಳು ಮತ್ತು ರೀಲ್‌ಗಳ ಆಯೋಜಿಸಲಾಗುತ್ತದೆ.

**ಮಾದರಿ ಬೂತ್‌ಗಳ ಸ್ಥಾಪನೆ**

**ಸ್ಥಳೀಯಾಡಳಿತ ಸಂಸ್ಥೆಗಳ ನೇತೃತ್ವದಲ್ಲಿ ಮಾದರಿ ಬೂತ್‌ಗಳನ್ನು ಸ್ಥಾಪಿಸಲಾಗುವುದು. ಹಸಿರು ಶಿಷ್ಟಾಚಾರದ ಅಂಗವಾಗಿ ಬೂತ್‌ಗಳಲ್ಲಿ ಜಾರಿಗೆ ತರಬೇಕಾದ ಚಟುವಟಿಕೆಗಳನ್ನು ಶುಚಿತ್ವ ಮಿಷನ್ ನೇತೃತ್ವದಲ್ಲಿ ಜಿಲ್ಲೆಯ ಮತಗಟ್ಟೆ ಅಧಿಕಾರಿಗಳಿಗೆ ವಿವರಿಸಲಾಗುವುದು. ಹಸಿರು ಕ್ರಿಯಾ ತಂಡಗಳನ್ನು ಬೂತ್‌ಗಳಲ್ಲಿ ನಿಯೋಜಿಸಲಾಗುವುದು.**

**ವಾಹನ ಪ್ರಚಾರ ಪ್ರವಾಸ**

ಕಲೆಕ್ಟರೇಟ್‌ನಲ್ಲಿ ವಾಹನ ಪ್ರಚಾರ ಪ್ರವಾಸ, ಮಾದರಿ ಬೂತ್‌ಗಳನ್ನು ಸ್ಥಾಪಿಸಲಾಗುವುದು. ಇದಲ್ಲದೆ ಅಭಿಯಾನದ ಪ್ರಯುಕ್ತ ಮ್ಯಾಜಿಕ್ ಶೋ, ಅಭ್ಯರ್ಥಿಗಳಿಗೆ ಹಸಿರು ಶಿಷ್ಟಾಚಾರ ಕಿಟ್, ಸಮುದಾಯ ಚಿತ್ರಕಲೆ, ಸಾಮೂಹಿಕ ಓಟ, ಸೈಕಲ್ ರ‍್ಯಾಲಿ, ವಾಕಥಾನ್ ಮುಂತಾದ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಪ್ರಚಾರ ಚಟುವಟಿಕೆಗಳನ್ನು ಉದ್ಘಾಟಿಸಲಿದ್ದಾರೆ.

## ಪಾತೇರಿ ಶ್ರೀ ದೇವಸ್ಥಾನದ ಗರ್ಭಗುಡಿ, ನಮಸ್ಕಾರ ಮಂಟಪಕ್ಕೆ ಶಿಲೆಗಳ ಆಗಮನ



**ಬದಿಯಡ್ಕ:** ಪಾತೇರಿ ಶ್ರೀ ಶಂಕರ ನಾರಾಯಣ ದೇವಳದಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ಗರ್ಭಗುಡಿ , ನಮಸ್ಕಾರ ಮಂಟಪದ ಕೆತ್ತಲ್ಪಟ್ಟ ಶಿಲೆಗಳ ಸಮರ್ಪಣೆ ಮತ್ತು ಅದರ ಶೋಭಾಯಾತ್ರೆ ಸಭಾ ಕಾರ್ಯಕ್ರಮ ಕುರುಮುಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಜರಗಿತು.

ಪಾತೇರಿ ಶ್ರೀ ಶಂಕರನಾರಾಯಣ ದೇವಸ್ಥಾನದ ಆನುವಂಶಿಕ ಮೊಕ್ತೇಸರ ನಟೇಶ್ ಅಮ್ಮಣ್ಣಾಯ ದೀಪ ಪ್ರಜ್ವಲನೆಗೊಳಿಸಿ ಉದ್ಘಾಟಿಸಿದರು.

ಈ ಸಂದರ್ಭ ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಹರಿನಾರಾಯಣ ಶಿರಂತಡ್ಕ, ಕೋಶಾಧಿಕಾರಿ ಶಂಕರನಾರಾಯಣ ಮಯ್ಯ ಬದಿಯಡ್ಕ, ಡಾ.ವೇಣುಗೋಪಾಲ ಕಳೆಯತ್ತೋಡಿ, ಶಿಲ್ಪಿ ವಿಜಯ ಮೇಸ್ತ್ರಿ ಉಪ್ಪಿನಂಗಡಿ, ಶ್ರೀ ಧರ್ಮಶಾಸ್ತಾ ಸೇವಾ ಸಮಿತಿ ಅಧ್ಯಕ್ಷ ಕೆ.ವಿ.ರಮೇಶ ಶರ್ಮ , ಭಗವದ್ಭಕ್ತರು ಪಾಲ್ಗೊಂಡಿದ್ದರು.

ಸೇವಾ ಸಮಿತಿ ಕಾರ್ಯದರ್ಶಿ ನಾರಾಯಣ ಕೆ.ಎಂ. ಸ್ವಾಗತಿಸಿ, ಭಜನಾ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನಾಯರ್ ಉಪ್ಪಂಗಳ ಮೂಲೆ ವಂದಿಸಿದರು. ಬಳಿಕ ಮೆರವಣಿಗೆಯೊಂದಿಗೆ ಶಿಲೆಗಳನ್ನು ವಾದ್ಯ ಘೋಷಗಳೊಂದಿಗೆ ಶ್ರೀ ಕ್ಷೇತ್ರಕ್ಕೆ ತಲುಪಿಸಲಾಯಿತು.

---

### ಶಿರಿಯ ಹೊಳೆಯ ಪೂವನಡ್ಕ-ಬಾಕಿಲಪದವಿನ ಜನರ ದಶಕಗಳ ಬೇಡಿಕೆಗೆ ಇನ್ನೂ ಸಿಕ್ಕಿಲ್ಲ ಪರಿಹಾರ

# ಸಂಪರ್ಕ ಸೇತುವೆ, ನೀರು ಸಂಗ್ರಹಣೆಗೆ ಅಣೆಕಟ್ಟು ನಿರ್ಮಿಸಲು ಕೃಷಿಕರ ಒತ್ತಾಯ

**ಪೆರ್ಲ:** ಪೂವನಡ್ಕದ ಶಿರಿಯ ಹೊಳೆಗೆ ಅಣೆಕಟ್ಟು ಮತ್ತು ಸೇತುವೆ ನಿರ್ಮಿಸಬೇಕೆಂಬ ದಶಕಗಳ ಬೇಡಿಕೆ ಇದೀಗ ಹೆಚ್ಚುತ್ತಿದ್ದು, ಶಿರಿಯ ಹೊಳೆಗೆ ಪೂವನಡ್ಕದಲ್ಲಿರುವ ಕರ್ನಾಟಕದ ಭಾಗವಾಗಿರುವ ಮಾಣಿಲದೊಂದಿಗೆ ಸಂಪರ್ಕಿಸಲು ಸೇತುವೆ ಮತ್ತು ಹೊಳೆಯ ಎರಡೂ ಬದಿಗಳ ಕೃಷಿ ಉದ್ದೇಶಗಳಿಗಾಗಿ ನೀರನ್ನು ಸಂಗ್ರಹಿಸಲು ಅಣೆಕಟ್ಟು ನಿರ್ಮಿಸಬೇಕೆಂದು ಸ್ಥಳೀಯ ಕೃಷಿಕರು ಒತ್ತಾಯಿಸುತ್ತಿದ್ದಾರೆ.

**ನೀರಿನ ಕೊರತೆ ನೀಗಿಸಲು ಸಾಧ್ಯ**

ಪ್ರಸ್ತುತ ಪೂವನಡ್ಕದಲ್ಲಿ ಪೆರ್ಲ - ಪೂವನಡ್ಕ ರಸ್ತೆ ಕೊನೆಗೊಳ್ಳುತ್ತದೆ. ಆದರೆ ಸೇತುವೆ ಇದ್ದಿದ್ದರೆ ಇಲ್ಲಿ ಕೃಷಿ ಉತ್ಪನ್ನಗಳನ್ನು ಸಾಗಿಸಲು ಮತ್ತು ಉಪ್ಪಳ, ವಿಟ್ಲ ಮತ್ತು ಮಂಗಳೂರಿಗೆ ತ್ವರಿತವಾಗಿ ಪ್ರಯಾಣಿಸಲು ಸಾಧ್ಯ. ಜೊತೆಗೆ ಅಣೆಕಟ್ಟು ನಿರ್ಮಿಸಿದರೆ ಕೃಷಿಯ ನೀರಾವರಿ ಉದ್ದೇಶಗಳಿಗಾಗಿ ಕೆರೆಗಳು, ಬಾವಿಗಳು,



ಕೊಳವೆ ಬಾವಿಗಳಂತಹ ನೀರಿನ ಮೂಲಗಳಲ್ಲಿ ನೀರಿನ ಮಟ್ಟ ಹೆಚ್ಚಳಗೊಳ್ಳುತ್ತದೆ. ಇದು ನೀರಿನ ಕೊರತೆ ಪರಿಹರಿಸಲು ಸಾಧ್ಯವಾಗಬಹುದಾಗಿದೆ. ಪೂವನಡ್ಕ, ಪೆರ್ಲಾಜೆ, ಸೇರಾಜೆ, ಸೋಮಾಜೆ ಮತ್ತು ಬೆಂಗಪದವಿನ ಸ್ಥಳೀಯ ಕೃಷಿಕರಿಗೂ ಇದರಿಂದ ಪ್ರಯೋಜನವಾಗಲಿದೆ. ಈ ಪ್ರದೇಶದ ಹೆಚ್ಚಿನ ಕೃಷಿಕರು ಅಡಕೆ, ತೆಂಗು, ಬಾಳೆ ಮತ್ತು ಕರಿಮೆಣಸು ಬೆಳೆಗಾರರಾಗಿದ್ದಾರೆ.

**ಹಲವು ಸಮಸ್ಯೆಗಳಿಂದ ನನೆಗುದಿಗೆ ಬಿದ್ದಿದೆ**

**ಶಿರಿಯ ಹೊಳೆ ಸಾಗುವ ಗಡಿ ಗ್ರಾಮಗಳಲ್ಲಿ ಇದೇ ರೀತಿಯ ಅಂತಾರಾಜ್ಯ ಸಂಪರ್ಕ ಸಮಸ್ಯೆ ದಶಕಗಳಿಂದಲೂ ಪರಿಹಾರವಿಲ್ಲದೆ ಮುಂದುವರಿದಿದೆ. ಎಣ್ಮಕಜೆ ಪಂ.ನ ಬಾಕಿಲಪದವು ಪ್ರಹ್ಲಾದಪುರದಲ್ಲೂ ಶಿರಿಯ ಹೊಳೆಗೆ ಸೇತುವೆ ಬೇಡಿಕೆ ಇನ್ನೂ ಈಡೇರಿಲ್ಲ. ಇಲ್ಲಿಯ ಸೇತುವೆ ಸಾಕಾರಗೊಂಡಲ್ಲಿ ಕರ್ನಾಟಕದ ಅಡ್ಯನಡ್ಕ, ವಿಟ್ಲ ಮೊದಲಾದ ಪ್ರದೇಶಗಳಿಗೆ ಸುಲಭದಲ್ಲಿ ನೇರ ಪ್ರಯಾಣ ಜನರಿಗೆ ಪ್ರಯೋಜನ ಕಾರಿಯಾಗಬಹುದಾಗಿದೆ. ಕಳೆದ ಕೆಲವು ವರ್ಷಗಳಿಂದ ಯೋಜನೆ ರೂಪಿಸುತ್ತಿದ್ದರೂ ಹಲವು ತಾಂತ್ರಿಕ, ಸಾಮಾಜಿಕ ಕಾರಣಗಳಿಂದ ನನೆಗುದಿಗೆ ಬಿದ್ದಿದೆ.**

**ಸೇತುವೆ ನಿರ್ಮಾಣಕ್ಕೆ ಹೆಚ್ಚಿದ ಬೇಡಿಕೆ**

**ಎಣ್ಮಕಜೆ ಗ್ರಾ.ಪಂ.ನಲ್ಲಿ ಇದೀಗ ಹೊಸ ಆಡಳಿತ ಸಮಿತಿ ಅಧಿಕಾರಕ್ಕೆ ಬಂದಿದ್ದು, ಮೊದಲ ಸಭೆಯಲ್ಲಿ ಪೂವನಡ್ಕ ಸೇತುವೆ - ಬಾಕಿಲಪದವು ಸೇತುವೆ ನಿರ್ಮಾಣದ ಬಗ್ಗೆ ಜನರಿಂದ ಬೇಡಿಕೆ ಮತ್ತೆ ಬಂದಿದೆ. ಈ ನಿಟ್ಟಿನಲ್ಲಿ ಗ್ರಾ.ಪಂ. ಆಡಳಿತ ಸಮಿತಿ ಶೀಘ್ರ ಚಿಂತನೆ ನಡೆಸಿ ಅನುಷ್ಠಾನಕ್ಕೆ ಅಗತ್ಯದ ಕ್ರಮ ಕೈಗೊಳ್ಳುವುದಾಗಿ ತಿಳಿಸಿದೆ. ಬಾಕಿಲಪದವಿನಲ್ಲಿ ನಿರ್ಮಿಸಬೇಕಾದ ಸೇತುವೆ ಬಗ್ಗೆ ಇತ್ತೀಚೆಗೆ ಸಾಯ ವಾರ್ಡ್ ಮಟ್ಟದ ಗ್ರಾಮಸಭೆಯಲ್ಲಿ ಅಲ್ಲಿಯ ನಾಗರಿಕರು ಬೇಡಿಕೆ ಇಟ್ಟಿದ್ದಾರೆ.**

## ಸುತ್ತಮುತ್ತ

### ನಾಳೆ ಪಾಂಡೇಶ್ವರ ವಿಶೇಷ ಗ್ರಾಮಸಭೆ ಆಯೋಜನೆ

**ಕೋಟ:** ಇಲ್ಲಿನ ಪಾಂಡೇಶ್ವರ ಗ್ರಾಮಪಂಚಾಯತ್‌ನ 2026-27ನೇ ಸಾಲಿನ ವಿಶೇಷ ಗ್ರಾಮಸಭೆ ಮಾ.27ರಂದು ಬೆಳಗ್ಗೆ 10.30ಕ್ಕೆ ಪಂಚಾಯತ್ ಸಭಾಂಗಣದಲ್ಲಿ ಜರಗಲಿದೆ. ಈ ಪ್ರಯುಕ್ತ 2026-27ನೇ ಸಾಲಿನ ಪಂಚಾಯತ್ ಅಭಿವೃದ್ಧಿ ಯೋಜನೆಯಡಿ ಸ್ಥಳೀಯ ಸಮುದಾಯದ ಸಹಭಾಗಿತ್ವದಡಿ ಕ್ರಿಯಾಯೋಜನೆ ಸಿದ್ಧಪಡಿಸಲು ಈ ವಿಶೇಷ ಗ್ರಾಮಸಭೆಯನ್ನು ಕರೆಯಲಾಗಿದ್ದು ಗ್ರಾಮಮಟ್ಟದ ಇಲಾಖಾಧಿಕಾರಿಗಳು ಭಾಗಿಯಾಗಲಿದ್ದಾರೆ ಎಂದು ಪಂಚಾಯತ್ ಪ್ರಕಟಣೆಯಲ್ಲಿ ತಿಳಿಸಿದೆ.

### ಸಾಲಿಗ್ರಾಮ ದೇವಸ್ಥಾನ ಆಡಳಿತ ಮಂಡಲಿ ಅಧ್ಯಕ್ಷರ ಆಯ್ಕೆ

**ಕೋಟ:** ಸಾಲಿಗ್ರಾಮ ಶ್ರೀಗುರುನರಸಿಂಹ ದೇವಳದ 2026-31ನೇ ಸಾಲಿನ ಆಡಳಿತ ಮಂಡಳಿಗೆ ಚುನಾವಣೆ ನಡೆದಿದ್ದು ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಆಯ್ಕೆ ಬುಧವಾರ ನಡೆದಿದೆ.



ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನ ಆಡಳಿತ ಮಂಡಳಿ ನೂತನ ಅಧ್ಯಕ್ಷರಾಗಿ ಪ್ರಕಾಶ್ ಕಾರಂತ್, ಉಪಾಧ್ಯಕ್ಷರಾಗಿ ಚಂದ್ರಶೇಖರ ಉಪಾಧ್ಯ, ಕಾರ್ಯದರ್ಶಿ ಪರುಶರಾಮ್ ಭಟ್, ಕೋಶಾಧಿಕಾರಿ ಎಂ.ಲಕ್ಷ್ಮೀನಾರಾಯಣ ಹೊಳ್ಳ ನೇಮಕಗೊಂಡಿದ್ದಾರೆ. ಪ್ರಸನ್ನ ತುಂಗ, ಕೆ. ತಾರಾನಾಥ ಹೊಳ್ಳ, ಬಿ. ಚಂದ್ರಶೇಖರ ನಾವಡ, ಪ್ರಕಾಶ ಮಯ್ಯ ಜಿ.,ಬಿ. ಜಿ. ಕೃಷ್ಣಮೂರ್ತಿ ಸದಸ್ಯರಾಗಿದ್ದಾರೆ.

### ಯಜ್ಞನಾರಾಯಣ ಭಟ್‌ಗೆ 'ಪಾಕವಿದ್ಯಾ ಮಾನ್ಯ' ಪ್ರಶಸ್ತಿ

**ಪಡುಬಿದ್ರಿ:** ಪಲಿಮಾರು ಮಠದ ಯತಿ ಪರಂಪರೆಯಲ್ಲಿ ಬಂದ ಶ್ರೀವಿದ್ಯಾಮಾನ್ಯತೀರ್ಥ ಶ್ರೀಪಾದರ ಸಂಸ್ಮರಣಾರ್ಥವಾಗಿ ಶ್ರೀಪಲಿಮಾರು ಮಠಾಧೀಶ ಶ್ರೀವಿದ್ಯಾಧೀಶತೀರ್ಥರು ಪ್ರತಿವರ್ಷ ನೀಡುತ್ತಿರುವ 'ಪಾಕವಿದ್ಯಾ ಮಾನ್ಯ' ಪ್ರಶಸ್ತಿಗೆ ಪೆರಂಪಳ್ಳಿ ಯಜ್ಞನಾರಾಯಣ ಭಟ್ ಇವರು ಪಾಕಕ್ಷೇತ್ರದಲ್ಲಿ ಮಾಡಿದ-ಮಾಡುತ್ತಿರುವ ವಿಶೇಷ ಸೇವೆಯನ್ನು ಗಮನಿಸಿ ಆಯ್ಕೆಮಾಡಲಾಗಿದೆ.



ಶ್ರೀ ವಿಶ್ವೇಶ ತೀರ್ಥ ಶ್ರೀಪಾದರ ನಾಲ್ಕು ಪರ್ಯಾಯಗಳು, ನಮ್ಮ ಗುರುಗಳ ಪರ್ಯಾಯ (1986-88) ಮತ್ತು ತನ್ನ ಮೊದಲ ಪರ್ಯಾಯ (2002-04) ಅಖಂಡವಾಗಿ ಶ್ರೀರಾಮ-ಶ್ರೀಕೃಷ್ಣದೇವರ ವಿಶೇಷ ಸೇವೆಯನ್ನು ಮಾಡುತ್ತಿದ್ದಾರೆ. ಹಲವಾರು ದೇವಸ್ಥಾನಗಳ ನಮ್ಮ ಬ್ರಹ್ಮಕಲಶೋತ್ಸವ, ನಾಗಮಂಡಲಗಳಲ್ಲಿ ಸುಮಾರು 50-70 ಸಾವಿರ ಜನರ ಅನ್ನದಾನದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದ ಎಂಬತ್ತರ ಇಳಿವಯಸ್ಸಿನಲ್ಲೂ ಪಾದರಸದಂತೆ ಚುರುಕಾದ ವ್ಯಕ್ತಿತ್ವವನ್ನು ಹೊಂದಿರುವ, ಈಗಲೂ ಪೆರಂಪಳ್ಳಿ ಗಣಪತಿ ದೇವರ ಸೇವೆಯನ್ನು ಸದಾ ನಡೆಸುತ್ತಿರುವ, ತಮ್ಮ ಸರಳ ಸಜ್ಜನಿಕೆ-ನಿರಾಡಂಬರ ವ್ಯಕ್ತಿತ್ವದಿಂದ ಹಿಂದುಳಿದ ಕಿರಿಯರು ಎನ್ನುವ ಭೇದವಿಲ್ಲದೆ ತಮ್ಮ ಆಪ್ತವಲಯದಲ್ಲಿ 'ಯಜ್ಞಣ್ಣ' ಎಂದೇ ಪ್ರಸಿದ್ಧರಾಗಿ ಜನಾನುರಾಗಿಗಳಾಗಿರುವ, ಸದಾಚಾರ ನಿಷ್ಠರಾಗಿರುವ, ಶ್ರೀಲಕ್ಷ್ಮೀನಾರಾಯಣ ಆಸ್ರಣ್ಣ ಇವರಿಗೆ ಏ.2ರ ಪೂರ್ವಾಹ್ನ 10ಕ್ಕೆ ಪಲಿಮಾರಿನಲ್ಲಿ ನಡೆಯಲಿರುವ ಶ್ರೀ ಹನುಮಜ್ಜಯಂತೀ ಪರ್ವಕಾಲದಲ್ಲಿ 'ಪಾಕವಿದ್ಯಾ ಮಾನ್ಯ' ಪುರಸ್ಕಾರವನ್ನು ಪ್ರಶಸ್ತಿ ಫಲಕ ಮತ್ತು 50,000 ರೂ. ನಿಧಿಯೊಂದಿಗೆ ಪ್ರದಾನ ಮಾಡಲಾಗುವುದು ಎಂದು ಪಲಿಮಾರು ಮಠದ ದಿವಾನರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೊದಲನೇ ಪುಟದಿಂದ

### ಪೇಟೆಗೆ 'ಪೇಟ'!

ಇದನ್ನೆಲ್ಲಾ ಗಮನಿಸಿ ಕೇರಳ ಸರಕಾರವು ಉದುಮ ಶಾಸಕರ ಪ್ರಾದೇಶಿಕ ಅಭಿವೃದ್ಧಿ ಫಂಡ್ ಮೂಲಕ ಮಂಜೂರು ಮಾಡಿದ 85 ಲಕ್ಷ ರೂಪಾಯಿ ಅನುದಾನದಿಂದ ಬೋವಿಕ್ಕಾನ ಪೇಟೆ ಸಮರ್ಪಕವಾಗಿ ಅಭಿವೃದ್ಧಿ ಹೊಂದುತ್ತಿದೆ. ಬೋವಿಕ್ಕಾನ ಪೇಟೆಯ ನಿರುಪಯೋಗಿ ಹಳೆಯ ಕಲ್ವರ್ಟ್ ತೆರವುಗೊಳಿಸಿ ಹೊಸದಾಗಿ ನಿರ್ಮಿಸಲಾಗುತ್ತಿದೆ. ಗ್ರಾಮ ಕಚೇರಿಯಿಂದ ಪಂಚಾಯತ್ ಕಚೇರಿ ತನಕದ ಭಾಗದಲ್ಲಿ ಹಾಗೂ ಇನ್ನೊಂದು ಭಾಗದಲ್ಲಿ ಸುರಕ್ಷಾ ತಡೆಗೋಡೆಯೊಂದಿಗೆ ಫುಟ್‌ಪಾತ್ ನಿರ್ಮಿಸಲು ಉದ್ದೇಶಿಸಲಾಗಿದೆ.

### ವಿಗ್ರಹಕ್ಕಿಲ್ಲ ಶೃಂಗಾರ?

ವಿಗ್ರಹವಿರುವ ಉದ್ಯಾನವನದಲ್ಲೂ ಶುಚಿತ್ವವನ್ನು ಕಾಪಾಡಿ ಹಸಿರಾಗಿಸುವ ವ್ಯವಸ್ಥೆಯನ್ನೂ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಇವರೆಡನ್ನೂ ಮಾಡದೆ ವಿಗ್ರಹವನ್ನು ಅನಾಥವಾಗಿ ಬಿಡಲಾಗಿದೆ. ಆಕೃತಕ ಆಕರ್ಷಕವಾಗಿ ನಿರ್ಮಾಣಗೊಂಡಿರುವ ಈ ವಿಗ್ರಹವನ್ನು ಯಾವುದೇ ಕಾರಣಕ್ಕೂ ಹಾಳು ಮಾಡಬಾರದು ಎನ್ನುವ ನಿಟ್ಟಿನಲ್ಲಿ ಈ ವಿಗ್ರಹಕ್ಕೋಸ್ಕರವೇ ಪುಟ್ಟದೊಂದು ಉದ್ಯಾನವನವನ್ನು ನಿರ್ಮಿಸಲಾಗಿತ್ತು. ಆದರೆ, ಈ ಉದ್ದೇಶಕ್ಕೆ ಇದೀಗ ತಿಲಾಂಜಲಿ ಇಡುವ ಕಾರ್ಯ ನಡೆದಿದೆ. ಇದೇ ವಿಚಾರವನ್ನು ದೇವಸ್ಥಾನದ ಹತ್ತೊಂಬತ್ತನೇ ಪೂರ್ವಭಾವಿಯಾಗಿ ನಡೆದ ಭಕ್ತರ ಸಭೆಯಲ್ಲೂ ಭಕ್ತರು ಪ್ರಸ್ತಾಪಿಸಿದ್ದಾರೆ. ಈ ವಿಗ್ರಹದಲ್ಲೂ ದೇವರನ್ನು ಕಾಣುತ್ತಿದ್ದ ಭಕ್ತರಿಗೆ ದೇವಸ್ಥಾನದ ಆಡಳಿತ ಮಂಡಳಿಯ ಈ ನಡೆ ಬೇಸರ ತರಿಸಿದೆ.

### ತ್ರಾಸಿ ಬೀಚ್, ಅಣ್ಣಪ್ಪಯ್ಯ ಸಭಾಭವನದ ಬಳಿ ಹೆದ್ದಾರಿ 66ರ ಬಳಿ ನಿರ್ಮಾಣ | ತಲಾ 3.5 ಲಕ್ಷ ರೂ. ವೆಚ್ಚ

# ನಿರುಪಯುಕ್ತವಾಗಿವೆ ಪ್ರಯಾಣಿಕರ ಬಸ್ ತಂಗುದಾಣಗಳು

**ಕುಂದಾಪುರ:** ಪ್ರಯಾಣಿಕರಿಗೆ ನೆರಳಾಗಬೇಕಿದ್ದ ಮತ್ತು ಉಪಯೋಗಕ್ಕೆ ಬೀಳಬೇಕಿದ್ದ ಪ್ರಯಾಣಿಕರ ತಂಗುದಾಣಗಳು ನಿರುಪಯುಕ್ತವಾಗಿ ನಿಷ್ಪ್ರಯೋಜಕವಾಗಿದೆ.

ತ್ರಾಸಿ ಗ್ರಾಮ ಪಂಚಾಯತ್ ವ್ಯಾಪ್ತಿಯ ತ್ರಾಸಿ ಬೀಚ್ ಮತ್ತು ಅಣ್ಣಪ್ಪಯ್ಯ ಸಭಾಭವನದ ಬಳಿ ರಾಷ್ಟ್ರೀಯ ಹೆದ್ದಾರಿ 66ರ ಸಮೀಪ ಸಂಸದ ಬಿ.ವೈ. ರಾಘವೇಂದ್ರ ಅವರ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಅಂದಾಜು ತಲಾ 3.5 ಲಕ್ಷ ರೂ. ವೆಚ್ಚದಲ್ಲಿ ಕಳೆದ ವರ್ಷ ನಿರ್ಮಾಣಗೊಂಡಿರುವ ಎರಡು ಪ್ರಯಾಣಿಕರ ತಂಗುದಾಣಗಳು ನಿರುಪಯುಕ್ತವಾಗಿದ್ದು ಪ್ರಯಾಣಿಕರಿಗೆ ಯಾವುದೇ ಉಪಯೋಗಕ್ಕೆ ಇಲ್ಲದಂತಾಗಿದೆ.

**ಹೆದ್ದಾರಿ ಬದಿ ನಿಲ್ಲುತ್ತಾರೆ**

ತ್ರಾಸಿ ಬೀಚ್ ಬಳಿ ನಿರ್ಮಾಣಗೊಂಡಿರುವ ಪ್ರಯಾಣಿಕರ ತಂಗುದಾಣವನ್ನು ಯಾವೊಬ್ಬ ಪ್ರಯಾಣಿಕನೂ ಬಳಸುತ್ತಿಲ್ಲ, ಬಸ್ ನಿಲ್ಲುವುದು ಒಂದು ಕಡೆಯಾದರೆ ತಂಗುದಾಣ ನಿರ್ಮಿಸಿರುವುದು ಇನ್ನೊಂದು ಕಡೆ.



ಹಾಗಾಗಿ ಪ್ರಯಾಣಿಕರು ಬಸ್ ತಂಗುದಾಣವನ್ನು ಆಶ್ರಯಿಸದೆ ಬಿರು ಬಿಸಿಲಿ, ಗಾಳಿ ಮಳೆಯಲ್ಲಿ ಬಸ್ಸಿಗಾಗಿ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಕಾಯುತ್ತಾ ನಿಲ್ಲಬೇಕಾದ ಪರಿಸ್ಥಿತಿ ಇದೆ. ಇನ್ನೊಂದೆಡೆ ಅಣ್ಣಪ್ಪಯ್ಯ ಸಭಾಭವನದ ಬಳಿ ನಿರ್ಮಿಸಿರುವ ಪ್ರಯಾಣಿಕರ ತಂಗುದಾಣ ಇದಕ್ಕೆ ಹೊರತಾಗಿಲ್ಲ.

**ಪ್ರಯಾಣಿಕರಿಗೆ ಪ್ರಯೋಜನ ಇಲ್ಲ**

ಲಕ್ಷಾಂತರ ರೂ. ಖರ್ಚು ಮಾಡಿ ನಿರ್ಮಿಸಿರುವ ಈ ತಂಗುದಾಣದ ಪ್ರಯೋಜನ ಪ್ರಯಾಣಿಕರಿಗೆ ದೊರೆಯುತ್ತಿಲ್ಲ, ಸರ್ವಿಸ್ ರಸ್ತೆಗೆ ಹೋಗುವ ಸ್ಥಳದಲ್ಲಿ ಬಸ್ ತಂಗುದಾಣ ನಿರ್ಮಿಸಿದ್ದರೆ, ಬಸ್ಸುಗಳು ತಂಗುದಾಣಕ್ಕಿಂತ ಬಹಳ ಹಿಂದೆಯೇ ನಿಂತುಕೊಳ್ಳುತ್ತಿದೆ. ಆದ್ದರಿಂದ ಪ್ರಯಾಣಿಕರು ಬಸ್ ತಂಗುದಾಣವನ್ನು ಆಶ್ರಯಿಸಲು ಮುಂದಾಗುತ್ತಿಲ್ಲ.

> **ಬಸ್ ನಿಲ್ಲುವ ಸ್ಥಳದಲ್ಲಿ ನಿರ್ಮಿಸಬೇಕಿತ್ತು**
>
> ತ್ರಾಸಿ ಬೀಚ್ ಮತ್ತು ಅಣ್ಣಪ್ಪಯ್ಯ ಸಭಾಭವನದ ಎದುರು ನಿರ್ಮಿಸಲಾಗಿರುವ ಪ್ರಯಾಣಿಕರ ತಂಗುದಾಣದಿಂದ ಪ್ರಯಾಣಿಕರಿಗೆ ಯಾವುದೇ ಉಪಯೋಗವಿಲ್ಲ, ಪ್ರಯಾಣಿಕರಿಗೆ ಅನುಕೂಲವಾಗುವಲ್ಲಿ ಅಥವಾ ಬಸ್ ನಿಲುಗಡೆ ನೀಡುವ ಸ್ಥಳದಲ್ಲಿ ಪ್ರಯಾಣಿಕರ ತಂಗುದಾಣ ನಿರ್ಮಿಸಿದರೆ ಉತ್ತಮವಾಗಿರುತ್ತಿತ್ತು.
>
> ● ಪ್ರಕಾಶ ಪೂಜಾರಿ, ಪ್ರಯಾಣಿಕ, ತ್ರಾಸಿ

**ಮದ್ಯವ್ಯಸನಿಗಳ ವಾಸಸ್ಥಳ**

ತ್ರಾಸಿ ಬೀಚ್ ಮತ್ತು ಅಣ್ಣಪ್ಪಯ್ಯ ಸಭಾಭವನದ ಬಳಿ ನಿರ್ಮಿಸಿರುವ ಎರಡು ಪ್ರಯಾಣಿಕರ ತಂಗುದಾಣಗಳು ನಾಯಿ ಮತ್ತಿತರ ಪ್ರಾಣಿಗಳ ಮತ್ತು ಮದ್ಯವ್ಯಸನಿಗಳ ವಾಸಸ್ಥಾನವಾಗಿದೆ. ಬಸ್ ಪ್ರಯಾಣಿಕರಿಗೆ ಅನುಕೂಲವಾಗುವ ಸ್ಥಳದಲ್ಲಿ ತಂಗುದಾಣ ನಿರ್ಮಿಸಬೇಕೇ ವಿನಹ: ಎಲ್ಲೆಲ್ಲೋ ತಂಗುದಾಣ ನಿರ್ಮಿಸಿದರೆ ಏನು ಪ್ರಯೋಜನ. ಲಕ್ಷಾಂತರ ರೂ. ಅನುದಾನವನ್ನು ವ್ಯರ್ಥ ಪೋಲು ಮಾಡಿದಂತಾಗಿದೆ ಎಂದು ಪ್ರಯಾಣಿಕರು ಆಡಳಿತ ವ್ಯವಸ್ಥೆ ಮತ್ತು ಜನಪ್ರತಿನಿಧಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟ



**ಬ್ರಹ್ಮಾವರ:** ವಿದ್ಯಾರ್ಥಿಗಳು ಕಾಲೇಜು ವಾರ್ಷಿಕ ಕ್ರೀಡಾಕೂಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ತಾಲ್ಲೂಕು, ರಾಜ್ಯ, ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಸ್ಪರ್ಧಿಸಲು ಸಹಕಾರಿಯಾಗುತ್ತದೆ ಎಂದು ಅಂತಾರಾಷ್ಟ್ರೀಯ ಕ್ರೀಡಾಪಟು ಹಾಗೂ ಭಾರತೀಯ ರೈಲ್ವೆಯ ಉದ್ಯೋಗಿ ಕರೀಷ್ಮಾ ಶ್ರೀಕಾಂತ್ ಅಭಿಪ್ರಾಯಪಟ್ಟರು.

ಅವರು ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು. ಒಳ್ಳೆಯ ತರಬೇತಿ ಪಡೆದು ಇಲ್ಲಿ ಸಾಧನೆ ಮಾಡಿದರೆ ಮುಂದೆ ಬೇರೆ ಬೇರೆ ಕ್ಷೇತ್ರ ಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆಯ ಬಹುದು. ರೈಲ್ವೆ ವೈಮಾನಿಕ ಕ್ಷೇತ್ರ ಸೇನೆ, ಆದಾಯ ತೆರಿಗೆ, ಕಂದಾಯ ಇಲಾಖೆ ಮೊದಲಾದ ಕ್ಷೇತ್ರಗಳಲ್ಲಿ ಕ್ರೀಡಾ ಸಾಧಕರಿಗೆ ವಿಪುಲ ಉದ್ಯೋಗಾವಕಾಶಗಳಿವೆ ಎಂದರು.

ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು ಹಾಗೂ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳ ಸಂಚಾಲಕ ವಸಂತ್ ಕುಮಾರ್ ಎಂ.ಎಸ್. ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಭಾಗ್ಯಶ್ರೀ ಐತಾಳ್, ಆಡಳಿತಾಧಿಕಾರಿ ಸುರೇಶ್ ಹೆಜಮಾಡಿ, ಆಡಳಿತಾತ್ಮಕ ವಿಭಾಗದ ಗಣೇಶ್ ಮರಕಾಲ ಇದ್ದರು. ವಿದ್ಯಾರ್ಥಿನಿ ಪ್ರಾರ್ಥನಾ ಪ್ರಭು ಸ್ವಾಗತಿಸಿ, ಆದೇಶ್ ಶೆಟ್ಟಿ ವಂದನಾರ್ಪಣೆಗೈದರು. ವಿದ್ಯಾರ್ಥಿನಿ ದಕ್ಷಿತಾ ನಿರೂಪಿಸಿದರು. ವಿದ್ಯಾರ್ಥಿಗಳ ಆಕರ್ಷಕ ಪಥಸಂಚಲದ ಬಳಿಕ ವಿವಿದ ವಿಭಾಗದ ಕ್ರೀಡಾಕೂಟಗಳು ನಡೆದವು. ಸಂಜೆಯ ಸಮಾರೋಪ ಸಮಾರಂಭದಲ್ಲಿ ಕರೆಸ್ಪಾಂಡೆಂಟ್ ವಸಂತ್ ಕುಮಾರ್ ಎಂ.ಎಸ್. ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ ಶುಭಾಶಯ ಸಲ್ಲಿಸಿದರು.

## ಬೈಂದೂರು ಪಟ್ಟಣಕ್ಕೆ ಕುಡಿಯುವ ನೀರು 24X7 ಪೂರೈಕೆಗೆ ಕ್ರಮ ವಹಿಸಿ

**ಬೈಂದೂರು:** ರಾಜ್ಯ ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಇವರು ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದರಿಂದ ಅಮೃತ್ 2.0 ಕುಡಿಯುವ ನೀರಿನ ಯೋಜನೆ ಅನುಷ್ಠಾನ ಸಹಿತ ಕುಡಿಯುವ ನೀರಿನ ಶಾಶ್ವತ ಯೋಜನೆ ಮೂಲಕ 24/7 ಮಾದರಿಯಲ್ಲಿ ನಾಗರಿಕರಿಗೆ ನೀರು ಪೂರೈಕೆಗೆ ಕ್ರಮವಹಿಸಲು ಗಮನ ಸೆಳೆಯುವ ಸೂಚನೆ ಮೂಲಕ ನಿಯಮ 73 ರಡಿ ಸದನದ ಗಮನ ಸೆಳೆದರು.



ಇದಕ್ಕೆ ಉತ್ತರಿಸಿದ ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್, ಪ್ರಸ್ತುತ ಪಟ್ಟಣಕ್ಕೆ ನದಿಮೂಲದಿಂದ ಶಾಶ್ವತವಾದ ನೀರು ಸರಬರಾಜು ಯೋಜನೆ ಇಲ್ಲದಿರುವುದರಿಂದ ಕೊಳವೆಬಾವಿ ಮತ್ತು ತೆರೆದಬಾವಿಗಳಿಂದ ಸುಮಾರು 0.60 ಎಂಎಲ್‌ಡಿ ನೀರು ಸರಬರಾಜು ಮಾಡಲಾಗುತ್ತಿದೆ. ಅಮೃತ್ 2.0 ಯೋಜನೆಯಡಿಯಲ್ಲಿ ಬೈಂದೂರು ಪಟ್ಟಣಕ್ಕೆ ರೂ. 47.25 ಕೋಟಿಗಳ ಮೊತ್ತವನ್ನು ನಿಗದಿ ಪಡಿಸಿರುವುರಿಂದ ಲಭ್ಯವಿದ್ದ ಅನುದಾನಕ್ಕೆ 187 ಕಿ. ಮೀ ವಿತರಣಾ ಜಾಲದ ಅಳವಡಿಕೆ ಹಾಗೂ 3125 ಗೃಹ ಸಂಪರ್ಕಗಳನ್ನು ಒದಗಿಸುವ ರೂ. 47 ಕೋಟಿಗಳ ಅಂದಾಜು ಪಟ್ಟಿಯನ್ನು ಕ.ನ.ನೀ.ಸ ಮತ್ತು ಒಳ ಚರಂಡಿ ಮಂಡಳಿ ವತಿಯಿಂದ ತಯಾರಿಸಿದ್ದು, ಬೈಂದೂರು ಪಟ್ಟಣ ಪಂಚಾಯತ್ ಸುತ್ತಮುತ್ತಲಿನ ಚದುರಿದ ಹಲವು ಗ್ರಾಮಗಳನ್ನು ಒಗ್ಗೂಡಿಸಿ ರಚನೆಯಾಗಿರುವುದರಿಂದ ಪಟ್ಟಣ ಪಂಚಾಯತ್ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಸುಮಾರು 358 ಕೀ. ಮೀ ಉದದಷ್ಟು ನೀರು ಸರಬರಾಜು ವಿತರಣಾ ಜಾಲವನ್ನು ಅಳವಡಿಸುವುದು ಆರ್ಥಿಕವಾಗಿ ಕಾರ್ಯ ಸಾಧುವಲ್ಲದ ಕಾರಣದಿಂದಾಗಿ ಅಮೃತ್ 2.0 ಯೋಜನೆಯಿಂದ ಕೈ ಬಿಡಲು ರಾಜ್ಯ ಮಟ್ಟದ ಟೆಕ್ನಿಕಲ್ ಸಮಿತಿಯು ನಿರ್ಣಯಿಸಿರುತ್ತದೆ ಮತ್ತು ಬೈಂದೂರು ಪಟ್ಟಣಕ್ಕೆ ವಾರಾಹಿ ನದಿ ಮೂಲದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಡಿ ಕಾಯ್ದಿರಿಸಲಾಗಿರುವ ಸಗಟು ನೀರನ್ನು ಪಟ್ಟಣ ಪಂಚಾಯತ್ ವ್ಯಾಪ್ತಿಗೆ ಸರಬರಾಜು ಮಾಡಲು ಅಗತ್ಯವಿರುವ ನೀರು ಸರಬರಾಜು ವಿತರಣಾ ಜಾಲದ ಅಳವಡಿಕೆ ಹಾಗೂ ಗೃಹ ಸಂಪರ್ಕಗಳನ್ನು ಒದಗಿಸುವ ಪ್ರತ್ಯೇಕ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿ ಮಂಡಳಿಯಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಉತ್ತರಿಸಿದ್ದಾರೆ.

## ಹಿರಿಯಡ್ಕ: ಧರ್ಮಸ್ಥಳ ಯೋಜನೆ 852ನೇ ವಾತ್ಸಲ್ಯ ಮನೆ ಹಸ್ತಾಂತರ



**ಹಿರಿಯಡಕ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ ಟ್ರಸ್ಟ್ ಆಯೋಜನೆಯ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ನಿರ್ಮಾಣಗೊಂಡ ವಾತ್ಸಲ್ಯ ಮನೆಯನ್ನು ಫಲಾನುಭವಿ ಹಿರಿಯಡಕದ ಗೋಪಾಲ ದೇವಾಡಿಗರಿಗೆ ಹಸ್ತಾಂತರ ಕಾರ್ಯಕ್ರಮ ಬುಧವಾರ ಹಿರಿಯಡಕದ ವೀರಭದ್ರ ದೇವಸ್ಥಾನದ ಬಳಿ ನಡೆಯಿತು.

ಸುಮಾರು 2.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಮನೆಯನ್ನು ಉಡುಪಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಧಾಕರ್ ಎಸ್ ನಾಯ್ಕ್ ಹಸ್ತಾಂತರಿಸಿದರು. ಬಳಿಕ ಮಾತನಾಡಿದ ಅವರು, ಮನೆ ಇಲ್ಲದವರಿಗೆ ಮನೆ ನಿರ್ಮಿಸಿ ಕೊಡುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಈ ಕಾರ್ಯ ಅಭಿಮಾನ ಮತ್ತು ಪುಣ್ಯದ ಕೆಲಸ ಎಂದರು.

ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷ ಸತ್ಯಾನಂದ ನಾಯಕ್ ಮಾತನಾಡಿದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ನಾಗರಾಜ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೊಮ್ಮರಬೆಟ್ಟು ಗ್ರಾ.ಪಂ. ಉಪಾಧ್ಯಕ್ಷ ಹರೀಶ್ ಸಾಲಿಯಾನ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಉಮೇಶ್ ಶೆಟ್ಟಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಮಾಲತಿ ಆಚಾರ್ಯ, ವಲಯ ಅಧ್ಯಕ್ಷ ಗಣೇಶ್ ನಾಯ್ಕ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಪೂರ್ಣಿಮಾ, ಸೇವಾ ಪ್ರತಿನಿಧಿ ಯಶೋಧ ಇದ್ದರು. ಸುರೇಂದ್ರ ನಾಯ್ಕ್ ವಂದಿಸಿದರು.

## ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನಲ್ಲಿ ಬೃಹತ್ ರಕ್ತದಾನ ಶಿಬಿರ



**ಶಿರ್ವ:** ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್ ಕ್ರಾಸ್ ಘಟಕವು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ಇದರ ರಕ್ತ ಕೇಂದ್ರದ ಸಹಯೋಗದೊಂದಿಗೆ ಮಂಗಳವಾರ ಕಾಲೇಜಿನ ಆವರಣದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿತ್ತು.

ಮುಖ್ಯ ಅತಿಥಿಗಳಾಗಿ ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರ ಮಣಿಪಾಲದ ಐಎಚ್ ಬಿಟಿ ವಿಭಾಗದ ಮುಖ್ಯಸ್ಥ ಡಾ. ಗಣೇಶ್ ಮೋಹನ್ ಭಾಗವಹಿಸಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಜೀವ ಉಳಿಸುವಲ್ಲಿ ಸ್ವಯಂ ಪ್ರೇರಿತ ರಕ್ತದಾನದ ಮಹತ್ವದ ಬಗ್ಗೆ ತಿಳಿಸಿ, ಸಂಸ್ಥೆಯು ಇಂತಹ ಕಾರ್ಯಕ್ರಮವನ್ನು ಆಯೋಜಿಸಿದಕ್ಕಾಗಿ ಸಂತಸ ವ್ಯಕ್ತಪಡಿಸಿದರು.

ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್. ಐತಾಳ್ ಅಧ್ಯಕ್ಷತೆವಹಿಸಿ ಮಾತನಾಡಿ, ಕಾರ್ಯಕ್ರಮ ಆಯೋಜಿಸುವಲ್ಲಿ ವಿದ್ಯಾರ್ಥಿ ಸಹಕಾರ ಮತ್ತು ಸೇವಾ ಮನೋಭಾವವನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಶೈಕ್ಷಣಿಕ ಡೀನ್ ಡಾ. ಸುದರ್ಶನ್ ರಾವ್ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕ ಸಚಿನ್ ಪ್ರಭು ಉಪಸ್ಥಿತರಿದ್ದರು.

**140 ಯುನಿಟ್ ರಕ್ತ ಸಂಗ್ರಹ**

ಅಧ್ಯಾಪಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಿಂದ ಸೇರಿ ಒಟ್ಟು 140 ಕ್ಕೂ ಅಧಿಕ ಯುನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

## ಬೈಂದೂರು ಬಿಜೆಪಿ ಮಂಡಲದಿಂದ ಪ್ರತಿ ಗ್ರಾ.ಪಂ. ಎದುರು ಪ್ರತಿಭಟನೆ ಮಾ.30ರಂದು

**ಬೈಂದೂರು:** ರಾಜ್ಯ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಮೀನುಗಾರರ ಸಮುದಾಯದವರಿಗೆ ಮತ್ಸ್ಯಾಶ್ರಯ ಮನೆಗಳು ನೀಡದೆ ಕರಾವಳಿ ಮೀನುಗಾರರನ್ನು ಕಡೆಗಣಿಸಿದೆ. ಬೈಂದೂರು ಕ್ಷೇತ್ರದ ಗಂಗೊಳ್ಳಿ, ಕೊಡೇರಿ, ಮರವಂತೆ, ಅಳ್ವೆಗದ್ದೆ ಬಂದರುಗಳ ಮೂಲ ಸೌಕರ್ಯ ಅಭಿವೃದ್ಧಿಗೂ ನಯಾ ಪೈಸೆ ನೀಡಿಲ್ಲ, ವಾರಾಹಿ ಬಲದಂಡೆ ಮೂಲ ಯೋಜನೆಗೆ ಎರಡೂ ಅಧಿವೇಶನಗಳಲ್ಲಿ ಅನುದಾನ ಮಂಜೂರು ಮಾಡಿಲ್ಲ, ಆದರೆ ರಾಜ್ಯ ಸರ್ಕಾರ ಮಾಡಿರುವ ಸಾಲದ ಹೊರೆಯನ್ನು ಮಾತ್ರ ನಮ್ಮ ಜಿಲ್ಲೆಗೆ ಹಾಕಿ ಕರಾವಳಿ ಜನರನ್ನು ವಂಚಿಸುತ್ತಿದ್ದಾರೆ ಇದನ್ನು ಖಂಡಿಸಿ ಬಿಜೆಪಿ ಮಂಡಲದ ವತಿಯಿಂದ ಪ್ರತಿ ಗ್ರಾಪಂ ಎದುರು ಮಾ.30ರಂದು ಪ್ರತಿಭಟನೆ ನಡೆಸಲಿದ್ದೇವೆ ಎಂದು ಬಿಜೆಪಿ ಬೈಂದೂರು ರೈತ ಮೋರ್ಚಾ ಅಧ್ಯಕ್ಷ ಪ್ರಕಾಶ ಕಾವ್ರಾಡಿ ಹೇಳಿದರು.

ಉಪ್ಪುಂದ ಶಾಸಕರ ಕಚೇರಿಯಲ್ಲಿ ಬಿಜೆಪಿ ರೈತ ಮೋರ್ಚಾ ಮತ್ತು ಯುವಮೋರ್ಚಾದ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರೈತರ ಕೃಷಿ ಜಮೀನಿಗೆ ಉಪ್ಪುನೀರು ಬಾರದ ಹಾಗೆ ತಡೆಯಲು ತಡೆಗೋಡೆಗೆ ಬಜೆಟ್‌ನಲ್ಲಿ ಅನುದಾನ ಕಾಯ್ದಿರಿಸಿಲ್ಲ, ವಿವಿಧ ಸಮುದಾಯ ಭವನಗಳ ಅಭಿವೃದ್ಧಿಗೆ ಅನುದಾನ ನೀಡಿಲ್ಲ, ಕರಾವಳಿ ಭಾಗದಲ್ಲಿ ಚಿರತೆ, ಮಂಗಗಳ ಹಾವಳಿ ತಡೆಗಟ್ಟುವ ಬಗ್ಗೆ ಸರ್ಕಾರ, ಇಲಾಖೆ ನಿರ್ಲಕ್ಷ್ಯವಹಿಸಿದೆ. ಕರಾವಳಿ ಜಿಲ್ಲೆಗೊಂದು ಮಂಕಿಪಾರ್ಕ್ ಬೇಡಿಕೆಯ ಅನುಷ್ಠಾನ ಬಗ್ಗೆ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ, ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪನೆ ಮಾಡಲು ಲಭ್ಯ ಮೂಲ ಸೌಕರ್ಯ ವ್ಯವಸ್ಥೆ ಬಳಸಿಕೊಂಡು ಜಿಲ್ಲೆಯ ಶಾಸಕರು ನಿರಂತರವಾಗಿ ಅಧಿವೇಶನದಲ್ಲಿ ಒತ್ತಾಯ ಮಾಡುತ್ತಿದ್ದರೂ ಅದರ ಬಗ್ಗೆ ಸರ್ಕಾರದ ಚಕಾರವಿಲ್ಲ, ಉಡುಪಿ ಜಿಲ್ಲೆಯಲ್ಲಿ ಹಾಗೂ ಬೈಂದೂರು ಕ್ಷೇತ್ರದಲ್ಲಿ ಕೃಷಿ ಉತ್ತೇಜನ ಮೂಲಕ ರೈತರ ಶ್ರೇಯೋಭಿವೃದ್ಧಿ ಬಯಸುವ ಮನಸ್ಸು ಸರ್ಕಾರಕ್ಕಿಲ್ಲ ಎಂದು ಅವರು ಆರೋಪಿಸಿದರು.

ಮಂಡಲ ಯುವಮೋರ್ಚಾ ಅಧ್ಯಕ್ಷ ಗಜೇಂದ್ರ ಬೇಲೆಮನೆ ಮಾತನಾಡಿ, ದೇವಸ್ಥಾನ ಮತ್ತು ದೈವಸ್ಥಾನಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಿಲ್ಲ, ಜಿಲ್ಲೆಗೆ ಹೊಸ ಪ್ರವಾಸೋದ್ಯಮ ಯೋಜನೆ ಮಂಜೂರು ಮಾಡದೆ ಇರುವುದರಿಂದ ಉದ್ಯೋಗಾವಕಾಶ ಸೃಷ್ಟಿ ಮಾಡಲು ಹಿನ್ನಡೆಯಾಗಿದೆ ಎಂದರು. ಗ್ರಾಪಂಗಳಲ್ಲಿ ಸಾವಿರಾರು ಮನೆ ಬೇಡಿಕೆ ಅರ್ಜಿ ಇದ್ದರೂ ಬೈಂದೂರು ಕ್ಷೇತ್ರಕ್ಕೆ ಕಳೆದ 2 ವರ್ಷದಿಂದ ಒಂದೂ ಮನೆಯನ್ನು ವಸತಿ ಇಲಾಖೆ ನೀಡದೆ ಸಾಮಾನ್ಯ ಜನರಿಗೆ ಮನೆ ಕಟ್ಟಿಕೊಳ್ಳುವ ಕನಸಿಗೆ ಕೊಳ್ಳಿ ಇಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗೋಪಾಲ ಪೂಜಾರಿ ವಸ್ರೆ ಇದ್ದರು.

## ಸಸ್ತಾನ ಪಾಂಡೇಶ್ವರ ಮಹಿಳಾ ಮಂಡಲ ಮಹಿಳಾ ದಿನಾಚರಣೆ, ಸಾಧಕರಿಗೆ ಸನ್ಮಾನ



**ಕೋಟ:** ಮಹಿಳಾ ಮಂಡಲ ಪಾಂಡೇಶ್ವರ ಸಾಸ್ತಾನ ಇಲ್ಲಿ ವಿಶ್ವಮಹಿಳಾ ದಿನಾಚರಣೆ ಅಂಗವಾಗಿ ಸಾಧಕ ಮಹಿಳೆಯರಿಗೆ ಸನ್ಮಾನ, ಮತ್ತು ಸಾಂಸ್ಕೃತಿಕ, ಆಟೋಟ ಸ್ಪರ್ಧೆ, ಬಹುಮಾನ ವಿತರಣೆ ಕಾರ್ಯಕ್ರಮ ಭಾನುವಾರ ಜರಗಿತು.

ಮಹಿಳಾ ಮಂಡಲದ ಅಧ್ಯಕ್ಷೆ ಸುಮಿತ್ರಾ ಸುಧಾಕರ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಹಿಳಾ ಮಂಡಲದ ಮಾಜಿ ಅಧ್ಯಕ್ಷೆ ಮಲ್ಲಿಕಾ ಬಾಲಕೃಷ್ಣ ಹಿಂದೆ ಈ ಮಹಿಳಾ ಮಂಡಲದಲ್ಲಿ ತಾವು ಅಧ್ಯಕ್ಷರಾಗಿದ್ದ ಸಮಯದ ನೆನಪಿನ ಬುತ್ತಿಯನ್ನು ತೆರೆದಿಟ್ಟು, ಮಹಿಳಾ ಮಂಡಲದ ಕಾರ್ಯ ಚಟುವಟಿಕೆಗಳ ಕುರಿತು ಶ್ಲಾಘಿಸಿ, ಶುಭ ಹಾರೈಸಿದರು. ಮುಖ್ಯ ಅಭ್ಯಾಗತರಾಗಿ ಸಂತ ಅಂತೋನಿ ಇಗರ್ಜಿ ಚರ್ಚ್‌ನ ಮಹಿಳಾ ಸಂಘಟನೆಯ ಅಧ್ಯಕ್ಷೆ ಪ್ರೀತಿ ಮರಿಯಾ ಲೂವಿಸ್, ಸಾಲಿಗ್ರಾಮ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷೆ ಸುಲತಾ ಹೆಗ್ಡೆ, ಪಾಂಡೇಶ್ವರ ಪಂಚಾಯತ್ ಮಾಜಿ ಅಧ್ಯಕ್ಷೆ ಲೀಲಾವತಿ ಗಂಗಾಧರ್ ಉಪಸ್ಥಿತರಿದ್ದರು.


ಉದ್ಯಮ ಕ್ಷೇತ್ರದ ಜ್ಯೂಡಿತ್ ಪಿಕಾರ್ಡೋ ಮತ್ತು ಸೇವಾ ಕಾರ್ಯದಲ್ಲಿ ನಿರತರಾದ ಲಿಲ್ಲಿ ರೋಡ್ರಿಗಸ್ ಅವರನ್ನು ಸನ್ಮಾನಿಸಲಾಯಿತು. ಮಹಿಳಾ ಮಂಡಲದ ವಿಮಲ ಮಹಿಳಾ ದಿನಾಚರಣೆಯ ಕುರಿತಾದ ಪ್ರಾಸ್ತಾವಿಕ ಮಾತನ್ನಾಡಿದರು. ರಮ್ಯಾ ಸ್ವಾಗತಿಸಿ, ಕಾರ್ಯದರ್ಶಿ ಜ್ಞಾನೇಶ್ವರಿ ಉಡುಪ ಕಾರ್ಯಕ್ರಮವನ್ನು ನಿರೂಪಿಸಿ, ಜ್ಯೋತಿ ವಂದನಾರ್ಪಣೆ ಸಲ್ಲಿಸಿದರು.

### ಕುಂದಾಪುರ ಆಸ್ಪತ್ರೆಯಲ್ಲಿರುವ ಅಪೌಷ್ಟಿಕ ಮಕ್ಕಳ ಪೌಷ್ಟಿಕ ಪುನಶ್ಚೇತನಕ್ಕಾಗಿರುವ ಘಟಕ | ಪೋಷಕರು, ಸಾರ್ವಜನಿಕರ ಆಕ್ರೋಶ

# ಉಡುಪಿ ಜಿಲ್ಲಾಸ್ಪತ್ರೆಗೆ ಪೌಷ್ಟಿಕ ಪುನಶ್ಚೇತನ ಘಟಕ ಸ್ಥಳಾಂತರ ವಿರುದ್ಧ ಪ್ರತಿಭಟನೆ

**ಕುಂದಾಪುರ:** ಕುಂದಾಪುರ ತಾಲೂಕು ಆಸ್ಪತ್ರೆಯಲ್ಲಿರುವ ಕುಂದಾಪುರ, ಬೈಂದೂರು ಭಾಗದ ಅಪೌಷ್ಟಿಕ ಮಕ್ಕಳ ಪೌಷ್ಟಿಕ ಪುನಶ್ಚೇತನಕ್ಕಾಗಿ ಇರುವಂತಹ ಪೌಷ್ಟಿಕ ಪುನಶ್ಚೇತನ ಘಟಕ (ಎನ್ ಆರ್‌ಸಿ) ವನ್ನು ಉಡುಪಿಯ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸುವ ಹುನ್ನಾರ ನಡೆಯುತ್ತಿದ್ದು, ಸ್ಥಳಾಂತರಿಸದಂತೆ ಆಗ್ರಹಿಸಿ ಆಸ್ಪತ್ರೆ ಮುಂಭಾಗ ಮಕ್ಕಳ ಪೋಷಕರು ಹಾಗೂ ಸಾರ್ವಜನಿಕರಿಂದ ಬುಧವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಮುಖಂಡರಾದ ಶಂಕರ ಅಂಕದಕಟ್ಟೆ ಇಲ್ಲಿರುವ ಎನ್‌ಆರ್‌ಸಿ ಘಟಕ ಹಿಂದಿನಿಂದಲೂ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ. ಈಗ ಜಿಲ್ಲೆಗೆ ಸ್ಥಳಾಂತರಿಸಲು ಹೊರಟಿದ್ದು ಸರಿಯಲ್ಲ, ಇಲ್ಲಿ




ಮಕ್ಕಳನ್ನು ನೂರಾರು ಕಿ.ಮೀ. ದೂರದ ಉಡುಪಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲು ಆಗಲ್ಲ, ಮತ್ತೆ ಇಲ್ಲಿಯೇ ಉಳಿಸಿಕೊಳ್ಳಬೇಕು. ವಾರದೊಳಗೆ ಈಗ ಹೊರಡಿಸಿರುವ ಆದೇಶ ಹಿಂಪಡೆಯಬೇಕು. ಇಲ್ಲದಿದ್ದರೆ ಮತ್ತಷ್ಟು ದೊಡ್ಡ ಮಟ್ಟದ ಪ್ರತಿಭಟನೆ ಸಂಘಟಿಸಿ, ಹೋರಾಟ ನಡೆಸಲಾಗುವುದು ಎಂದವರು ಎಚ್ಚರಿಸಿದರು.

ವ್ಯವಸ್ಥೆ ಹೇಗಿರಬೇಕು ಅಂದರೆ ನಗರದಿಂದ ಹಳ್ಳಿಗೆ ಹತ್ತಿರವಾಗಬೇಕು. ಆದರೆ ಇಲ್ಲಿ ತಾಲೂಕಿನಿಂದ ಚಿಕಿತ್ಸೆಗೆ ಈಗ ಜಿಲ್ಲೆಗೆ ಹೋಗಬೇಕಾಗಿದೆ. 60ಕ್ಕೂ ಮಿಕ್ಕಿ ಮಕ್ಕಳು ಚಿಕಿತ್ಸೆ ಪಡೆಯುತ್ತಿದ್ದಾರೆ. ವೈದ್ಯರ ಸಹಿತ 12 ಮಂದಿ ಸಿಬಂದಿಯನ್ನು ವರ್ಗಾವಣೆ ಸಹ ಮಾಡಿದ್ದಾರೆ. ಯಡಮೊಗೆ, ಹಳ್ಳಿಹೊಳೆ, ಕಾಲ್ತೋಡು ಭಾಗದಿಂದ 100 ಕಿ.ಮೀ. ದೂರದ ಉಡುಪಿಗೆ ಅಪೌಷ್ಟಿಕ ಮಕ್ಕಳನ್ನು ಕರೆದುಕೊಂಡು ಹೋಗಿ, ಚಿಕಿತ್ಸೆ ಕೊಡಿಸಲು ಬಡವರಿಗೆ ಸಾಧ್ಯವೇ? ಅಲ್ಲಿ ಘಟಕ ಮಾಡುವುದಕ್ಕೆ ವಿರೋಧವಿಲ್ಲ, ಇದನ್ನು ಇಲ್ಲಿಯೇ ಉಳಿಸಿಕೊಂಡು, ಉಡುಪಿಯಲ್ಲಿ ಹೊಸ ಘಟಕ ಮಾಡಲಿ ಎಂದು ಸಾಮಾಜಿಕ ಕಾರ್ಯಕರ್ತ ಲೋಕೇಶ್ ಅಂಕದಕಟ್ಟೆ ಹೇಳಿದರು.

ಮುಖಂಡರಾದ ಕಿಶೋರ್ ಬಲ್ಲಾಳ್ ಮಾತನಾಡಿ, ಇಲ್ಲಿನ ಎನ್‌ಆರ್‌ಸಿ ಘಟಕಕ್ಕೆ ಬಹಳ ಹಳ್ಳಿಗಳಿಂದ ಚಿಕಿತ್ಸೆಗೆ ಮಕ್ಕಳನ್ನು ಕರೆದುಕೊಂಡು ಬರುತ್ತಾರೆ. ಈಗ ಯಾರ ಗಮನಕ್ಕೂ ತರದೇ ಏಕಾಏಕಿ ಸ್ಥಳಾಂತರ ಮಾಡುವುದು ಸರಿಯಲ್ಲ ಎಂದರು.

ಪ್ರಮುಖರಾದ ರಾಧಾಕೃಷ್ಣ, ಹೆಲ್ಪಿಂಗ್ ಹ್ಯಾಂಡ್ ಪ್ರದೀಪ್, ಸಂಘಟನೆಗಳ ಪ್ರಮುಖರು ಇದ್ದರು.

> **ಹೋರಾಟಕ್ಕೆ ಕೈಜೋಡಿಸಿ**
>
> ನನ್ನ ಇಬ್ಬರು ಮಕ್ಕಳು ಇಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ. ತುಂಬಾ ಒಳ್ಳೆಯ ಚಿಕಿತ್ಸೆ ಸಿಗುತ್ತಿದೆ. ನಾವು ಬಡವರು. ದುಡಿದು ತಿನ್ನುವವರು. ಈಗ ಮಕ್ಕಳನ್ನು ಚಿಕಿತ್ಸೆಗಾಗಿ ದೂರದ ಉಡುಪಿಗೆ ಕರೆದುಕೊಂಡು ಹೋಗುವುದು ಕಷ್ಟ. ಎಲ್ಲರೂ ಈ ಹೋರಾಟಕ್ಕೆ ಕೈ ಜೋಡಿಸಬೇಕು.
>
> ● ಜ್ಯೋತಿ ತಲ್ಲೂರು, ಮಕ್ಕಳ ಪೋಷಕಿ